# 2018

JANUARY "TO" JULY

ಸಂಯುಕ್ತ ಕರ್ನಾಟಕ ಬೆಂಗಳೂರು । 30 ಜುಲೈ 2018 । ಸೋಮವಾರ



ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರ 100ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ದೊರೆಸ್ವಾಮಿ ದಂಪತಿಗಳನ್ನು ಕೇಂದ್ರದ ಮಾಜಿ ಸಚಿವ ಎಂ.ವಿ. ರಾಜಶೇಖರನ್, ಮಾಜಿ ಸಚಿವ ಎಚ್.ಕೆ. ಪಾಟೀಲ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವ ಸಿ.ಕೆ. ಜಾಫರ್‌ಷರೀಫ್, ಶಾಸಕ ಎ.ಟಿ. ರಾಮಸ್ವಾಮಿ, ಸಾಹಿತಿಗಳಾದ ಹಂಪ ನಾಗರಾಜಯ್ಯ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಮಾಜಿ ಸಂಸದ ಹನುಮಂತಪ್ಪ, ಗಾಂಧಿ ಸ್ಮಾರಕನಿಧಿಯ ವೂಡೆ ಪಿ. ಕೃಷ್ಣ ಮತ್ತಿತರರಿದ್ದರು.

# ದೊರೆಸ್ವಾಮಿ ನಿಸ್ವಾರ್ಥ ಸೇವೆಯ ಗುಣಗಾನ

ಸಂ.ಕ. ಸಮಾಚಾರ ಬೆಂಗಳೂರು

ಈಗಿನ ದಿನಮಾನದಲ್ಲಿ ಪ್ರಾಮಾಣಿಕವಾಗಿ, ನಿಸ್ವಾರ್ಥವಾಗಿ ಜನಹಿತ ಹಾಗೂ ದೇಶದ ಹಿತವನ್ನು ಗಮನದಲ್ಲಿಟ್ಟುಕೊಂಡು ಸೇವೆ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರ ಸಮಾಜದ ಕಳಕಳಿ ಆದರ್ಶನೀಯ ಎಂದು ಹಲವಾರು ಗಣ್ಯರು ಗುಣಗಾನ ಮಾಡಿದರು.

ಗಾಂಧಿ ಸ್ಮಾರಕ ನಿಧಿ ಗಾಂಧಿ ಭವನದಲ್ಲಿಂದು ಆಯೋಜಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ ಡಾ. ಎಚ್.ಎಸ್. ದೊರೆಸ್ವಾಮಿ ಅವರ 100ರ ಸಂಭ್ರಮ ಕಾರ್ಯಕ್ರಮದಲ್ಲಿ ಕೇಂದ್ರದ ಮಾಜಿ ಸಚಿವರಾದ ಎಂ.ವಿ. ರಾಜಶೇಖರನ್, ಜಾಫರ್ ಷರೀಫ್, ಮಾಜಿ ಸಚಿವ ಎಚ್.ಕೆ. ಪಾಟೀಲ್, ಶಾಸಕ ಎ.ಟಿ. ರಾಮಸ್ವಾಮಿ, ಮಾಜಿ ಸಂಸದ ಹನುಮಂತಪ್ಪ, ಸಾಹಿತಿಗಳಾದ ಹಂಪ ನಾಗರಾಜಯ್ಯ, ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರುಗಳು ದೊರೆಸ್ವಾಮಿ ಅವರ ಸಾಮಾಜಿಕ ಕಾಳಜಿಯನ್ನು ಕೊಂಡಾಡಿದರಲ್ಲದೆ, ದೊರೆಸ್ವಾಮಿ ಅವರು ಶತಕ ಪೂರೈಸಿದರೂ ಅವರ ಉತ್ಸಾಹ ಬತ್ತಿಲ್ಲ. ಅಧಿಕಾರದ ಆಸೆಗೆ ಬಲಿಯಾಗದೆ ಗಾಂಧಿ ಮಾರ್ಗದಲ್ಲಿ ಹೋರಾಟವನ್ನು ಮುಂದುವರೆಸುವಂತಹ ಕಾರ್ಯದಲ್ಲಿ ತೊಡಗಿಕೊಂಡಿರುವುದು ಅನುಕರಣೀಯ ಎಂದರು.

ಈಗಿನ ಸಮಾಜದ ಸ್ಥಿತಿಗತಿಗಳನ್ನು ಗಮನಿಸಿದರೆ ನಾವು ಎತ್ತ ಸಾಗುತ್ತಿದ್ದೇವೆ ಎಂಬುದೇ ಅರ್ಥವಾಗುತ್ತಿಲ್ಲ. ಗಾಂಧಿ ಮಾರ್ಗದಲ್ಲಿ ನಾವೆಲ್ಲಾ ನಾಯಕರು ಹೋಗುತ್ತಿದ್ದೇವೆಯೇ ಎಂಬುದನ್ನು ನೆನಪಿಸಿಕೊಂಡರೆ ದುಃಖ ಆಗುತ್ತದೆ. ಮುಂದಿನ ದಿನಗಳಲ್ಲಿ ಪ್ರಾಮಾಣಿಕವಾಗಿ ಆತ್ಮಾವಲೋಕನ ಮಾಡಿಕೊಳ್ಳುವುದು ದುಸ್ತರವಾಗಬಹುದು. ರಾಜಕೀಯ ಸ್ಥಾನಮಾನಗಳು ಸಿಗುತ್ತೆ ಎಂದರೆ ಎಲ್ಲ ಮೌಲ್ಯಗಳನ್ನು ತೂರಿ ಬಿಡುವ ಜನರಿದ್ದಾರೆ. ಇಂತಹ ಜನರ ನಡುವೆಯೂ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಅವರಿಗೆ ಕೆಂಗಲ್ ಹನುಮಂತಯ್ಯನವರು ವಿಧಾನಪರಿಷತ್‌ನಲ್ಲಿ ಸ್ಥಾನ ನೀಡುವುದಾಗಿ ಹೇಳಿದರೂ ಅದಕ್ಕೆ ಒಪ್ಪಲಿಲ್ಲ. ಅವರು ಆಗ ಕೆಂಗಲ್ ಹನುಮಂತಯ್ಯ ಅವರಿಗೆ ಹೇಳಿದ ಮಾತುಗಳು ಬದುಕಿನ ಮೌಲ್ಯಗಳನ್ನು ಅನಾವರಣಗೊಳಿಸುತ್ತದೆ ಎಂದರು.

ಮೌಲ್ಯಗಳನ್ನು ಬದುಕಿನ ಆಧಾರವಾಗಿಸಿಕೊಂಡು ಪ್ರಾಮಾಣಿಕವಾಗಿ ಹೋರಾಟದ ಜೀವನ ನಡೆಸಿದ ದೊರೆಸ್ವಾಮಿ ಅವರ ವ್ಯಕ್ತಿತ್ವ ದರ್ಶನ ಎಲ್ಲರಿಗೂ ಆಗಬೇಕು. ಅವರ ಮೂಲಕ ನಿಜವಾದ ಗಾಂಧಿ ತತ್ವಗಳು ಜನರಿಗೆ ತಲುಪುವಂತೆ ಸರ್ಕಾರ ದೊರೆಸ್ವಾಮಿ ಅವರನ್ನು ಇಡೀ ರಾಜ್ಯ ಸುತ್ತುವಂತೆ ಮಾಡುವ ಮೂಲಕ ಅವರ ವ್ಯಕ್ತಿತ್ವ ದರ್ಶನದಿಂದ ಹೊಸ ಪೀಳಿಗೆಯಲ್ಲಿ ಗಾಂಧಿ ತತ್ವಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬಹುದಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಎಚ್.ಎಸ್. ದೊರೆಸ್ವಾಮಿ ಕುರಿತಾದ "ಗಾಳಿಗೆ ಸಿಕ್ಕ ತರಗೆಲೆ" ಕೃತಿ ಬಿಡುಗಡೆ ಮಾಡಲಾಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ಹಾಗೂ ಅವರ ಪತ್ನಿ ಲಲಿತಮ್ಮ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಭ್ರಷ್ಟಾಚಾರದ ಬಗ್ಗೆ ಶಾಸಕ ರಾಮಸ್ವಾಮಿ ಕಳವಳ

# ಈಟ್ ಇಂಡಿಯಾ ವಿರುದ್ಧ ಗೆಲ್ಲಲಾಗಿಲ್ಲ

**ವಿಜಯವಾಣಿ ಸುದ್ದಿಜಾಲ ಬೆಂಗಳೂರು**

ಸ್ವಾತಂತ್ರ್ಯ ಹೋರಾಟಗಾರರು ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಗೆಲುವು ಸಾಧಿಸಿದರು. ಆದರೆ, ಈಗ 'ಈಟ್ (ಭ್ರಷ್ಟಾಚಾರಿಗಳು) ಇಂಡಿಯಾ ಕಂಪನಿ' ವಿರುದ್ಧ ಗೆಲ್ಲಲು ಸಾಧ್ಯವಾಗುತ್ತಿಲ್ಲ ಎಂದು ಶಾಸಕ ಎ.ಟಿ. ರಾಮಸ್ವಾಮಿ ಕಳವಳ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಮ್ಮಿಕೊಂಡಿದ್ದ 'ಡಾ. ಎಚ್.ಎಸ್. ದೊರೆಸ್ವಾಮಿ 100ರ ಸಂಭ್ರಮ' ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದಲ್ಲಿ ಭ್ರಷ್ಟಾಚಾರ ಹೆಚ್ಚಳಗೊಂಡಿದೆ. ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಗೆದ್ದಿರುವ ದೇಶ ಭ್ರಷ್ಟಾಚಾರಿಗಳನ್ನೂ ಮಣಿಸಬೇಕಿದೆ. ಆದರೆ, ಅದು ಸಾಧ್ಯವಾಗಿಲ್ಲ. ಕಳೆದ 10 ವರ್ಷಗಳಿಂದ ದೊರೆಸ್ವಾಮಿ ಅವರೊಂದಿಗೆ ಹೋರಾಟ ಮಾಡುತ್ತಿದ್ದೇನೆ. ನನ್ನ ಹೋರಾಟಗಳಿಗೆ ಅವರು ಶಕ್ತಿ ತುಂಬಿದ್ದಾರೆ. ಸರಳತೆ ಎಂಬುದು ಅವರಿಗೆ ರಕ್ತಗತವಾಗಿಯೇ ಬಂದಿದೆ ಎಂದು ಬಣ್ಣಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, ಗಾಂಧಿ ಮಾರ್ಗದಲ್ಲಿ ನಡೆಯುವುದು ಸುಲಭವಲ್ಲ. ದೊರೆಸ್ವಾಮಿ ಗಾಂಧಿ ತತ್ವ ಅಳವಡಿಸಿಕೊಂಡಿದ್ದಾರೆ. ಇಂದಿನ ಯುವ ಸಮೂಹಕ್ಕೆ ಅವರು ಮಾದರಿಯಾಗಲಿ ಎಂದರು.

ಮಂಡೂರಿನಲ್ಲಿ ಕಸ ಸುರಿಯುತ್ತಿದ್ದ ಸಂದರ್ಭ ದೊರೆಸ್ವಾಮಿ ಅಲ್ಲಿನ ಗ್ರಾಮಸ್ಥರ ಪರವಾಗಿ ನಿಂತು ಹೋರಾಟ ನಡೆಸಿದರು. ಅದರ ಪರಿಣಾಮವಾಗಿಯೇ ಅಲ್ಲಿನ ಸಮಸ್ಯೆಗೆ ಪರಿಹಾರವೂ ಸಿಕ್ಕಿತು ಎಂದರು.

ದೊರೆಸ್ವಾಮಿ ಕುರಿತು ಬಿ.ಆರ್.ರಮೇಶ್ ಬರೆದಿರುವ 'ಗಾಳಿಗೆ ಸಿಕ್ಕ ತರಗೆಲೆ' ಕೃತಿ ಬಿಡುಗಡೆ ಮಾಡಲಾಯಿತು. ಸಾಹಿತಿ ಡಾ. ಹಂಪನಾ, ಮಾಜಿ ಕೇಂದ್ರ ಸಚಿವರಾದ ಜಾಫರ್ ಶರೀಫ್, ಡಾ. ಎಂ.ವಿ. ರಾಜಶೇಖರನ್ ಮತ್ತಿತರರು ಉಪಸ್ಥಿತರಿದ್ದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಎಚ್.ಎಸ್. ದೊರೆಸ್ವಾಮಿ ದಂಪತಿಯನ್ನು ಸನ್ಮಾನಿಸಲಾಯಿತು. ರಾಜಶೇಖರನ್, ಜಾಫರ್ ಶರೀಫ್ ಇತರರಿದ್ದರು.

> **ದೊ**ರಸ್ವಾಮಿ ಜೀವನಗಾಥೆ ವಿವಿಗಳಲ್ಲಿ ಪಠ್ಯವಾಗಬೇಕು. ಅಪ್ಪಟ ಗಾಂಧಿವಾದಿಗಳು ಯುವಪೀಳಿಗೆಗೆ ಆದರ್ಶ ವ್ಯಕ್ತಿಗಳಾಗಬೇಕು.
>
> | ಡಾ. [illegible]
>
> ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ

# ಜನಹಿತಕ್ಕಾಗಿ ಕೆಲಸ ಮಾಡುವವರ ಸಂಖ್ಯೆ ವಿರಳ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು



ಸ್ವಾತಂತ್ರ್ಯ ಹೋರಾಟಗಾರ ಡಾ. ಎಚ್.ಎಸ್.ದೊರೆಸ್ವಾಮಿ ಅವರ '100ರ ಸಂಭ್ರಮ' ಕಾರ್ಯಕ್ರಮದಲ್ಲಿ ದೊರೆಸ್ವಾಮಿ ದಂಪತಿಯನ್ನು ಕೇಂದ್ರದ ಮಾಜಿ ಸಚಿವರಾದ ರಾಜಶೇಖರನ್, ಜಾಫರ್ ಷರೀಫ್, ಮಾಜಿ ಸಚಿವ ಎಚ್.ಕೆ.ಪಾಟೀಲ್ ಸನ್ಮಾನಿಸಿದರು.

ಪ್ರಾಮಾಣಿಕವಾಗಿ ಜನರಹಿತ ಹಾಗೂ ದೇಶದ ಹಿತ ಗಮನದಲ್ಲಿಟ್ಟುಕೊಂಡು ಸೇವೆ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಮಾಜಿ ಸಚಿವ ಹಾಗೂ ಶಾಸಕ ಎಚ್.ಕೆ.ಪಾಟೀಲ್ ಅಭಿಪ್ರಾಯಪಟ್ಟರು.

ಗಾಂಧಿ ಸ್ಮಾರಕ ನಿಧಿ ಗಾಂಧಿಭವನದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ ಡಾ. ಎಚ್.ಎಸ್.ದೊರೆಸ್ವಾಮಿ ಅವರ 100ರ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನವ ಪೀಳಿಗೆ ಜನಹಿತ ಹಾಗೂ ರಾಷ್ಟ್ರಹಿತ ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕ ಸೇವೆ ಮಾಡುವ ಸದುದ್ದೇಶದಿಂದ ಸಾರ್ವಜನಿಕ ಬದುಕಿಗೆ ಪ್ರವೇಶಿಸಬೇಕು. ವೈಯಕ್ತಿಕ ಹಾಗೂ ಸ್ವಾರ್ಥ ಸಾಧನೆಗಲ್ಲ ಎಂದರು.

ಸಮಾಜದ ಸ್ಥಿತಿಗತಿ ಗಮನಿಸಿದರೆ ನಾವು ಎತ್ತ ಸಾಗುತ್ತಿದ್ದೇವೆ ಎಂಬುದೇ ಅರ್ಥವಾಗುತ್ತಿಲ್ಲ. ಗಾಂಧಿ ಮಾರ್ಗದಲ್ಲಿ ಹೋಗುತ್ತಿದ್ದೇವೆಯೇ ಎಂಬುದನ್ನು ನೆನಪಿಸಿಕೊಂಡರೆ ದುಃಖ ಆಗುತ್ತದೆ. ಮುಂದಿನ ದಿನಗಳಲ್ಲಿ ಪ್ರಾಮಾಣಿಕವಾಗಿ ಆತ್ಮಾವಲೋಕನ ಮಾಡಿಕೊಳ್ಳುವುದು ದುಸ್ತರವಾಗಬಹುದು. ರಾಜಕೀಯ ಸ್ಥಾನಕ್ಕಾಗಿ ಮೌಲ್ಯಗಳನ್ನು ತೂರಿ ಬಿಡುವ ಜನರ ನಡುವೆ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ, ಕೆಂಗಲ್ ಹನುಮಂತಯ್ಯನವರಿಗೆ ಎಂಎಲ್‌ಸಿ ಸ್ಥಾನ ನೀಡುವ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಅವರು ನಂಬಿದ ಬದುಕಿನ ಮೌಲ್ಯಗಳನ್ನು ಅನಾವರಣಗೊಳಿಸುತ್ತದೆ ಎಂದರು.

**ದೊರೆಸ್ವಾಮಿ ಕಾರ್ಯ ಮಾದರಿ:** ಬಡತನವನ್ನೇ ಅಪ್ಪಿಕೊಂಡು ಮೌಲ್ಯಗಳನ್ನು ಬದುಕಿನ ಆಧಾರವಾಗಿಸಿಕೊಂಡು ಪ್ರಾಮಾಣಿಕ ಹೋರಾಟದ ಜೀವನ ನಡೆಸಿದ ದೊರೆಸ್ವಾಮಿ ಅವರ ವ್ಯಕ್ತಿತ್ವ ದರ್ಶನವಾಗಬೇಕು. ಈ ಮೂಲಕ ನಿಜವಾದ ಗಾಂಧಿ ತತ್ತ್ವಗಳು ಜನರಿಗೆ ತಲುಪುವ ನಿಟ್ಟಿನಲ್ಲಿ ಸರಕಾರ ದೊರೆಸ್ವಾಮಿ ಅವರನ್ನು ಇಡೀ ರಾಜ್ಯ ಸುತ್ತುವಂತೆ ಮಾಡುವ ಮೂಲಕ ಅವರ ವ್ಯಕ್ತಿತ್ವ ದರ್ಶನದಿಂದ ಹೊಸ ಪೀಳಿಗೆಯಲ್ಲಿ ಗಾಂಧಿ ತತ್ವಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬಹುದಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಡಾ. ಎಚ್.ಎಸ್.ದೊರೆಸ್ವಾಮಿ ಕುರಿತ 'ಗಾಳಿಗೆ ಸಿಕ್ಕ ತರಗೆಲೆ' ಕೃತಿ ಬಿಡುಗಡೆ ಮಾಡಲಾಯಿತು. ದೊರೆಸ್ವಾಮಿ ಅವರಿಗೆ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಗಾಂಧಿ ಪ್ರಣೀತ ಸಂಘ ಸಂಸ್ಥೆಗಳು ದೊರೆಸ್ವಾಮಿ ದಂಪತಿಯನ್ನು ಅಭಿನಂದಿಸಿದರು.

ಕೇಂದ್ರ ಮಾಜಿ ಸಚಿವರಾದ ರಾಜಶೇಖರನ್, ಸಿ.ಕೆ.ಜಾಫರ್ ಷರೀಫ್, ಶಾಸಕ ಎ.ಟಿ.ರಾಮಸ್ವಾಮಿ, ಮಾಜಿ ಸಂಸದ ಹನುಮಂತಪ್ಪ, ಸಾಹಿತಿ ಹಂಪಾ ನಾಗರಾಜಯ್ಯ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವುಡೆ ಪಿ.ಕೃಷ್ಣ, ನಿವೃತ್ತ ಮುಖ್ಯ ನ್ಯಾ. ರಾಮಜೋಯಿಸ್ ಇತರರು ಇದ್ದರು.

ರಾಜಧಾನಿ ನ್ಯೂಸ್ ಸೋಮವಾರ, ಜುಲೈ 30, 2018

# ನಿಸ್ವಾರ್ಥ ಸೇವಕರು ಕ್ಷೀಣ: ಎಚ್.ಕೆ.ಪಾಟೀಲ್ ಕಳವಳ

ಉದಯಕಾಲ ನ್ಯೂಸ್

ಬೆಂಗಳೂರು: ದೇಶದ ಹಿತದೃಷ್ಟಿಯಲ್ಲಿ ಗಮನದಲ್ಲಿಟ್ಟುಕೊಂಡು ನಿಸ್ವಾರ್ಥದಿಂದ ಸೇವೆ ಮಾಡುವವರ ಸಂಖ್ಯೆ ಇಂದಿನ ದಿನಮಾನದಲ್ಲಿ ಕಡಿಮೆಯಾಗುತ್ತಿದೆ ಎಂದು ಮಾಜಿ ಸಚಿವ ಎಚ್.ಕೆ. ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಗಾಂಧಿ ಸ್ಮಾರಕ ನಿಧಿ ವತಿಯಿಂದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ ಡಾ. ಎಚ್. ಎಸ್. ದೊರೆಸ್ವಾಮಿ ಅವರ 100ರ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಪೀಳಿಗೆಯ ಯುವಜನತೆ ಜನಹಿತ ಹಾಗೂ ರಾಷ್ಟ್ರಹಿತವನ್ನು ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕ ಸೇವೆ ಮಾಡುವ ಸದುದ್ದೇಶದಿಂದ ಸಾರ್ವಜನಿಕ ಬದುಕಿಗೆ ಬರಬೇಕು. ವೈಯುಕ್ತಿಕ ಹಾಗೂ ಸ್ವಾರ್ಥ ಸಾಧನೆಗಲ್ಲ, ಆದರೆ, ಇಂದು ನಿಸ್ವಾರ್ಥ ಸೇವೆ ಮತ್ತು ಸಮಾಜಮುಖಿ ಕಾರ್ಯ ಮಾಡಬೇಕು ಎಂದುಕೊಂಡು ಸರ್ವಾಜನಿಕ ಜೀವನ ಪ್ರವೇಶಿಸುವವರ ಸಂಖ್ಯೆ ಕಡಿಮೆಯಾಗಿದೆ ಎಂದರು.



ಪ್ರಸ್ತುತ ಸಮಾಜದ ಚಿಂತನೆಯ ಸ್ಥಿತಿಗತಿಗಳನ್ನು ಗಮನಿಸಿದರೆ ನಾವು ಎತ್ತ ಸಾಗುತ್ತಿದ್ದೇವೆ ಎಂಬುದೇ ಅರ್ಥವಾಗುತ್ತಿಲ್ಲ. ಗಾಂಧಿ ಮಾರ್ಗದಲ್ಲಿ ನಾವೆಲ್ಲಾ ನಾಯಕರು ಹೋಗುತ್ತಿದ್ದೇವೆಯೇ ಎಂಬುದನ್ನು ನೆನಪಿಸಿಕೊಂಡರೆ ದುಃಖ ಆಗುತ್ತದೆ. ಮುಂದಿನ ದಿನಗಳಲ್ಲಿ ಪ್ರಾಮಾಣಿಕವಾಗಿ ಆತ್ಮವಲೋಕನ ಮಾಡಿಕೊಳ್ಳುವುದೂ ದುಸ್ತರವಾಗಬಹುದು. ರಾಜಕೀಯ ಸ್ಥಾನಮಾನಗಳು ಸಿಗುತ್ತದೆ ಎಂದರೆ ಎಲ್ಲ ಮೌಲ್ಯಗಳನ್ನು ಗಾಳಿಗೆ ತೂರಿ ಬಿಡುವ ಜನರಿದ್ದಾರೆ. ಇಂತಹ ಜನರ ನಡುವೆಯೂ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ, ಕೆಂಗಲ್ ಹನುಮಂತಯ್ಯನವರಿಗೆ ಎಂಎಲ್ ಸಿ ಸ್ಥಾನ ನೀಡುವ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಅವರು ನಂಬಿದ ಬದುಕಿನ ಮೌಲ್ಯಗಳನ್ನು ಅನಾವರಣಗೊಳಿಸುತ್ತದೆ ಎಂದರು.

ಬಡತನವನ್ನೇ ಅಪ್ಪಿಕೊಂಡು ಮೌಲ್ಯಗಳನ್ನು ಬದುಕಿನ ಆಧಾರವಾಗಿಸಿಕೊಂಡು ಪ್ರಾಮಾಣಿಕ ಹೋರಾಟದ ಜೀವನ ನಡೆಸಿದ ದೊರೆಸ್ವಾಮಿ ಅವರ ವ್ಯಕ್ತಿತ್ವ ದರ್ಶನ ಎಲ್ಲರಿಗೂ ಆಗಬೇಕು. ಅವರ ಮೂಲಕ ನಿಜವಾದ ಗಾಂಧಿ ತತ್ವಗಳು ಜನರಿಗೆ ತಲುವಂತೆ ಸರಕಾರ ಮಾಡಬೇಕು. ದೊರೆಸ್ವಾಮಿ ಅವರನ್ನು ಇಡೀ ರಾಜ್ಯ ಸುತ್ತುವಂತೆ ಮಾಡುವ ಮೂಲಕ ಅವರ ವ್ಯಕ್ತಿತ್ವ ದರ್ಶನದಿಂದ ಹೊಸ ಪೀಳಿಗೆಯಲ್ಲಿ ಗಾಂಧಿ ತತ್ವಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬಹುದಾಗಿದೆ ಎಂದರು. ರಾಜ್ಯದಲ್ಲಿ ಹಲವು ಸಂಘಟನೆಗಳು, ಬಲಿಷ್ಠ ಹೋರಾಟಗಾರರು ಇದ್ದಾರೆ. ಆದರೆ ಸರಕಾರ ಹೆದರುವ ಏಕೈಕ ಹೋರಾಟಗಾರರು ದೊರೆಸ್ವಾಮಿ ಮಾತ್ರ ಎಂದು ಅವರು ಹೇಳಿದರು.

ದೊರೆಸ್ವಾಮಿ ಅವರ ಮಾತಿನ ಸ್ಫೂರ್ತಿಯಿಂದಲೇ ನಾವು ಗ್ರಾಮೀಣ ಜನರ ಸೇವೆ, ಶುದ್ಧ ಕುಡಿಯುವ ನೀರು ಒದಗಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿದ್ದು, ಅವರ ನಡೆ, ನುಡಿ, ಮೌಲ್ಯಗಳು ಪ್ರತಿಯೊಬ್ಬರಿಗೂ ಸ್ಫೂರ್ತಿ ಎಂದು ಎಚ್. ಕೆ. ಪಾಟೀಲ್ ಹೇಳಿದರು.

ಇದೇ ಸಂದರ್ಭದಲ್ಲಿ ಡಾ. ಎಚ್. ಎಸ್. ದೊರೈಸ್ವಾಮಿ ಕುರಿತಾದ 'ಗಾಳಿಗೆ ಸಿಕ್ಕ ತರಗೆಲೆ' ಕೃತಿ ಬಿಡುಗಡೆ ಮಾಡಲಾಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ ಅವರಿಗೆ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಗಾಂಧಿ ಪ್ರಣೀತ ಸಂಘ ಸಂಸ್ಥೆಗಳು ದೊರೆಸ್ವಾಮಿ ಅವರ ಪತ್ನಿ ಲಲಿತಮ್ಮಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವ ರಾಜಶೇಖರನ್, ಸಿ.ಕೆ. ಜಾಫರ್ ಷರೀಫ್, ಶಾಸಕ ಎ.ಟಿ. ರಾಮಸ್ವಾಮಿ, ಮಾಜಿ ಸಂಸದ ಹನುಮಂತಪ್ಪ, ಸಾಹಿತಿ ಹಂಪಾ ನಾಗರಾಜಯ್ಯ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವುಡೆ ಪಿ. ಕೃಷ್ಣ, ನಿವೃತ್ತ ಮುಖ್ಯ ನ್ಯಾಯಮೂರ್ತಿ ರಾಮಜೋಯಿಸ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಭಾನುವಾರ,
29-07-2018



**ಶತಾಯುಷಿಗೆ ಸನ್ಮಾನ...** ಗಾಂಧಿಭವನದಲ್ಲಿಂದು ನಡೆದ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಶತಾಯುಷಿ ಎಚ್.ಎಸ್. ದೊರೆಸ್ವಾಮಿ - ಲತಾ ದಂಪತಿಯನ್ನು ಸನ್ಮಾನಿಸಲಾಯಿತು. ಕೇಂದ್ರ ಮಾಜಿ ಸಚಿವ ಎಂ.ವಿ.ರಾಜಶೇಖರನ್, ಸಿ.ಕೆ.ಜಾಫರ್ ಷರೀಫ್, ಗಾಂಧಿಭವನ ಅಧ್ಯಕ್ಷ ವೂಡೆ ಪಿ ಕೃಷ್ಣ, ಎಸ್.ಜಿ. ಸಿದ್ದರಾಮಯ್ಯ, ಹಂಪಾ ನಾಗರಾಜಯ್ಯ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

# ದೊರೆಸ್ವಾಮಿ

ನಗರದ ಗಾಂಧಿನಭವನದಲ್ಲಿ ಎಚ್.ಎಸ್.ದೊರೆಸ್ವಾಮಿ ಅವರ 100ರ ಸಂಭ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೊರೆಸ್ವಾಮಿ ಅವರು ಗಾಂಧಿ ಮಾರ್ಗವನ್ನೇ ಅನುಸರಿಸಿದವರು. ಇಂಥವರ ವ್ಯಕ್ತಿತ್ವ , ಗಾಂಧೀಜಿಯವರ ಸೇವೆ , ಜೀವನ ಬಗ್ಗೆ ಇಂದಿನ ಯುವಕರಿಗೆ ತಿಳಿಸಿದರೆ ನಂಬದ ಸ್ಥಿತಿಯಲ್ಲಿದ್ದಾರೆ. ಇನ್ನು 10 ವರ್ಷಗಳ ನಂತರ ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಇಂತಹ ವೇದಿಕೆಗಳೇ ಸಿಗುವುದಿಲ್ಲ ಎಂದು ವಿಷಾದಿಸಿದರು.

ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ದೊರೆಸ್ವಾಮಿ ಅವರ ವ್ಯಕ್ತಿತ್ವ ಮತ್ತು ಆದರ್ಶದ ಬಗ್ಗೆ ಮಕ್ಕಳಿಗೆ ತಿಳಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಕರ್ನಾಟಕ ಸ್ಮಾರಕನಿಧಿ ಅಧ್ಯಕ್ಷ ಡಾ.ವೂಡೆ ಪಿ. ಕೃಷ್ಣ ಮಾತನಾಡಿ, ದೊರೆಸ್ವಾಮಿ ಅವರು ಸ್ವತಂತ್ರಹೋರಾಟಕ್ಕೆ ಸಾಕ್ಷಿಯಾಗಿದ್ದಾರೆ. ಇವರು ನಿರಂತರ ಚಳುವಳಿಗಾರರು. ಇವರ ಬದುಕು ಹಾಗೂ ಜೀವನ ಮೌಲ್ಯ ಯುವಕರಿಗೆ ಪ್ರೇರಣೆ ಎಂದು ಅಭಿಪ್ರಾಯಪಟ್ಟರು. ಇವರನ್ನು ಗಾಂಧೀಜಿಯವರ ಅನುಯಾಯಿ ಎಂದು ಕರೆಯಬಹುದು. ಶಿಕ್ಷಣ ಪ್ರೇಮಿ, ಪತ್ರಕರ್ತರು, ಹೋರಾಟಗಾರರು ಆಗಿರುವ ಅವರಿಗೆ ನಾನಾ ಮುಖಗಳಿವೆ. ರಾಜಕೀಯದಿಂದ ದೂರ ಇರುವ ಇವರು ಜನಗಳ ಮಧ್ಯೆ ಇದ್ದಾರೆ. ಧೊರೆಸ್ವಾಮಿ ಅವರದು ನೋವು-ನಲಿವಿಗೆ ಸ್ಪಂದಿಸುವ ವ್ಯಕ್ತಿತ್ವ ಎಂದರು.

ಧೈರ್ಯ, ಪ್ರೀತಿ, ಸತ್ಯ , ಅಹಿಂಸೆಯನ್ನು ಯಾರು ಪ್ರತಿಪಾದಿಸುತ್ತಾರೋ ಅಂಥವರು ಇವರ ತತ್ವಗಳನ್ನು ಪಾಲಿಸುವುದಕ್ಕೆ ಸಾಧ್ಯ . ಗಾಂಧಿ ತತ್ವವನ್ನು ಯುವಕರಲ್ಲಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ಇದೇ ವೇಳೆ ಹೋರಾಟಗಾರ ದೊರೆಸ್ವಾಮಿ ದಂಪತಿಗೆ ಗೌರವ ಅಭಿನಂದನೆ ಸಲ್ಲಿಸಲಾಯಿತು ಹಾಗೂ ದೊರೆಸ್ವಾಮಿ ಅವರ ಕುರಿತು ಬಿ.ಆರ್.ರಮೇಶ್ ರಚಿಸಿರುವ ಗಾಳಿಗೆ ಸಿಕ್ಕ ತರಗೆಲೆ ಎಂಬ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ .ಎಸ್ .ಜಿ.ಸಿದ್ದರಾಮಯ್ಯ , ಕೇಂದ್ರ ಮಾಜಿ ಸಚಿವರಾದ ಸಿ.ಕೆ.ಜಾಫರ್ ಷರೀಫ್, ಎಂ.ವಿ.ರಾಜಶೇಖರನ್ ಮತ್ತಿತರರು ಇದ್ದರು.

ಸಂಜೆವಾಣಿ
ಭಾನುವಾರ, ಜುಲೈ 29, 2017

# ಎಚ್.ಕೆ. ಪಾಟೀಲ್ ವಿಷಾದ

ಬೆಂಗಳೂರು, ಜು. 29– ಈಗಿನ ದಿನಮಾನದಲ್ಲಿ ಪ್ರಾಮಾಣಿಕವಾಗಿ, ನಿಸ್ವಾರ್ಥವಾಗಿ ಜನಹಿತ ಹಾಗೂ ದೇಶದ ಹಿತವನ್ನು ಗಮನದಲ್ಲಿಟ್ಟುಕೊಂಡು ಸೇವೆ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಮಾಜಿ ಸಚಿವ ಹಾಗೂ ಶಾಸಕ ಹೆಚ್.ಕೆ.ಪಾಟೀಲ್ ಹೇಳಿದರು.

ಗಾಂಧಿ ಸ್ಮಾರಕ ನಿಧಿ ಗಾಂಧಿ ಭವನದಲ್ಲಿಂದು ಆಯೋಜಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ ಡಾ.ಹೆಚ್.ಎಸ್.ದೊರೆಸ್ವಾಮಿ ಅವರ 100ರ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈಗಿನ ನವ ಪೀಳಿಗೆ ಜನಹಿತ ಹಾಗೂ ರಾಷ್ಟ್ರಹಿತವನ್ನು ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕ ಸೇವೆ ಮಾಡುವ ಸದುದ್ದೇಶದಿಂದ ಸಾರ್ವಜನಿಕ ಬದುಕಿಗೆ ಬರಬೇಕು. ವೈಯುಕ್ತಿಕ ಹಾಗೂ ಸ್ವಾರ್ಥ ಸಾಧನೆಗಲ್ಲ ಎಂದರು.

ಈಗಿನ ಸಮಾಜದ ಸ್ಥಿತಿಗತಿಗಳನ್ನು ಗಮನಿಸಿದರೆ ನಾವು ಎತ್ತ ಸಾಗುತ್ತಿದ್ದೇವೆ ಎಂಬುದೇ ಅರ್ಥವಾಗುತ್ತಿಲ್ಲ. ಗಾಂಧಿ ಮಾರ್ಗದಲ್ಲಿ ನಾವೆಲ್ಲಾ ನಾಯಕರು ಹೋಗುತ್ತಿದ್ದೇವೆಯೇ ಎಂಬುದನ್ನು ನೆನಪಿಸಿಕೊಂಡರೆ ದುಃಖ ಆಗುತ್ತದೆ. ಮುಂದಿನ ದಿನಗಳಲ್ಲಿ ಪ್ರಾಮಾಣಿಕವಾಗಿ ಆತ್ಮಾವಲೋಕನ ಮಾಡಿಕೊಳ್ಳುವುದು ದುಸ್ತರವಾಗಬಹುದು



ನಗರದ ಗಾಂಧಿಭವನದಲ್ಲಿಂದು ನಡೆದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ಅವರ 100ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ದೊರೆಸ್ವಾಮಿ ದಂಪತಿಗಳನ್ನು ಕೇಂದ್ರದ ಮಾಜಿ ಸಚಿವ ಎಂ.ವಿ. ರಾಜಶೇಖರನ್, ಮಾಜಿ ಸಚಿವ ಹೆಚ್.ಕೆ. ಪಾಟೀಲ್ ಸನ್ಮಾನಿಸಿದರು. ಕೇಂದ್ರದ ಮಾಜಿ ಸಚಿವ ಸಿ.ಕೆ. ಜಾಫರ್ ಷರೀಫ್, ಶಾಸಕ ಎ.ಟಿ. ರಾಮಸ್ವಾಮಿ, ವೂಡೆ ಪಿ. ಕೃಷ್ಣ ಇದ್ದಾರೆ.

ಎಂದರು.

ಈಗೆಲ್ಲಾ ರಾಜಕೀಯ ಸ್ಥಾನಮಾನಗಳು ಸಿಗುತ್ತೆ ಎಂದರೆ ಎಲ್ಲ ಮೌಲ್ಯಗಳನ್ನು ತೂರಿ ಬಿಡುವ ಜನರಿದ್ದಾರೆ. ಇಂತಹ ಜನರ ನಡುವೆಯೂ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಕೆಂಗಲ್ ಹನುಮಂತಯ್ಯನವರಿಗೆ ಎಂಎಲ್‌ಸಿ ಸ್ಥಾನ ನೀಡುವ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಅವರು ನಂಬಿದ ಬದುಕಿನ ಮೌಲ್ಯಗಳನ್ನು ಅನಾವರಣಗೊಳಿಸುತ್ತದೆ ಎಂದರು.

ಬಡತನವನ್ನೇ ಅಪ್ಪಿಕೊಂಡು ಮೌಲ್ಯಗಳನ್ನು ಬದುಕಿನ ಆಧಾರವಾಗಿಸಿಕೊಂಡು ಪ್ರಾಮಾಣಿಕವಾಗಿ ಹೋರಾಟದ ಜೀವನ ನಡೆಸಿದ ದೊರೆಸ್ವಾಮಿ ಅವರ ವ್ಯಕ್ತಿತ್ವ ದರ್ಶನ ಎಲ್ಲರಿಗೂ ಆಗಬೇಕು. ಅವರ ಮೂಲಕ ನಿಜವಾದ ಗಾಂಧಿ ತತ್ವಗಳು ಜನರಿಗೆ ತಲುವಂತೆ ಸರ್ಕಾರ ದೊರೆಸ್ವಾಮಿ ಅವರನ್ನು ಇಡೀ ರಾಜ್ಯ ಸುತ್ತುವಂತೆ ಮಾಡುವ ಮೂಲಕ ಅವರ ವ್ಯಕ್ತಿತ್ವ ದರ್ಶನದಿಂದ ಹೊಸ ಪೀಳಿಗೆಯಲ್ಲಿ ಗಾಂಧಿ ತತ್ವಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬಹುದಾಗಿದೆ ಎಂದರು.

ರಾಜ್ಯದಲ್ಲಿ ಹಲವು ಸಂಘಟನೆಗಳು, ಬಲಿಷ್ಠ ಹೋರಾಟಗಾರರು ಇದ್ದಾರೆ. ಆದರೆ ಸರ್ಕಾರ ಹೆದರುವ ಏಕೈಕ ಹೋರಾಟಗಾರರು ದೊರೆಸ್ವಾಮಿ ಮಾತ್ರ ಎಂದು ಅವರು ಹೇಳಿದರು.

ದೊರೆಸ್ವಾಮಿ ಅವರ ಮಾತಿನ ಸ್ಫೂರ್ತಿಯಿಂದಲೇ ನಾವು ಗ್ರಾಮೀಣ ಜನರ ಸೇವೆ, ಶುದ್ಧ ಕುಡಿಯುವ ನೀರಿಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿದ್ದು, ಅವರ ನಡೆ, ನುಡಿ, ಮೌಲ್ಯಗಳು ಪ್ರತಿಯೊಬ್ಬರಿಗೂ ಸ್ಫೂರ್ತಿ ಎಂದು ಹೆಚ್.ಕೆ.ಪಾಟೀಲ್ ಹೇಳಿದರು.

ಇದೇ ಸಂದರ್ಭದಲ್ಲಿ ಡಾ. ಹೆಚ್.ಎಸ್. ದೊರೈಸ್ವಾಮಿ ಕುರಿತಾದ "ಗಾಳಿಗೆ ಸಿಕ್ಕ ತರಗೆಲೆ" ಕೃತಿ ಬಿಡುಗಡೆ ಮಾಡಲಾಯಿತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ಅವರಿಗೆ 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಗಾಂಧಿ ಪ್ರಣೀತ ಸಂಘ ಸಂಸ್ಥೆಗಳು ದೊರೆಸ್ವಾಮಿ ಅವರ ಪತ್ನಿ ಲಲಿತಮ್ಮ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವರುಗಳಾದ ರಾಜಶೇಖರನ್, ಸಿ.ಕೆ. ಜಾಫರ್ ಷರೀಫ್, ಶಾಸಕ ಎ.ಟಿ. ರಾಮಸ್ವಾಮಿ, ಮಾಜಿ ಸಂಸದ ಹನುಮಂತಪ್ಪ, ಖ್ಯಾತ ಸಾಹಿತಿ ಹಂಪಾನಾಗರಾಜಯ್ಯ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೆ ಪಿ. ಕೃಷ್ಣ, ನಿವೃತ್ತ ಮುಖ್ಯ ನ್ಯಾಯಮೂರ್ತಿ ರಾಮಜೋಯಿಸ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಹೊಸ ದಿಗಂತ
ಶನಿವಾರ
28 ಜುಲೈ 2018

### ಕಸಾಪ ಅಧ್ಯಕ್ಷರಿಂದ ಕನ್ನಡ ಕಾವ್ಯ-ಸಂಸ್ಕೃತಿ ಕಮ್ಮಟಕ್ಕೆ ಚಾಲನೆ

# ಅಧ್ಯಯನಶೀಲದಿಂದ ಮಾತ್ರ ಕಾವ್ಯ ರಚನೆ ಸಾಧ್ಯ

▶ ದಿಗಂತ ವರದಿ: ಬೆಂಗಳೂರು, ಜು. 27



ರಾಜ್ಯಮಟ್ಟದ 12ನೇ ಕನ್ನಡ ಕಾವ್ಯ-ಸಂಸ್ಕೃತಿ ಕಮ್ಮಟಕ್ಕೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಿಗಾರ್ ಚಾಲನೆ ನೀಡಿದರು.

ಕವಿ ಆಗಬೇಕಾದರೆ, ಉತ್ತಮ ಓದುಗನಾಗಿರಬೇಕು. ಅಧ್ಯಯನಶೀಲದಿಂದ ಕಾವ್ಯ ರಚನೆ ಸಾಧ್ಯ. ಕಾವ್ಯದ ಮೂಲಕ ಜನರ ಮನಸ್ಸು ಸ್ವಚ್ಛಗೊಳಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಿಗಾರ್ ಹೇಳಿದರು.

ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಶುಕ್ರವಾರ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕನ್ನಡ ಸಾಹಿತ್ಯ ವೇದಿಕೆ ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಸಹಯೋಗದಲ್ಲಿ ರಾಜ್ಯಮಟ್ಟದ 12ನೇ ಕನ್ನಡ ಕಾವ್ಯ-ಸಂಸ್ಕೃತಿ ಕಮ್ಮಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾವ್ಯ ರಚನೆಗೂ ಮುಂಚೆ ಕನ್ನಡದ ಶ್ರೇಷ್ಠ ಕವಿ, ಪಂಡಿತರ ಪುಸ್ತಕ ಅಧ್ಯಯನ ಮಾಡಬೇಕು. ಆಸ್ವಾದಿಸುವ ಮನಸ್ಸು ಇದ್ದವರಿಗೆ ಮಾತ್ರ ಕಾವ್ಯ ಕಟ್ಟುವ ಬಗೆ ಬರುತ್ತದೆ. ಕಮ್ಮಟ ಯುವ ಪ್ರತಿಭೆಗಳನ್ನು ಬೆಳೆಸುತ್ತಿದೆ ಎಂದರು. ಕಾವ್ಯದಲ್ಲಿ ಸಂಸ್ಕೃತಿ ಇದೆ. ಸಂಸ್ಕೃತಿಯಲ್ಲಿ ಕಾವ್ಯವಿದೆ. ವೈಚಾರಿಕತೆ, ಕೋಮುಸೌಹಾರ್ದ ಬಗ್ಗೆ ಪ್ರಸ್ತುತ ಚಿಂತಿಸುತ್ತಿದ್ದೇವೆ. ಈ ವಿಚಾರ 9ನೇ ಶತಮಾನದಲ್ಲಿ ಕಾವ್ಯ ಸಂಸ್ಕೃತಿ ತಿಳಿಸಿದೆ. ಕಾವ್ಯ ಜೀವನದ ಮೌಲ್ಯ ತಿಳಿಸುತ್ತದೆ. ಯುವ ಪೀಳಿಗೆ ತಮ್ಮದೇ ವ್ಯಕ್ತಿತ್ವ ಬೆಳೆಸಿಕೊಂಡು ಗುಣಮಟ್ಟದ ಪುಸ್ತಕ ಬರೆಯಲು ಮುಂದಾಗಬೇಕು ಎಂದರು.

ಅಂಕಣಕಾರ ಎಸ್. ಷಡಕ್ಷರಿ ಮಾತನಾಡಿ, ಎಲ್ಲಾ ಪುಸ್ತಕ ಓದಿ, ಅರ್ಥಮಾಡಿಕೊಂಡು ನಮ್ಮ ಕಾವ್ಯದಲ್ಲಿ ಅಳವಡಿಸಿಕೊಳ್ಳಬೇಕು. ಕವಿ ಎನಿಸಿಕೊಳ್ಳಬೇಕಾದರೆ ಬರೆಯಲು ಆರಂಭಿಸಬೇಕು. ಕವಿ ಆಗೇ ಬಿಟ್ಟೆ ಎಂಬ ಭ್ರಮೆ ಬರಬಾರದು. ಬರೆಯುವುದನ್ನು ಬಿಡಬಾರದು ಎಂದರು. ಶೇಷಾದ್ರಿಪುರ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ ಮಾತನಾಡಿ, ಯುವ ಕವಿಗಳು ಬುದ್ಧ, ಬಸವ, ಗಾಂಧಿ ಅವರ ಜೀವನ ಸಂದೇಶ ಅಧ್ಯಯನ ಮಾಡಬೇಕು. ಬೇರೆ ಕವಿ, ಪುಸ್ತಕಗಳ ಅನುಕರಣೆ ಮಾಡದೇ, ಅನುಸಂಧಾನ ಮಾಡಬೇಕು. ಒಳ್ಳೆಯ ಕಾವ್ಯ ರಚಿಸಿದರೆ ಮೃತಪಟ್ಟರೂ ಹೆಸರು ಚಿರಸ್ಥಾಯಿಯಾಗಿರುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಸದಸ್ಯ ಡಾ. ಬೈರಮಂಗಲ ರಾಮೇಗೌಡ ಮಾತನಾಡಿ, ರಾಜ್ಯದ ವಿವಿಧ ಕಡೆಯಿಂದ ಬಂದ ಯುವಜನತೆಗೆ ಕನ್ನಡ ಕಾವ್ಯ-ಸಂಸ್ಕೃತಿ ಕಮ್ಮಟ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ನಾನೂ ಬರೆಯಬಲ್ಲೆ ಎಂಬ ಧೈರ್ಯ ತುಂಬುತ್ತದೆ ಎಂದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಎಸ್.ರಾಮಲಿಂಗೇಶ್ವರ, ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಪ್ರಾಚಾರ್ಯ ಎನ್.ಎಸ್. ಸತೀಶ್, ಎಸ್.ಇ.ಡಿ.ಸಿ ಆಡಳಿತ ಸಲಹಾ ಮಂಡಳಿ ಅಧ್ಯಕ್ಷ ಸಿ.ಎಲ್.ಬಸವರಾಜಯ್ಯ ಉಪಸ್ಥಿತರಿದ್ದರು.

ಗುರುವಾರ, 26, ಜುಲೈ, 2018

# ಕಸದ ನಗರಿಯಾದ ಹಸಿರು ನಗರ



ಗಾಂಧಿಭವನದಲ್ಲಿ ನಡೆದ 'ವಸುಂಧರೆಯ ಸೇವಕರಿಗೆ ಗೌರವಾಭಿನಂದನೆ' ಕಾರ್ಯಕ್ರಮವನ್ನು ಪರಿಸರ ತಜ್ಞ ಡಾ.ಎ.ಎನ್ ಯಲ್ಲಪ್ಪರೆಡ್ಡಿ ಔಷಧಿ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬೇಲಿ ಮಠದ ಶಿವರುದ್ರಸ್ವಾಮೀಜಿ, ಗಾಂಧಿ ಸ್ಮಾರಕನಿಧಿ ಅಧ್ಯಕ್ಷ ಡಾ. ವೂಡೆ ಪಿ ಕೃಷ್ಣ ಮತ್ತಿತರರಿದ್ದರು.

**ಸಂ.ಕ ಸಮಾಚಾರ ಬೆಂಗಳೂರು**

ಹಸಿರು ಬೆಂಗಳೂರು ಇಂದು ಕಸದ ನಗರವಾಗಿದೆ. ತಿಪ್ಪಗೊಂಡಹಳ್ಳಿಯಲ್ಲಿ 80 ಅಡಿ ಕಲುಶಿತ ನೀರು ನಿಂತಿದೆ ಎಂದು ಬೇಲಿಮಠ ಮಹಾಸಂಸ್ಥಾನದ ಶಿವರುದ್ರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಗಾಂಧಿಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಎನ್ವೈರನ್‌ಮೆಂಟ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ವಸುಂಧರೆಯ ಸೇವಕರಿಗೆ ಗೌರವಾಭಿನಂದನ' ಕಾರ್ಯಕ್ರಮದಲ್ಲಿ ಮಾತನಾಡಿ, ಕೃಷ್ಣರಾಜ ಒಡೆಯರು ಅಂದು ಜನರ ದಾಹತಣಿಸಲು ನಿರ್ಮಿಸಿದ್ದ ತಿಪ್ಪಗೊಂಡನಹಳ್ಳಿ ಕೆರೆ ಇಂದು ಕಲುಶಿತಗೊಂಡಿದೆ ಎಂದರು.

ಸರ್ಕಾರದ ಹಲವು ಯೋಜನೆಗಳ ಲೋಪಗಳಿಂದ ನಾವು ಸಮಸ್ಯೆಗೆ ಒಳಪಡುತ್ತಿದ್ದೇವೆ. ಅದೇ ರೀತಿ ಇಂದು ಕೆಸಿ ವ್ಯಾಲಿ ಯೋಜನೆ ಮೂಲಕ ಶುದ್ಧ ಕೋಲಾರ ಜಿಲ್ಲೆಗೆ ಕೆಟ್ಟ ನೀರು ಹರಿಸುತ್ತಿದ್ದು ಇದ-ರಿಂದ ಆತಂಕ ಉಂಟಾಗಿದೆ. ನಾವೆಲ್ಲರೂ ಮನುಷ್ಯರಾಗಿ ಬದುಕುವ ಮಾನವೀಯ ಸಮಾಜದ ವಾತಾವರಣ ನಿರ್ಮಾಣ ಮಾಡಬೇಕು. ಅಸ್ಪೃಶ್ಯತೆ ನಿವಾರಣೆಯಾಗಿ ಮಾನವೀಯತೆಯ, ಸಹೋದರತೆಯ ಸಮಾಜ ನಿರ್ಮಾಣವಾಗಬೇಕು ಎಂದು ಗಾಂಧೀಜಿ ಬಯಸಿದ್ದರು. ಹೀಗಾಗಿ ನಾವು ಅವರ ಕನಸು ಈಡೇರಿಸಬೇಕು ಎಂದು ತಿಳಿಸಿದರು.

- ಬೇಲಿಮಠ ಮಹಾಸಂಸ್ಥಾನದ ಶಿವರುದ್ರಸ್ವಾಮೀಜಿ ಬೇಸರ

ಪರಿಸರ ತಜ್ಞ ಡಾ.ಎ.ಎನ್ ಯಲ್ಲಪ್ಪರೆಡ್ಡಿ ಮಾತನಾಡಿ, ನಿಸರ್ಗದ ಎಲ್ಲ ಅಂಶಗಳೆಂದರೆ ಮರ-ಗಿಡ, ಕಲ್ಲು, ಜೀವ ಸಂಕುಲಗಳನ್ನು ಕ್ರೋಢೀಕರಿಸಿಕೊಂಡು ನಗರಗಳ ನಿರ್ಮಾಣಕ್ಕೆ ಮುಂದುವರೆಯಬೇಕು. ಇಲ್ಲವಾದಲ್ಲಿ ಮನುಷ್ಯ ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಎದು-ರಿಸಬೇಕಾಗುತ್ತದೆ.

ಸಮಾಜದಲ್ಲಿನ ಸಮಸ್ಯೆಗಳನ್ನು ಸರ್ಕಾರವೇ ಬಗೆಹರಿಸಬೇಕು ಎಂದಲ್ಲಾ, ಬದಲಾಗಿ ಸಮಾಜ ಸೇವಕರು ಮಾಡಿದ್ದಾರೆ. ಎಲ್ಲಾದಕ್ಕೂ ಮನುಷ್ಯ ಹಂತಕನೇ ಹೊರತು ಪ್ರಾಣಿಗಳಲ್ಲ. ಕೆರೆಗಳನ್ನು ಹಾಳುಮಾಡಿ, ಮರಗಳನ್ನು ನಾಶ ಮಾಡಿರುವುದೇ ನಾಗರಿಕರು ಎಂದರು.

ನಗರದಲ್ಲಿ ಒಂದುವರೆ ಕೋಟಿ ಜನರಿದ್ದಾರೆ. ಆದರೆ ಅವರಲ್ಲಿ ಮನುಷ್ಯರನ್ನು ಹುಡುಕಬೇಕಿದೆ. ಸಮಾಜದ ಬಗ್ಗೆ ಯಾ-ರಿಗೆ ತುಡಿತವಿರುತ್ತದೋ ಅವರೇ ಸಮಾಜಮುಖಿ ಮನುಷ್ಯರು. ಗಾಂಧಿಗೆ ಪ್ರಿಯವಾದ ಕೆಲಸ ಪರಿಸರವನ್ನು ಸಂರಕ್ಷಿಸುವುದು ಅದನ್ನು ನಾವು ನನಸುಗೊಳಿಸಬೇಕು.

ಸಮಾಜ ಸೇವಕರಾದ ಚಿದಾನಂದಮೂರ್ತಿ ಆರಾಧ್ಯ, ನಿತ್ಯಾನಂದ ಒಳಕಾಡು, ವಿನಯಚಂದ್ರ ಸಾಸ್ತಾನ, ಡಿ.ನಾಗರಾಜ್, ತಾರಾನಾಥ್ ಜೆ.ಮಸ್ತಾ ಶಿರೂರು, ಎಂ.ಜಿ. ಗುರುದೇವ ಅವರನ್ನು ಸನ್ಮಾನಿಸಲಾಯಿತು. ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಎನ್ವೈರನ್‌ಮೆಂಟ್ ಟ್ರಸ್ಟ್‌ನ ಡಾ.ಎಸ್. ರಾಜೇ ಅರಸ್ ಮತ್ತಿತರರಿದ್ದರು.

ನಂ.1 ಕನ್ನಡ ದಿನಪತ್ರಿಕೆ

ಗುರುವಾರ 26 ಜುಲೈ 2018 ● 26 JULY 2018

# ಕೊಳಚೆ ನೀರಿನಿಂದ ಕೆರೆ ಅವನತಿ

## ಬೇಲಿ ಮಠದ ಶ್ರೀ ಕಳವಳ » ವಸುಂಧರೆ ಸೇವಕರಿಗೆ ಗೌರವಾರ್ಪಣೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೋರಮಂಗಲ ಹಾಗೂ ಚಲ್ಲಘಟ್ಟ ಕಣಿವೆಯಿಂದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ ಕೆರೆಗಳಿಗೆ ಕೊಳಚೆ ನೀರನ್ನು ಹರಿಸುವ ಮೂಲಕ ಪರಿಸರ ಹಾಳು ಮಾಡುವಂತಹ ಒಳ್ಳೆಯ ಆಡಳಿತ ನಮ್ಮಲ್ಲಿದೆ. ಈ ಕಾರ್ಯ ಮಾಡಿದವರಿಗೆ ಮೊದಲು ಪ್ರಶಸ್ತಿ ನೀಡಬೇಕು ಎಂದು ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ ವ್ಯಂಗ್ಯವಾಡಿದ್ದಾರೆ.

**ಲಾಭದ ಆಸೆಗೆ ಸಮುದಾಯಕ್ಕೆ ದುಸ್ಥಿತಿ**

**ನಿಸ್ವಾರ್ಥದಿಂದ ಒಳ್ಳೆಯ ಕೆಲಸ ಮಾಡುವವರನ್ನು ಗುರುತಿಸಿ**

ಗಾಂಧಿ ಸ್ಮಾರಕನಿಧಿ ಮತ್ತು ಎನ್ವಿರಾನ್‌ಮೆಂಟ್ ಟ್ರಸ್ಟ್ ಸಹಯೋಗದಲ್ಲಿ ಬುಧವಾರ ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ವಸುಂಧರೆಯ ಸೇವಕರಿಗೆ ಗೌರವಾಭಿನಂದನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಹಿಂದೆ ತಿಪ್ಪಗೊಂಡನಹಳ್ಳಿ, ಹೆಸರಘಟ್ಟ ಕೆರೆಗಳಿಂದ ಬೆಂಗಳೂರಿಗೆ ನೀರು ಪೂರೈಸಲಾಗುತ್ತಿತ್ತು. ಆದರೀಗ, ಆ ಜಲಮೂಲಗಳು ಬತ್ತಿ ಹೋಗಿವೆ. ಈಗ ಕೊಳಚೆ ನೀರನ್ನು ಶುದ್ಧೀಕರಿಸಿ ಬಳಸುವುದಾಗಿ ಹೇಳುತ್ತಿದ್ದಾರೆ. ಆದರೆ, ಅದನ್ನು ಸರಿಯಾಗಿ ಮಾಡುತ್ತಿಲ್ಲ. ಹೀಗಾಗಿಯೇ ಕೆ.ಸಿ.ವ್ಯಾಲಿಯ ಕೊಳಚೆ ನೀರನ್ನು ಹರಿಸಿ ಕೆರೆಗಳನ್ನು ಹಾಳು ಮಾಡಲಾಗುತ್ತಿದೆ ಎಂದು ಹೇಳಿದರು.

ವೈವಿಧ್ಯತೆಯಲ್ಲಿ ಏಕತೆ ಕಾಣಬೇಕು. ಮನುಷ್ಯರಾಗಿ ಬದುಕುವ ಮೂಲಕ ಸಮಾಜದಲ್ಲಿ ಮಾನವೀಯ ವಾತಾವರಣ ನಿರ್ಮಿಸಬೇಕು. ಅಸ್ಪೃಶ್ಯತೆ ನಿವಾರಣೆಯಾಗಿ ಸಹೋದರತ್ವ ಹೆಚ್ಚಬೇಕು. ಆದರೆ, ಲಾಭಕೋರತನದಿಂದಾಗಿ ಸಮಾಜ ಹಾಳಾಗುತ್ತಿದೆ. ಸರಿದಾರಿಗೆ ತರಬೇಕೆಂದರೆ ನಿಸ್ವಾರ್ಥದಿಂದ ಒಳ್ಳೆಯ ಕೆಲಸ ಮಾಡುವವರನ್ನು ಗುರುತಿಸಿ ಪ್ರೋತ್ಸಾಹಿಸಬೇಕಿದೆ ಎಂದು ತಿಳಿಸಿದರು.

ಪರಿಸರ ತಜ್ಞ ಡಾ.ಎ.ಎನ್.ಯಲ್ಲಪ್ಪ ರೆಡ್ಡಿ ಮಾತನಾಡಿ, ಸಮಾಜದಲ್ಲಿನ ಸಮಸ್ಯೆಗಳನ್ನೆಲ್ಲ ಸರ್ಕಾರವೇ ನಿವಾರಿಸಬೇಕು ಎಂದು ಅಪೇಕ್ಷಿಸುವುದು ಸರಿಯಲ್ಲ. ಅದರ ಬದಲು ಬದಲಾವಣೆ ತರಲು ನಮ್ಮಿಂದಾಗುವ ಪ್ರಯತ್ನವನ್ನು ನಡೆಸಬೇಕು. ಯುವ ಜನತೆ ದೇಶದ ಭವಿಷ್ಯವಾಗಿದ್ದು, ಅವರಿಂದ ಮಾತ್ರ ಬದಲಾವಣೆ ತರಲು ಸಾಧ್ಯ. ಕಾಡುಪ್ರಾಣಿಗಳನ್ನು ನಾವು ನರಹಂತಕ ಎಂದು ಕರೆಯುತ್ತೇವೆ. ಆದರೆ, ಮನುಷ್ಯ ನಿಜವಾದ ಹಂತಕ. ಆತ ಅರಣ್ಯ, ಪ್ರಾಣಿಗಳ ಮೇಲೆ ಮಾಡುತ್ತಿರುವ ಹಲ್ಲೆಯಿಂದಾಗಿ ಪ್ರಾಣಿಗಳು ವ್ಯಗ್ರವಾಗುತ್ತಿವೆ. ಹೀಗಾಗಿ ಮನುಷ್ಯ ಮೊದಲು ಪರಿವರ್ತನೆಗೊಳ್ಳಬೇಕು ಎಂದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಎನ್ವಿರಾನ್‌ಮೆಂಟ್ ಟ್ರಸ್ಟ್‌ನ ನಿರ್ದೇಶಕ ಡಾ.ಎಸ್.ರಾಜೇ ಅರಸ್, ಪರಿಸರ ಅಧ್ಯಯನ ಕೇಂದ್ರದ ಅಧ್ಯಕ್ಷ ಬಿ.ಎನ್. ಸುರೇಶ್ವರ್ ಮತ್ತಿತರರು ಉಪಸ್ಥಿತರಿದ್ದರು.



ಗಾಂಧಿಭವನದಲ್ಲಿ ಬುಧವಾರ ವಸುಂಧರೆಯ ಸೇವಕರಿಗೆ ಗೌರವಾಭಿನಂದನೆ ಸಲ್ಲಿಸಲಾಯಿತು. ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ, ಡಾ.ಎ.ಎನ್.ಯಲ್ಲಪ್ಪ ರೆಡ್ಡಿ, ಡಾ.ವೂಡೇ ಪಿ. ಕೃಷ್ಣ ಮತ್ತಿತರರು ಇದ್ದರು.

**ಸನ್ಮಾನ** ಪರಿಸರ ಸಂರಕ್ಷಣೆ ಹಾಗೂ ಸಮಾಜ ಸೇವೆಯಲ್ಲಿ ನಿರತರಾದ ಚಿದಾನಂದಮೂರ್ತಿ ಆರಾಧ್ಯ, ನಿತ್ಯಾನಂದ ಒಳಕಾಡು, ವಿನಯಚಂದ್ರ ಸಾಸ್ತಾನ, ಡಿ. ನಾಗರಾಜ್, ಜೆ. ತಾರಾನಾಥ್ ಮೆಸ್ತ, ಎಂ.ಜಿ. ಗುರುದೇವ ಅವರನ್ನು ಸನ್ಮಾನಿಸಲಾಯಿತು.

ಹೊಸ ದಿಗಂತ

ಗುರುವಾರ
26 ಜುಲೈ 2018

## ಸೇವಕರಿಗೆ ಗೌರವಾಭಿನಂದನಾ ಕಾರ್ಯಕ್ರಮ

# ಸಾಂಸ್ಕೃತಿಕ ಪ್ರಗತಿಗೆ ಮೈಸೂರಿನ ಕೊಡುಗೆ ಅಪಾರ

ದಿಗಂತ ಚಿತ್ರ



ದಿಗಂತ ವರದಿ: ಬೆಂಗಳೂರು, ಜು.25

ಇಂದು ನಮ್ಮ ರಾಜ್ಯ ಸಾಂಸ್ಕೃತಿಕವಾಗಿ ಬೆಳೆಯಲು, ಮೈಸೂರು ಸಂಸ್ಥಾನದ ಕೊಡುಗೆ ಅಪಾರವಾಗಿದೆ ಎಂದು ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಎನ್ವಿರಾನ್ಮೆಂಟ್ ಟ್ರಸ್ಟ್ ಬುಧವಾರ ಗಾಂಧಿನಗರದ ಬಾಪು ಸಭಾಂಗಣದಲ್ಲಿ ಏರ್ಪಡಿಸಿದ್ದ ವಸುಂಧರೆಯ ಸೇವಕರಿಗೆ ಗೌರವಾಭಿನಂದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದು ಬೆಂಗಳೂರು ನಗರದ ಶೇಷಾದ್ರಿಪುರಕ್ಕೆ ಈ ಹೆಸರು ಬರಲು ದಿವಾನ್ ಶೇಷಾದ್ರಿ ಅಯ್ಯರ್ ರ ಕೊಡುಗೆ ಹೆಚ್ಚಿನ ಮಟ್ಟದಲ್ಲಿದೆ. ಜನಗಳ ನೀರಿನ ದಾಹ ನೀಗಿಸಲು ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿದ ತಿಪ್ಪಗೊಂಡನಹಳ್ಳಿ ಕೆರೆ ಇಂದು 70 ಅಡಿ ರಾಸಾಯನಿಕಗಳ ಕಲುಷಿತ ತ್ಯಾಜ್ಯ ನೀರು ತುಂಬಿಕೊಳ್ಳುವ ಮೂಲಕ ನಮ್ಮ ಸಾಧನೆಯ ಹೆಗ್ಗುರುತಾಗಿದೆ. ಇದು ಮಾಲಿನ್ಯಕ್ಕೆ ನೈಜ ಉದಾಹರಣೆ. ಅಂದಿನ ಇತಿಹಾಸದ ಮೂಲಕ ನಮ್ಮ ತಪ್ಪುಗಳನ್ನು ಸರಿಪಡಿಸಬೇಕೆಂದು ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಕರ್ನಾಟಕ ಗಾಂಧಿ ಸ್ಮಾರಕನಿಧಿ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಸಮಾಜದ ಬಗ್ಗೆ ನಿಜವಾದ ತುಡಿತವಿರುವವರೇ ಮನುಷ್ಯರು. ಇತರಿಗಾಗಿ ಬದುಕುವವರದೇ ನಿಜವಾದ ಬದುಕು. ಸೇವಕನಾದವನಿಗೆ ಅಹಂಕಾರ ಮತ್ತು ನಿರೀಕ್ಷೆ ಇರಬಾರದು. ಎಲ್ಲಕ್ಕಿಂತ ಮುಖ್ಯವಾಗಿ ಅವನದು ಕೊಡುಗೈ ಆಗಿರಬೇಕು. ನಾವು ಎಂದಿಗೂ ನೀಡುವ ಮನೋಧರ್ಮ ಬೆಳೆಸಿಕೊಂಡರೆ ನಮ್ಮಷ್ಟು ಶ್ರೀಮಂತರು ಬೇರೆ ಯಾರೂ ಇರುವುದಿಲ್ಲ, ಅಂತಹ ವರು ಅತ್ಯುತ್ತಮ ಸಾಧಕರಾಗುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ನಿರ್ದೇಶಕ ಡಾ. ಎಸ್ ರಾಜೇ ಅರಸ್, ಪರಿಸರ ಅಧ್ಯಯನ ಕೇಂದ್ರದ ಅಧ್ಯಕ್ಷ ಬಿ.ಎನ್ ಸುರೇಶ್ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪರಿಸರ ಮತ್ತು ಸಂಸ್ಕೃತಿಯ ಬಗೆಗಿನ ಎರಡು ಕಿರುಚಿತ್ರಗಳು ಪ್ರದರ್ಶನಗೊಂಡವು. ಚಿದಾನಂದ ಮೂರ್ತಿ ಆರಾಧ್ಯ, ನಿತ್ಯಾನಂದ ಒಳಕಾಡು, ವಿನಯಚಂದ್ರ ಸಾಸ್ತಾನ, ವಿಶು ಶೆಟ್ಟಿ, ಡಿ. ನಾಗರಾಜ್, ತಾರಾನಾಥ್,ಜೆ. ಮೇಸ್ತ ಶಿರೂರು ಮತ್ತು ಎಂ.ಜಿ. ಗುರುದೇವ ಅವರನ್ನು ಸನ್ಮಾನಿಸಲಾಯಿತು.

### ಪರಿಸರ ಹಾನಿಗೆ ಮನುಷ್ಯ ಕಾರಣ

ಇದೇ ವೇಳೆ ಪರಿಸರ ತಜ್ಞ ಡಾ. ಎ.ಎನ್ ಯಲ್ಲಪ್ಪ ರೆಡ್ಡಿ ಮಾತನಾಡಿ, ಇಂದಿನ ಈ ಪರಿಸರ ಹಾನಿ ಮತ್ತು ಮಾಲಿನ್ಯಕ್ಕೆ ನೇರವಾಗಿ ಮನುಷ್ಯನೇ ಕಾರಣವಾಗಿದ್ದಾನೆ. ಮನುಷ್ಯ ತನ್ನ ಮಾನವೀಯತೆಯನ್ನು ಬಿಟ್ಟು ಹಂತಕನಾಗಿ ಪ್ರಾಣಿ, ಪಕ್ಷಿ, ಕೆರೆ ಮುಂತಾದ ಜೀವ ಸಂಕುಲಗಳನ್ನು ಅವನತಿಯೆಡೆಗೆ ತಂದಿದ್ದಾನೆ. ನಾಗರಿಕನೆಂಬ ಹೆಸರಿನಲ್ಲಿ ಅನೇಕ ಮರಗಳ ಮಾರಣ ಹೋಮ ನಡೆಸಿದ್ದಾನೆ ಎಂದು ಕಿಡಿ ಕಾರಿದರು.

ಕನ್ನಡಪ್ರಭ ಗುರುವಾರ 26.7.2018


# ಬೆಂಗ್ಳೂರನ್ನು ಕಲುಷಿತಗೊಳಿಸಿದ್ದೇ ನಮ್ಮ ಸಾಧನೆ

## ಹಸಿರು ಬೀಡಾಗಿದ್ದ ರಾಜಧಾನಿಯನ್ನು ಕಸದ ನಾಡಾಗಿ ಮಾಡಿದ್ದೇ ಹೆಗ್ಗುರುತು: ಬೇಲಿ ಮಠಶ್ರೀ | ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹಸಿರು ಬೀಡಾಗಿದ್ದ ಬೆಂಗಳೂರನ್ನು ಕಸದ ನಾಡಾಗಿ ಮಾಡಿರುವುದು, ಐತಿಹಾಸಿಕ ಕೆರೆಗಳನ್ನು ಕಲುಷಿತಗೊಳಿಸಿರುವುದೇ ನಮ್ಮ ಸಾಧನೆಯ ಹೆಗ್ಗುರುತಾಗಿದೆ ಎಂದು ಬೇಲಿ ಮಠ ಮಹಾಸಂಸ್ಥಾನದ ಶಿವರುದ್ರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಎನ್ವೈರನ್‌ಮೆಂಟ್ ಟ್ರಸ್ಟ್ ಬುಧವಾರ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ 'ವಸುಂಧರೆಯ ಸೇವಕರಿಗೆ 'ಗೌರವಾಭಿನಂದನೆ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.




ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ 'ವಸುಂಧರೆಯ ಸೇವಕರಿಗೆ ಗೌರವಾಭಿನಂದನೆ' ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

**ಇನ್ನಾದರೂ ತಪ್ಪು ತಿದ್ದಿಕೊಳ್ಳಿ:** ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ್ ಅವರು ಜನರ ದಾಹ ನೀಗಿಸಲು ನಿರ್ಮಿಸಿದ್ದ ತಿಪ್ಪಗೊಂಡನಹಳ್ಳಿ ಕೆರೆ ಇಂದು ಕಲುಷಿತವಾಗಿದೆ. ಹೆಸರುಘಟ್ಟ ಕೆರೆ, ಕಂಟೋನ್ಮೆಂಟ್ ಸೇರಿದಂತೆ ಸಾಕಷ್ಟು ಕೆರೆಗಳು ಕಣ್ಮರೆಯಾಗಿ ಇತಿಹಾಸದ ಪುಟ ಸೇರಿವೆ. ಕೆ.ಸಿ.ಕಣಿವೆ ವ್ಯಾಲಿಗೆ ಶುದ್ಧ ನೀರು ಬಿಡುತ್ತೇವೆ ಎಂದು ಕೋಲಾರ ಜಿಲ್ಲೆಗೆ ವಿಷದ ನೀರು ಬಿಡಲಾಗುತ್ತಿದೆ. ಈ ಹಿಂದೆ ಹಸಿರಿನಿಂದ ಕಂಗೊಳಿಸುತ್ತಿದ್ದ ಬೆಂಗಳೂರು ಕಸದ ನಾಡಾಗಿದೆ. ಇವೆಲ್ಲವೂ ನಮ್ಮ ಅದ್ಭುತ ಸಾಧನೆಯಾಗಿವೆ. ಪರಿಸರ ಸಂರಕ್ಷಣೆ ಹಾಗೂ ಜನರ ಕಾಳಜಿಯಿಂದ ಇನ್ನಾದರೂ ತಪ್ಪನ್ನು ತಿದ್ದಿ ಸರಿಪಡಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಮಾತನಾಡಿ, ಪರಿಸರ ಉಳಿವು ಗಾಂಧೀಜಿಯವರಿಗೆ ಪ್ರಿಯವಾದುದು. ಪ್ರತಿಯೊಬ್ಬರೂ ಸರಳ ಜೀವನ ಹಾಗೂ ತತ್ವಗಳನ್ನು ಅಳವಡಿಸಿಕೊಂಡರೆ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯವಾಗುತ್ತದೆ. ಹಾಗಾಗಿ ಜನರು ಸ್ವಯಂ ಪ್ರೇರಿತರಾಗಿ ಪರಿಸರ ಉಳಿವಿಗೆ ಗಮನಹರಿಸಬೇಕು ಎಂದು ಹೇಳಿದರು.

ಸಿಲಿಕಾನ್ ಸಿಟಿಯಲ್ಲಿ ಒಂದೂವರೆ ಕೋಟಿಗೂ ಅಧಿಕ ಜನರಿದ್ದಾರೆ. ಅವರೆಲ್ಲ ನಿಜಕ್ಕೂ ಮನುಷ್ಯರೇ ಎಂದು ಅನುಮಾನ ವ್ಯಕ್ತಪಡಿಸಿದ ಅವರು, ಇಲ್ಲಿ ಮನುಷ್ಯರು ಸಿಗುವುದು ಅತ್ಯಂತ ಕಷ್ಟ. ಸಮಾಜ ಮತ್ತು ಮನುಷ್ಯನ ಬಗ್ಗೆ ಕಾಳಜಿ, ತುಡಿತ ಇರುವವರು, ನಿಸ್ವಾರ್ಥತೆಯಿಂದ ಬದುಕುವವರು, ಸಂವೇದನಾ ಶೀಲತೆ ಇರುವವರು ಮಾತ್ರ ಮನುಷ್ಯರು. ಇಲ್ಲಿ ಮನುಷ್ಯತ್ವ ಇರುವವರೇ ಇಲ್ಲ. ಇವರನ್ನೆಲ್ಲ ಮನುಷ್ಯರನ್ನಾಗಿ ಪರಿವರ್ತಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜ ಸೇವಕರಾದ ದೊಡ್ಡಬಳ್ಳಾಪುರದ ಚಿದಾನಂದ ಮೂರ್ತಿ ಆರಾಧ್ಯ, ಎಂ.ಜಿ. ಗುರುದೇವ, ಉಡುಪಿಯ ನಿತ್ಯಾನಂದ ಒಳಕಾಡು, ವಿನಯಚಂದ್ರ ಸಾಸ್ತಾನ, ಚಿತ್ರದುರ್ಗದ ಡಿ.ನಾಗರಾಜ್, ಕುಂದಾಪುರದ ತಾರಾನಾಥ್ ಜೆ.ಮೆಸ್ತಾ ಶಿರೂರುಮ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಗಾಂಧಿ ಸ್ಮಾರಕನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಎನ್ವೈರನ್‌ಮೆಂಟ್ ಟ್ರಸ್ಟ್‌ನ ನಿರ್ದೇಶಕ ಡಾ.ಎಸ್.ರಾಜೇ ಅರಸ್, ಶ್ರೀಧರ್ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಗುರುವಾರ 26 ಜುಲೈ 2018 ● 26 JULY 2018

# ರ್‍ಯಾಂಕ್ ವಿಜೇತರಿಗೆ ಅಭಿನಂದನೆ



ವಿಜಯವಾಣಿ ಚಿತ್ರ

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ದ್ವಿತೀಯ ಪಿಯುಸಿ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

■ ವಿಜಯವಾಣಿ ಸುದ್ದಿಜಾಲ ಯಲಹಂಕ

ವಿದ್ಯಾರ್ಥಿಗಳು ಮಾನವೀಯ ದೃಷ್ಟಿಯಿಂದ ಆಲೋಚನೆ ಮಾಡಿದಾಗ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದು ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಡಾ. ಸ್ವಾಮಿ ವೀರೇಶಾನಂದ ಸರಸ್ವತಿ ಹೇಳಿದ್ದಾರೆ.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಪಿಯು ಕಾಲೇಜುಗಳ ಪ್ರಾಂಶುಪಾಲರು ಹಾಗೂ ದ್ವಿತೀಯ ಪಿಯುಸಿಯಲ್ಲಿ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗಾಗಿ ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ದೇಶಕ್ಕೆ ಶ್ರೇಷ್ಠ ಮಾನವ ಸಂಪನ್ಮೂಲವಾಗಬೇಕು ಎಂದು ಕರೆ ನೀಡಿದರು.

ಶಿಕ್ಷಣತಜ್ಞ ಡಾ.ವೂಡೇ ಪಿ. ಕೃಷ್ಣ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಹಗಲಿರುಳು ದುಡಿಯುವ ಶಿಕ್ಷಕರಿಗೆ ಉತ್ತೇಜನ ನೀಡಬೇಕಾಗಿರುವುದು ಪ್ರತಿಯೊಬ್ಬರ ಕರ್ತವ್ಯ. ಅವರ ಶ್ರಮವನ್ನು ಶ್ಲಾಘಿಸುವ ಮೂಲಕ ಅವರನ್ನು ಮತ್ತಷ್ಟು ಪ್ರೋತ್ಸಾಹಿಸುವ ಸಲುವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಈ ಸಂಜೆ ಬುಧವಾರ, 18-7-2018

# ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ




ಬೆಂಗಳೂರು, ಜು.18- ಗಾಂಧೀಜಿ ತತ್ವ ಮತ್ತು ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕೆಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ಪ್ರೊ.ಜಿ.ಬಿ.ಶಿವರಾಜು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನ ದತ್ತಿಯ ಸಭಾಂಗಣದಲ್ಲಿ ವಾರ್ಷಿಕ ವರ್ಷ 2018-19ರ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನಾ ಸಮಾರಂಭ ಹಾಗೂ ಮೆರಿಟ್ ಸ್ಕಾಲರ್‌ಶಿಪ್ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಪೂರಕ, ಸಕಾರತ್ಮಕ ಹಾಗೂ ಪ್ರಚೋದನಾ ಉಪನ್ಯಾಸ ನೀಡುತ್ತಾ, ಹಸಿ ಇಟ್ಟಿಗೆ ಮೇಲೆ ಮುದ್ರೆ ಒತ್ತಿದರೆ ನಿಲ್ಲುತ್ತದೆ ಒಣ ಇಟ್ಟಿಗೆ ಮೇಲಲ್ಲ. ಹಾಗೆಯೇ ಬದುಕು ಇರುವುದು ಇತ್ತರು. ವಿವೇಕಾನಂದರ ಸೇವೆ ಮತ್ತು ತ್ಯಾಗವನ್ನು ಇವರು ಸ್ಮರಿಸಿದರು.

ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ.ಪಿ.ಕೃಷ್ಣ, ಧರ್ಮದರ್ಶಿ ಕೆ.ಕೃಷ್ಣಸ್ವಾಮಿ, ಬಿ.ಸಿ.ಲೋಕನಾಥ್, ಸಿ.ಎಲ್. ಬಸವರಾಜಯ್ಯ, ಪ್ರಾಂಶುಪಾಲರು ಪ್ರೊ.ಆರ್.ಮಹಾಲಕ್ಷ್ಮಿ ಹಾಜರಿದ್ದರು.

ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು.

ಕರ್ನಾಟಕ

ಭಾನುವಾರ,22 ಜುಲೈ 2018


# ವೃತ್ತಿ ಶ್ರೇಷ್ಠತೆಯಲ್ಲಿ ವೈದ್ಯ, ಶಿಕ್ಷಣಕ್ಕೆ ಮಹತ್ವ

**ವಿಕ ಸುದ್ದಿಲೋಕ** ತುರುವೇಕೆರೆ

ದೇಶದ ಪ್ರಗತಿ ಶಿಕ್ಷಣ ಹಾಗೂ ಶಿಕ್ಷಣ ಕ್ಷೇತ್ರದ ಪೂರಕ ಬೆಳವಣಿಗೆಯನ್ನು ಅವಲಂಬಿಸಿದೆ ಎಂದು ದಾವಣಗೆರೆ ರಾಮಕೃಷ್ಣಾಶ್ರಮದ ನಿತ್ಯಾನಂದ ಸ್ವಾಮೀಜಿ ಹೇಳಿದರು.

ತಾಲೂಕಿನ ಬದರಿಕಾಶ್ರಮದಲ್ಲಿ ಶಿಕ್ಷಕರ ಕಾರ್ಯಕ್ಷಮತೆ, ವೃತ್ತಿ ನೈಪುಣ್ಯತೆಯ ಹೆಚ್ಚಳಕ್ಕಾಗಿ ಹಮ್ಮಿಕೊಂಡಿದ್ದ ಪುನಶ್ಚೇತನ ಕಾರ್ಯಾಗಾರದಲ್ಲಿ ಮಾತನಾಡಿದರು.

ವೃತ್ತಿ ಶ್ರೇಷ್ಠತೆಯಲ್ಲಿ ವೈದ್ಯಕೀಯ ಹಾಗೂ ಶಿಕ್ಷಣ ಹೆಚ್ಚು ಮಹತ್ವ ಪಡೆದಿದೆ. ಸಾವಿನ ಅಂಚಿನಲ್ಲಿರುವ ವ್ಯಕ್ತಿಗೆ ವೈದ್ಯಕೀಯ ವ್ಯವಸ್ಥೆಗಳು ಮರುಹುಟ್ಟು ನೀಡಿದರೆ ಶಿಕ್ಷಣ ವ್ಯಕ್ತಿಗೆ ಬದುಕಿನ ಪರಿಪೂರ್ಣತೆಯನ್ನು ನೀಡುತ್ತದೆ. ಶಿಕ್ಷಣದ ಜತೆಗೆ ಮಾನವೀತ ಮೌಲ್ಯಗಳು ಅತಿಮುಖ್ಯ. ಪರೋಪಕಾರ ಮನೋಭಾವ, ಗುರುಹಿರಿಯರಲ್ಲಿ ಪ್ರೀತಿ, ಸೌಜನ್ಯ ನಡವಳಿಕೆಯಿಲ್ಲದ ವ್ಯಕ್ತಿ ಯಾವ ಪದವಿ ಗಳಿಸಿದರೇನು ಪ್ರಯೋಜನ. ಈ ನಿಟ್ಟಿನಲ್ಲಿ ಪ್ರಸ್ತುತಕ್ಕೆ ಮೌಲ್ಯಯುತ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದರು.



ತುರುವೇಕೆರೆ ತಾಲೂಕಿನ ಬದರಿಕಾಶ್ರಮದಲ್ಲಿ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರದಲ್ಲಿ ದಾವಣಗೆರೆ ರಾಮಕೃಷ್ಣ ಆಶ್ರಮದ ನಿತ್ಯಾನಂದ ಸ್ವಾಮೀಜಿ ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುನಾಥ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಶಿಕ್ಷಕರು ವೃತ್ತಿಪರತೆಯಲ್ಲಿ ಹಿಂದೆ ಬಿದ್ದಿದ್ದಾರೆ ಎಂಬುದು ವಿಷಾದನೀಯ ಸಂಗತಿ, ಪೋಷಕರು ಸಹ ಇಂಗ್ಲಿಷ್ ವ್ಯಾಮೋಹಕ್ಕೆ ಬಿದ್ದಿದ್ದಾರೆ. ಪ್ರಾಥಮಿಕ ಶಿಕ್ಷಣಗಳು ಮಾತೃಭಾಷೆಯಲ್ಲಿ ಪಡೆದವರು ಇಂದು ಹಲವು ಕ್ಷೇತ್ರದಲ್ಲಿ ಸಾಧಕರಾಗಿದ್ದಾರೆ. ತಮಗೆ ಗೊತ್ತಿರುವ ಭಾಷೆಯಲ್ಲಿ ಅಭಿವ್ಯಕ್ತಗೊಳಿಸುವುದು ಸುಲಭ. ಶಿಕ್ಷಕರು ಸಹ ಶಿಕ್ಷಣದಲ್ಲಿ ತಮ್ಮನ್ನು ತಾವು ಪರಿಪೂರ್ಣವಾಗಿ ತೊಡಗಿಸಿಕೊಂಡು ಪ್ರಾಮಾಣಿಕವಾಗಿ ವೃತ್ತಿಗೆ ನ್ಯಾಯ ಒದಗಿಸಬೇಕು ಎಂದರು.

ಸಮಾರಂಭವನ್ನು ಗಾಂಧಿ ಭವನದ ವೊಡ್ಡೆ ಪಿ.ಕೃಷ್ಣ ಉದ್ಘಾಟಿಸಿದರು.

ಬದರಿಕಾಶ್ರಮದ ಓಂಕಾರನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಸ್ವಾಮಿ ವಿವೇಕಾನಂದರ ಬದುಕು ಸದಾಕಾಲಕ್ಕೂ ಪ್ರೇರಕ ಹಾಗೂ ಅನುಕರಣೀಯ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ . ಎಸ್. ಜಿ.ಸಿದ್ದರಾಮಯ್ಯ, ಗಾಂಧಿಭವನದ ಜಿ.ಬಿ.ಶಿವರಾಜು ಸೇರಿದಂತೆ ಹಲವರು ವೃತ್ತಿಕೌಶಲದ ಬಗ್ಗೆ ಉಪನ್ಯಾಸ ನೀಡಿದರು.

ಈ ಸಂಜೆ ಬುಧವಾರ 18-7-2018

# ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ



ಬೆಂಗಳೂರು, ಜು.18- ಗಾಂಧೀಜಿ ತತ್ವ ಮತ್ತು ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕೆಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ಪ್ರೊ. ಜಿ.ಬಿ.ಶಿವರಾಜು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನ ದತ್ತಿಯ ಸಭಾಂಗಣದಲ್ಲಿ ವಾರ್ಷಿಕ ವರ್ಷ 2018-19ರ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನಾ ಸಮಾರಂಭ ಹಾಗೂ ಮೆರಿಟ್ ಸ್ಕಾಲರ್‌ಶಿಪ್ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಪ್ರೇರಕ ಸಕಾರಾತ್ಮಕ ಹಾಗೂ ಪ್ರಬೋಧನಾ ಉಪನ್ಯಾಸ ನೀಡುತ್ತಾ, ಹಸಿ ಇಟ್ಟಿಗೆ ಮೇಲೆ ಮುದ್ರೆ ಒತ್ತಿದರೆ ನಿಲ್ಲುತ್ತದೆ ಒಣ ಇಟ್ಟಿಗೆ ಮೇಲಲ್ಲ. ಹಾಗೆಯೇ ಬದುಕು ಇರುವುದು ಇತ್ತರು. ವಿವೇಕಾನಂದರ ಸೇವೆ ಮತ್ತು ತ್ಯಾಗವನ್ನು ಇವರು ಸ್ಮರಿಸಿದರು.

ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ.ಪಿ.ಕೃಷ್ಣ, ಧರ್ಮದರ್ಶಿ ಕೆ.ಕೃಷ್ಣಸ್ವಾಮಿ, ಬಿ.ಸಿ.ಲೋಕನಾಥ್, ಸಿ.ಎಲ್.ಬಸವರಾಜಯ್ಯ, ಪ್ರಾಂಶುಪಾಲರು ಪ್ರೊ. ಆರ್.ಮಹಾಲಕ್ಷ್ಮಿ ಹಾಜರಿದ್ದರು.

ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು.

ಸಂಜೆವಾಣಿ
2 ಶನಿವಾರ 7 ಜುಲೈ 2018



ನಗರದ ಗಾಂಧಿ ಭವನದಲ್ಲಿಂದು ನಡೆದ ಬಾ. ಬಾಪು 150ನೇ ಜನುಮ ದಿನಾಚರಣೆ ಮತ್ತು ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆ ಕಾರ್ಯಾಗಾರವನ್ನು ಚಿಂತಕ ಪ್ರೊ.ಜಿ.ಕೆ.ಗೋವಿಂದ ರಾವ್ ಉದ್ಘಾಟಿಸಿದರು. ಮಹಾರಾಷ್ಟ್ರದ ಜಲಗಾಂವ್ ನ ಗಾಂಧಿ ರಿಸರ್ಚ್ ಫೌಂಡೇಶನ್ ಅಧ್ಯಕ್ಷ ಬಿ.ಆರ್.ಬೋಬಡೆ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕ ಎಂ.ಕೆ. ನಾಯಕ್ ಇದ್ದಾರೆ.

ಈ ಸಂಜೆ
ಶನಿವಾರ,07-07-2018



ಗಾಂಧಿ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಬಾ-ಬಾಪು 150ನೆ ಜನುಮ ವರ್ಷಾಚರಣೆ 2018 ಮತ್ತು ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆ ಕಾರ್ಯಾಗಾರವನ್ನು ಪ್ರಗತಿ ಪರ ಚಿಂತಕ ಪ್ರೊ.ಜಿ.ಕೆ. ಗೋವಿಂದರಾವ್ ಉದ್ಘಾಟಿಸಿದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ, ಜಲಗಾಂವ್ ಜಿಆರ್‌ಎಫ್‌ನ ಬಿ.ಆರ್. ಬೋಬಡೆ, ಎಂ.ಕೆ. ನಾಯಕ್, ಡಾ.ಗಣನಾಥಶೆಟ್ಟಿ ಎಕ್ಕಾರು ಮತ್ತಿತರರಿದ್ದರು.

# ಹನ್ನೊಂದನೇ ಚುಟುಕು ಸಾಹಿತ್ಯ ಸಮ್ಮೇಳನ



ಕನ್ನಡ ಸಾಹಿತ್ಯ ಪರಿಷತ್ತು ವಿಶೇಷ ಕಾರ್ಯಕ್ರಮದೊಂದಿಗೆ ಮೈತುಂಬಿಕೊಂಡಿತ್ತು. ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ತನ್ನ ಹನ್ನೊಂದನೇ ವಾರ್ಷಿಕೋತ್ಸವವನ್ನು ಯಶಸ್ವಿಯಾಗಿ ಆಯೋಜಿಸಿತ್ತು.

11 ವರ್ಷಗಳ ಹಿಂದೆ ಡಾ. ಹೆಚ್.ಎಸ್. ರೇಣುಕಾ ಪ್ರಸಾದ್ ರವರು ಸ್ಥಾಪಿಸಿದ ಈ ಸಂಸ್ಥೆ ಚುಟುಕು ಸಾಹಿತ್ಯ ಬೆಳೆಯಲು, ಪ್ರತಿಭಾನ್ವಿತರಿಗೆ ಅವಕಾಶವಾಗಲೆಂದು ಬಯಸಿದ್ದರು. ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸುತ್ತಾ ಬಂದಿದೆ. ಇಡೀ ಸಮಾವೇಶಕ್ಕೆ ಸರ್ವಾಧ್ಯಕ್ಷರಾಗಿ ಶಿಕ್ಷಣ ತಜ್ಞ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಶ್ರೀ ವೂಡೇ ಪಿ. ಕೃಷ್ಣ ಆಯ್ಕೆಯಾಗಿ ಸೂಕ್ತ ವ್ಯಕ್ತಿಯನ್ನು ಆರಿಸಲಾಗಿತ್ತು.

ಕಾರ್ಯಕ್ರಮವು ಡಾ॥ ಎಂ.ಜಿ.ಆರ್. ಅರಸ್‌ರವರಿಂದ ಉದ್ಘಾಟನೆಯಾಗಿ, ಚುಟುಕು ಚಿಂತನ ಕೃತಿಯನ್ನು ಶ್ರೀ ಎಂ. ಚಂದ್ರಶೇಖರ್ ರವರು ಲೋಕಾರ್ಪಣೆ ಮಾಡಿದರು. ಸಾಹಿತ್ಯದಲ್ಲಿ ಅಪಾರ ಸೇವೆ ಸಲ್ಲಿಸಿರುವ ಶ್ರೀಮತಿ ರತ್ನಾ ಹಾಲಪ್ಪಗೌಡ ವಿಶೇಷ ಅತಿಥಿಯಾಗಿ ಆಗಮಿಸಿದ್ದರು. ಶ್ರೀ ಅರವಿಂದ ಮಾಲಗತ್ತಿ, ಶಾಸಕರಾದ ಶ್ರೀ ರವಿ ಸುಬ್ರಹ್ಮಣ್ಯ, ಶ್ರೀ ಷಡಕ್ಷರಿರವರುಗಳು ಅತಿಥಿಯಾಗಿ ಆಗಮಿಸಿದ್ದರು. ಸಮರ್ಥ ಕನ್ನಡಿಗರು ಸಂಸ್ಥೆಯ ಸಹಯೋಗದೊಂದಿಗೆ ಕಾರ್ಯಕ್ರಮ ವ್ಯವಸ್ಥಿತವಾಗಿ ರೂಪುಗೊಂಡಿತ್ತು. ಸಮಯ ಪರಿಪಾಲನೆಗೆ ವಿಶೇಷ ಮಹತ್ವ ಕೊಡಲಾಗಿತ್ತು.

ಚುಟುಕು ಸಾಹಿತ್ಯದ ಬಗ್ಗೆ ಹಾಗೂ ಸಂಸ್ಥೆಯ ಬಗ್ಗೆ ಅತಿಥಿಗಳು ಹಲವಾರು ಉಪಯುಕ್ತ ಮಾಹಿತಿ ನೀಡಿದರು. ಚುಟುಕು ಸಾಹಿತ್ಯ ಬಳಸುವುದರ ಬಗ್ಗೆ ಮತ್ತಷ್ಟು ಕಾರ್ಯಗಳು ನಡೆಯಲಿ ಎಂದು ಅಭಿಮತ ವ್ಯಕ್ತಪಡಿಸಿದರು.

ತದನಂತರ ವಿಚಾರಗೋಷ್ಠಿಯಲ್ಲಿ ಚುಟುಕು ಸಾಹಿತ್ಯ ವಿಷಯವಾಗಿ ಶ್ರೀ ಬೇರಮಂಗಲ ರಾಮೇಗೌಡ, ಶ್ರೀ ಕೆ. ರಾಜಕುಮಾರ್‌ರವರುಗಳು ಅದ್ಭುತವಾಗಿ ಮಾತನಾಡಿ ಆದಿಕಾಲದ ತ್ರಿಪದಿಯಲ್ಲೇ ಹಾಸ್ಯಭರಿತ ಸಾಲುಗಳು ರಚನೆಯಾಗಿದ್ದವು. ಅದೇ ಚುಟುಕು ಸಾಹಿತ್ಯಕ್ಕೆ ಪ್ರೇರಣೆ. ಐದಾರು ಸಾಲುಗಳಿಂದ ಜನರನ್ನು ಆಕರ್ಷಿಸಿ ಹಾಸ್ಯ ಸಾಹಿತ್ಯವನ್ನು ಪಸರಿಸಿ, ನಗೆ ಉಕ್ಕುವಂತೆ ಮಾಡುವ ಶಕ್ತಿ ಇರುವುದು ಚುಟುಕು ಸಾಹಿತ್ಯಕ್ಕೆ ಎಂದು ವಿವರಿಸಿದರು.

ಸುಮಾರು 100ಕ್ಕೂ ಹೆಚ್ಚು ಮಂದಿ ತಮ್ಮ ಚುಟುಕು ವಾಚನ ಮಾಡಿ ಎಲ್ಲರನ್ನೂ ಮೆಚ್ಚುಗೆ ವ್ಯಕ್ತಪಡಿಸಿದರು. ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಲೇಖಕಿ, ಅಕ್ಷರ ಐಸಿರಿ ಪತ್ರಿಕೆಯ ಸಂಪಾದಕಿ ಶ್ರೀಮತಿ ಭಾಗ್ಯಲಕ್ಷ್ಮಿ ಮಗ್ಗೆ ವಹಿಸಿ ಎಲ್ಲ ಕವಿಗಳಿಂದ ಉತ್ತಮ ಕವನ ಹೊರಬಂದಿದೆ ಎಂದು ಹೇಳಿ ತಮ್ಮದೇ ಕವನಗಳನ್ನು ವಾಚಿಸಿದರು.

ದೂರದರ್ಶನ ವಾಹಿನಿಯ ನಿವೃತ್ತ ನಿರ್ದೇಶಕರಾದ ಡಾ॥ ಮಹೇಶ್ ಜೋಷಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿ ಕನ್ನಡಕ್ಕೆ 2000 ವರ್ಷಗಳ ಇತಿಹಾಸದಲ್ಲಿ ಹಲವಾರು ವ್ಯಕ್ತಿಗಳನ್ನು ಸ್ಮರಿಸಿದರು. ಸಂತ ಶಿಶುನಾಳ ಷರೀಫರ ತತ್ತ್ವ ಪದಗಳನ್ನು ಸ್ಮರಿಸಿ ಹಾಡೊಂದನ್ನು ಹಾಡಿದರು.

ಕಾರ್ಯಕ್ರಮ ಶ್ರೀ ರಾ. ವಿಜಯಸಮರ್ಥ, ಶ್ರೀ ವೀರಶೇಖರ ಸ್ವಾಮಿ, ಶ್ರೀಮತಿ ಪದ್ಮಾವತಿ ಚಂದ್ರು, ಶ್ರೀ ಲಿಂಗೇಶ್ ಹುಣಸೂರು, ಶ್ರೀ ಬ. ಶೃಂಗೇಶ್ವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. – ಸಿ.ಎನ್. ಉಮೇಶ್

ಹೊಸ ದಿಗಂತ

ಬುಧವಾರ
27 ಜೂನ್ 2018

### ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ ಸಮಾರಂಭಕ್ಕೆ ಹಿರೇಮಠ ಸಂಸ್ಥಾನದ ಶ್ರೀಗುರುಬಸವ ಪಟ್ಟದೇವರು ಚಾಲನೆ

# ಮಾದಕ ವಸ್ತು ಮುಕ್ತ ಕರ್ನಾಟಕ ಮಾಡಲು ಆಗ್ರಹ

ದಿಗಂತ ವರದಿ: ಬೆಂಗಳೂರು, ಜೂ.26

ರಾಜ್ಯದಲ್ಲಿ ಮಾದಕ ವಸ್ತುಗಳ ಹಾವಳಿ ಹೆಚ್ಚಾಗುತ್ತಿದ್ದು, ಸಾಕಷ್ಟು ಜನ ಬಲಿಯಾಗುತ್ತಿದ್ದಾರೆ. ಹೀಗಾಗಿ ಸರ್ಕಾರ ಮಾದಕ ವಸ್ತು ಮುಕ್ತ ಕರ್ನಾಟಕ ಮಾಡುವಂತೆ ಬಾಲ್ಕಿಯ ಹಿರೇಮಠ ಸಂಸ್ಥಾನದ ಶ್ರೀಗುರುಬಸವ ಪಟ್ಟದೇವರು ಆಗ್ರಹಿಸಿದರು.

ನಗರದ ಗಾಂಧಿ ಭವನದಲ್ಲಿ ಮಂಗಳವಾರ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ವತಿಯಿಂದ ಆಯೋಜಿಸಿದ್ದ ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತವಾಗಿ ಜನರು ಸಾಂಪ್ರದಾಯಕ ಸಂಸ್ಕೃತಿ ಮರೆತು ಪಾಶ್ಚಾತ್ಯ ಬದುಕಿನತ್ತ ಸಾಗುತ್ತಿದ್ದು, ವಿದೇಶದಲ್ಲಿರುವವರ ಬದುಕಿಗೆ ತಮ್ಮನ್ನು ಹೋಲಿಸುವ ನಿಟ್ಟಿನಲ್ಲಿ ಮಾದಕ ವಸ್ತುಗಳ ಸೇವನೆಯನ್ನು ತಮ್ಮ ಹವ್ಯಾಸವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಸ್ತುತವಾಗಿರುವ ಮಾದಕ ವ್ಯಸನಿಗಳಲ್ಲಿ ಹೆಚ್ಚಿನವರು ವಿದ್ಯಾವಂತರಾಗಿದ್ದು, ತಮ್ಮ ಘನತೆ ಗೌರವಕ್ಕೆ ದಕ್ಕೆಯಾಗಬಾರದು ಎಂಬ ನಿಟ್ಟಿನಲ್ಲಿಯೂ ಮಧ್ಯ ಸೇವನೆ, ಸಿಗರೇಟ್ ಮುಂತಾದ ಚಟಗಳಿಗೆ ದಾಸರಾಗಿರುವುದು ವಿಪರ್ಯಾಸ. ಇನ್ನೊಂದು ರೀತಿಯಲ್ಲಿ

ದಿಗಂತ ಚಿತ್ರ



ಮಕ್ಕಳು ಹೆಚ್ಚಾಗಿ ಮಾದಕ ವ್ಯಸನಿಗಳಾಗುತ್ತಿದ್ದು, ಇದಕ್ಕೆ ಮಾನಸಿಕವಾಗಿ ಕುಗ್ಗುವಿಕೆ ಕಾರಣವಾಗಿರುತ್ತದೆ. ಕಾರಣ ಒತ್ತಡದ ಬದುಕು ಸಾಗಿಸುತ್ತಿರುವ ಈ ಕಾಲದಲ್ಲಿ ಹೆತ್ತವರು ಕೆಲಸ ನೆಪದಲ್ಲಿ ಮಕ್ಕಳ ಪಾಲನೆ ಪೋಷಣೆ ಮರೆತ್ತಿರುತ್ತಾರೆ. ಹೆತ್ತವರ ಪ್ರೀತಿಯಿಂದ ವಂಚನೆಯಾದ ಮಕ್ಕಳು ಮಾನಸಿಕವಾಗಿ ಕುಗ್ಗುವುದರ ಜತೆಗೆ ದುಶ್ಚಟಗಳಿಗೆ ಬೇಗನೆ ದಾಸರಾಗುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

**ಮಾದಕ ವಸ್ತುಗಳ ದಾಸರಾದರೆ ಜೀವನ ಅಂತ್ಯ:** ನಿಮಾನ್ಸ್‌ನ ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ಮಾತನಾಡಿ, ಒಂದು ಬಾರಿ ಮಾದಕ ವಸ್ತುಗಳಿಗೆ ದಾಸರಾದರೆ ಅಲ್ಲಿಂದ ಜೀವನದ ಅಂತ್ಯ ಆರಂಭವಾಗುತ್ತದೆ. ಮನುಷ್ಯನಲ್ಲಿರುವ ಯೋಚನಾ ಶಕ್ತಿ ಮತ್ತು ವ್ಯಕ್ತಿತ್ವವನ್ನು ನಾಶ ಮಾಡುವ ಕೆಟ್ಟ ಶಕ್ತಿ ಎಂದರೆ ಅದು ಮಾದಕ ವಸ್ತುಗಳು. ಮಾದಕ ವ್ಯಸನಿಗಳ ಸಂಖ್ಯೆ ಹೆಚ್ಚಾದ ಹಾಗೆ ದೇಶದಲ್ಲಿ ಕೊಲೆ, ಅತ್ಯಾಚಾರ, ದರೋಡೆ ಮುಂತಾದ ಕಾರ್ಯಗಳು ಹೆಚ್ಚಾಗಿ ನಡೆಯುತ್ತಿದೆ. ಆದ್ದರಿಂದ ಮಾದಕ ಚಟಗಳಿಗೆ ಬಲಿಯಾಗದ ರೀತಿಯಲ್ಲಿ ನೋಡಿಕೊಳ್ಳಲು ನಾವೆಲ್ಲ ಒಗ್ಗೂಡಿ ಹೋರಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾದಕ ವಸ್ತುಗಳಿಂದಾಗುವ ಪರಿಣಾಮದ ಕುರಿತು ಮೌರ್ಯ ಹೋಟೇಲ್‌ನಿಂದ ಗಾಂಧಿ ಭವನದವರೆಗೆ ಜಾಗೃತಿ ಜಾಥಾ ನಡೆಯಿತು. ಈ ಸಂದರ್ಭದಲ್ಲಿ ರಂಗಭೂಮಿ ತಜ್ಞ ಅಬ್ದುಲ್, ಮದ್ಯಪಾನ ಸಂಯಮ ಮಂಡಳಿ ಮಾಜಿ ಅಧ್ಯಕ್ಷ ಎಚ್.ಸಿ.ರುದ್ರಪ್ಪ, ಪೋಲೀಸ್ ಗುಪ್ತಾದಳ ಅಧಿಕಾರಿ ಕೆ.ಎನ್.ನಾರಾಯಣ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇಪಿ.ಕೃಷ್ಣ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಮೀನಕುಮಾರಿ ಈಶ್ವರ ಪಟಗಾರ ಉಪಸ್ಥಿತರಿದ್ದರು.

# ಮಾದಕ ವ್ಯಸನದಿಂದ ಸಮಾಜದ ಆರೋಗ್ಯ ಹಾಳು

## ಪೊಲೀಸರಿಗೆ ಕೆಲಸದಲ್ಲಿ ಬದ್ಧತೆ ಇರಬೇಕು । ಪ್ರವಾಸಿಗರ ಸೋಗಿನಲ್ಲಿ ಡ್ರಗ್ಸ್ ಸರಬರಾಜು

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಯುವ ಜನತೆ ಮಾದಕ ವ್ಯಸನದಲ್ಲಿ ತೊಡಗಿದರೆ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ ಎಂದು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಡಾ. ಅಜಯ್ ಕುಮಾರ್‌ಸಿಂಗ್ ಹೇಳಿದ್ದಾರೆ.

ಅಂತಾರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ವಿರೋಧಿ ದಿನಾಚರಣೆ ಅಂಗವಾಗಿ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ ಮಾದಕ ವಸ್ತುಗಳ ನಿರ್ಬಂಧ ಕಾನೂನು ಅನುಷ್ಠಾನ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದರು.

### ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು

ಭಾರತದಲ್ಲಿ ವಾರ್ಷಿಕ 8 ಸಾವಿರ ಜನ ಮಾದಕ ವ್ಯಸನದಿಂದಾಗಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಮಾದಕ ವ್ಯಸನಕ್ಕೆ ದಾಸರಾಗುತ್ತಿರುವವರಲ್ಲಿ ವಿದ್ಯಾರ್ಥಿಗಳು ಮತ್ತು ಹದಿಹರೆಯದವರೇ ಹೆಚ್ಚು. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು ಎಂದು ಅವರು ತಿಳಿಸಿದರು.

ವಿಮಾನ ಮಾರ್ಗದ ಮೂಲಕ ರಾಜ್ಯಕ್ಕೆ ಪ್ರವಾಸಿಗರ ಸೋಗಿನಲ್ಲಿ ಬಂದು ಮಾದಕ ವಸ್ತು ಸರಬರಾಜು ಮಾಡುವವರು ಹೆಚ್ಚುತ್ತಿದ್ದಾರೆ ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕಿ ನೀಲಮಣಿ ಎನ್. ರಾಜು ಹೇಳಿದರು.

ಶಾಲೆ-ಕಾಲೇಜುಗಳ ವ್ಯಾಪ್ತಿಯಲ್ಲಿ ಮಾದಕ ದ್ರವ್ಯ ಮಾರಾಟ ಮಾಡುತ್ತಿರುವ ಪ್ರಕರಣ ಹೆಚ್ಚುತ್ತಿದ್ದು, ಸಿಬ್ಬಂದಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ವ್ಯಸನಕ್ಕೆ ಬಿದ್ದವರಿಗೆ ಚಿಕಿತ್ಸೆ ನೀಡಲು ರಾಜ್ಯದಲ್ಲಿ ಹಲವಾರು ದುಶ್ಚಟ ಮುಕ್ತಿ ಕೇಂದ್ರಗಳಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಮಾದಕ ವಸ್ತುಗಳ ನಿರ್ಬಂಧ ಕಾನೂನು ಕುರಿತ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.



ಅಂತಾರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ವಿರೋಧಿ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಕೈಪಿಡಿ ಬಿಡುಗಡೆ ಮಾಡಲಾಯಿತು. ನಿವೃತ್ತ ಡಿಜಿಪಿ ಅಜಯ್ ಕುಮಾರ್‌ಸಿಂಗ್, ಡಿಜಿಪಿ ನೀಲಮಣಿ ಎನ್. ರಾಜು ಮತ್ತಿತರರಿದ್ದರು.

ಪೊಲೀಸರಿಗೆ ಕಾನೂನು, ಸೆಕ್ಷನ್‌ಗಳ ಅರಿವಿದ್ದರೆ ಸಾಲದು. ಯಾವುದೇ ಸಮಸ್ಯೆಗೆ ಪರಿಹಾರ ಸೂಚಿಸುವ ಮನೋಭಾವ ಇರಬೇಕು. ಕೆಲಸದಲ್ಲಿ ಬದ್ಧತೆಯಿದ್ದರೆ ಮಾತ್ರ ಜನಪರವಾಗಿ ಕೆಲಸ ಮಾಡಲು ಸಾಧ್ಯ. ಎಲ್ಲ ಕೆಲಸದಲ್ಲೂ ಆತ್ಮಗೌರವ ಬಹಳ ಮುಖ್ಯ ಎಂದು ಅಜಯ್‌ಕುಮಾರ್ ಸಿಂಗ್ ಹೇಳಿದರು. ತನಿಖೆಯ ವಿಧಾನವನ್ನು ಬದಲಾವಣೆ ಮಾಡಿಕೊಳ್ಳುವ ಅಗತ್ಯವಿದೆ. ಕೈದಿಗಳಿಗೆ ಹೊಡೆದು-ಬಡಿದು ವಿಚಾರಣೆ ಮಾಡುವ ಅಗತ್ಯವಿಲ್ಲ. ಮನೋವಿಜ್ಞಾನವನ್ನು ಬಳಸಿಕೊಂಡು ತನಿಖೆಯಲ್ಲಿ ಪ್ರಗತಿ ಸಾಧಿಸಬಹುದು. ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಕಾರ್ಯಾಚರಣೆ ನಡೆಸಬೇಕು. ಈ ನಿಟ್ಟಿನಲ್ಲಿ ಜಿಲ್ಲಾಮಟ್ಟದ ಪೊಲೀಸ್ ಸಿಬ್ಬಂದಿಗೆ ಹೆಚ್ಚಿನ ತರಬೇತಿ ನೀಡಬೇಕು. ಪೊಲೀಸ್ ಇಲಾಖೆಯಲ್ಲಿ ಕೆಲವು ತನಿಖೆಗಳನ್ನು ಗೌಪ್ಯವಾಗಿ ಮಾಡಬೇಕು. ಪೊಲೀಸರು ಮಾದಕ ವಸ್ತುಗಳ ಚಟುವಟಿಕೆಗೆ ಕಡಿವಾಣ ಹಾಕಬೇಕು ಎಂದು ಸಿಬ್ಬಂದಿಗೆ ಸಲಹೆ ನೀಡಿದರು

ಮಾದಕ ವ್ಯಸನಿಗಳನ್ನು ಬಂಧಿಸುವುದರಿಂದ ಪ್ರಯೋಜನವಿಲ್ಲ. ಮಾದಕ ವಸ್ತುಗಳನ್ನು ಸರಬರಾಜು ಮಾಡುವ ಮಧ್ಯವರ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.

। ನೀಲಮಣಿ ಎನ್. ರಾಜು
ರಾಜ್ಯ ಪೊಲೀಸ್ ಮಹಾ ನಿರ್ದೇಶಕಿ

# ಆಫ್ರಿಕನ್ಸ್‌ನಿಂದ ಡ್ರಗ್ಸ್ ಪೂರೈಕೆ

ಬೆಂಗಳೂರು: ನೈಜೀರಿಯಾ, ಸುಡಾನ್ ಇನ್ನಿತರ ಆಫ್ರಿಕಾ ದೇಶಗಳಿಂದ ಕೊಕೇನ್, ಮೆಂಡ್ರಾಕ್ಸ್‌ನಂತಹ ಮಾದಕ ವಸ್ತುಗಳು ಪೂರೈಕೆಯಾಗುತ್ತಿವೆ ಎಂದು ಗುಪ್ತಚರದಳದ ಎಸಿಪಿ ನಾರಾಯಣಸ್ವಾಮಿ ಆತಂಕ ವ್ಯಕ್ತಪಡಿಸಿದ್ದಾರೆ.

ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಮಂಗಳವಾರ ಗಾಂಧಿಭವನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಾದಕವಸ್ತು ವಿರೋಧಿ ಸಪ್ತಾಹದಲ್ಲಿ ಮಾತನಾಡಿದರು.

ಭಾರತದಲ್ಲಿ ನೆಲೆಸಿರುವ ಬಹುತೇಕ ಆಫ್ರಿಕನ್ನರು ಮಾದಕವಸ್ತು ಪೂರೈಕೆ ಜಾಲದಲ್ಲಿದ್ದಾರೆ. ಲಕ್ಷಾಂತರ ರೂ. ಡೊನೇಷನ್ ನೀಡುವ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳೇ ಇವರ ಟಾರ್ಗೆಟ್. ಐಸ್‌ಕ್ರೀಮ್, ಬಜ್ಜಿ, ಬೋಂಡ ಸೇರಿ ವಿವಿಧ ತಿನಿಸಿನಲ್ಲಿ ಕೊಕೇನ್ ಬೆರೆಸಿ ವಿದ್ಯಾರ್ಥಿಗಳಿಗೆ ನೀಡಿ ಮಾದಕ ವ್ಯಸನಿಗಳನ್ನಾಗಿ ಮಾಡಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

**ನರಕೋಶದಲ್ಲಿ ವ್ಯತ್ಯಾಸ:** ನಿರಂತರವಾಗಿ ಮಾದಕವಸ್ತು ಸೇವಿಸುವುದರಿಂದ ವ್ಯಕ್ತಿಯ ನರಕೋಶಗಳ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಪುರಾತನ ಕಾಲದಿಂದಲೂ ಗಾಂಜಾ, ಬಂಗಿ ಮತ್ತಿತರ ಮಾದಕವಸ್ತುವನ್ನು ಬಳಸಲಾಗುತ್ತಿದೆ. ಬೆಟ್ಟಿಂಗ್, ಲೈಂಗಿಕ ಚಟುವಟಿಕೆ, ಹಣದ ಗೀಳು ಮಾದಕ ವ್ಯಸನಕ್ಕೆ ಪ್ರೇರೇಪಿಸುತ್ತದೆ ಎಂದು ಮನೋವೈದ್ಯ ಡಾ. ಸಿ.ಆರ್. ಚಂದ್ರಶೇಖರ್ ಹೇಳಿದರು.

ಆರ್. ಸುಬ್ಬಣ್ಣ ವೃತ್ತದಿಂದ ಕುಮಾರಪಾರ್ಕ್‌ನ ಗಾಂಧಿಭವನದವರೆಗೆ ವಿದ್ಯಾರ್ಥಿಗಳು ಮಾದಕವಸ್ತು ಬಳಕೆ ವಿರುದ್ಧ ಜಾಗೃತಿ ಜಾಥಾ ನಡೆಸಿದರು. ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಮದ್ಯಪಾನ ಸಂಯಮ ಮಂಡಳಿ ಮಾಜಿ ಅಧ್ಯಕ್ಷ ಎಚ್.ಸಿ. ರುದ್ರಪ್ಪ, ನಿಮ್ಹಾನ್ಸ್‌ನ ಡಾ.ಪಿ. ರಜನಿ ಮತ್ತಿತರರಿದ್ದರು.

### ಬಿಹಾರ ಮಾದರಿ ಅನುಸರಿಸಿ

ನಿತೀಶ್‌ಕುಮಾರ್ ಸರ್ಕಾರ ಬಿಹಾರದಲ್ಲಿ ಮದ್ಯ ಮಾರಾಟವನ್ನು ಸಂಪೂರ್ಣ ನಿಷೇಧಿಸಿದೆ. ಇದರಿಂದ ಜನರ ಜೀವನಮಟ್ಟ ಸುಧಾರಣೆಯಾಗಿದೆ. ರಾಜ್ಯದಲ್ಲೂ ಮದ್ಯಪಾನ ಹಾಗೂ ಮಾದಕ ವಸ್ತು ವಿರುದ್ಧ ಬೃಹತ್ ಆಂದೋಲನ ನಡೆಯಬೇಕು. ಸರ್ಕಾರ ಅಬಕಾರಿ ತೆರಿಗೆಯನ್ನೇ ಅವಲಂಬಿಸಿ ಆಡಳಿತ, ನಡೆಸುವುದು ಸಲ್ಲ ಎಂದು ಮದ್ಯಪಾನ ಸಂಯಮ ಮಂಡಳಿ ಮಾಜಿ ಅಧ್ಯಕ್ಷ ಎಚ್.ಸಿ. ರುದ್ರಪ್ಪ ಹೇಳಿದರು.

ಮಾದಕವಸ್ತು ವ್ಯಸನದಿಂದ ವ್ಯಕ್ತಿ ಹಾಗೂ ಸಮಾಜಕ್ಕೆ ಹಾನಿಯಾಗಲಿದೆ. ಸರ್ಕಾರ ರಾಜ್ಯವನ್ನು ವ್ಯಸನಮುಕ್ತವಾಗಿಸಬೇಕು. ಆಗ ರಾಜ್ಯ ವಿಶ್ವ ಗುರುವಾಗಲಿದೆ.

। ಗುರುಬಸವ ಪಟ್ಟದೇವರು ಭಾಲ್ಕಿ ಹಿರೇಮಠ



ಮಾದಕ ವಸ್ತುಗಳ ಸೇವನೆ ವಿರೋಧಿ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಜಾಗೃತಿ ಜಾಥಾ ನಡೆಸಿದರು.

ಕನ್ನಡಪ್ರಭ ಬುಧವಾರ 27.6.2018

# ನಗರದಲ್ಲಿ ಮಾದಕ ವಸ್ತು ವಿರೋಧಿ ದಿನಾಚರಣೆ

## ಶಾಲೆ, ಕಾಲೇಜು, ಪಿಜಿಗಳಲ್ಲಿ ಡ್ರಗ್ ಮಾರಾಟ ದಂಧೆ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ | ಪೊಲೀಸರಿಗೆ ಡಿಜಿಪಿ ನೀಲಮಣಿ ರಾಜು ಸೂಚನೆ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಶೈಕ್ಷಣಿಕ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಡೆಯುವ ಮಾದಕ ವಸ್ತು ಮಾರಾಟ ದಂಧೆ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವಂತೆ ಪೊಲೀಸರಿಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕಿ ನೀಲಮಣಿ ಎನ್.ರಾಜು ಸೂಚಿಸಿದ್ದಾರೆ.

ನಗರದ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಮಂಗಳವಾರ ನಡೆದ 'ಅಂತಾರಾಷ್ಟ್ರೀಯ ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ'ಯಲ್ಲಿ ಮಾತನಾಡಿದ ಡಿಜಿಪಿ ಅವರು, ಇತ್ತೀಚೆಗೆ ಐಪಿಎಸ್ ಅಧಿಕಾರಿಗಳ ಸಭೆಯಲ್ಲಿ ಮಾದಕ ವಸ್ತು ಮಾರಾಟದ ಜಾಲದ ನಿರ್ಮೂಲನೆಗೆಮುಖ್ಯಮಂತ್ರಿಹಾಗೂಉಪಮುಖ್ಯಮಂತ್ರಿಗಳು ಕೂಡ ಆದೇಶಿಸಿದ್ದಾರೆ ಎಂದರು.

ಸರ್ಕಾರದಸೂಚನೆಹಿನ್ನೆಲೆಯಲ್ಲಿಶಾಲಾ-ಕಾಲೇಜು, ಪಿಜಿ ಹಾಗೂ ಹಾಸ್ಟೆಲ್‌ಗಳು ಸೇರಿದಂತೆ ಯುವ ಸಮೂಹ ಸೇರುವ ಪ್ರದೇಶಗಳಲ್ಲಿ ಪೊಲೀಸರು ನಿಗಾವಹಿಸಿದ್ದು, ಶೈಕ್ಷಣಿಕ ಸಂಸ್ಥೆಗಳ ಸರಹದ್ದಿನಲ್ಲಿ ಮಾದಕ ವಸ್ತು ಮಾರಾಟ ಯತ್ನಿಸುವ ಶಕ್ತಿಗಳ ಮಟ್ಟ ಹಾಕಲಾಗುತ್ತದೆ. ಈ ಬಗ್ಗೆ ಠಾಣಾ ಮಟ್ಟದಲ್ಲಿ ವಿಶೇಷ ತಂಡ ರಚಿಸಿಕೊಂಡು ಕೆಲಸ ಮಾಡಬೇಕಿದೆ ಎಂದು ಹೇಳಿದರು.

ನಿವೃತ್ತ ಡಿಜಿಪಿ ಡಾ.ಅಜಯ್ ಕುಮಾರ್ ಸಿಂಗ್ ಅವರು, ಮಾದಕ ವಸ್ತು ವ್ಯಸನಕ್ಕೆ ಯುವ ಸಮೂಹ ತುತ್ತಾಗುತ್ತಿರುವುದು ದುರಂತದ ಸಂಗತಿಯಾಗಿದ್ದು, ಭಾರತದಲ್ಲಿ ವರ್ಷಕ್ಕೆ 8 ಸಾವಿರ ಜನರು ಬಲಿಯಾಗುತ್ತಿದ್ದಾರೆ ಎಂದು ಕೆಲ ಅಧ್ಯಯನ ವರದಿಗಳು ಹೇಳಿವೆ. ಈ ಹಿನ್ನೆಲೆಯಲ್ಲಿ ಮಾದಕ ವಸ್ತುಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಅಪರಾಧ ಮತ್ತು ತಾಂತ್ರಿಕ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಸಲೀಂ, ಆಡಳಿತ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎ.ಎಸ್.ಎನ್.ಮೂರ್ತಿ ಇದ್ದರು.



ಮಾದಕ ವಸ್ತುಗಳ ವಿರೋಧಿ ದಿನಾಚರಣೆಯಲ್ಲಿ ನೀಲಮಣಿರಾಜು, ಅಜಯ್‌ಕುಮಾರ್‌ಸಿಂಗ್ ಇತರರು ಭಾಗವಹಿಸಿದ್ದರು.

## ಮಾಧ್ಯಮದವರ ಮೇಲೆ ಡಿಜಿಪಿ ನೀಲಮಣಿ ಗರಂ

ಪ್ರಧಾನ ಮಂತ್ರಿಗಳ ಭದ್ರತೆ ಸಂಬಂಧ ರಾಜ್ಯಗಳಿಗೆ ಕೇಂದ್ರ ಸರ್ಕಾರ ನೀಡಿರುವ ಹೊಸ ಸೂಚನೆ ಬಗ್ಗೆ ಪ್ರತಿಕ್ರಿಯೆ ಕೇಳಿದ ಮಾಧ್ಯಮ ಪ್ರತಿನಿಧಿಗಳ ಮೇಲೆ ಸಿಟ್ಟು ಮಾಡಿಕೊಂಡ ಡಿಜಿಪಿ ನೀಲಮಣಿ ಎನ್.ರಾಜು, ತಮ್ಮ ಕಚೇರಿಯಿಂದ ದೃಶ್ಯ ಮಾಧ್ಯಮ ಪ್ರತಿನಿಧಿಗಳನ್ನು ಹೊರ ಕಳುಹಿಸಿದರು. ಅಂತಾರಾಷ್ಟ್ರೀಯ ಮಾದಕ ವಸ್ತು ದಿನಾಚರಣೆ ಬಳಿಕ ಸುದ್ದಿವಾಹಿನಿಗಳ ಪ್ರತಿನಿಧಿಗಳು, ಪ್ರತಿಕ್ರಿಯೆಗೆ ಪ್ರಯತ್ನಿಸಿದ್ದಾಗ 'ನಿಮ್ಮನ್ನು ಯಾರು ಒಳಕ್ಕೆ ಬಿಟ್ಟಿದ್ದು, ಹೊರ ಹೋಗಿ' ಎಂದು ರೇಗಿದರು.

## ಪ್ರೈಮರಿ ಸ್ಕೂಲ್ ಮಕ್ಕಳಿಗೂ ಸಿಗರೆಟ್ ಚಟ: ಆತಂಕ

**ಬೆಂಗಳೂರು:** ಶೇ.25ರಷ್ಟು ಪ್ರಾಥಮಿಕ ಶಾಲಾ ಮಕ್ಕಳು ಸಿಗರೆಟ್ ಸೇದುತ್ತಿರುವ ಕಂಡು ಬರುತ್ತಿದೆ ಎಂದು ಅಭಯ ಆಸ್ಪತ್ರೆಯ ನಿರ್ದೇಶಕ ಡಾ.ಎ.ಜಗದೀಶ್ ಹೇಳಿದರು. ಕ್ರಿಸ್ಪ್ ಸಂಸ್ಥೆ ವಿಶ್ವ ಮಾದಕ ವ್ಯಸನ ನಿಂದನೆ ಮತ್ತು ಕಾನೂನು ಬಾಹಿರ ಕಳ್ಳಸಾಗಣೆ ವಿರೋಧಿ ದಿನದ ಅಂಗವಾಗಿ ಮಂಗಳವಾರ ಪ್ರೆಸ್ ಕ್ಲಬ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು. ನಗರದ ಖಾಸಗಿ ಶಾಲೆಯ ಐದು, ಆರು, ಏಳನೇ ತರಗತಿ ಮಕ್ಕಳು ಸಿಗರೆಟ್ ಸೇದುವ ಚಟಕ್ಕೆ ಬಿದ್ದಿದ್ದಾರೆ ಎಂದರು. ವಿಕ್ಟೋರಿಯಾ ಆಸ್ಪತ್ರೆಯ ಮಾನಸಿಕ ವಿಭಾಗದ ಮುಖ್ಯಸ್ಥ ಡಾ.ಎಚ್. ಚಂದ್ರಶೇಖರ್, ಡಾ.ಪ್ರತಿಮಾ ಮೂರ್ತಿ, ಡಾ.ಮಹೇಶ್ ಗೌಡ, ಕ್ರಿಸ್ಪ್ ಸಂಸ್ಥೆ ಅಧ್ಯಕ್ಷ ಕುಮಾರ್ ಜಾಗೀರ್‌ದಾರ್ ಇದ್ದರು.

## 'ದಂಧೆ ವಿರುದ್ಧ ಆಂದೋಲನ'

**ಬೆಂಗಳೂರು:** ಮಾದಕ ವಸ್ತು ದಂಧೆಯಲ್ಲಿ ತೊಡಗಿರುವವರ ವಿರುದ್ಧ ದೊಡ್ಡ ಆಂದೋಲನ ರೂಪಿಸಬೇಕಾದ ಅಗತ್ಯವಿದೆ ಎಂದು ನಗರ ಅಪರಾಧ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಕೆ. ನಾರಾಯಣಸ್ವಾಮಿ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಗಾಂಧೀ ಭವನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ ಸಮಾರಂಭದಲ್ಲಿ ಮಾತನಾಡಿದರು.

ಬಡವರು ಹಾಗೂ ಶ್ರೀಮಂತರು ಎಂಬ ಬೇಧ ಭಾವವಿಲ್ಲದೇ ಮಾದಕ ವ್ಯಸನಿಗಳಾಗುತ್ತಿದ್ದು, ಬೃಹತ್ ಆದೋಲನ ರೂಪಿಸಬೇಕಾದ ಅಗತ್ಯವಿದೆ. ನಗರದಲ್ಲಿರುವ ಕೆಲವು ಆಫ್ರಿಕನ್ ಪ್ರಜೆಗಳಿಂದ ಮಾದಕ ವಸ್ತುಗಳ ಮಾರಾಟವಾಗುತ್ತಿದೆ. 100 ಠಾಣೆಗಳ ಪೊಲೀಸ್ ಸಿಬ್ಬಂದಿ ಶ್ರಮಿಸುತ್ತಿದ್ದರೂ ಸಂಪೂರ್ಣ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ ಎಂದರು.

ಛಾಲ್ಕಿಯ ಹಿರೇಮಠದ ಗುರುಬಸವ ಪಟ್ಟದೇವರು, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಮಾಜಿ ಅಧ್ಯಕ್ಷ ರುದ್ರಪ್ಪ, ನಿಮ್ಹಾನ್ಸ್‌ನ ವಿಶ್ರಾಂತ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಇದ್ದರು.



ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ'ದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಜಾಗೃತಿ ಜಾಥ ನಡೆಸಿದರು. ಈ ವೇಳೆ ವ್ಯಕ್ತಿಯೊಬ್ಬರು ಗಾಂಧೀಜಿ ವೇಷದಲ್ಲಿ ಭಾಗವಹಿಸಿದ್ದು ಗಮನ ಸೆಳೆಯಿತು.

## ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹದಲ್ಲಿ ಶ್ರೀ ಗುರುಬಸವ ಪಟ್ಟದ ದೇವರು ಆಗ್ರಹ

# ರಾಜ್ಯ ಮಾದಕ ವಸ್ತು ಮುಕ್ತವಾಗಲಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಮಾದಕ ವಸ್ತುಗಳ ಹವಾಳಿ ಹೆಚ್ಚಾಗುತ್ತಿದ್ದು, ಹೆಚ್ಚಿನ ಜನರು ಇದಕ್ಕೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಸರಕಾರ ಮಾದಕ ವಸ್ತು ಮುಕ್ತ ಕರ್ನಾಟಕ ಮಾಡುವಂತೆ ಬಾಲ್ಕಿಯ ಹಿರೇಮಠ ಸಂಸ್ಥಾನ ಶ್ರೀ ಗುರುಬಸವ ಪಟ್ಟದ ದೇವರು ಆಗ್ರಹಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ' ಸಮಾರಂಭದಲ್ಲಿ ಮಾತನಾಡಿದ ಅವರು, ಜನರು ಸಾಂಪ್ರದಾಯಿಕ ಸಂಸ್ಕೃತಿ ಮರೆತು ಪಾಶ್ಚಾತ್ಯ ಬದುಕಿನತ್ತ ಸಾಗುತ್ತಿದ್ದಾರೆ. ವಿದೇಶಿಗರಿಗೆ ತಮ್ಮನ್ನು ಹೋಲಿಸಿಕೊಂಡು ಮಾದಕ ವಸ್ತುಗಳ ಸೇವನೆಯನ್ನು ಹವ್ಯಾಸವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ನಿಮ್ಹಾನ್ಸ್‌ನ ಮನೋವೈದ್ಯ ಡಾ. ಸಿ.ಆರ್. ಚಂದ್ರಶೇಖರ್ ಮಾತನಾಡಿ, ಒಂದು ಬಾರಿ ಮಾದಕ ವಸ್ತುಗಳಿಗೆ ದಾಸರಾದರೆ ಅಲ್ಲಿಂದ ಜೀವನದ ಅಂತ್ಯ ಆರಂಭವಾಗುತ್ತದೆ. ಮನುಷ್ಯನಲ್ಲಿರುವ ಯೋಚನಾ ಶಕ್ತಿ ಮತ್ತು ವ್ಯಕ್ತಿತ್ವವನ್ನು ನಾಶ ಮಾಡುವ ಕೆಟ್ಟ ಶಕ್ತಿ ಎಂದರೆ ಮಾದಕ ವಸ್ತುಗಳು ಎಂದರು.



ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ ಸಮಾರಂಭವನ್ನು ಬಾಲ್ಕಿಯ ಹಿರೇಮಠ ಸಂಸ್ಥಾನ ಶ್ರೀ ಗುರುಬಸವ ಪಟ್ಟದ ದೇವರು ಉದ್ಘಾಟಿಸಿದರು. ಡಾ.ಸಿ.ಆರ್.ಚಂದ್ರಶೇಖರ್, ಅಬ್ದುಲ್ಲ, ಎಚ್.ಸಿ.ರುದ್ರಪ್ಪ, ಕೆ.ಎನ್.ನಾರಾಯಣ, ಡಾ.ವೂಡೇ.ಪಿ.ಕೃಷ್ಣ ಇಂದಿರಾ ಕೃಷ್ಣಪ್ಪ ಮೀನಾಕುಮಾರಿ ಈಶ್ವರ ಪಟಗಾರ ಇದ್ದರು.

> ಮಾದಕ ವ್ಯಸನಿಗಳ ಸಂಖ್ಯೆ ಹೆಚ್ಚಾದಂತೆ ದೇಶದಲ್ಲಿ ಕೊಲೆ, ಅತ್ಯಾಚಾರ, ದರೋಡೆ, ಮುಂತಾದ ಕಾರ್ಯಗಳು ಹೆಚ್ಚಾಗಿ ನಡೆಯುತ್ತಿದೆ. ಆದ್ದರಿಂದ, ಮಾದಕ ಚಟಗಳಿಗೆ ಬಲಿಯಾಗದ ರೀತಿಯಲ್ಲಿ ನೋಡಿಕೊಳ್ಳಲು ನಾವೆಲ್ಲ ಒಗ್ಗೂಡಿ ಹೋರಾಡಬೇಕು.
>
> **-ಡಾ. ಸಿ.ಆರ್.ಚಂದ್ರಶೇಖರ್** ನಿಮ್ಹಾನ್ಸ್‌ನ ಮನೋವೈದ್ಯ

ಮಾದಕ ವಸ್ತುಗಳಿಂದಾಗುವ ಪರಿಣಾಮದ ಕುರಿತು ಮೌರ್ಯ ಹೊಟೇಲ್‌ನಿಂದ ಗಾಂಧಿ ಭವನದವರೆಗೆ ಜಾಗೃತ ಜಾಥ ನಡೆಯಿತು. ರಂಗಭೂಮಿ ತಜ್ಞ ಅಬ್ದುಲ್, ಮದ್ಯಪಾನ ಸಂಯಮ ಮಂಡಳಿ ಮಾಜಿ ಅಧ್ಯಕ್ಷ ಎಚ್.ಸಿ.ರುದ್ರಪ್ಪ, ಪೊಲೀಸ್ ಅಧಿಕಾರಿ ಕೆ.ಎನ್.ನಾರಾಯಣ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ.ಪಿ.ಕೃಷ್ಣ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಮೀನಾಕುಮಾರಿ ಈಶ್ವರ ಪಟಗಾರ ಇದ್ದರು.

## ಮಾದಕ ವಸ್ತುಗಳಿಗೆ ವಿದ್ಯಾವಂತರೇ ಬಲಿ

ಮಾದಕ ವ್ಯಸನಿಗಳಲ್ಲಿ ವಿದ್ಯಾವಂತರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ತಮ್ಮ ಘನತೆ, ಗೌರವ ತೋರಿಸಲು ಮದ್ಯಸೇವನೆ, ಸಿಗರೇಟ್ ಮುಂತಾದ ಚಟಗಳಿಗೆ ದಾಸರಾಗಿರುವುದು ವಿಪರ್ಯಾಸ. ಅಲ್ಲದೆ, ಮಕ್ಕಳು ಕೂಡ ಹೆಚ್ಚಾಗಿ ಮಾದಕ ವ್ಯಸನಿಗಳಾಗುತ್ತಿದ್ದಾರೆ. ಕೆಲಸದ ನೆಪದಲ್ಲಿ ಹೆತ್ತವರು ಮಕ್ಕಳ ಪಾಲನೆ-ಪೋಷಣೆ ಮರೆಯುತ್ತಿದ್ದಾರೆ. ಹೆತ್ತವರ ಪ್ರೀತಿಯಿಂದ ವಂಚನೆಯಾದ ಮಕ್ಕಳು ಮಾನಸಿಕವಾಗಿ ಕುಗ್ಗುವುದರ ಜತೆಗೆ ದುಶ್ಚಟಗಳಿಗೆ ಬಹುಬೇಗನೆ ದಾಸರಾಗುತ್ತಿದ್ದಾರೆ ಎಂದು ಬಾಲ್ಕಿಯ ಹಿರೇಮಠ ಸಂಸ್ಥಾನ ಶ್ರೀ ಗುರು ಬಸವ ಪಟ್ಟದ ದೇವರು ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ
ಬುಧವಾರ • ಜೂನ್ 27, 2018

# ‘ಮಾದಕ ವ್ಯಸನ ಭವಿಷ್ಯಕ್ಕೆ ಮಾರಕ’



ವಿಶ್ವ ಮಾದಕವಸ್ತು ವಿರೋಧಿ ಸಪ್ತಾಹದ ಅಂಗವಾಗಿ ಮಹಾತ್ಮಗಾಂಧಿ ವೇಷಧಾರಿಯೊಬ್ಬರು ಶಾಲಾ ಮಕ್ಕಳೊಂದಿಗೆ ಜಾಗೃತಿ ಜಾಥಾ ನಡೆಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾದಕವಸ್ತು ಸೇವನೆಯಿಂದ ದೈಹಿಕ ಮತ್ತು ಮಾನಸಿಕ ಸಮತೋಲನ ಕಳೆದುಕೊಳ್ಳುತ್ತೇವೆ’ ಎಂದು ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಹೇಳಿದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ಮಾದಕವಸ್ತು ವಿರೋಧಿ ಸಪ್ತಾಹ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದೇವರು ಮಾತನಾಡಿ, ಕೊಲೆ, ಅತ್ಯಾಚಾರ, ಕಳ್ಳತನ ಇತರ ಅಪರಾಧ ಹೀನ ಕೃತ್ಯಗಳಿಗೆ ತೊಡಗಲು ಚಟಗಳೇ ಕಾರಣ. ಇವುಗಳ ವಿರುದ್ಧ ಅರಿವು ಮೂಡಿಸುವುದು ನಮ್ಮೆಲ್ಲರ ಕರ್ತವ್ಯ’ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ‘ಹೊರ ರಾಜ್ಯ, ರಾಷ್ಟ್ರಗಳಿಂದ ಮಾದಕ ವಸ್ತುಗಳು ಅನೇಕ ರೀತಿಯಲ್ಲಿ ಒಳ ಬರುತ್ತಿವೆ. ರಾಷ್ಟ್ರದ ಯುವಸಮೂಹ ಇಂತಹ ಅನೈತಿಕ ಚಟುವಟಿಕೆಗೆ ಸಿಲುಕಿದರೆ ಭವಿಷ್ಯದಲ್ಲಿ ಬಹಳಷ್ಟು ಸಮಸ್ಯೆಗಳು ಎದುರಾಗುತ್ತವೆ’ ಎಂದರು.

ಮಂಡಳಿಯ ಮಾಜಿ ಅಧ್ಯಕ್ಷ ಎಚ್.ಸಿ. ರುದ್ರಪ್ಪ ಮಾತನಾಡಿ, ‘ದುಶ್ಚಟಗಳಿಗೆ ಒಳಗಾದವರನ್ನು ಮನಃ ಪರಿವರ್ತನೆ ಮಾಡಬೇಕು’ ಎಂದು ತಿಳಿಸಿದರು.

ರಂಗಭೂಮಿ ತಜ್ಞ ಅಬ್ದುಲ್ಲಾ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಮೀನಾಕುಮಾರಿ ಈಶ್ವರ ಪಟಗಾರ, ಮಂಡಳಿ ಸದಸ್ಯ ಗಂಗಣ್ಣ ಬಾಗೇವಾಡಿ, ಎಸಿಪಿ ಇಂಟಲಿಜೆನ್ಸ್ ನಾರಾಯಣಸ್ವಾಮಿ, ಆರೋಗ್ಯ ತಜ್ಞೆ ಪಿ.ರಜನಿ ಇದ್ದರು.

## ‘ಧ್ಯಾನ ಮಾಡಿ’

‘ಮಾದಕವಸ್ತು ಸೇವನೆಯಿಂದ ಸಾವಿರಾರು ಮಂದಿ ಬಲಿಯಾಗುತ್ತಿದ್ದಾರೆ. ಚಟಕ್ಕೆ ಒಳಗಾದ ಶೇ 50ರಷ್ಟು ಮಂದಿಗೆ ಚಿಕಿತ್ಸೆ ನೀಡಲು ಸಾಧ್ಯವಾಗುವುದಿಲ್ಲ. ಯೋಗ, ಧ್ಯಾನ, ಕ್ರೀಡೆ, ಧಾರ್ಮಿಕ ಚಟುವಟಿಕೆಗಳಿಂದ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ’ ಎಂದು ಡಾ.ಸಿ. ಆರ್.ಚಂದ್ರಶೇಖರ್ ಹೇಳಿದರು.

ಸಂಯುಕ್ತ ಕರ್ನಾಟಕ

ಬುಧವಾರ, 27, ಜೂನ್, 2018

# ವಿದ್ಯಾರ್ಥಿಗಳತ್ತ ಡ್ರಗ್ ಮಾಫಿಯಾ ಕೆಂಗಣ್ಣು

## ಮದ್ಯಪಾನ ನಿಷೇಧವಾದರೆ ನಾಡಿಗೆ ಒಳಿತು | ಬಿಹಾರದಲ್ಲಿ ಮದ್ಯ ಮಾರಾಟ ಸಂಪೂರ್ಣ ನಿಷೇಧ

ಸಂ.ಕ ಸಮಾಚಾರ ಬೆಂಗಳೂರು

ನಗರದಲ್ಲಿ ಸೂಡಾನ್, ನೈಜೇರಿಯಾ ಮೂಲದ ಕೆಲವರು ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಮಾದಕ ವಸ್ತುಗಳ ಮಾರಾಟ ದಂಧೆ ನಡೆಸುತ್ತಿದ್ದಾರೆಂದು ಅಪರಾಧ ವಿಭಾಗದ ಎಸಿಪಿ ಕೆ.ನಾರಾಯಣಸ್ವಾಮಿ ಹೇಳಿದರು.

'ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ' ಪ್ರಯುಕ್ತ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಸ್ಮಾರಕ ನಿಧಿ, ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸುಲಭವಾಗಿ ಹಣಗಳಿಸಲು ಆಫ್ರಿಕಾ ಮೂಲದ ಕೆಲವರು ಪ್ರತಿಷ್ಠಿತ ಕಾಲೇಜು ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಕೊಕೇನ್, ಮೆಂಡ್ರಾಕ್ಸ್, 'ಎಲ್‌ಎಚ್‌ಡಿ'ನಂತಹ ಮಾದಕ ದ್ರವ್ಯ ಹಾಗೂ ಕೊಳಗೇರಿ ನಿವಾಸಿಗರು, ಸರ್ಕಾರಿ ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿಕೊಂಡು ಗಾಂಜಾ ಮಾರಾಟ ದಂಧೆಯಲ್ಲಿ ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳು ತಮ್ಮ ಸುತ್ತ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಲ್ಲಿ '100' ಸಂಖ್ಯೆಗೆ ಕರೆಮಾಡಿ ಮಾಹಿತಿ ನೀಡಿದರೆ ಪೊಲೀಸ್ ಅಧಿಕಾರಿಗಳು ಕೂಡಲೇ ಕಾರ್ಯಪ್ರವೃತ್ತರಾಗುತ್ತಾರೆ ಎಂದರು.


'ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ' ಪ್ರಯುಕ್ತ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಸ್ಮಾರಕ ನಿಧಿ, ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಆಯೋಜಿಸಿದ್ದ ಜಾಥಾದಲ್ಲಿ ಶಾಲಾ ಮಕ್ಕಳು ಮಾದಕ ವಸ್ತುಗಳ ದುಷ್ಪರಿಣಾಮದ ಸಂದೇಶಗಳ ಫಲಕ ಹಿಡಿದು ಜನಜಾಗೃತಿ ಮೂಡಿಸಿದರು.

ಬಾಲ್ಕಿ ಹಿರೇಮಠದ ಗುರುಬಸವ ಪಟ್ಟದೇವರು ಮಾತನಾಡಿ, ರಾಜ್ಯದಲ್ಲಿ ಮದ್ಯಪಾನ ನಿಷೇಧವಾದರೆ ನಾಡಿಗೆ ಒಳಿತಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳು ಚಿಂತನೆ ನಡೆಸಬೇಕು ಎಂದು ಮನವಿ ಮಾಡಿದರು.


ಮದ್ಯಪಾನ ಸಂಯಮ ಮಂಡಳಿಯ ಮಾಜಿ ಅಧ್ಯಕ್ಷ ಎಚ್.ಸಿ. ರುದ್ರಪ್ಪ ಮಾತನಾಡಿ, ಬಿಹಾರದಲ್ಲಿ 15 ಮಹಿಳೆಯರಿಂದ ಆರಂಭವಾದ ಮದ್ಯಪಾನ ವಿರೋಧಿ ಆಂದೋಲನ ಕೆಲವೇ ವರ್ಷಗಳಲ್ಲಿ 27 ಸಾವಿರ ಜನ ಸೇರ್ಪಡೆಯಾದರು. ಅಲ್ಲಿನ ಸರ್ಕಾರ ಆಂದೋಲನಕ್ಕೆ ಸೋತು ಮದ್ಯಪಾನ ನಿಷೇಧಿಸಿತು. ಈಗ ಬಡವರ ಆದಾಯ ಹೆಚ್ಚಳವಾಗಿದೆ. ರಾಜ್ಯದಲ್ಲಿ ಸಹ ಮದ್ಯ ಮಾರಾಟದಿಂದ ವಾರ್ಷಿಕ ಸುಮಾರು 18,500 ಕೋಟಿ ರೂ. ಆದಾಯ ಬರುತ್ತಿದೆ. ಇಲ್ಲಿಯೂ ಮದ್ಯ ನಿಷೇಧವಾದರೆ ಈ ಆದಾಯ ಬಡವರ ಮನೆ ಸೇರಲಿದೆ ಎಂದರು.

ಶಾಲಾ ವಿದ್ಯಾರ್ಥಿಗಳು ಗಾಂಧಿ ವೃತ್ತದಿಂದ ಗಾಂಧಿ ಭವನದವರೆಗೂ ಜಾಗೃತಿ ಜಾಥಾ ನಡೆಸಿದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಡಾ.ಸಿ.ಆರ್. ಚಂದ್ರಶೇಖರ್, ರಂಗಕರ್ಮಿ ಅಬ್ದುಲಾ ಸೇರಿದಂತೆ ಮತ್ತಿತರರಿದ್ದರು.

> ಶಾಲಾ ಮಕ್ಕಳು ಸೇವಿಸುವ ಐಸ್‌ಕ್ರೀಮ್, ಬಜ್ಜಿ, ಬೋಂಡಾ ತಿಂಡಿಗಳಲ್ಲಿ ಅಲ್ಪಪ್ರಮಾಣದ ಮಾದಕದ್ರವ್ಯ ಬೆರೆಸಿ ಅವರನ್ನು ದುಶ್ಚಟಕ್ಕೆ ತಳ್ಳುವ ಜಾಲವಿದೆ. ಯಾವುದೇ ತಿಂಡಿಯ ರುಚಿಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ತಕ್ಷಣಕ್ಕೆ ಪೊಲೀಸರಿಗೆ ಮಾಹಿತಿ ನೀಡಿ.
>
> –ಕೆ.ನಾರಾಯಣಸ್ವಾಮಿ, ಅಪರಾಧ ವಿಭಾಗದ ಎಸಿಪಿ

ఆంధ్రజ్యోతి

మంగళవారం 12 జూన్ 2018




10

గాంధీభవన్‌లో
సోమవారం చర్చాగోష్ఠిలో
పాల్గొన్న సీఎం

## ಸಾಧ್ಯವಾದಷ್ಟು ಮಟ್ಟಿಗೆ ಭ್ರಷ್ಟಾಚಾರ ತಡೆಯಲು ಪ್ರಯತ್ನಿಸುತ್ತೇನೆ: ಕುಮಾರಸ್ವಾಮಿ

# ಭ್ರಷ್ಟಾಚಾರ ಕಡಿವಾಣಕ್ಕೆ ಕೈ ಹಾಕಿದರೆ ಉಳಿಗಾಲವಿಲ್ಲ

**ವಿಶ್ವವಾಣಿ ಸುದ್ದಿಮನೆ,** ಬೆಂಗಳೂರು

ಸರಕಾರಿ ಅಧಿಕಾರಿ, ಸಿಬ್ಬಂದಿ ವರ್ಗಾವಣೆ ದಂಧೆಗೆ ಕಡಿವಾಣ ಹಾಕಿದ ಎರಡೇ ನಿಮಿಷದಲ್ಲಿ ಮುಖ್ಯಮಂತ್ರಿ ಸ್ಥಾನವೇ ಹೋಗುತ್ತದೆ!

ಶಕ್ತಿಕೇಂದ್ರ, ವಿಧಾನಸೌಧದ ಮೂರನೇ ಮಹಡಿಯಲ್ಲಿ ಆರಂಭವಾಗುವ ಭ್ರಷ್ಟಾಚಾರದ ಕರಾಳ ದಂಧೆ ಹಳ್ಳಿಗಳನ್ನೂ ವ್ಯಾಪಿಸಿದೆ.

ಹೌದು, ಇಂತಹ ನಗ್ನ ಸತ್ಯ ಬಿಚ್ಚಿಟ್ಟವರು ಸ್ವತಃ ನಾಡಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು.

ಬೆಂಗಳೂರಿನ ಗಾಂಧಿಭವನದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿ, ರಾಜ್ಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ದಂಧೆ ಬಗ್ಗೆ ಎಳೆಎಳೆಯಾಗಿ ಬಿಡಿಸಿಟ್ಟರು.

ಒಂದು ವೇಳೆ ಭ್ರಷ್ಟಾಚಾರವನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮೂಲನೆ ಮಾಡಲು ನಾನು ಮುಂದಾದಲ್ಲಿ ಎರಡು ನಿಮಿಷ ಕೂಡ ಮುಖ್ಯಮಂತ್ರಿ ಸ್ಥಾನದಲ್ಲಿ ನನ್ನನ್ನು ಕೂರಲು ಬಿಡದಿರುವಂಥ ವ್ಯವಸ್ಥೆ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಾನು ಕೆಲಸ ಮಾಡಬೇಕಿದೆ ಎಂದು ವಿಷಾದಿಸಿದರು.

ವಿಧಾನಸೌಧದ ಮೂರನೇ ಮಹಡಿಯಿಂದ ಆರಂಭವಾಗುವ ಈ ದಂಧೆ ಪ್ರತಿ ಹಳ್ಳಿ ಹಳ್ಳಿಗೂ ವ್ಯಾಪಿಸಿದ್ದು, ಸರಕಾರಿ ಕಚೇರಿಗಳಲ್ಲಿ ಕುಳಿತಿರುವ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ದೂರಿದರು.



ಬೆಂಗಳೂರಿನ ಗಾಂಧಿಭವನದಲ್ಲಿ ರಾಷ್ಟ್ರಪಿತ ಮಹಾತ್ಮಾಗಾಂಧೀಜಿ ಪುತ್ಥಳಿಗೆ ಸಿಎಂ ಕುಮಾರಸ್ವಾಮಿ ಮಾಲಾರ್ಪಣೆ ಮಾಡಿದರು.

**ಲೂಟಿ ಸಾಕು, ಜನರ ಕೆಲಸ ಮಾಡಿ:** ಅಧಿಕಾರಿಗಳೇ ಲೂಟಿ ಮಾಡಿದ್ದು ಸಾಕು. ಕೆಲಸ ಮಾಡಿ ಜನರ ಪರಿಸ್ಥಿತಿ ನೋಡಿ ಎಂದು ಚಾಟಿ ಬೀಸಿದ ಕುಮಾರಸ್ವಾಮಿ, ಅಧಿಕಾರಿಗಳ ವರ್ಗಾವಣೆಯಿಂದ ಆರಂಭವಾಗುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದು ಅಷ್ಟೊಂದು ಸುಲಭವಲ್ಲ. ನನ್ನ ಕೈಯಲ್ಲಿ ಸಾಧ್ಯವಾಗುವಷ್ಟರ ಮಟ್ಟಿಗೆ ಭ್ರಷ್ಟಾಚಾರ ತಡೆಯುವ ಪ್ರಯತ್ನ ಮಾಡುತ್ತೇನೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೇ ಹೊರತು ಪೂರ್ಣ ಬಹುಮತವಿಲ್ಲದೆ ಭ್ರಷ್ಟಾಚಾರ ನಿರ್ಮೂಲನೆ ಮಾಡುವ ಕಠಿಣ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಒಂದು ಹಂತದಲ್ಲಿ ತಮ್ಮ ಅಸಹಾಯಕತೆ ಪ್ರದರ್ಶಿಸಿದರು.

**ತಿಂಗಳಿಂದಲೇ ಸಿಎಂ ಹೆಸರಲ್ಲಿ ದಂಧೆ!:** ವಿಧಾನಸೌಧದಲ್ಲಿ ಮುಖ್ಯಮಂತ್ರಿ ನಮ್ಮವರು ಎಂದು ಹೇಳಿಕೊಂಡು ಲಕ್ಷಾಂತರ, ಕೋಟ್ಯಂತರ ರು. ಲಂಚದ ಮೂಲಕ ಪಡೆಯುತ್ತಿರುವ ಅಧಿಕಾರಿಗಳನ್ನು ನಾನು ಕಳೆದ ಒಂದು ತಿಂಗಳಿಂದ ಕಾಣುತ್ತಿದ್ದೇನೆ. ನನಗೆ ಹಣದ ಅಗತ್ಯವಿಲ್ಲ, ಹಣ ಮಾಡುವ ಹುಚ್ಚೂ ಇಲ್ಲ. ಮಹಾತ್ಮ ಗಾಂಧೀಜಿ ಹಾಕಿಕೊಟ್ಟಿರುವ ಮಾರ್ಗದರ್ಶನದಲ್ಲಿ ಸರಕಾರವನ್ನು ನಡೆಸಿ ಬಡವರ ಕಷ್ಟಗಳಿಗೆ ಸ್ಪಂದಿಸುವ ರೀತಿ ಆಡಳಿತ ನಡೆಸಿಕೊಂಡು ಹೋಗಲಿದ್ದೇನೆ. ಮಹಾತ್ಮಗಾಂಧೀಜಿ, ಬಸವಣ್ಣನವರ ತತ್ವಗಳನ್ನು ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ನನ್ನ ಸರಕಾರ ಜನರಿಂದ, ಜನರಿಗಾಗಿ, ಜನರಗೋಸ್ಕರವೇ ನಡೆಯಲಿದೆ ಎಂದು ಹೇಳಿದರು.

### ಮುಖ್ಯಾಂಶಗಳು

- ಲಂಚಗುಳಿತನಕ್ಕೆ ಕಡಿವಾಣ ಹಾಕಲು ಹೋದರೆ ಸಿಎಂ ಸ್ಥಾನದಿಂದ ಕೆಳಗಿಳಿಸುತ್ತಾರೆ
- ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಂದ ಅಸಹಾಯಕತೆಯ ಧ್ವನಿ
- ಒಂದು ತಿಂಗಳಿಂದಲೇ ಸಿಎಂ ಹೆಸರಲ್ಲಿ ಲಂಚಕ್ಕೆ ಕೈ ಚಾಚುತ್ತಿರುವ ಅಧಿಕಾರಿಗಳು
- ವಿಧಾನಸೌಧದಿಂದ ಹಳ್ಳಿಗಳಿಗೂ ವ್ಯಾಪಿಸಿರುವ ಭ್ರಷ್ಟಾಚಾರ

ಸಂಯುಕ್ತ ಕರ್ನಾಟಕ ಮಂಗಳವಾರ, 12, ಜೂನ್, 2018

# ‘ವಿಧಾನಸೌಧದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ’



ಮುಖ್ಯಮಂತ್ರಿ ಎಚ್‌ಡಿ ಕುಮಾರಸ್ವಾಮಿ ಸೋಮವಾರ ಗಾಂಧಿಭವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೇಂದ್ರ ಮಾಜಿ ಸಚಿವ ಎಂವಿ ರಾಜಶೇಖರನ್, ಡಾ| ಪಾಟೀಲ ಪುಟ್ಟಪ್ಪ, ವೂಡೇಪಿ ಕೃಷ್ಣ, ಎಚ್‌ಎಸ್ ದೊರೆಸ್ವಾಮಿ, ಚೆನ್ನಮ್ಮ ಹಳ್ಳಿಕೇರಿ ಮತ್ತಿತರರು ಉಪಸ್ಥಿತರಿದ್ದರು.

ಸಂ.ಕ ಸಮಾಚಾರ ಬೆಂಗಳೂರು

ವಿಧಾನಸೌಧದ ಮೂರನೇ ಮಹಡಿಯಲ್ಲೇ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದ್ದು, ವರ್ಗಾವಣೆ ದಂಧೆ ಭ್ರಷ್ಟಾಚಾರದ ಮೂಲ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಹೇಳಿದ್ದಾರೆ.

ಗಾಂಧಿಭವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನಸೌಧದ ಮೂರನೇ ಮಹಡಿಯಲ್ಲಿ ವರ್ಗಾವಣೆ ದಂಧೆಗಾಗಿ ನಿಂತಿರುವ ಮಧ್ಯವರ್ತಿಗಳನ್ನು ಕಂಡರೆ ನಿಜಕ್ಕೂ ಭಯವಾಗತೊಡಗಿದೆ. ವಿಧಾನಸೌಧದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ತಡೆಯಲು ಎಲ್ಲ ರೀತಿಯ ಪ್ರಯತ್ನ ನಾನು ಮಾಡುತ್ತೇನೆ ಎಂದು ಹೇಳಿದರು.

ಭ್ರಷ್ಟಾಚಾರ ತಡೆಗಟ್ಟಲು ತಡೆಗಟ್ಟುವುದಕ್ಕೆ ಎಲ್ಲ ರೀತಿಯ ಪ್ರಯತ್ನಗಳನ್ನು ನಾನು ಮಾಡುತ್ತೇನೆ. ಕೈಕಟ್ಟಿಕೊಂಡು ಕೂರುವುದಿಲ್ಲ. ಪ್ರಸ್ತುತ ದಿನಗಳಲ್ಲಿ ಸತ್ಯ ಹೇಳುವುದೇ ಒಂದು ಮಹಾಪರಾಧ. ಸತ್ಯ ಹೇಳಿದರೂ ಅದಕ್ಕೊಂದು ಕಥೆ ಕಟ್ಟುತ್ತಾರೆ. ಹಾಗಂತ ಸುಮ್ಮನೆಯಂತೂ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಭ್ರಷ್ಟಾಚಾರ ಎನ್ನುವುದು ವರ್ಗಾವಣೆಯಿಂದ ಆರಂಭವಾಗುತ್ತದೆ. ವಿಧಾನಸೌಧದ ತುಂಬ ಮಧ್ಯವರ್ತಿಗಳೇ ಠಳಾಯಿಸುತ್ತಿರುತ್ತಾರೆ. ನನಗೆ ಮುಖ್ಯಮಂತ್ರಿಯಿಂದ ಹಿಡಿದು ಎಲ್ಲ ಸಚಿವರೂ ತುಂಬ ಆಪ್ತರು. ನೀವು ಇಷ್ಟು ಕೊಟ್ಟರೆ ಕೆಲಸ ನಾನೇ ಮಾಡಿಸಿಕೊಡುತ್ತೇನೆ ಎಂದು ಹೇಳುತ್ತಾರೆ. ಇದನ್ನು ನನ್ನ ಕಣ್ಣಾರೆ ಕಂಡಿದ್ದೇನೆ. ಇದನ್ನೆಲ್ಲ ತಡೆಗಟ್ಟುವುದು ಅಷ್ಟು ಸುಲಭವಲ್ಲ. ಹೇಗೆ ಇದನ್ನು ಸರಿಪಡಿಸುವುದು? ನಾನು ಸುಮ್ಮನೇ ಕೆಟ್ಟ ಹೆಸರು ಪಡೆಯುತ್ತಿನೇನೋ ಎಂದು ಕಾಡುತ್ತದೆ. ಈ ಎಲ್ಲವುಗಳನ್ನು ನನ್ನ ತಂದೆ ದೇವೇಗೌಡರ ಜತೆ ಮಾತನಾಡಿದೆ. ಇಂಥವುಗಳನ್ನು ಸವಾಲಾಗಿ ಸ್ವೀಕರಿಸಬೇಕು ಎಂದು ಅವರು ಹೇಳಿದ್ದಾರೆ.

ಇಂತಹ ಅಕ್ರಮ ತಡೆಗೆ ನನ್ನದೇ ಆದ ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಭ್ರಷ್ಟಾಚಾರದ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂದುಕೊಂಡಿದ್ದೇನೆ. ನನಗೇನೂ ಹಣ ಮಾಡಬೇಕು ಎಂದಿಲ್ಲ. ಹಣದ ಅವಶ್ಯಕತೆಯೂ ನನಗಿಲ್ಲ. ಎಲ್ಲವನ್ನೂ ಒಂದೇ ಸಲ ಸರಿಪಡಿಸಲು ಆಗುವುದಿಲ್ಲ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕು ಎಂದರು. ಈಗಾಗಲೇ ಹಲವು ಬಾರಿ ಅಧಿಕಾರಿಗಳ ಸಭೆ ನಡೆಸಿದ್ದೇನೆ. ಅಧಿಕಾರಿಗಳಿಗೂ ಈ ಬಗ್ಗೆ ಅವಕಾಶ ಮಾಡಿಕೊಡದಂತೆ ತಿಳಿಹೇಳುತ್ತೇನೆ. ಇದಕ್ಕೂ ಮೊದಲು ಆಗಿರುವ ಲೂಟಿಯ ಬಗ್ಗೆಯೂ ನನಗೊತ್ತಿದೆ. ಆದರೆ, ನನ್ನ ಅಧಿಕಾರವಧಿಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದರು.



## ಗೋಗರೆದಿದ್ದಕ್ಕೆ ಸಿಎಂ ಆದೆ

ನನಗೇನೂ ಮುಖ್ಯಮಂತ್ರಿಯಾಗುವ ಇಷ್ಟವಿರಲಿಲ್ಲ. ನಮ್ಮ ತಂದೆಯೂ ಬೇಡ ಎಂದಿದ್ದರು. ಕಾಂಗ್ರೆಸ್ ನಾಯಕರು ಗೋಗರೆದಿದ್ದರಿಂದ ಮುಖ್ಯಮಂತ್ರಿಯಾದೆ.

| ಎಚ್.ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿ

- ವಿಧಾನಸೌಧದ 3ನೇ ಮಹಡಿಯಲ್ಲೇ ವ್ಯಾಪಕ ಭ್ರಷ್ಟಾಚಾರ
- ಮಧ್ಯವರ್ತಿಗಳನ್ನು ನೋಡಿದರೆ ಮೈ ನಡುಕ ಹುಟ್ಟುತ್ತದೆ
- ವರ್ಗಾವಣೆ ದಂಧೆಯೇ ಭ್ರಷ್ಟಾಚಾರಕ್ಕೆ ಮೂಲ ಕಾರಣ
- ಮೊದಲಿದ್ದವರು ಸಾಕಷ್ಟು ಅಕ್ರಮ ಎಸಗಿದ್ದಾರೆ.

ಕನ್ನಡಪ್ರಭ ಮಂಗಳವಾರ 12.6.2018

# ಮಂತ್ರಿ ಸ್ಥಾನಕ್ಕಾಗಿ ಗುಂಪುಗಾರಿಕೆ ಸಲ್ಲದು

## ಮರ್ಯಾದೆ ಇಲ್ಲದವರಿಂದ ಪ್ರತಿಭಟನೆ, ಬೆದರಿಕೆ, ಗುಂಪುಗಾರಿಕೆ: ದೊರೆಸ್ವಾಮಿ ಟೀಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಂತ್ರಿಗಿರಿ ಅಪ್ಪನ ಆಸ್ತಿ ಅಲ್ಲ, ಮಂತ್ರಿ ಸ್ಥಾನಕ್ಕಾಗಿ ಕೆಲವರು ಪ್ರತಿಭಟನೆ, ಇನ್ನೂ ಕೆಲವರು ಪ್ರಪಂಚವನ್ನೇ ಕಳೆದುಕೊಂಡವರಂತೆ ಆಡುತ್ತಾರೆ. ಈ ರೀತಿ ಬೆದರಿಕೆ, ಗುಂಪುಗಾರಿಕೆ ಮಾಡುವವರಿಗೆ ಮರ್ಯಾದೆ ಇಲ್ಲ ಎಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಟೀಕಿಸಿದರು.

ಸೋಮವಾರ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಯೋಜಿಸಿದ್ದ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಅಭಿನಂದಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕುಮಾರಸ್ವಾಮಿ ಅವರದ್ದು ಸ್ಥಿರವಾದ ಮನಸ್ಸು, ಈ ಮೊದಲಿಗಿಂತ ಹೆಚ್ಚು ಅನುಭವ ಅವರಿಗಿದೆ. ಕೆಲವರು ಈ ಸರ್ಕಾರ ಬಿದ್ದು ಹೋಗುತ್ತದೆ ಎನ್ನುತ್ತಾರೆ. ಆದರೆ, ಈ ವ್ಯವಸ್ಥೆ ಸರಿಯಾಗುತ್ತದೆ ಎಂಬ ಭರವಸೆ ಇದೆ. ಯಾರು ಶಾಸನ ಸಭೆ ಕೆಡಿಸುವ ಕೆಲಸ ಮಾಡಬಾರದು ಎಂದರು.

ಪಂಚ ವಾರ್ಷಿಕ ಯೋಜನೆಗಳು ಬಂದರೂ ಬಡತನ ನಿವಾರಣೆ ಆಗಿಲ್ಲ. ದಿಡ್ಡಳ್ಳಿ ಸೇರಿ ಅನೇಕ ಕಡೆ ಭೂಮಿಗೆ ಹೋರಾಟ ನಡೆಸಿದೆ. ಅಲ್ಲಿಯ ನಿವಾಸಿಗಳಿಗೆ ಮೊದಲಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ ನಂತರ ಸ್ಥಳಾಂತರ ಮಾಡಬೇಕು. ನಾಡಿನ ಸಮಸ್ಯೆಗಳನ್ನು ಪರಿಹರಿಸುವ ಕೆಲಸವನ್ನು ಕುಮಾರಸ್ವಾಮಿ ನೇತೃತ್ವದ ಸರ್ಕಾರ ಮಾಡುತ್ತದೆ ಎಂದು ನಿರೀಕ್ಷಿಸುವುದಾಗಿ ಹೇಳಿದರು.

ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಮಾತನಾಡಿ, ಹಣ ಮಾಡುವುದೇ ಒಂದು ದಂಧೆಯಾಗಿದೆ. ಹಣದಿಂದ ಯಾವುದೇ ಅಂಗಡಿಗಳಲ್ಲಿ ಸುಖವನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಅಂಬೇಡ್ಕರ್ ಮತ್ತು ಗಾಂಧಿ ಮಾರ್ಗದಲ್ಲಿ ಮುನ್ನಡೆದು ದೇಶಕ್ಕಾಗಿ ಎಲ್ಲ ರೀತಿಯ ತ್ಯಾಗಕ್ಕೂ ಸಿದ್ಧವಾಗಿರಬೇಕು. ಖಾದಿ ಬಗ್ಗೆ ಕೇವಲ ಅನುಕಂಪ ಇದ್ದರೆ ಸಾಲದು. ಅದು ಬದುಕುವಂತೆ ಮಾಡಬೇಕು.




ನಗರದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಭವನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅಭಿನಂದಿಸಿದರು. ಗಾಂಧಿ ಭವನ ಅಧ್ಯಕ್ಷ ವೂಡೇ ಪಿ.ಕೃಷ್ಣ, ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ, ಕೇಂದ್ರ ಮಾಜಿ ಸಚಿವ ಎಂ.ವಿ. ರಾಜಶೇಖರನ್ ಇತರರಿದ್ದರು.

ಸರ್ಕಾರ ಖಾದಿ ಉಳಿವಿಗೆ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿ, ಕಸ್ತೂರಬಾ ಮತ್ತು ಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆ ಸಲುವಾಗಿ ಕೇಂದ್ರ ಸರ್ಕಾರ ದೊಡ್ಡ ಸಮಿತಿ ಮಾಡಿದೆ. ಆದರೆ, ಗಾಂಧಿ ಪ್ರಣೀತ ಸಂಸ್ಥೆಗಳನ್ನು ಆ ಸಮಿತಿಯಿಂದ ಹೊರಗಿಡಲಾಗಿದೆ. ರಾಜ್ಯ ಸರ್ಕಾರ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲೇ ಸಮಿತಿ ರಚಿಸಿ ಗಾಂಧಿ ಜನ್ಮದಿನ ಆಚರಣೆ ಮಾಡಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಪಿ.ರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ ಮತ್ತಿತರರು ಉಪಸ್ಥಿತರಿದ್ದರು.

ಉದಯವಾಣಿ
ಮಂಗಳವಾರ, ಜೂನ್ 12, 2018

# ಭ್ರಷ್ಟಾಚಾರ ನಿಲ್ಲಿಸಲು ಹೊರಟರೆ ಅಧಿಕಾರ ಇರೋಲ್ಲ

## ಭ್ರಷ್ಟಾಚಾರ ನಿರ್ಮೂಲನೆ ಬಗೆಗಿನ ಅಸಹಾಯಕತೆ ತೋಡಿಕೊಂಡ ಸಿಎಂ ಕುಮಾರಸ್ವಾಮಿ



ಗಾಂಧಿ ಭವನಕ್ಕೆ ಭೇಟಿ ಕೊಟ್ಟ ವೇಳೆ ನಡೆದ ಸಭೆಯಲ್ಲಿ ಸಿಎಂ ಭಾಗವಹಿಸಿದ್ದರು.

ಬೆಂಗಳೂರು: 'ಆಡಳಿತ ವ್ಯವಸ್ಥೆಯಲ್ಲಿ ಹೆಮ್ಮರವಾಗಿ ಬೆಳೆದಿರುವ ಭ್ರಷ್ಟಾಚಾರವನ್ನು ಅಷ್ಟು ಸುಲಭವಾಗಿ ತೆಗೆದು ಹಾಕಲು ಆಗುವುದಿಲ್ಲ. ಒಂದೊಮ್ಮೆ ಭ್ರಷ್ಟಾಚಾರ ಸಂಪೂರ್ಣವಾಗಿ ನಿಲ್ಲಿಸಲು ಮುಂದಾದರೆ ನನ್ನನ್ನು ಎರಡು ನಿಮಿಷ ಅಧಿಕಾರದಲ್ಲಿ ಇರಲು ಬಿಡುವುದಿಲ್ಲ' ಹೀಗೆ ಹೇಳಿದವರು ಸ್ವತಃ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ.

ಮುಖ್ಯಮಂತ್ರಿ ಆದ ಬಳಿಕ ಇದೇ ಮೊದಲ ಬಾರಿಗೆ ಸೋಮವಾರ ಗಾಂಧಿ ಭವನಕ್ಕೆ ಭೇಟಿ ಕೊಟ್ಟ ವೇಳೆ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಮತ್ತಿತರರ ಸಮ್ಮುಖದಲ್ಲಿ, ಎಚ್‌ಡಿಕೆ ತಮ್ಮ ಅಸಹಾಯಕತೆ ತೋಡಿಕೊಂಡರು.

'ಇತ್ತೀಚೆಗೆ ನಾನು ಶೃಂಗೇರಿ ಮಠಕ್ಕೆ ಭೇಟಿ ಕೊಟ್ಟಾಗ 'ನೀವು ಮಠಕ್ಕೆ ಏನೂ ಮಾಡುವುದು ಬೇಡ, ಆದರೆ ಭ್ರಷ್ಟಾಚಾರ ನಿಲ್ಲಿಸಿ' ಎಂದು ಸ್ವಾಮೀಜಿ ಹೇಳಿದ್ದರು. ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತೇನೆಂದು ಗುರುಗಳಿಗೆ ಹೇಳಿದ್ದೆ. ಭ್ರಷ್ಟಾಚಾರ ಬೆಳೆದಿರುವ ಪರಿ ಕಂಡರೆ ಗಾಬರಿಯಾಗುತ್ತದೆ. ಅದನ್ನು ಎಲ್ಲಿಂದ ಸರಿಪಡಿಸಬೇಕು ಎಂದು ಯೋಚನೆ ಮಾಡಿದರೆ ದಿಕ್ಕೇ ತೋಚುವುದಿಲ್ಲ,' ಎಂದರು.

'ಭ್ರಷ್ಟಾಚಾರಕ್ಕೆ ವರ್ಗಾವಣೆ ಮೂಲ ಬೇರು. ವಿಧಾನಸೌಧದಲ್ಲಿ ವರ್ಗಾವಣೆ ಧಂದೆಗೆ ಮಧ್ಯವರ್ತಿಗಳಿದ್ದಾರೆ. ಈ ಜಾಲ ಬಹಳ ವ್ಯವಸ್ಥಿತ ಮತ್ತು ಅಷ್ಟೇ ಗಟ್ಟಿಯಾಗಿದೆ. ಅಧಿಕಾರಿಗಳ ಹಣದ ದಾಹಕ್ಕೆ ಕೊನೆ ಇಲ್ಲದಂತಾಗಿದೆ. ಒಂದು ವರ್ಗಾವಣೆ ಮಾಡಲು 5ರಿಂದ 10 ಲಕ್ಷ ಹಣ ಪಡೆಯುತ್ತಾರೆ. ಇದನ್ನೆಲ್ಲ ಗಮನಿಸಿದರೆ ಭಯ ಶುರುವಾಗುತ್ತದೆ. ಆದಾಗ್ಯೂ ಭ್ರಷ್ಟಾಚಾರ ಕಡಿವಾಣಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇನೆ. ನನ್ನ ಮಟ್ಟದಲ್ಲಿ ವಿಧಾನಸೌಧದ ಮೂರನೇ ಮಹಡಿಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ನೀಡುವುದಿಲ್ಲ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಈಗಿನ ಸಮ್ಮಿಶ್ರ ಸರ್ಕಾರದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಂಡು ಅದನ್ನು ಕಾರ್ಯಗತಗೊಳಿಸುವುದು ನನ್ನ ಪಾಲಿಗೆ ಸವಾಲಿನ ಕೆಲಸ. ಅದನ್ನು ಸಮರ್ಥವಾಗಿ ನಿಭಾಯಿಸುತ್ತೇನೆ,' ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೊಡೇ ಪಿ. ಕೃಷ್ಣ ಹಿರಿಯ ಪತ್ರಕರ್ತ ಪಿ. ರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರ್ತಿ ಚೆನ್ನಮ್ಮ ಹಳ್ಳಿಕೇರಿ ಮತ್ತಿತರರು ಇದ್ದರು.

> ಸಚಿವ ಸ್ಥಾನ ಸಿಗಲಿಲ್ಲ ಎಂದು ಗುಂಪುಗಾರಿಕೆ ಮಾಡುವುದು, ಪಕ್ಷ ಬಿಟ್ಟು ಹೋಗುತ್ತೇನೆ ಎನ್ನುವ ವರ್ತನೆ ಶಾಸಕರಿಗೆ ಗೌರವ ತರುವುದಿಲ್ಲ. ಆಯ್ಕೆ ಮಾಡಿದ ಜನರನ್ನು ಅವಮಾನಿಸಿದಂತಾಗುತ್ತದೆ. ಶಾಸನ ಸಭೆಗಳನ್ನು ಉತ್ತಮ ರೀತಿಯಲ್ಲಿ ನಡೆಸುವಂತಾಗಬೇಕು.
>
> **ಎಚ್.ಎಸ್. ದೊರೆಸ್ವಾಮಿ,**
> ಸ್ವಾತಂತ್ರ್ಯ ಹೋರಾಟಗಾರ

> ಹಣ ಮಾಡುವುದು ದಂಧೆಯಾಗಿದೆ. ಕೋಟಿಗಟ್ಟಲೆ ಹಣ ಮಾಡಿದರೂ ಸುಖ ಸಿಗುವುದಿಲ್ಲ. ಯಾವ ಅಂಗಡಿಯಲ್ಲೂ ಸುಖವನ್ನು ಮಾರುವುದಿಲ್ಲ. ದೇಶಕ್ಕಾಗಿ ಏನು ಮಾಡುತ್ತೇವೆ ಎಂಬುದು ಮುಖ್ಯ. ಖಾದಿ ಬಗ್ಗೆ ಅನುಕಂಪವಿದ್ದರೆ ಸಾಲದು ಅದು ಬದುಕುವಂತೆ ಮಾಡಬೇಕು.
>
> **ಪಾಟೀಲ ಪುಟ್ಟಪ್ಪ,**
> ಹಿರಿಯ ಪತ್ರಕರ್ತ

ಹೊಸ ದಿಗಂತ

ಮಂಗಳವಾರ
12-ಜೂನ್ 2018

## ಭ್ರಷ್ಟಾಚಾರ ಕಡಿವಾಣಕ್ಕೆ ಅಗತ್ಯ ಕ್ರಮ: ಸಿಎಂ ಕುಮಾರಸ್ವಾಮಿ

# ಅಧಿಕಾರಿಗಳ ವಲಯದಲ್ಲಿ ಅಧಿಕವಾದ ಹಣದ ದಾಹ

ದಿಗಂತ ಚಿತ್ರ



[illegible]ಂಗಳೂರು: ಅಧಿಕಾರಿಗಳ ವಲಯದಲ್ಲಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಪ್ರಯತ್ನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಗಾಂಧಿ ಭವನದಲ್ಲಿ ಸೋಮವಾರ ಹಮ್ಮಿಕೊಳ್ಳಲಾದ ಗಾಂಧಿ ಭವನ ಭೇಟಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸಕ್ತ ಅಧಿಕಾರದಲ್ಲಿರುವ ಅಧಿಕಾರಿಗಳನ್ನು ಗಮನಿಸಿದರೆ ಅವರಲ್ಲಿ ಪ್ರಾಮಾಣಿಕ ಕೊರತೆ ಕಂಡುಬರುತ್ತದೆ. ಹಣದ ವ್ಯಾಮೋಹಕ್ಕೆ ಮರುಳಾಗಿ ತಮ್ಮನ್ನು ಮಾರಿಕೊಳ್ಳುತ್ತಿದ್ದಾರೆ. ಜನರಿಗೆ ಸಹಾಯ ಮಾಡುವ ಬದಲಿಗೆ ಹಣದಾಹಿಗಳಾಗಿದ್ದಾರೆ. ಅಧಿಕಾರಿ ವಲಯದಲ್ಲಿರುವ ಭ್ರಷ್ಟಚಾರ ತಡೆಗಟ್ಟಲು ಆದಷ್ಟು ಪ್ರಯತ್ನ ಮಾಡಲಾಗುವುದು. ಪೂರ್ಣ ಬಹುಮತದ ಸರ್ಕಾರದ ರಚನೆಯಾಗಿದ್ದರೆ ನಾವು ಕಠಿಣ ಕ್ರಮಗಳನ್ನು ಕೈಗೊಳ್ಳಬಹುದಿತ್ತು ಎಂದರು.

ಒಂದು ತಿಂಗಳ ಆಡಳಿತದಲ್ಲಿ ಸಾಕಷ್ಟು ಗಮನಿಸಿದ್ದೇನೆ. ಅಧಿಕಾರಿಗಳಲ್ಲಿ ಸಾಕಷ್ಟು ಹಣದ ದಾಹವಿದೆ. ಅದನ್ನು ಸರಿಮಾಡಲು ಕೈ ಹಾಕಲು [illegible]ನನಗೆ ಭಯವಾಗುತ್ತದೆ. [illegible] ವ್ಯವಸ್ಥೆ [illegible] ಸಾಕಷ್ಟು ಹದಗೆಟ್ಟಿದೆ ಎಂದು ಬೇಸರ ವ್ಯಕ್ತಪಡಿಸಿದರು.

[illegible] ಬಾ ಮತ್ತು ಬಾಪು 150ನೇ ವರ್ಷಾಚರಣೆ ಕಾರ್ಯಕ್ರಮ ಮಾಡಲು ಸರ್ಕಾರ ಗಾಂಧಿ ಭವನಕ್ಕೆ ಅಗತ್ಯ ನೆರವು ನೀಡಲಾಗುವುದು. ಜಿಲ್ಲೆಗೊಂದರಂತೆ ಗಾಂಧಿ ಭವನ ನಿರ್ಮಿಸುವ ಯೋಜನೆಯಡಿ ಈಗಾಗಲೇ 14 ಜಿಲ್ಲೆಗಳಲ್ಲಿಗೆ 35 ಕೋಟಿ ರೂ. ಹಣ ಬಿಡುಗಡೆಯಾಗಿದೆ. ಉಳಿದ ಜಿಲ್ಲೆಗಳ ಸ್ಥಳ ಪರಿಶೀಲನಾ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

[illegible] ಮಾಧ್ಯಮಗಳಿಗೆ [illegible] ಗಿರಬಹುದು. ಆದರೆ ಸಕಾರಾತ್ಮಕ ಶಾಂತಿ ಬೇಕು. ಸಮಾಜ ಹಾಳು ಮಾಡಬೇಡಿ. [illegible] ಹರಿಶ್ಚಂದ್ರ [illegible] ಸಮಗ್ರ [illegible] ಬೇಕಾದಂತೆ ಸುದ್ದಿ ಮಾಡುವ ಚಾಳಿ ಬಿಟ್ಟು, ಪತ್ರಿಕಾ ಧರ್ಮ [illegible] ಎಂದು ಮಾಧ್ಯಮಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಶಾಸಕರು ಪೂರ್ಣಾವಧಿ ಸರ್ಕಾರ ನಡೆಸಲು ಅಗತ್ಯ ಸಹಕಾರ ನೀಡಬೇಕು. [illegible] ಬೆಂಬಲ ನೀಡುವುದಿಲ್ಲ ಎಂದು ಬೆದರಿಕೆಯೊಡ್ಡಬಾರದು. ಎಲ್ಲರಿಗೂ ಮಂತ್ರಿಗಿರಿ ಕೊಡುತ್ತಾ ಹೋದರೆ ಶಾಸಕಾಂಗಕ್ಕೆ [illegible] ಮಾನ್ಯತೆಯೇ ಇರುವುದಿಲ್ಲ. ಮಂತ್ರಿಗಿರಿ ದೊರೆತಿಲ್ಲ ಎಂದು ಬೇಸರ ವ್ಯಕ್ತಪಡಿಸುವ ಬದಲಿಗೆ ತಾವು ಆರಿಸಿಬಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ [illegible] ಪಾಟೀಲ್ ಪುಟ್ಟಪ್ಪ, [illegible] ಅವರ [illegible] ಪ್ರೇರಣೆ [illegible] ಹಳ್ಳಿಕೆರೆ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ [illegible] ಹಾಗೂ ಮತ್ತಿತರರು ಹಾಜರಿದ್ದರು.

> ಕೆಲವು ವಿಚಾರಗಳ ಸಂಬಂಧ ಸಚಿವ ಜಿ.ಟಿ. ದೇವೇಗೌಡ ಅವರು ಖಾತೆ ನಿರ್ವಹಣೆ ಮಾಡಲು ಅಡಚಣೆ ಉಂಟಾಗಿದೆ. ಈ ಸಂಬಂಧ ಅವರೊಂದಿಗೆ ಸಮಾಲೋಚಿಸಲಾಗುವುದು.
>
> ■ ಎಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಮಂಗಳವಾರ 12 ಜೂನ್ 2018 • 12 JUNE 2018

# ವಿಧಾನಸೌಧದ ಲಂಚಾವತಾರಕ್ಕೆ ಅಸಹಾಯಕರಾದ ಎಚ್ಡಿಕೆ

▫ ವಿಜಯವಾಣಿ ಸುದ್ದಿಜಾಲ ಬೆಂಗಳೂರು

'ಸರ್ಕಾರಿ ಅಧಿಕಾರಿಗಳ ಹಂತದಲ್ಲಿ ಬಲವಾಗಿ ಬೇರು ಬಿಟ್ಟಿರುವ ಭ್ರಷ್ಟಾಚಾರವನ್ನು ಒಂದೇ ಬಾರಿ ತೊಡೆದುಹಾಕಲು ಮುಂದಾದರೆ ಒಂದು ಕ್ಷಣವೂ ನಾನು ಕುರ್ಚಿಯಲ್ಲಿರದಂತೆ ಅಧಿಕಾರಿಗಳೇ ಕೆಳಗಿಳಿಸುತ್ತಾರೆ. ಈ ಅಧಿಕಾರಿಗಳ ಭ್ರಷ್ಟಾಚಾರ ನೋಡಿದರೆ, ಸಿಎಂ ಸ್ಥಾನದಲ್ಲಿರುವ ನನಗೇ ಕೆಟ್ಟ ಹೆಸರು ಬರುತ್ತದೆ ಎಂಬ ಆತಂಕವಿದೆ...' ಆಡಳಿತ ಶಕ್ತಿಕೇಂದ್ರ ವಿಧಾನಸೌಧ, ವಿಕಾಸಸೌಧ ಸೇರಿದಂತೆ ರಾಜ್ಯದ ಸರ್ಕಾರಿ ಕಚೇರಿಗಳಲ್ಲಿ ಜಡ್ಡುಗಟ್ಟಿ ನಿಂತಿರುವ ಭ್ರಷ್ಟಾಚಾರ ನಿಯಂತ್ರಿಸುವ ವಿಚಾರದಲ್ಲಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವ್ಯಕ್ತಪಡಿಸಿರುವ ಅಸಹಾಯಕತೆಯ ಪರಿ ಇದು. ಕರ್ನಾಟಕ ಗಾಂಧಿ ಸ್ಮಾರಕ ಟ್ರಸ್ಟ್ ವತಿಯಿಂದ ಸೋಮವಾರ ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಚ್ಛ, ಪಾರದರ್ಶಕ ಆಡಳಿತಕ್ಕೆ ಎದುರಾಗಿರುವ ಸವಾಲುಗಳನ್ನು ಬಿಚ್ಚಿಟ್ಟರು. ಅಧಿಕಾರಿಗಳು ಯಾವ ರೀತಿ ನಡೆಯುತ್ತಿದ್ದಾರೆ, ಯಾವ ಇಲಾಖೆಗಳು ಹೇಗೆ ನಡೆಯುತ್ತಿವೆ, ಹೇಗೆ ಲೂಟಿ ನಡೆಯುತ್ತಿದೆ ಎಂಬುದನ್ನು ಕಳೆದೊಂದು ತಿಂಗಳಿಂದ ನೋಡುತ್ತಿದ್ದೇನೆ. ಈ ಕುರಿತು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಬಳಿಯೂ ಚರ್ಚಿಸಿದ್ದೆ ಎಂದರು.

• ಪುಟ 4



ಅಭಿನಂದನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ.

### ದಲ್ಲಾಳಿಗಳ ಹಾವಳಿ

ವಿಧಾನಸೌಧದ 3ನೇ ಮಹಡಿಯಲ್ಲಿ(ಸಿಎಂ ಕಚೇರಿ) ಭ್ರಷ್ಟಾಚಾರ ನಿಯಂತ್ರಿಸಬಹುದು. ಆದರೆ, ನನಗೆ ಸಿಎಂ ಗೊತ್ತು, ಸಚಿವರು ಗೊತ್ತು ಎಂದು ಹೇಳಿಕೊಂಡು, ವರ್ಗಾವಣೆ ಮಾಡಿಸಿಕೊಡುತ್ತೇನೆ ಎನ್ನುತ್ತ ವಿಧಾನಸೌಧದಲ್ಲಿ ಅಡ್ಡಾಡುವ ದಲ್ಲಾಳಿಗಳಿಂದ ಭ್ರಷ್ಟಾಚಾರ ಆರಂಭವಾಗುತ್ತದೆ. ಒಂದೇ ಬಾರಿ ಶೇ.100 ಭ್ರಷ್ಟಾಚಾರ ನಿಯಂತ್ರಣ ಸಾಧ್ಯವಿಲ್ಲ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಮೈತ್ರಿ ಸರ್ಕಾರದ ಇತಿಮಿತಿಯಲ್ಲಿ ಎಲ್ಲ ಆಶ್ವಾಸನೆ ಈಡೇರಿಸುತ್ತೇನೆ ಎಂದು ಎಚ್ಡಿಕೆ ಭರವಸೆ ನೀಡಿದರು.

## ಶೃಂಗೇರಿ ಶ್ರೀಗಳಿಗೂ ಹೇಳಿದ್ದೆ

ಇತ್ತೀಚೆಗೆ ಶೃಂಗೇರಿ ಜಗದ್ಗುರುಗಳ ಆಶೀರ್ವಾದ ಪಡೆಯಲು ತೆರಳಿದ್ದಾಗ ಸರ್ಕಾರದಿಂದ ಮಠಕ್ಕೆ ಯಾವುದಾದರೂ ಕಾರ್ಯ ನಡೆಯಬೇಕಿದ್ದರೆ ತಿಳಿಸಿ ಎಂದು ಸಚಿವ ಎಚ್.ಡಿ. ರೇವಣ್ಣ ಕೇಳಿದ್ದರು. ಆದರೆ ಮಠಕ್ಕೆ ಏನೂ ಬೇಡ ಅದನ್ನು ಭಕ್ತರು ನೋಡಿಕೊಳ್ಳುತ್ತಾರೆ. ರಾಜ್ಯದಲ್ಲಿ ಬೇರು ಬಿಟ್ಟಿರುವ ಭ್ರಷ್ಟಾಚಾರ ನಿಗ್ರಹಿಸುವಂತೆ ಶ್ರೀಗಳು ತಿಳಿಸಿದ್ದರು. 'ನನ್ನ ಮಟ್ಟದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುತ್ತೇನೆ, ಆದರೆ ಎಲ್ಲೆಡೆ ಹರಡಿರುವ ವ್ಯವಸ್ಥೆಯನ್ನು ಶೀಘ್ರವಾಗಿ ಸರಿಪಡಿಸಲು ಸಾಧ್ಯವಿಲ್ಲ ಎಂಬುದನ್ನು ಶ್ರೀಗಳ ಗಮನಕ್ಕೆ ತಂದಿದ್ದೆ' ಎಂದು ಎಚ್ಡಿಕೆ ನೆನಪಿಸಿಕೊಂಡರು.

## ಇನ್ಮುಂದೆ ಅಧಿಕಾರಿಗಳ ಆಟ ನಡೆಯಲ್ಲ

ಸದ್ಯದಲ್ಲೇ ಅಧಿಕಾರಿಗಳ ಸಭೆ ನಡೆಸಲಿದ್ದೇನೆ. ಇಲ್ಲಿಯವರೆಗೆ ಏನೇನು ಲೂಟಿ ಮಾಡಿಕೊಂಡಿರಿ ಎಂಬುದನ್ನು ಕೇಳುವುದಿಲ್ಲ. ಇನ್ನು ಮುಂದಾದರೂ ಸರಿಯಾಗಿರಿ ಎಂದು ಹೇಳುತ್ತೇನೆ. ಜನರ ತೆರಿಗೆ ಹಣದಿಂದ ಸಂಬಳ ಪಡೆಯುತ್ತಿದ್ದೀರಿ. ಐದಾರು ವರ್ಷಕ್ಕೊಮ್ಮೆ ಸಂಬಳ ಹೆಚ್ಚಳ ಆಗುತ್ತದೆ. ಸದ್ಯದಲ್ಲೇ 6ನೇ ವೇತನ ಆಯೋಗದ ಶಿಫಾರಸು ಜಾರಿಯಾಗುತ್ತದೆ. ಇಷ್ಟೆಲ್ಲ ಸೌಲಭ್ಯ ಪಡೆದ ನಂತರವಾದರೂ ಕೆಳ ಹಂತದಲ್ಲಿರುವ ಜನರ ಬಗ್ಗೆ ಪ್ರಾಮಾಣಿಕ ಯೋಚನೆ ಮಾಡಬೇಕು ಎಂದು ಎಚ್ಡಿಕೆ ಪರೋಕ್ಷವಾಗಿ ಎಚ್ಚರಿಕೆ ರವಾನಿಸಿದರು.

ಎಷ್ಟು ದಿನ ಬದುಕುತ್ತೇನೋ ಗೊತ್ತಿಲ್ಲ ▶4

# ಸಿಎಂ ಕುರ್ಚಿಗೇ ಕಂಟಕ

ಮೊದಲ ಪುಟದಿಂದ...

**ಆರ್ಟಿಇ ನಿಯಂತ್ರಣ ಇಲ್ಲ:** ಕಡ್ಡಾಯ ಶಿಕ್ಷಣ ಹಕ್ಕು (ಆರ್ಟಿಇ) ಕಾಯ್ದೆ ಜಾರಿಯಲ್ಲಿ ಸರ್ಕಾರದ ಯಾವುದೇ ನಿಯಂತ್ರಣ ಇಲ್ಲ ಎಂದ ಕುಮಾರಸ್ವಾಮಿ, ಶಾಲೆಗಳು ಸರ್ಕಾರದಿಂದ ಹಣ ಪಡೆದು ಪಾಲಕರಿಂದಲೂ 40-50 ಸಾವಿರ ರೂ. ವಸೂಲಿ ಮಾಡುತ್ತಿವೆ, ಅಧಿಕಾರಿಗಳು 5-10 ಸಾವಿರ ರೂ. ಲಂಚ ಪಡೆಯುತ್ತಿದ್ದಾರೆ. ಇದೆಲ್ಲವನ್ನೂ ನೋಡಿ ಬೇಸತ್ತು ಡಿಡಿಪಿಐ ಒಬ್ಬರನ್ನು ಅಮಾನತು ಮಾಡುವಂತೆ ಹೇಳಿದ್ದೆ ಎಂದು ಜಡ್ಡುಗಟ್ಟಿರುವ ಭ್ರಷ್ಟ ವ್ಯವಸ್ಥೆಯ ರೂಪವನ್ನು ಬಿಚ್ಚಿಟ್ಟರು.

**ಕಾಂಗ್ರೆಸ್ನವರೇ ಸಿಎಂ ಮಾಡಿದ್ದು:** ಚುನಾವಣೆ ಫಲಿತಾಂಶ ಬಂದ ಬಳಿಕ ದೇವೇಗೌಡ ಅವರನ್ನು ಭೇಟಿ ಮಾಡಿದ ಕಾಂಗ್ರೆಸ್ ನಾಯಕರು ಕುಮಾರಸ್ವಾಮಿಯವರೇ ಸಿಎಂ ಆಗಲಿ ಎಂದರು. ಅವರಿಗೆ ಆರೋಗ್ಯ ಸರಿಯಿಲ್ಲ, ಎರಡು ಬಾರಿ ಶಸ್ತ್ರಚಿಕಿತ್ಸೆ ಆಗಿದೆ, ಕಾಂಗ್ರೆಸ್ನವರೇ ಸಿಎಂ ಆಗಿ ಎಂದು ದೇವೇಗೌಡರು ಹೇಳಿದರೂ ಅವರು ಒಪ್ಪಿಲ್ಲ. ಬಿಜೆಪಿಯವರು ತಮ್ಮ ಜತೆ ಆಗಮಿಸುವಂತೆ ಒತ್ತಡ ಹೇರಿದರೂ ತೆರಳಲಿಲ್ಲ. ದೇವರ ದಯೆಯಿಂದಲೋ ಅಥವಾ ಹಿರಿಯರ ಕೃಪೆಯಿಂದಲೋ ಮತ್ತೆ ಸಿಎಂ ಆಗಿದ್ದೇನೆ ಎಂದು ಕುಮಾರಸ್ವಾಮಿ ತಿಳಿಸಿದರು.

### ಎಷ್ಟು ದಿನ ಬದುಕುತ್ತೇನೋ ಗೊತ್ತಿಲ್ಲ

ನನಗೆ ಹಣ ಮಾಡುವ ಹುಚ್ಚು ಇಲ್ಲ. ಎರಡು ಬಾರಿ ಶಸ್ತ್ರಚಿಕಿತ್ಸೆ ಆಗಿರುವ ಕಾರಣ ಎಷ್ಟು ದಿನ ಬದುಕುತ್ತೇನೋ ಗೊತ್ತಿಲ್ಲ. ಗಾಂಧೀಜಿ ತತ್ವ ಅನುಷ್ಠಾನ ಮಾಡಲು ಈ ಬಾರಿಯೂ ಪ್ರಾಮಾಣಿಕವಾಗಿ ಸ್ಪಂದಿಸುತ್ತೇನೆ. ಗಾಂಧೀಜಿ ಹಾಗೂ ಕಸ್ತೂರ ಬಾ ಜನ್ಮ ಶತಮಾನೋತ್ಸವದ ನಿಮಿತ್ತ ಗಾಂಧೀ ಸ್ಮಾರಕ ಭವನ ರೂಪಿಸುವ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರ ನೀಡುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಉಂಟಾಗಿರುವ ಭೂಮಿಯ ತೊಂದರೆಯನ್ನು ನಿವಾರಿಸುತ್ತೇನೆ ಎಂದು ಕುಮಾರಸ್ವಾಮಿ ಭರವಸೆ ನೀಡಿದರು.

ವಾರ್ತಾ ಭಾರತಿ

# ಭ್ರಷ್ಟಾಚಾರದ ವಿರುದ್ಧ ಹಂತ ಹಂತದ ಹೋರಾಟ: ಎಚ್‌ಡಿಕೆ

ಬೆಂಗಳೂರು, ಜೂ.11: ಭ್ರಷ್ಟಾಚಾರವನ್ನು ಏಕಾಏಕಿ ನಿಲ್ಲಿಸಲು ಹೋದರೆ ನನ್ನ ಸ್ಥಾನವೇ ಉಳಿಯುವುದಿಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಹೀಗಾಗಿ ಭ್ರಷ್ಟಾಚಾರವನ್ನು ಹಂತ ಹಂತವಾಗಿ ನಿಲ್ಲಿಸಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಸೋಮವಾರ ಗಾಂಧಿಭವನದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ನಾನು ಶೃಂಗೇರಿ ಮಠದ ಶ್ರೀಗಳನ್ನು ಭೇಟಿ ಮಾಡಿದ್ದ ವೇಳೆ ಅವರು ಭ್ರಷ್ಟಾಚಾರ ನಿಲ್ಲಿಸಿ ಎಂದು ಹೇಳಿದ್ದರು. ಅದಕ್ಕೆ ನಾನು ಸಂಪೂರ್ಣವಾಗಿ ನಿಲ್ಲಿಸೋದು ಕಷ್ಟವೆಂದು ಹೇಳಿದ್ದೆ ಎಂದು ನೆನಪು ಮಾಡಿಕೊಂಡರು.

ಸಿಬ್ಬಂದಿ-ಅಧಿಕಾರಿಗಳ ವರ್ಗಾವಣೆಯಿಂದಲೇ ಭ್ರಷ್ಟಾಚಾರ ಆರಂಭವಾಗುತ್ತದೆ. ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧದಲ್ಲೇ ಭ್ರಷ್ಟಾಚಾರ ನಡೆಯುತ್ತಿದೆ. ವಿಧಾನಸೌಧದ ಮೂರನೇ ಮಹಡಿಯಲ್ಲಿ ಕೆಲವು ಮಧ್ಯವರ್ತಿಗಳಿದ್ದಾರೆ. ವರ್ಗಾವಣೆ ಮಾಡಿಸಲು ಓಡಾಡುತ್ತಿರುತ್ತಾರೆ. ಅಧಿಕಾರಿಗಳು ಇನ್ನು ಮುಂದೆ ಶ್ರದ್ಧೆಯಿಂದ ಕೆಲಸ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡುತ್ತೇನೆ ಎಂದು ಕುಮಾರಸ್ವಾಮಿ ತಿಳಿಸಿದರು.

ರಾಜ್ಯದಲ್ಲಿ ಮೈತ್ರಿಕೂಟ ಸರಕಾರ ಇದೆ. ಸರಕಾರ ಟೇಕ್ ಆಫ್ ಆಗಿಲ್ಲ ಅನ್ನೋ ವರದಿ ನೀಡುತ್ತಿದ್ದೀರಾ? ನಮಗೆ ಯಾವುದೇ ಭಯವಿಲ್ಲ. 5 ವರ್ಷ ನಮ್ಮ ಸರಕಾರ ನಡೆಯುತ್ತದೆ. ಇಂತಹ ವರದಿಗಳನ್ನು ಹೇಗೆ ಸೃಷ್ಟಿ ಮಾಡುತ್ತಾರೋ, ಯಾರು ಸುದ್ದಿ ಕೊಡುತ್ತಾರೋ ಗೊತ್ತಿಲ್ಲ. ಸುಳ್ಳು ವರದಿಗಳನ್ನು ಹಾಕಬೇಡಿ. ದೇವೇಗೌಡರನ್ನು ಮನೆಯಲ್ಲಿ ಕೂರಿಸಿ ನಾನು ಅಧಿಕಾರ ಮಾಡಲು ಸಾಧ್ಯವಿಲ್ಲ ಎಂದರು.



ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರು ಸೋಮವಾರ ಬೆಂಗಳೂರಿನ ಗಾಂಧಿ ಭವನಕ್ಕೆ ಭೇಟಿ ನೀಡಿದ ಸಂದರ್ಭ ಪಾಟೀಲ ಪುಟ್ಟಪ್ಪ, ಎಂ.ವಿ. ರಾಜಶೇಖರನ್, ಡಾ. ವೂಡೆ ಪಿ. ಕೃಷ್ಣ, ಎಚ್.ಎಸ್. ದೊರೆಸ್ವಾಮಿ ಉಪಸ್ಥಿತರಿದ್ದರು.

## 'ಸಿಎಂ ಆಗಲು ನನಗೆ ಇಷ್ಟವಿರಲಿಲ್ಲ'

ಬೆಂಗಳೂರು, ಜೂ.11: ನನಗೆ ಮುಖ್ಯಮಂತ್ರಿಯಾಗಲು ಇಷ್ಟವಿರಲಿಲ್ಲ. ಆದರೆ, ಕಾಂಗ್ರೆಸ್ ಪಕ್ಷದ ಮುಖಂಡರು ನೀವೇ ಮುಖ್ಯಮಂತ್ರಿಯಾಗಬೇಕೆಂದು ಒತ್ತಡ ಹೇರಿದ್ದರಿಂದ ಸಿಎಂ ಸ್ಥಾನವನ್ನು ಒಪ್ಪಿಕೊಂಡಿದ್ದೇನೆ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ರಹಸ್ಯವನ್ನು ಬಹಿರಂಗಪಡಿಸಿದ್ದಾರೆ.

ಸೋಮವಾರ ಇಲ್ಲಿನ ಗಾಂಧಿ ಭವನದಲ್ಲಿ ಮಾತನಾಡಿದ ಅವರು, ನಮ್ಮ ತಂದೆ ದೇವೇಗೌಡ, ಅವರಿಗೆ ಎರಡು ಬಾರಿ ಶಸ್ತ್ರ ಚಿಕಿತ್ಸೆಯಾಗಿದ್ದು, ಆರೋಗ್ಯ ಸರಿಯಿಲ್ಲ. ಆದುದರಿಂದ ನೀವೇ ಯಾರಾದರೂ ಮುಖ್ಯಮಂತ್ರಿಯಾಗಿ ಎಂದು ಕಾಂಗ್ರೆಸ್ ಪಕ್ಷದ ನಾಯಕರಿಗೆ ಮನವಿ ಮಾಡಿದ್ದರು.

ಈ ಸಂದರ್ಭದಲ್ಲಿ ರಾಜ್ಯದ ಕಾಂಗ್ರೆಸ್ ಮುಖಂಡರು ಹಾಗೂ ದಿಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ನೀವೇ ಮುಖ್ಯಮಂತ್ರಿ ಆಗಬೇಕು ಎಂದು ಒತ್ತಾಯ ಮಾಡಿ ನನ್ನನ್ನು ಮುಖ್ಯಮಂತ್ರಿ ಮಾಡಿದ್ದಾರೆಂದ ಅವರು, ಕಾಂಗ್ರೆಸ್ ನಾಯಕರು ಕೊಟ್ಟಿರುವ ಅಧಿಕಾರವನ್ನು ಮುನ್ನಡೆಸುತ್ತಿದ್ದೇನೆ ಎಂದು ಹೇಳಿದರು. ನನಗೆ ಯಾವುದೇ ರೀತಿಯಲ್ಲಿ ಹಣ ಮಾಡುವ ಹುಚ್ಚು ಇಲ್ಲ. ನನಗೆ ಎರಡು ಬಾರಿ ಚಿಕಿತ್ಸೆಯಾಗಿದೆ ಎಷ್ಟು ದಿನ ಬದುಕುತ್ತೇನೆ ಎಂಬುದು ಗೊತ್ತಿಲ್ಲ. ಇಂದು ದೇವರ ಅನುಗ್ರಹದಿಂದ ಈ ಜಾಗದಲ್ಲಿ ಕುಳಿತಿದ್ದೇನೆ. ಮಹಾತ್ಮ ಗಾಂಧೀಜಿಯವರ ಹೆಸರನ್ನು ಉಳಿಸುತ್ತೇನೆ ಎಂದು ಹೇಳಿದರು.

ವಿಜಯ ಕರ್ನಾಟಕ


ಮಂಗಳವಾರ, 12 ಜೂನ್ 2018, ಬೆಂಗಳೂರು

## ಗಾಂಧಿವಾದಿಗಳ ಮುಂದೆ ಸಿಎಂ ಕುಮಾರಸ್ವಾಮಿ ಅಸಹಾಯಕತೆ

# ಭ್ರಷ್ಟಾಚಾರ ನಿರ್ಮೂಲನೆ ಕಷ್ಟಸ್ವಾಮಿ...

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನಸೌಧದಿಂದ ಹಿಡಿದು ಆಡಳಿತದ ಎಲ್ಲ ಹಂತದಲ್ಲಿಯೂ ಭ್ರಷ್ಟಾಚಾರ ಆವರಿಸಿದ್ದು, ಇದನ್ನು ಸಂಪೂರ್ಣ ತಡೆಯುವುದು ಕಷ್ಟ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.



ಗಾಂಧಿಭವನಕ್ಕೆ ಸೋಮವಾರ ಭೇಟಿ ನೀಡಿ ಅಲ್ಲಿ ಗಾಂಧಿವಾದಿಗಳ ಜತೆ ಚರ್ಚೆ ನಡೆಸಿದ ಬಳಿಕ ಮಾತನಾಡಿದ ಅವರು "ಶೃಂಗೇರಿ ಶ್ರೀಗಳು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಜನರಿಗೆ ಒಳಿತು ಮಾಡಿ ಎಂದು ಸಲಹೆ ನೀಡಿದ್ದಾರೆ. ನನ್ನ ಮಟ್ಟದಲ್ಲಿ ಭ್ರಷ್ಟಾಚಾರ ನಿಲ್ಲಿಸಲು ಸಿದ್ಧ. ವಿಧಾನಸೌಧ ಮೂರನೇ ಮಹಡಿಯಲ್ಲಿ ತಡೆಯುತ್ತೇನೆ, ಆದರೆ, ಎಲ್ಲೆಡೆ ಆವರಿಸಿರುವ ಭ್ರಷ್ಟಾಚಾರ ಕಿತ್ತೊಗೆಯುವುದು ಅಸಾಧ್ಯ. ವಿಧಾನಸೌಧದಿಂದಲೇ ಆರಂಭವಾಗುವ ಈ ಪಿಡುಗು ನಿವಾರಣೆಯನ್ನು ಸವಾಲಾಗಿ ಸ್ವೀಕರಿಸಿದ್ದೇನೆ. ಎಲ್ಲ ಹಂತಗಳಲ್ಲಿಯೂ ಭ್ರಷ್ಟಾಚಾರ ನಿಲ್ಲಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ," ಎಂದರು.

››08

# ಭ್ರಷ್ಟಾಚಾರ ನಿರ್ಮೂಲನೆ ಕಷ್ಟಸ್ವಾಮಿ

» ಮೊದಲ ಪುಟದಿಂದ

"ನನಗೆ ಹಣ ಮಾಡುವ ಉದ್ದೇಶ ಇಲ್ಲ, ಎಷ್ಟು ದಿನ ಬದುಕುತ್ತೇನೆ ಎಂಬುದೂ ಗೊತ್ತಿಲ್ಲ, ನನಗೆ ಎರಡು ಬಾರಿ ಹೃದಯ ಶಸ್ತ್ರಚಿಕಿತ್ಸೆ ಆಗಿದೆ. ಸಿಎಂ ಪದವಿ ಬೇಡ ಎಂದು ಹೇಳಿದ್ದೆ. ದೇವೇಗೌಡರು ಇದೇ ಮಾತು ಹೇಳಿದ್ದರು. ಆದರೆ ನೀವೇ ಸಿಎಂ ಆಗಬೇಕು ಎಂದು ಕಾಂಗ್ರೆಸ್‌ನವರು ಒತ್ತಾಯಿಸಿದರು. ಎಲ್ಲರ ಒತ್ತಾಯಕ್ಕೆ ಒಪ್ಪಿಕೊಂಡಿದ್ದೇನೆ. ಇರುವ ವ್ಯವಸ್ಥೆಯಲ್ಲೇ ಇದ್ದುಕೊಂಡು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತೇನೆ," ಎಂದು ನುಡಿದರು.



ಗಾಂಧಿಭವನದಲ್ಲಿ ಎಚ್.ಎಸ್. ದೊರೆಸ್ವಾಮಿ ಅವರೊಂದಿಗೆ ಸಿಎಂ ಚರ್ಚೆ.

**ಜನರ ಸಂಕಷ್ಟ ಅಧಿಕಾರಿಗಳಿಗೆ ಅರ್ಥವಾಗಿಲ್ಲ:** ಅಧಿಕಾರಿಗಳಿಗೆ ತಿಂಗಳಾರಂಭದಲ್ಲೇ ಸಂಬಳ ಸಿಗುತ್ತಿದೆ. ಸಾಲದ್ದಕ್ಕೆ ಈಗ ಆರನೇ ವೇತನ ಆಯೋಗದ ಶಿಫಾರಸು ಜಾರಿಯಾಗಿದೆ. ಪಡೆದ ಸಂಬಳಕ್ಕೆ ತಕ್ಕಂತೆ ಅಧಿಕಾರಿ, ನೌಕರರು ಕೆಲಸ ಮಾಡಬೇಕು. ಈ ಸಂಬಂಧ ಅಧಿಕಾರಿಗಳ ಸಭೆ ಕರೆದು ಸಲಹೆ ಕೊಡುತ್ತೇನೆ. ಇದುವರೆಗೂ ಭ್ರಷ್ಟಾಚಾರ ನಡೆಸಿದ್ದು ಸಾಕು. ಇನ್ನಾದರೂ ಜನರ ಕೆಲಸವನ್ನು ಪ್ರಮಾಣಿಕವಾಗಿ ಮಾಡಿ ಎಂದು ಸೂಚನೆ ನೀಡುತ್ತೇನೆ," ಎಂದು ಹೇಳಿದರು.

"ಸರಕಾರಿ ಶಾಲೆ ಉಳಿಸಲು ವಿಶೇಷ ಕ್ರಮ ಕೈಗೊಳ್ಳಲಾಗುವುದು. ಈ ಸಮಸ್ಯೆಗೆ ಸ್ಪಷ್ಟ ಪರಿಹಾರ ಒದಗಿಸಲು ನನ್ನದೇ ಆದ ಚಿಂತನೆಯನ್ನು ಕಾರ್ಯರೂಪಕ್ಕಿಳಿಸುವೆ. ಆರ್‌ಟಿಇ ವಿಚಾರದಲ್ಲಿ ಖಾಸಗಿ ಶಾಲೆಗಳ ಮೇಲೆ ಅಧಿಕಾರಿಗಳಿಗೆ ನಿಯಂತ್ರಣ ಇಲ್ಲದೆ ಜನ ಚಿತ್ರಹಿಂಸೆ ಅನುಭವಿಸುತ್ತಿದ್ದಾರೆ. ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು," ಎಂದು ಕುಮಾರಸ್ವಾಮಿ ಅಭಯ ನೀಡಿದರು.

ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಗಾಂಧಿವಾದಿಗಳಾದ ಎಚ್.ಹನುಮಂತಪ್ಪ, ಪಿ.ರಾಮಯ್ಯ, ಚನ್ನಮ್ಮ ಹಳ್ಳಿಕೇರಿ, ಗಾಂಧಿ ಭವನದ ಅಧ್ಯಕ್ಷ ವೊಡೆ ಪಿ. ಕೃಷ್ಣ ಮತ್ತಿತರರಿದ್ದರು.

## ಜಿಲ್ಲಾ ಭವನಗಳಿಗೆ ಭೂ ಮಂಜೂರು

ಮೂವತ್ತು ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಿಸುವ ಯೋಜನೆ ಜಾರಿಯಲ್ಲಿದೆ. ಇವುಗಳ ಪೈಕಿ ಜಮೀನಿನ ತೊಂದರೆ ಇರುವ ಸ್ಥಳಗಳಲ್ಲಿ ಭೂ ಮಂಜೂರಾತಿ ಹಾಗೂ ಅನುದಾನ ನೀಡಲಾಗುವುದು. ಗಾಂಧೀಜಿ ತತ್ವಗಳನ್ನು ಸರಕಾರದ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಲಾಗುವುದು. ಗಾಂಧಿ ಹಾಗೂ ಬಸವ ಹೆಸರಿನಲ್ಲಿ ಆಡಳಿತ ನಡೆಸುವೆ ಎಂದು ಸಿಎಂ ತಿಳಿಸಿದರು.



ದೇವೇಗೌಡರನ್ನು ಮನೆಯಲ್ಲೇ ಇರುವಂತೆ ತಾಕೀತು ಮಾಡಿದ್ದೇನೆಂಬ ಮಾಧ್ಯಮಗಳ ವರದಿ ಸುಳ್ಳು. ಅವರನ್ನು ಮನೆಯಲ್ಲಿ ಕೂರಿಸಿ ನಾನೊಬ್ಬನೇ ಆಡಳಿತ ನಡೆಸುವ ಪ್ರಶ್ನೆಯೇ ಇಲ್ಲ. ಉತ್ತಮ ಆಡಳಿತ ನೀಡಲು ಅವರ ಸಲಹೆ ಪಡೆಯುತ್ತೇನೆ.

**ಎಚ್.ಡಿ.ಕುಮಾರಸ್ವಾಮಿ**, ಸಿಎಂ

ಸೋಮವಾರ 11 ಜೂನ್ 2018
VIJAYAVANI » 11 JUNE 2018

# ದೀರ್ಘಕಾವ್ಯ ಬರೆಯುವವರಿಗೆ ಚುಟುಕು ಸಾಹಿತ್ಯ ಮೆಟ್ಟಿಲು

## ಶಿಕ್ಷಣತಜ್ಞ ಡಾ. ವೂಡೇ ಪಿ. ಕೃಷ್ಣ ಅಭಿಮತ » ಕಸಾಪದಲ್ಲಿ ಅದ್ದೂರಿಯಾಗಿ ನಡೆದ 11ನೇ ಚುಟುಕು ಸಾಹಿತ್ಯ ಸಮ್ಮೇಳನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಶೃಂಗಾರ ಪ್ರಣಯದ ಹೊರಕವಚದ ಒಳಗೆ ವ್ಯಂಗ್ಯ ವಿಡಂಬನೆಯ ಹೂರಣ ಹೊಂದಿರುವ ಚುಟುಕು ಸಾಹಿತ್ಯ ದೀರ್ಘ ಕಾವ್ಯ ಬರೆಯಲು ಮೆಟ್ಟಿಲು ಎಂದು ಶಿಕ್ಷಣತಜ್ಞ ಡಾ. ವೂಡೇ ಪಿ. ಕೃಷ್ಣ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಹನ್ನೊಂದನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದರು.

ಚುಟುಕು ಸಾಹಿತ್ಯದಲ್ಲಿ ಪನ್ ಮಾಡುತ್ತ ಪಂಚ್ ನೀಡಲಾಗುತ್ತದೆ. ಸೂರ್ಯನ ಕೆಳಗಿರುವ ಎಲ್ಲವೂ ಚುಟುಕು ಸಾಹಿತ್ಯದ ವಿಷಯ ವಸ್ತುವಾಗಿವೆ. ವ್ಯಂಗ್ಯದ ಮೊನಚು, ಮಾತಿನ ಜಾಣ್ಮೆ ಹಾಗೂ ಹಾಸ್ಯಮಯ ಶೈಲಿಯಿಂದ ಚೇತೋಹಾರಿ ಅನುಭವ ನೀಡುತ್ತದೆ. ಇನ್ನು ಮೂರೇ ಸಾಲಿನ ತ್ರಿಪದಿಗಳ ಜಾನಪದವು ಜೀವನಾನುಭವದ ಸಾರವನ್ನೇ ಭಟ್ಟಿ ಇಳಿಸಿದೆ. ದೀರ್ಘ ಕಾವ್ಯಕ್ಕೆ ಚುಟುಕು ಕಾವ್ಯ ಮೆಟ್ಟಿಲಾಗಿದ್ದು, ಉದಯೋನ್ಮುಖ ಕವಿಗಳ ಬೆಳವಣಿಗೆಗೆ ಸಹಾಯಕ ಎಂದು ಡಾ. ವೂಡೇ ಪಿ. ಕೃಷ್ಣ ಚುಟುಕು ಕಾವ್ಯದ ಮಹತ್ವ ವಿವರಿಸಿದರು.



ಹನ್ನೊಂದನೇ ಚುಟುಕು ಸಾಹಿತ್ಯ ಸಮ್ಮೇಳನವನ್ನು ಡಾ.ಎಂ.ಜಿ.ಆರ್. ಅರಸ್ ಉದ್ಘಾಟಿಸಿದರು. ಡಾ. ವೂಡೇ ಪಿ ಕೃಷ್ಣ, ಎನ್. ಷಡಕ್ಷರಿ, ವೈ.ವಿ. ಗುಂಡೂರಾವ್, ಎಂ. ತಿಮ್ಮಯ್ಯ ಮತ್ತಿತರರು ಉಪಸ್ಥಿತರಿದ್ದರು.

**ಹೃದಯ ಅರಳಿಸುವ ಶಕ್ತಿ:** ನಮ್ಮಲ್ಲಿನ ನೋವನ್ನು ದೂರಗೊಳಿಸಿ, ಹೃದಯವನ್ನು ಅರಳಿಸುವ ಶಕ್ತಿ ಚುಟುಕು ಸಾಹಿತ್ಯಕ್ಕಿದೆ. ಬ್ಯಾಂಕ್ ಉದ್ಯೋಗಿಗಳಿಂದ ರಸ್ತೆ ಬದಿಗೆ ಪಾನಿಪುರಿ ಮಾರುವವರು ಸಹ ಚುಟುಕು ಸಾಹಿತಿಗಳಾಗಬಹುದು. ಎಲ್ಲರಿಗೂ ಹಿತವೆನಿಸುವ ಈ ಸಾಹಿತ್ಯ ಪ್ರಕಾರ ನೊಂದ ಮನಸ್ಸಿಗೆ ಸಹ ಹಿತವಾದ ಅನುಭವ ನೀಡುತ್ತದೆ. ಬೆರಳಣಿಕೆಯಷ್ಟು ಸಾಲುಗಳಿಂದ ಕೂಡಿದ್ದರೂ ಸಮಾಜದ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಅನಾವರಣ ಮಾಡುತ್ತದೆ. ಮುಖ್ಯವಾಗಿ ಚುಟುಕು ಬದುಕಿಗೆ ಲಾಲಿತ್ಯ ನೀಡುತ್ತವೆ ಎಂದು ಚುಟುಕು ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿ ಅಧ್ಯಕ್ಷ ಡಾ.ಎಂ.ಜಿ.ಆರ್. ಅರಸ್ ಮೆಚ್ಚುಗೆ ವ್ಯಕ್ತಪಡಿಸಿದರು.

> ಚುಟುಕು ಸಾಹಿತ್ಯ ಕಡಿಮೆ ಪದದಲ್ಲಿ ಹೆಚ್ಚು ಅರ್ಥವನ್ನು ಹೊಂದಿರುತ್ತದೆ. ಎರಡು ಸಾಲುಗಳಲ್ಲಿ ಸಹ ಚುಟುಕು ಕವನವನ್ನು ರಚಿಸಲು ಸಾಧ್ಯ. ಆದರೆ, ಅದರಲ್ಲಿ ಪನ್ ಹಾಗೂ ಪಂಚ್ ಇರಬೇಕು.
>
> । ವೈ.ವಿ. ಗುಂಡೂರಾವ್ ಹಾಸ್ಯ ಲೇಖಕ


ಇದಕ್ಕೂ ಮೊದಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಅರವಿಂದ ಮಾಲಗತ್ತಿ ವಿರಚಿತ 'ಚುಟುಕು ಚಿಂತನ-ಕಾವ್ಯ ಮಂಥನ' ಕೃತಿಯನ್ನು ಮೈಸೂರಿನ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಚಂದ್ರಶೇಖರ್ ಬಿಡುಗಡೆ ಮಾಡಿದರು.

ರಮಣ ಶ್ರೀ ಸಮೂಹ ಸಂಸ್ಥೆ ಅಧ್ಯಕ್ಷ ಎನ್. ಷಡಕ್ಷರಿ, ಲೇಖಕ ವೈ.ವಿ. ಗುಂಡೂರಾವ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಮತ್ತಿತರರು ಉಪಸ್ಥಿತರಿದ್ದರು.

### ಚುಟುಕು ಸಾಹಿತ್ಯದ ಮೇಲೆ ಬೆಳಕು ಚೆಲ್ಲಿದ ಗೋಷ್ಠಿ

ಸಮ್ಮೇಳನದ ಭಾಗವಾಗಿ ಚುಟುಕು ಸಾಹಿತ್ಯಗೋಷ್ಠಿ ನಡೆಯಿತು. ಹಿರಿಯ ಸಾಹಿತಿ ಡಾ. ಗುರುಮೂರ್ತಿ ಪೆಂಡಕೂರು ಅಧ್ಯಕ್ಷತೆಯಲ್ಲಿ ನಡೆದ ಪ್ರಥಮ ಗೋಷ್ಠಿಯಲ್ಲಿ ಸಾಹಿತಿ ಡಾ. ಬೈರಮಂಗಲ ರಾಮೇಗೌಡ ಚುಟುಕು ಸಾಹಿತ್ಯ ನಡೆದು ಬಂದ ದಾರಿಯ ಬಗ್ಗೆ ವಿವರಿಸಿದರು. ಇನ್ನು ಚುಟುಕು ಸಾಹಿತ್ಯ ಭವಿಷ್ಯದಲ್ಲಿ ಎದುರಿಸಬೇಕಾದ ಸವಾಲಿನ ಬಗ್ಗೆ ಚಿಂತಕ ಕೆ. ರಾಜಕುಮಾರ್ ವಿಷಯ ಮಂಡಿಸಿದರು. ಬಳಿಕ ಸಾಹಿತಿ ಭಾಗ್ಯಲಕ್ಷ್ಮಿ ಮಗ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಚುಟುಕು ಕವಿಗೋಷ್ಠಿಯಲ್ಲಿ 50ಕ್ಕೂ ಅಧಿಕ ಕವಿಗಳು ಚುಟುಕು ಕವಿತೆ ವಾಚಿಸಿದರು.


ಸಂಯುಕ್ತ ಕರ್ನಾಟಕ
ಸೋಮವಾರ, 11, ಜೂನ್, 2018,



ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಶಿಕ್ಷಣ ತಜ್ಞವೂಡೆ ಪಿ ಕೃಷ್ಣ ಅಧ್ಯಕ್ಷತೆ ಸ್ವೀಕರಿಸಿದರು. ಈ ಸಂದರ್ಭದಲ್ಲಿ ವಿಜಯ ಸಮರ್ಥನ್ ಚಂದ್ರಶೇಖರ್, ರಮಣಶ್ರೀ ಶಿಕ್ಷಣ ಸಂಸ್ಥೆಯ ಷಡಕ್ಷರಿ, ವೈ.ವಿ ಗುಂಡೂರಾವ್ ಉಪಸ್ಥಿತರಿದ್ದರು.

ಸಂಜೆವಾಣಿ

ಸೋಮವಾರ, ಜೂನ್ 11, 2018



ಬೆಂಗಳೂರಿನ ಕುಮಾರ ಕೃಪಾ ರಸ್ತೆಯಲ್ಲಿರುವ ಗಾಂಧಿ ಭವನಕ್ಕೆ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಭೇಟಿ ನೀಡಿದ ವೇಳೆ ಗಾಂಧಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಈ ಸಂಜೆ

ಸೋಮವಾರ,11-06-2018



# ಪುಷ್ಪ ನಮನ..

ಗಾಂಧಿಭವನಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಗಾಂಧಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಅಧ್ಯಕ್ಷ ವೂಡೆ ಪಿ.ಕೃಷ್ಣ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಉದಯವಾಣಿ ಬೆಂಗಳೂರು
ಸೋಮವಾರ, ಜೂನ್ 11, 2018



ಚಾಮರಾಜಪೇಟೆಯ ಕಸಾಪದಲ್ಲಿ 11ನೇ ಚುಟುಕು ಸಾಹಿತ್ಯ ಸಮ್ಮೇಳನದ ಉದ್ಘಾಟನೆ ವೇಳೆ ರಾ.ವಿಜಯ ಸಮರ್ಥ, ಡಾ.ಎಂ.ಗಿ.ಆರ್.ಅರಸ್, ಡಾ.ವೂಡೆ ಪಿ. ಕೃಷ್ಣ ಎನ್.ಷಡಕ್ಷರಿ ಎಸ್.ವಿ.ಗುಂಡೂರಾವ್ ಇತರರಿದ್ದರು.

ವಿಜಯ ಕರ್ನಾಟಕ

ನಮ್ಮ ಬೆಂಗಳೂರು ಸೋಮವಾರ, 11 ಜೂನ್ 2018

# ದೀರ್ಘ ಕಾವ್ಯಕ್ಕೆ ಚುಟುಕು ಮೆಟ್ಟಿಲಾಗಲಿ

## ಡಾ.ವೂಡೇ ಪಿ. ಕೃಷ್ಣ ಅಭಿಮತ। 11ನೇ ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನ

▪ ವಿಕ ಸುದ್ದಿಲೋಕ ಬೆಂಗಳೂರು

ದೀರ್ಘಕಾವ್ಯ ಬರೆಯಲು ಚುಟುಕು ಕಾವ್ಯವನ್ನು ಮೆಟ್ಟಿಲು ಮಾಡಿಕೊಳ್ಳಬೇಕು ಎಂದು 11ನೇ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅಭಿಪ್ರಾಯಪಟ್ಟರು.

ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ವತಿಯಿಂದ ಭಾನುವಾರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದ 11ನೇ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

''ಡಿವಿಜಿ ಅವರ ಮಂಕುತಿಮ್ಮನ ಕಗ್ಗ, ಜಿ.ಪಿ.ರಾಜರತ್ನಂ ಅವರ ರತ್ನನ ಪದಗಳು ಕನ್ನಡಾಭಿಮಾನವನ್ನು ಬೆಸೆದು ಜೀವನದರ್ಶನ ನೀಡುವ ಮಿನಿ ಕಾವ್ಯಗಳು. ಅಂತಹ ಕಾವ್ಯಗಳು ಹೊರಹೊಮ್ಮಬೇಕಾದರೆ ಯುವ ಚುಟುಕು ಸಾಹಿತಿಗಳು ಅವರ ಬರಹವನ್ನು ಹೆಚ್ಚೆಚ್ಚು ಅಧ್ಯಯನ ಮಾಡಬೇಕು'' ಎಂದರು.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ 11ನೇ ಚುಟುಕು ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಎನ್.ಷಡಕ್ಷರಿ, ಡಾ.ವೂಡೇ ಪಿ.ಕೃಷ್ಣ ಮತ್ತಿತರರು ಇದ್ದರು.

ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿದ ಚುಟುಕು ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿ ಅಧ್ಯಕ್ಷಡಾ.ಎಂ.ಜಿ.ಆರ್. ಅರಸ್, ''ನಮ್ಮಲ್ಲಿನ ನೋವನ್ನು ದೂರಗೊಳಿಸಿ, ಹೃದಯವನ್ನು ಅರಳಿಸುವ ಶಕ್ತಿ ಚುಟುಕು ಸಾಹಿತ್ಯಕ್ಕಿದೆ. ಬ್ಯಾಂಕ್ ಉದ್ಯೋಗಿಗಳಿಂದ ಹಿಡಿದು ರಸ್ತೆ ಬದಿ ಪಾನಿಪುರಿ ಮಾರುವವರು ಸಹ ಚುಟುಕು ಸಾಹಿತಿಗಳಾಗಬಹುದು,'' ಎಂದರು.

'ಭವಿಷ್ಯದಲ್ಲಿ ಚುಟುಕು ಸಾಹಿತ್ಯ' ಕುರಿತು ವಿಚಾರ ಮಂಡಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಬೈರಮಂಗಲ ರಾಮೇಗೌಡ, ''ಇತ್ತೀಚಿನ ಚುಟುಕು ಸಾಹಿತಿಗಳು ರಚಿಸಿರುವ ಚುಟುಕುಗಳು ಧಾಳಾಗಿ ಕಾಣುತ್ತವೆ. ಆದರೆ, ವರ್ತಮಾನಕ್ಕೆ ಸ್ಪಂದಿಸುವ, ಭಾವನೆಗಳಿಗೆ ಕಚಗುಳಿ ಇಡುವ ನವಿರಾದ ಭಾವನೆ ಹುಟ್ಟಿಸುವ ಚುಟುಕುಗಳು ಅತ್ಯಂತ ಕಡಿಮೆ,''ಎಂದು ಹೇಳಿದರು.

'ಚುಟುಕು ಸಾಹಿತ್ಯ ನಡೆದು ಬಂದ ದಾರಿ' ಕುರಿತು ಸಾಹಿತಿ ಡಾ.ಗುರುಮೂರ್ತಿ ಪೆಂಡಕೂರು ವಿಚಾರ ಮಂಡಿಸಿದರು. ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ವಿಜಯ ಸಮರ್ಥ, ಹಾಸ್ಯ ಲೇಖಕ ಎಸ್.ವಿ.ಗುಂಡೂರಾವ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ರತ್ನ ಹಾಲಪ್ಪ, ಚಿಂತಕ ಕೆ. ರಾಜಕುಮಾರ್ ಮತ್ತಿತರರು ಉಪಸ್ಥಿತರಿದ್ದರು. 90 ಕವಿಗಳು ಚುಟುಕು ಕಾವ್ಯ ವಾಚಿಸಿದರು.

ವಿಶ್ವವಾಣಿ


ಬೆಂಗಳೂರು
vishwavaninews
11.06.2018 ಸೋಮವಾರ

# ಪ್ರಾಚೀನ ಗ್ರಂಥಗಳು ಖಾಲಿಯಾಗದ ಗಣಿಗಳು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಮಾಯಣ, ಮಹಾಭಾರತ ನಮ್ಮ ಕಾವ್ಯ ಕೃತಿಗೆ ಅಕ್ಷಯ ಭಂಡಾರಗಳಂತೆ. ಖಾಲಿಯಾ ಸೃಜನಶೀಲ ಗಣಗಳು ಎಂದು 11ನೇ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದ 11ನೇ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿ, ಈ ಸುದೀರ್ಘ ಸಾಹಿತ್ಯ ಚರಿತ್ರೆಯಲ್ಲಿ ಚುಟುಕು ಎಂಬ ಕಾವ್ಯ ಪ್ರಕಾರದ ಅಸ್ತಿತ್ವ ಹುಡುಕಬೇಕಿದೆ. ಮಹಾಕಾವ್ಯ ರಚನೆಯ ತಯಾರಿಯಾಗಿ ಖಂಡ ಕಾವ್ಯ, ದೀರ್ಘಕಾವ್ಯ ಬರೆಯಲು ಚುಟುಕು ಕಾವ್ಯವನ್ನು ಮೆಟ್ಟಿಲು ಮಾಡಿಕೊಳ್ಳಬೇಕು. ಆಗ, ಅಂತಹವರ ಕಾವ್ಯ ಸುಭದ್ರ ತಳಹದಿಯ ಮೇಲೆ ಬೆಳೆಯಲು ಸಹಾಯಕವಾಗುತ್ತದೆ ಎಂದು ಸಲಹೆ ನೀಡಿದರು.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದ 11ನೇ ಚುಟುಕು ಸಾಹಿತ್ಯ ಸಮ್ಮೇಳನವನ್ನು 'ವಿಶ್ವವಾಣಿ' ಅಂಕಣಕಾರ ಎಸ್.ಷಡಕ್ಷರಿ ಅವರು ಕನ್ನಡ ಬಾವುಟ ಹಸ್ತಾಂತರಿಸುವ ಮೂಲಕ ಉದ್ಘಾಟಿಸಿದರು. ಡಾ. ವೂಡೇ ಪಿ.ಕೃಷ್ಣ ಮತ್ತಿತರರು ಇದ್ದರು.

ಅಂದು ಆ ಸುದೀರ್ಘ ಕಾವ್ಯಗಳನ್ನು ಓದಲು ಜನರಿಗೆ ಸಮಯವಿತ್ತು. ಆದರೆ, ಇಂದಿನ ಧಾವಂತ ಬದುಕಿನಲ್ಲಿ ಬಿಡುವು ಎಂಬುದು ಮರೀಚಿಕೆಯಾಗಿದೆ. ಜನರು ಹಣದ ಹಿಂದೆ ಬಿದ್ದಿದ್ದು, ಅವರಿಗೆ ಕಾವ್ಯ ಓದುವ ವ್ಯವಧಾನವೇ ಇಲ್ಲ ಎಂದರು.

ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ವಿಜಯ ಸಮರ್ಥ, ಹಾಸ್ಯ ಲೇಖಕ ಎಸ್.ವಿ.ಗುಂಡೂರಾವ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ರತ್ನ ಹಾಲಪ್ಪ, ಚಿಂತಕ ಕೆ. ರಾಜಕುಮಾರ್ ಮತ್ತಿತರರು ಇದ್ದರು. 90 ಕವಿಗಳು ಚುಟುಕು ಕಾವ್ಯ ವಾಚಿಸಿದರು. ಅಂಕಣಕಾರ ಎಸ್.ಷಡಕ್ಷರಿ ಇದ್ದರು.

**ನೊಂದ ಮನಸ್ಸಿಗೆ ಹಿತಾನುಭವ:** ನಮ್ಮಲ್ಲಿನ ನೋವನ್ನು ದೂರ ಮಾಡಿ ಹೃದಯ ಅರಳಿಸುವ ಶಕ್ತಿ ಚುಟುಕು ಸಾಹಿತ್ಯಕ್ಕಿದೆ. ಎಂತವರಾದರೂ ಚುಟುಕು ಸಾಹಿತಿಗಳಾಗಬಹುದು. ಈ ಸಾಹಿತ್ಯ ಪ್ರಕಾರ ನೊಂದ ಮನಸ್ಸಿಗೆ ಸಹ ಹಿತವಾದ ಅನುಭವ ನೀಡುತ್ತದೆ.

ಬೆರಳಣಿಕೆಯಷ್ಟು ಸಾಲುಗಳಿಂದ ಕೂಡಿದ್ದರೂ ಸಮಾಜದ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಅನಾವರಣ ಮಾಡುತ್ತದೆ. ಮುಖ್ಯವಾಗಿ ಚುಟುಕು ಸಾಹಿತ್ಯಕ್ಕೆ ಬದುಕಿಗೆ ಲಾಲಿತ್ಯ ನೀಡುವ ಶಕ್ತಿಯಿದೆ ಎಂದು ಚುಟುಕು ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿ ಅಧ್ಯಕ್ಷ ಡಾ. ಎಂ.ಜಿ.ಆರ್.ಅರಸ್ ತಿಳಿಸಿದರು.

11-06-2018

## ಭ್ರಷ್ಟಾಚಾರ ನಿರ್ಮೂಲನೆ ಕಷ್ಟ: ಎಚ್‌.ಡಿ.ಕುಮಾರಸ್ವಾಮಿ

# 'ನನಗೆ ಹಣ ಮಾಡುವ ಹುಚ್ಚು ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ಸಂಪೂರ್ಣ ನಿರ್ಮೂಲನೆ ಮಾಡಲು ಹೋದರೆ, ನನ್ನನ್ನು ಅಧಿಕಾರದಲ್ಲಿ ಮುಂದುವರಿಯಲು ಪಟ್ಟಭದ್ರರು ಬಿಡುವುದಿಲ್ಲ' ಎಂದು ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಸೋಮವಾರ ನಗರದ ಗಾಂಧಿ ಭವನದಲ್ಲಿ ಮಾತನಾಡಿ, 'ನನಗೆ ಹಣ ಮಾಡುವ ಹುಚ್ಚು ಇಲ್ಲ. ಎರಡು ಬಾರಿ ಶಸ್ತ್ರಚಿಕಿತ್ಸೆ ಆಗಿದೆ. ಎಷ್ಟು ದಿನ ಬದುಕುತ್ತೇನೊ ಗೊತ್ತಿಲ್ಲ' ಎಂದು ಹೇಳಿದರು.

'ಯಾವ ಇಲಾಖೆ ಹೇಗೆ ನಡೆಯುತ್ತಿದೆ. ಅಲ್ಲಿ ಹೇಗೆ ಲೂಟಿ ನಡೆಯುತ್ತಿದೆ ಎಂಬುದನ್ನು ಕಳೆದ ಒಂದು ತಿಂಗಳಿನಿಂದ ನೋಡಿದ್ದೇನೆ. ನನಗಿರುವ ಮಾಹಿತಿ ಅಧಿಕಾರಿಗಳಿಗೆ ಇಲ್ಲ. ಬೇರು ಬಿಟ್ಟಿರುವ ಭ್ರಷ್ಟಾಚಾರವನ್ನು ಪೂರ್ಣವಾಗಿ ಮುಕ್ತಗೊಳಿಸುವುದು ಸುಲಭವಲ್ಲ. ಅಧಿಕಾರಿ ಮತ್ತು ನೌಕರರ ವರ್ಗಾವಣೆಯಿಂದಲೇ ಭ್ರಷ್ಟಾಚಾರ ಆರಂಭವಾಗುತ್ತದೆ. ಪ್ರತಿ ವರ್ಗಾವಣೆಗೆ ₹5 ಲಕ್ಷದಿಂದ ₹10 ಲಕ್ಷ ನಡೆಯುತ್ತಿದೆ' ಎಂದು ಅವರು ಹೇಳಿದರು.

ಶೃಂಗೇರಿ ಜಗದ್ಗುರುಗಳು, ಭ್ರಷ್ಟಾಚಾರ ನಿಲ್ಲಿಸಿ ಎಂದರು. ನನ್ನ ಮಟ್ಟದಲ್ಲಿ ನಿಲ್ಲಿಸುತ್ತೇನೆ. ಆದರೆ ವ್ಯಾಪಕವಾಗಿರುವ ಭ್ರಷ್ಟಾಚಾರ ತಡೆಯಲು ಕಷ್ಟ ಇದೆ ಎಂದೂ ಕುಮಾರಸ್ವಾಮಿ ಹೇಳಿದರು.

ನಾನು ಸ್ವಚ್ಛ ಆಗಿ ಇಲ್ಲದಿದ್ದರೆ ಕೂರುವುದಿಲ್ಲ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಪೂರ್ಣ ಬಹುಮತವಿಲ್ಲದೆ ಭ್ರಷ್ಟಾಚಾರ ನಿರ್ಮೂಲನೆ ಮಾಡುವುದು ಕಷ್ಟ. ಆಡಳಿತ ಚುರುಕುಗೊಳಿಸಲು ಎರಡು-ಮೂರು ದಿನಗಳಲ್ಲಿ ಸಭೆಯನ್ನು ಕರೆಯುವುದಾಗಿ ಅವರು ಹೇಳಿದರು.

'ಇಲ್ಲಿಯವರೆಗೆ ಯಾರು ಏನು ಮಾಡಿದ್ದಾರೋ, ಇನ್ನು ಮುಂದಾದರೂ ಸರಿಯಾಗಿರಿ ಎಂದರೆ ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ. ವೇತನ ಆಯೋಗವೂ ಶಿಫಾರಸಿನಂತೆ ಕೈತುಂಬಾ ಸಂಬಳ ಸಿಗುತ್ತಿದೆ. ಕೆಳಹಂತದ ಜನರ ಬಗ್ಗೆ ಪ್ರಾಮಾಣಿಕವಾಗಿ ಯೋಚನೆ ಮಾಡಬೇಕಲ್ಲವೆ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.



ಜನತಾ ದರ್ಶನದಲ್ಲಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರು ಕುರ್ಚಿ ಹಾಕಿಕೊಂಡು ಕುಳಿತು ಅರ್ಜಿ ಸ್ವೀಕರಿಸಿದರು. ಬೆಳಿಗ್ಗೆಯಿಂದಲೇ ಕೃಷ್ಣಾ ಬಳಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ಮಧ್ಯಾಹ್ನದ ಬಳಿಕವೂ ಜನ ದಟ್ಟಣೆ ಕಡಿಮೆ ಆಗದ ಕಾರಣ ಕುಮಾರಸ್ವಾಮಿ ಅರ್ಜಿ ಸ್ವೀಕರಿಸಲು ಕುಳಿತುಕೊಂಡರು –ಪ್ರಜಾವಾಣಿ ಚಿತ್ರ

> ನಿಮಗೆ ಟಿ. ಆರ್. ಪಿ ಬೇಕಾಗಿರಬಹುದು. ಆದರೆ, ಸಮಾಜಕ್ಕೆ ಮತ್ತು ಸರ್ಕಾರಕ್ಕೆ ಶಾಂತಿ ಬೇಕು
>
> ಎಚ್‌.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ

### 'ಕಾಂಗ್ರೆಸ್ ಹಠದಿಂದ ಸಿ.ಎಂ ಆದೆ'

'ಸಮ್ಮಿಶ್ರ ಸರ್ಕಾರ ರಚನೆ ಸಂದರ್ಭ ಮುಖ್ಯಮಂತ್ರಿ ಆಗಲು ನನಗೆ ಇಷ್ಟ ಇರಲಿಲ್ಲ. ಆದರೆ, ಕಾಂಗ್ರೆಸ್‌ನವರೇ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಬೇಕು ಅಂತಾ ಪಟ್ಟು ಹಿಡಿದರು' ಎಂದು ಕುಮಾರಸ್ವಾಮಿ ಹೇಳಿದರು.

'ನಾನು ಮುಖ್ಯಮಂತ್ರಿ ಆಗೋದು ಬೇಡ ಎಂದು ನಮ್ಮ ತಂದೆಯವರೂ ಹೇಳಿದ್ದರು. ಈ ಸಂಬಂಧ ಕಾಂಗ್ರೆಸ್ ಹೈಕಮಾಂಡ್ ಬಳಿ ಅವರು ಮಾತನಾಡಿ, ಮಗನ ಆರೋಗ್ಯ ಸರಿ ಇಲ್ಲ, ಎರಡು ಸಲ ಹೃದಯ ಶಸ್ತ್ರ ಚಿಕಿತ್ಸೆ ಆಗಿದೆ. ನಿಮ್ಮವರೇ ಮುಖ್ಯಮಂತ್ರಿ ಆಗಲಿ ಎಂದರು, ಕಾಂಗ್ರೆಸ್ ಒಪ್ಪಲಿಲ್ಲ' ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರ ಎಚ್‌.ಎಸ್‌. ದೊರೆಸ್ವಾಮಿ ಮಾತನಾಡಿ, ಕುಮಾರಸ್ವಾಮಿ ಅವರದು ಸ್ಥಿರವಾದ ಮನಸ್ಸು. ಎಂಥ ಅಗ್ನಿಪರ್ವತ ಸಿಡಿದರೂ ಉದ್ರೇಕರಾಗುವುದಿಲ್ಲ. ಈ ಮೊದಲು ಇದ್ದದ್ದಕ್ಕಿಂತ ಹೆಚ್ಚು ಅನುಭವ ಕುಮಾರಸ್ವಾಮಿ ಅವರಿಗಿದೆ ಎಂದು ಹೇಳಿದರು.

'ಮಂತ್ರಿ ಸ್ಥಾನ ಅವರಪ್ಪನ ಆಸ್ತಿ ಅಲ್ಲ. ಆದ್ದರಿಂದ ಕೆಲವರು ಪ್ರತಿಭಟನೆ ಮಾಡುತ್ತಾರೆ. ಕೆಲವರು ಪ್ರಪಂಚವನ್ನೇ ಕಳೆದುಕೊಂಡವರಂತೆ ಆಡುತ್ತಿದ್ದಾರೆ. ಬೆದರಿಕೆ ಹಾಕುತ್ತಿದ್ದಾರೆ. ಇಂತಹ ನಡವಳಿಕೆ ಪ್ರಜಾಪ್ರಭುತ್ವದಲ್ಲಿ ಶೋಭೆ ತರುವುದಿಲ್ಲ. ಶಾಸನ ಸಭೆಯನ್ನು ಕಡಿಸುವ ಕೆಲಸ ಮಾಡಬೇಡಿ. ಸರ್ಕಾರ ಬಿದ್ದು ಹೋಗುವುದಿಲ್ಲ, ಮುಂದೆ ಸರಿ ಹೋಗುತ್ತದೆ' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಕರ್ತ ಪಾಟೀಲ ಪುಟ್ಟಪ್ಪ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಪತ್ರಕರ್ತ ಪಿ. ರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ, ಹಿರಿಯ ಕಾಂಗ್ರೆಸ್ ಮುಖಂಡ ಹನುಮಂತಪ್ಪ ಇದ್ದರು.

## ಪರಿಷತ್: ಇಂದು ಮತ ಎಣಿಕೆ

ಬೆಂಗಳೂರು: ವಿಧಾನ ಪರಿಷತ್ತಿನ ಬೆಂಗಳೂರು ಪದವೀಧರರ ಹಾಗೂ ಆಗ್ನೇಯ ಶಿಕ್ಷಕರ ಕ್ಷೇತ್ರದ ಮತ ಎಣಿಕೆ ಇದೇ 12ರಂದು ಬೆಳಿಗ್ಗೆ 8ರಿಂದ ನಗರದ ಆರ್‌.ಸಿ. ಕಾಲೇಜಿನಲ್ಲಿ ನಡೆಯಲಿದೆ. ಪದವೀಧರರ ಕ್ಷೇತ್ರದಲ್ಲಿ 22 ಹುರಿಯಾಳುಗಳಿದ್ದು, ಅ.ದೇವೇಗೌಡ (ಬಿಜೆಪಿ), ಅಚ್ಚೇಗೌಡ ಶಿವಣ್ಣ (ಜೆಡಿಎಸ್) ಹಾಗೂ ರಾಮೋಜಿ ಗೌಡ (ಕಾಂಗ್ರೆಸ್) ಅವರ ಭವಿಷ್ಯ ನಿರ್ಧಾರವಾಗಲಿದೆ. ಮತ ಎಣಿಕೆ ತಡ ರಾತ್ರಿವರೆಗೂ ನಡೆಯುವ ಸಾಧ್ಯತೆ ಇದೆ. ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ವೈ.ಎ.ನಾರಾಯಣಸ್ವಾಮಿ (ಬಿಜೆಪಿ), ರಮೇಶ್ ಬಾಬು (ಜೆಡಿಎಸ್) ಹಾಗೂ ಎಂ. ರಾಮಪ್ಪ (ಕಾಂಗ್ರೆಸ್) ಅವರ ಭವಿಷ್ಯ ನಿರ್ಧಾರವಾಗಲಿದೆ.

## ಜಿ.ಟಿ.ದೇವೇಗೌಡ ಖಾತೆ ಬದಲು ಸಾಧ್ಯತೆ

ಬೆಂಗಳೂರು: ಜೆಡಿಎಸ್ ಸಚಿವ ಜಿ.ಟಿ. ದೇವೇಗೌಡ ಅವರಿಗೆ ನೀಡಲಾಗಿರುವ ಉನ್ನತ ಶಿಕ್ಷಣ ಖಾತೆ ಬದಲಿಸುವ ಸಾಧ್ಯತೆ ಯಿದೆ ಎಂದು ಮೂಲಗಳು ತಿಳಿಸಿವೆ.

ಎಚ್‌.ಡಿ.ಕುಮಾರಸ್ವಾಮಿ ಮತ್ತು ಎಚ್‌.ಡಿ.ದೇವೇಗೌಡ ಈ ಸಂಬಂಧ ಜಿ.ಟಿ.ದೇವೇಗೌಡರ ಜತೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಾವು ಎಂಟನೇ ತರಗತಿಯವರೆಗೆ ಶಿಕ್ಷಣ ಪಡೆದಿದ್ದು, ಉನ್ನತ ಶಿಕ್ಷಣ ಖಾತೆ ನೀಡಿರುವ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ನಡೆಯುತ್ತಿದ್ದು, ಮುಜುಗರ ಆಗುತ್ತಿದೆ. ಖಾತೆಯನ್ನು ಸಮರ್ಥವಾಗಿ ನಿಭಾಯಿಸುವುದೂ ಕಷ್ಟವಾಗಬಹುದು ಎಂದು ಜಿ.ಟಿ.ದೇವೇಗೌಡ ಹೇಳಿದ್ದು, ಅವರು ನೀಡಿರುವ ಕಾರಣ ವರಿಷ್ಠರಿಗೆ ಮನವರಿಕೆ ಆಗಿದೆ. ಒಂದೆರಡು ದಿನಗಳಲ್ಲಿ ತೀರ್ಮಾನ ಪ್ರಕಟವಾಗಲಿದೆ.

Bengaluru

ಪ್ರಜಾವಾಣಿ 11.6.2018

Bengaluru

ಸಂಜೆವಾಣಿ
ಭಾನುವಾರ, ಜೂನ್ 10, 2018



ನಗರದ ಕಸಪಾದಲ್ಲಿಂದು ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಡಾ.ವೂಡೆ ಪಿ.ಕೃಷ್ಣ ರವರು ಅಧಿಕಾರ ಸ್ವೀಕರಿಸಿದರು. ವಿಜಯ ಸಮರ್ಥನ್, ಚಂದ್ರಶೇಖರ್, ಗುಂಡೂರಾವ್ ಷಡಕ್ಷರಿ, ರತ್ನ ಮತ್ತಿತರರು ಇದ್ದಾರೆ.

ಭಾನುವಾರ, 10-6-2018



ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ನಗರದಲ್ಲಿಂದು ಹಮ್ಮಿಕೊಂಡಿದ್ದ ಚುಟುಕು ಸಾಹಿತ್ಯ ಸಮ್ಮೇಳನವನ್ನು ಡಾ. ಎಂ. ಜೆ. ಅರಸ್ ಉದ್ಘಾಟಿಸಿದರು. ಸಮ್ಮೇಳನಾಧ್ಯಕ್ಷ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ಸಾಹಿತಿ ಜರಗನಹಳ್ಳಿ ಶಿವಶಂಕರ್, ಪರಿಷತ್‌ನ ಜಿಲ್ಲಾಧ್ಯಕ್ಷ ವಿಜಯ ಸಾಮರ್ಥ್ಯ, ಉದ್ಯಮಿ ಎನ್. ಷಡಕ್ಷರಿ, ಹಾಸ್ಯ ಲೇಖಕ ಎಸ್. ವಿ. ಗುಂಡೂರಾವ್ ಮತ್ತಿತರರು ಪಾಲ್ಗೊಂಡಿದ್ದರು.

ಪ್ರಜಾವಾಣಿ
ಶನಿವಾರ • ಜೂನ್ 2, 2018



ಪೀಣ್ಯದಾಸರಹಳ್ಳಿಯ ಸೌಂದರ್ಯ ಕಾಲೇಜಿನಲ್ಲಿ ಸ್ವಾಗತ ಸಮಾರಂಭವನ್ನು ಶೇಷಾದ್ರಿಪುರ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಉದ್ಘಾಟಿಸಿದರು

# 'ಋಣ ಅಭಿವೃದ್ಧಿಗೆ ಬಳಸಿ'

ಬೆಂಗಳೂರು: 'ಋಷಿಋಣ, ದೇವಋಣ, ಪಿತೃಋಣ, ಪ್ರಕೃತಿ ಋಣಗಳನ್ನು , ತೀರಿಸಲಾಗದು. ಅವುಗಳನ್ನು ನಮ್ಮ ಸರ್ವತೋಮುಖ ಅಭಿವೃದ್ಧಿಗೆ ಬಳಸಿಕೊಳ್ಳಬೇಕು' ಎಂದು ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಹೇಳಿದರು.

ಪೀಣ್ಯದಾಸರಹಳ್ಳಿಯ ಸಮೀಪ ಹಾವನೂರು ಬಡಾವಣೆಯ ಸೌಂದರ್ಯ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 2018-19ರ ಪ್ರಥಮ ಪಿಯು ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸಿನಿಮಾ, ಸೆಲ್‌ಫೋನ್, ಕಂಪ್ಯೂಟರ್ ಎಂಬ ಮೂರು 'ಸಿ'ಗಳನ್ನು ಅರಿತು ಬಳಸಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ ಮಾತನಾಡಿ, 'ಪೋಷಕರು ಮಕ್ಕಳನ್ನು ಗಿಡದಂತೆ ಪೋಷಿಸಬೇಕು. ಹೇಗೆ ಗಿಡಕ್ಕೆ ನೀರು, ನೆರಳು, ಗೊಬ್ಬರದ ಜತೆಗೆ ಬೇಲಿಯೂ ಅಗತ್ಯವಿದೆಯೋ ಅದರಂತೆ ಪೋಷಕರಿರಬೇಕು' ಎಂದರು.

ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೀರ್ತನ್ ಕುಮಾರ್, ಟ್ರಸ್ಟ್ ವ್ಯವಸ್ಥಾಪಕ ನಿರ್ದೇಶಕಿ ಸುನೀತಾ ಪಿ.ಮಂಜಪ್ಪ, ಟ್ರಸ್ಟಿ ವರುಣ್ ಕುಮಾರ್, ಪ್ರಾಂಶುಪಾಲರಾದ ಸುರೇಶ ತುಂಗ, ಉಪ ಪ್ರಾಂಶುಪಾಲ ಕೃಪ ಆರ್. ದೇವ್ ಇದ್ದರು.

ಚುಟುಕು ಸಾಹಿತ್ಯ – ಬದುಕಿಗೆ ಲಾಲಿತ್ಯ

# ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು



ನಂ.೨೬೮, ೬ನೇ ಮುಖ್ಯ ರಸ್ತೆ, ವಿ.ವಿ.ನಗರ, ಹೆಚ್.ಎಂ.ಟಿ.ಬಡಾವಣೆ, ಆರ್.ಟಿ.ನಗರ ಅಂಚೆ, ಬೆಂಗಳೂರು-560 032

ದೂರವಾಣಿ: 9880019693,9845132136, 7406318816

## ಹನ್ನೊಂದನೇ ಚುಟುಕು ಸಾಹಿತ್ಯ ಸಮ್ಮೇಳನ



ಡಾ॥ ಎಂ.ಜಿ.ಆರ್. ಅರಸ್
ಚುಟುಕು ಸಾಹಿತ್ಯ ಪರಿಷತ್ತು
ಕೇಂದ್ರ ಸಮಿತಿ, ಮೈಸೂರು



ಶಿಕ್ಷಣ ತಜ್ಞ
ಡಾ. ವೂಡೇ ಪಿ.ಕೃಷ್ಣ
ಸಮ್ಮೇಳನದ ಸರ್ವಾಧ್ಯಕ್ಷರು



ಚುಟುಕು ರತ್ನ
ಶ್ರೀ ಜರಗನಹಳ್ಳಿ ಶಿವಶಂಕರ್
ಸಮಾರೋಪ ಭಾಷಣ



ಶ್ರೀ. ರಾ. ವಿಜಯಸಮರ್ಥ
ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ
ಚುಟುಕು ಸಾಹಿತ್ಯ ಪರಿಷತ್ತು

ದಿನಾಂಕ 10.06.2018ನೇ ಭಾನುವಾರ

ಸ್ಥಳ: ದಿನಕರ ದೇಸಾಯಿ ಮಹಾ ವೇದಿಕೆ

ಶ್ರೀ ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು

ಬೆಳಿಗ್ಗೆ 8.30ಕ್ಕೆ ಸಮ್ಮೇಳನಾಧ್ಯಕ್ಷರ ಕನ್ನಡ ಜಾಗೃತಿ ಮೆರವಣಿಗೆ

ಚಾಮರಾಜಪೇಟೆ ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ ವೃತ್ತದಲ್ಲಿರುವ ಡಿ.ವಿ.ಜಿ. ಪ್ರತಿಮೆಯಿಂದ
5ನೇ ಮುಖ್ಯ ರಸ್ತೆ ಮುಖಾಂತರ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣ ತಲುಪುವುದು

ಮೆರವಣಿಗೆಗೆ ಚಾಲನೆ ನೀಡುವವರು: ಶ್ರೀಯುತ ಟಿ.ಎ.ಪಿ.ನಾಗರಾಜ್, ಸಮಾಜ ಸೇವಕರು

ಸಹಕಾರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

### ಬೆಳಗ್ಗೆ 10.00 ಘಂಟೆಗೆ ಕಾರ್ಯಕ್ರಮ ಉದ್ಘಾಟನೆ

ನಾಡಗೀತೆ: ಜಯನಗರ ವಾಸವಿ ಮಹಿಳಾ ಮಂಡಳಿ ಸದಸ್ಯೆಯರಿಂದ

ಪ್ರಾಸ್ತಾವಿಕ: ಶ್ರೀ. ರಾ.ವಿಜಯ ಸಮರ್ಥ, ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು

ಉದ್ಘಾಟನೆ: ಡಾ॥ ಎಂ.ಜಿ.ಆರ್.ಅರಸ್, .ಚುಟುಕು ಸಾಹಿತ್ಯ ಪರಿಷತತು ಕೇಂದ್ರ ಸಮಿತಿ, ಮೈಸೂರು

ಪ್ರೊ. ಅರವಿಂದ ಮಾಲಗತ್ತಿ, ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡಮಿ ಇವರ

"ಚುಟುಕು ಚಿಂತನ – ಕಾವ್ಯ ಮಂಥನ" ಕೃತಿ ಲೋಕಾರ್ಪಣೆ:

ಶ್ರೀ ಎಂ.ಚಂದ್ರಶೇಖರ್, ಅಧ್ಯಕ್ಷರು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಮೈಸೂರು

ಸಮ್ಮೇಳನಾಧ್ಯಕ್ಷರ ಭಾಷಣ

ಮುಖ್ಯ ಅತಿಥಿಗಳು: ಶ್ರೀ ರವಿ ಸುಬ್ರಹ್ಮಣ್ಯ, ಶಾಸಕರು

ಶ್ರೀ ಎಸ್.ಷಡಕ್ಷರಿ, ಅಧ್ಯಕ್ಷರು, ರಮಣಶ್ರೀ ಸಮೂಹ ಸಂಸ್ಥೆಗಳು

ಶ್ರೀ ವೈ.ವಿ.ಗುಂಡೂರಾವ್, ಹಾಸ್ಯ ಲೇಖಕರು

ಶ್ರೀ ಎಂ.ತಿಮ್ಮಯ್ಯ, ಅಧ್ಯಕ್ಷರು, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ

ಕಾರ್ಯಕ್ರಮ ನಿರ್ವಹಣೆ: ಶ್ರೀ ಡಿ.ಹೆಚ್.ಎಂ.ವೀರಶೇಖರಸ್ವಾಮಿ

ಸ್ವಾಗತ: ಶ್ರೀ ನೇ.ಭ.ರಾಮಲಿಂಗಶೆಟ್ಟಿ, ವಂದನಾರ್ಪಣೆ: ಶ್ರೀ ಬಿ.ಶೃಂಗೇಶ್ವರ

### ಗೋಷ್ಠಿ – 1: ಮಧ್ಯಾಹ್ನ 2.00 ಘಂಟೆಗೆ

ಅಧ್ಯಕ್ಷತೆ: ಡಾ॥ ಗುರುಮೂರ್ತಿ ಪೆಂಡಕೂರು, ಹಿರಿಯ ಸಾಹಿತಿಗಳು

ವಿಷಯ: ಚುಟುಕು ಸಾಹಿತ್ಯ ನಡೆದು ಬಂದ ದಾರಿ

ವಿಚಾರ ಮಂಡನೆ : ಡಾ॥ ಬೈರಮಂಗಲ ರಾಮೇಗೌಡ, ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡಮಿ

ವಿಷಯ: ಭವಿಷ್ಯದಲ್ಲಿ ಚುಟುಕು ಸಾಹಿತ್ಯ

ವಿಚಾರ ಮಂಡನೆ: ಶ್ರೀ ಕೆ.ರಾಜಕುಮಾರ್, ಚಿಂತಕರು ಮತ್ತು ಲೇಖಕರು

ಮುಖ್ಯ ಅತಿಥಿಗಳು: ಪ್ರೊ. ಎಂ.ಮಹಾಬಲೇಶ್ವರ ಗುಪ್ತ, ನಿವೃತ್ತ ಪ್ರಾಂಶುಪಾಲರು

ಸ್ವಾಗತ: ಶ್ರೀ ಲಕ್ಷ್ಮಿನಾಥ ಗುಪ್ತ, ವಂದನಾರ್ಪಣೆ: ಶ್ರೀ ಪತ್ತಂಗಿ ಎಸ್.ಮುರಳಿ

### ಚುಟುಕು ಕವಿಗೋಷ್ಠಿ ಮಧ್ಯಾಹ್ನ 3.30 ಘಂಟೆಗೆ

ಮುಖ್ಯ ಅತಿಥಿಗಳು: ಶ್ರೀ ನಾ.ಮಲ್ಲಿಕಾರ್ಜುನ, ಕಾರ್ಯದರ್ಶಿಗಳು, ಬಸವ ವೇದಿಕೆ

ಶ್ರೀ ಎಸ್.ರಾಮಲಿಂಗೇಶ್ವರ, (ಸಿಸಿರಾ), ಅಧ್ಯಕ್ಷರು, ಬುದ್ಧ, ಬಸವ, ಗಾಂಧೀ ಸಾಂಸ್ಕೃತಿಕ ಟ್ರಸ್ಟ್

ಅಧ್ಯಕ್ಷತೆ: ಶ್ರೀಮತಿ ಭಾಗ್ಯಲಕ್ಷ್ಮಿ ಮಗ್ಗೆ, ಸಾಹಿತಿಗಳು, ಪ್ರಧಾನ ಸಂಪಾದಕರು, ಅಕ್ಷರ ಐಸಿರಿ ಮಾಸ ಪತ್ರಿಕೆ

ಕವಿಗೋಷ್ಠಿ ನಿರ್ವಹಣೆ: ಶ್ರೀಮತಿ ಪದ್ಮಾವತಿ ಚಂದ್ರು

ಸ್ವಾಗತ: ಶ್ರೀ ಲಿಂಗೇಶ್ ಹುಣಸೂರು, ವಂದನಾರ್ಪಣೆ: ಶ್ರೀಮತಿ ಕೈವಲ್ಯ

### ಸಂಜೆ 5.00 ಗಂಟೆಗೆ : ಸನ್ಮಾನ ಮತ್ತು ಸಮಾರೋಪ ಸಮಾರಂಭ

ಸಮಾರೋಪ ಭಾಷಣ : ಚುಟುಕರತ್ನ ಶ್ರೀ ಜರಗನಹಳ್ಳಿ ಶಿವಶಂಕರ್

ಸನ್ಮಾನಿಸುವವರು : ನಾಡೋಜ ಡಾ॥ ಮಹೇಶ್ ಜೋಶಿ

ಮುಖ್ಯ ಅತಿಥಿಗಳು : ಶ್ರೀ ಬೈರತಿ ಸುರೇಶ್
ಶ್ರೀಮತಿ ಗೋಕುಲಾ ಚಲಪತಿ
ಪ್ರಧಾನ ಕಾರ್ಯದರ್ಶಿ ಪರಸ್ಪರ ಚಾರಿಟಬಲ್ ಟ್ರಸ್ಟ್

ಸ್ವಾಗತ : ಶ್ರೀ ಟಿ.ಎಸ್. ಅಶೋಕ್ ವಂದನಾರ್ಪಣೆ : ಡಾ. ಉಮಾದೇವಿ

### ಸನ್ಮಾನಿತರು

ಶ್ರೀ ಟಿ. ಶ್ರೀನಿವಾಸ್, ಅಧ್ಯಕ್ಷರು, ಅಶಕ್ತ ಪೋಷಕ ಸಭಾ, ಬೆಂಗಳೂರು
ಶ್ರೀ ಎಂ. ಆನಂದಕುಮಾರ್, ಸದಸ್ಯರು, ಬಿ.ಬಿ.ಎಂ.ಪಿ
ಶ್ರೀ ಕೋ.ಲ. ರಂಗನಾಥರಾವ್ ಸಾಹಿತಿಗಳು
ಶ್ರೀ ವ.ಚ. ಚನ್ನೇಗೌಡ, ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು
ಶ್ರೀ ರಾಂ.ಕೆ. ಹನುಮಂತಯ್ಯ, ಸಾಹಿತಿಗಳು, ಸಂಘಟಕರು
ಡಾ॥ ಚಿಕ್ಕಲಿಂಗಯ್ಯ, ಹಿರಿಯ ವೈದ್ಯಾಧಿಕಾರಿಗಳು
ಶ್ರೀ ಹೆಚ್. ವಿ. ಶ್ರೀಧರ್, ಹಿರಿಯ ಸರ್ಕಾರಿ ಅಧಿಕಾರಿಗಳು
ಶ್ರೀ ಟಿ.ಎ. ಕೃಷ್ಣಮೂರ್ತಿ ಅಧ್ಯಕ್ಷರು ಪರಸ್ಪರ ಚಾರಿಟಬಲ್ ಟ್ರಸ್ಟ್
ಶ್ರೀ ವೈ.ಜಿ. ರಮೇಶ್ ಬಾಬು,
ಶ್ರೀಮತಿ ಚೈತ್ರ ಭವಾನಿ, ದಿಗ್ವಿಜಯ ವಾಹಿನಿ
ಶ್ರೀಮತಿ ಸುನಂದ ರು. ಬಸಪ್ಪ, ಪತ್ರಕರ್ತರು
ಶ್ರೀಮತಿ ವತ್ಸಲಾ ಮದನ್, ಅಧ್ಯಕ್ಷರು, ದಾರಿಸು ಕನ್ನಡ ದಿಂಡಿಮದ ಸಂಸ್ಥೆ
ಶ್ರೀಮತಿ ವಿಮಲಾ ಸುಬ್ರಮಣ್ಯ, ಸಮಾಜ ಸೇವಕರು
ಶ್ರೀ ಕೆ.ಎಂ. ರೇವಣ್ಣ, ಹಿರಿಯ ಸಾಹಿತಿಗಳು, ಬಸವ ಟಿವಿ
ಶ್ರೀ ಮೊಹ್ಮದ್ ಮುನಾಫ್ ಹೆಚ್
ಅಧ್ಯಕ್ಷರು, ಸರ್ ಸಿವಿ ರಾಮನ್‌ನಗರ ಕಸಾಪ

# ಮತದಾರರ ಪಟ್ಟಿಗೆ ಸೇರಿದ 5 ಲಕ್ಷ ಬುಡಕಟ್ಟು ಮತದಾರರು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

5,15,000 ಕ್ಕೂ ಅಧಿಕ ಆದಿವಾಸಿ ಬುಡಕಟ್ಟು ಸಮುದಾಯದವರು ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ ಎಂದು ರಾಜ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಬುಧವಾರ ಚುನಾವಣಾ ಆಯೋಗ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಸಹಯೋಗದೊಂದಿಗೆ ಆಯೋಜಿಸಿದ್ದ ಆದಿವಾಸಿ ಬುಡಕಟ್ಟು ಸಮುದಾಯದ ಪ್ರತಿಶತಃ ಮತದಾನದ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯದಲ್ಲಿ ಒಟ್ಟು 42,48,000 ಬುಡಕಟ್ಟು ಜನಾಂಗದ ಮತದಾರರು ಇದ್ದು, ಈ ಬಾರಿ 5,15,000ಕ್ಕೂ ಹೆಚ್ಚು ಆದಿವಾಸಿ ಬುಡಕಟ್ಟು ಸಮುದಾಯದವರು ಸೇರ್ಪಡೆಯಾಗಿದ್ದಾರೆ. ರಾಜ್ಯದ 8 ಜಿಲ್ಲೆಗಳಲ್ಲಿ ಆದಿವಾಸಿ ಬುಡಕಟ್ಟು ಜನಾಂಗದವರು ನೆಲೆಸಿದ್ದಾರೆ. 5 ಲಕ್ಷಕ್ಕೂ ಅಧಿಕವಿರುವ ಆದಿವಾಸಿ ಬುಡಕಟ್ಟು ಸಮುದಾಯದವರು ಮತಗಟ್ಟೆಗಳಿಗೆ ತೆರಳಿ ಮತ ಚಲಾಯಿಸಲು ಬೇಕಾದ ಎಲ್ಲ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಸಮಾಜ ಕಲ್ಯಾಣ ಇಲಾಖೆ ಕೈಜೋಡಿಸಿ ಬಹಳಷ್ಟು ಶ್ರಮ ವಹಿಸಿ ಮತದಾನದ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಮೇ 12 ರಂದು ಮತಗಟ್ಟೆಗಳಿಗೆ ಬುಡಕಟ್ಟು ಸಮುದಾಯ ದವರು ಬಂದು ತಮ್ಮ ಮತ ಹಾಕುವ ಮೂಲಕ ತಮ್ಮ ಹಕ್ಕು ಚಲಾಯಿಸಬೇಕು ಎಂದು ಮನವಿ ಮಾಡಿದರು.

ಚುನಾವಣಾ ಪ್ರಕ್ರಿಯೆಗೆ ಬೇಕಾದ ಎಲ್ಲ ಪೂರ್ವ ಸಿದ್ಧತೆಗಳು ನಡೆಯುತ್ತಿದ್ದು, 58000ಕ್ಕೂ ಅಧಿಕ ಮತಗಟ್ಟೆ ಸಿದ್ಧವಾಗಿದೆ. 3 ಲಕ್ಷಕ್ಕೂ ಅಧಿಕ ಸಿಬ್ಬಂದಿ ಸಿದ್ಧರಾಗಿದ್ದಾರೆ. 224 ಚುನಾವಣಾ ವೀಕ್ಷಕರನ್ನು ನೇಮಿಸಲಾಗಿದೆ. 38 ಕಡೆಗಳಲ್ಲಿ ಮತ ಎಣಿಕೆ ಕೇಂದ್ರವನ್ನು ವ್ಯವಸ್ಥೆ ಮಾಡಲಾಗಿದೆ.



ಆದಿವಾಸಿ ಬುಡಕಟ್ಟು ಸಮುದಾಯದ ಮತದಾನದ ಜಾಗೃತಿ ಚುನಾವಣಾ ಆಯೋಗದಿಂದ ಸಿದ್ಧಪಡಿಸಿರುವ ಸಂದೇಶವಿರುವ ಕಿರುಚಿತ್ರ ಸಿಡಿಯನ್ನು ರಾಜ್ಯ ಮುಖ್ಯ ಮುಖ್ಯಚುನಾವಣಾಧಿಕಾರಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಹಲವು ಬುಡಕಟ್ಟು ಸಮುದಾಯದ ಪ್ರತಿನಿಧಿಗಳು ಉಪಸ್ಥಿತರಿದ್ದರು.

**ಸಂದೇಶದ ಕಿರುಚಿತ್ರ ಬಿಡುಗಡೆ:** ಇದೇ ವೇಳೆ ಆದಿವಾಸಿ ಬುಡಕಟ್ಟು ಸಮುದಾಯದ ಮತದಾನದ ಜಾಗೃತಿ ಚುನಾವಣಾ ಆಯೋಗದಿಂದ ಸಿದ್ಧಪಡಿಸಿರುವ ಸಂದೇಶವಿರುವ ಕಿರುಚಿತ್ರ ಸಿಡಿಯನ್ನು ರಾಜ್ಯ ಮುಖ್ಯ ಮುಖ್ಯಚುನಾವಣಾಧಿಕಾರಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಬುಡಕಟ್ಟು ಸಮುದಾಯದ ಪ್ರತಿನಿಧಿಗಳು ಉಪಸ್ಥಿತರಿದ್ದರು.

**ಪಪುವಾ ನ್ಯೂಗಿನಿ ನಿಯೋಗ ಭೇಟಿ:** ಕರ್ನಾಟಕ ವಿಧಾನಸಭಾ ಚುನಾವಣಾ-2018 ರ ಪ್ರಕ್ರಿಯೆಗಳನ್ನು ವೀಕ್ಷಿಸಲು ಪಪುವಾ ನ್ಯೂಗಿನಿಯ ಚುನಾವಣಾ ಆಯುಕ್ತರ ನೇತೃತ್ವದಲ್ಲಿ ಐದು ಮಂದಿಯ ತಂಡ ಮೇ 10 ರಿಂದ 16 ರವರೆಗೆ ರಾಜ್ಯಕ್ಕೆ ಭೇಟಿ ನೀಡಲಿದೆ. ಪಪುವಾ ನ್ಯೂಗಿನಿಯಲ್ಲಿ 2022 ರಲ್ಲಿ ರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದಲ್ಲಿ ಚುನಾವಣೆ ನಡೆಯಲಿದ್ದು, ಈ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ ಮತ್ತು ವಿವಿಪ್ಯಾಟ್‌ಗಳನ್ನು ಪ್ರಾಯೋಗಿಕವಾಗಿ ಬಳಸಲು ಉತ್ಸುಕವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಬಳಕೆಯಾಗುತ್ತಿರುವ ವಿದ್ಯುನ್ಮಾನ ಮತಯಂತ್ರಗಳು ಮತ್ತು ವಿವಿಪ್ಯಾಟ್‌ಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಮತ್ತು ಅವುಗಳ ಕಾರ್ಯವೈಖರಿಯ ಬಗ್ಗೆ ಅರಿತುಕೊಳ್ಳುವ ಸಲುವಾಗಿ ಪಪುವಾ ನ್ಯೂಗಿನಿಯ ಚುನಾವಣಾ ಆಯುಕ್ತರಾದ ಪಟಿಲಿಯಾಸ್ ಗಮತೊ. ಅವರ ನೇತೃತ್ವದ ತಂಡ ಗುರುವಾರದಿಂದ ರಾಜ್ಯಕ್ಕೆ 7 ದಿನಗಳ ಕಾಲ ಭೇಟಿ ನೀಡುತ್ತಿದೆ.

# ಹೊಸ ದಿಗಂತ

ಬುಧವಾರ

9 ಮೇ 2018


## ಕಿರು ಸುದ್ದಿ

### ವೂಡೇ ಕೃಷ್ಣ ಆಯ್ಕೆ



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೇ 10 ರಂದು ನಡೆಯಲಿರುವ 11ನೇ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ವೂಡೇ.ಪಿ.ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ.

ಸಂಯುಕ್ತ ಕರ್ನಾಟಕ
ಶನಿವಾರ । 05 ಮೇ । 2018

# ಅಧ್ಯಕ್ಷರಾಗಿ ಆಯ್ಕೆ



ಬೆಂಗಳೂರು: 11ನೇ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಆಯ್ಕೆಯಾಗಿದ್ದಾರೆ.

ಜೂನ್ 10ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಚುಟುಕು ಸಾಹಿತ್ಯ ಸಮ್ಮೇಳನ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂಜೆ

ಶನಿವಾರ, 5-5-2018


# ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಸಮ್ಮೇಳನಾಧ್ಯಕ್ಷರಾಗಿ ವೂಡೇ. ಪಿ. ಕೃಷ್ಣ

ಬೆಂಗಳೂರು, ಮೇ 5- ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರನ್ನು



11ನೇ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಆಯ್ಕೆ ಮಾಡಿದೆ.

ಸಾಹಿತ್ಯ ಸಮ್ಮೇಳನವು ಇದೇ ಜೂನ್ 10 ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ನಡೆಯಲಿದೆ.



# విద్యార్థులు మానవతతో ఎదగాలి

బెంగళూరు (కెంగేరి), న్యూస్‌టుడే: విద్యార్థులు సమాజ పరిస్థితులకు స్పందించి మానవతతో ఎదగాలని భారతీయ ఆయుర్వేద సంస్థ అధ్యక్షుడు డా.సి.ఎ.కిశోర్ తెలిపారు. శనివారం కెంగేరి ఉపనగరంలోని శేషాద్రిపురం అకాడమీ ఆఫ్ బిజినెస్ స్టడీస్ కళాశాల పద్నాలుగో వార్షికోత్సవ వేడుకలు నిర్వహించారు. విశ్వవిద్యాలయం పరీక్షల్లో అధిక మార్కులు సాధించిన విద్యార్థులకు ఆయన బహుమతులను అందించారు. ముఖ్య అతిథిగా పాల్గొన్న కన్నడ చలనచిత్ర క్షేత్రం చిత్రసాహితి డైరెక్టర్ డా.వి.నాగేంద్రప్రసాద్ కార్యక్రమాన్ని ప్రారంభించారు. ఆయన మాట్లాడుతూ విద్యార్థులు మార్కులు సాధిస్తే చాలదు. సంస్కృతి, సంస్కారం కూడా అలవర్చుకోవాలని సూచించారు. విద్యను శ్రమతో నేర్చుకొన్నప్పుడు సార్థకత లభిస్తుందన్నారు. విద్యార్థులందరూ భారతీయ సంస్కృతిని చాటే దుస్తుల్లో పాల్గొన్నందుకు శేషాద్రిపురం శిక్షణ ట్రస్ట్ గౌరవ ప్రధాన కార్యదర్శి డా.వుడే పి.కృష్ణ వారిని అభినందించారు. ఏడాదిలో నిర్వహించిన సాంస్కృతిక, క్రీడా తదితర విభాగాల్లో గెలుపొందిన విద్యార్థులకు బహుమతులు అందించారు. కార్యక్రమంలో బెంగళూరు వి.వి.దైహిక శిక్షణ విభాగం ప్రిన్సిపల్ కృష్ణస్వామి, హంసజ్యోతి సంస్థ స్థాపకుడు మురళీధర, తదితర ప్రముఖులు పాల్గొన్నారు.

ಕರ್ನಾಟಕ ಶನಿವಾರ,28 ಏಪ್ರಿಲ್ 2018


# ಪ್ರಥಮ ಬಂಡಾಯ ಸಾಹಿತಿಯೇ ಕುವೆಂಪು

▫ **ವಿಕ ಸುದ್ದಿಲೋಕ** ಕೆಂಗೇರಿ ಉಪನಗರ

ಪ್ರಥಮವಾಗಿ ಬಂಡಾಯ ಸಾಹಿತ್ಯವನ್ನು ಆರಂಭಿಸಿದವರು ಕುವೆಂಪು ಅವರು ಎಂದು ಹಿರಿಯ ಸಾಹಿತಿ ಡಾ. ಸಿದ್ದಲಿಂಗಯ್ಯ ಹೇಳಿದರು.

**ಹಿರಿಯ ಸಾಹಿತಿ ಡಾ. ಸಿದ್ದಲಿಂಗಯ್ಯ ಅಭಿಮತ**

**ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ**


ಹಂಸಜ್ಯೋತಿ ಸಂಸ್ಥೆಯ ಕಲಾಗ್ರಾಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾನಾ ಕ್ಷೇತ್ರದ ಐವರು ಸಾಧಕರಿಗೆ ಹಂಸ ಸಮ್ಮನ್ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಜ್ಞಾನಭಾರತಿ ಆವರಣದ ಕಲಾಗ್ರಾಮ ಸಭಾಂಗಣದಲ್ಲಿ ಹಂಸಜ್ಯೋತಿ ಸಂಸ್ಥೆ ಆಯೋಜಿಸಿದ್ದ ರಸಋಷಿ, ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು ಅವರಿಗೆ ಹಂಸಗೀತ, ನೃತ್ಯ, ನುಡಿ ನಮನ ಹಾಗೂ ಹಂಸ ಸಮ್ಮನ್ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

''ದುಂದುವೆಚ್ಚಗಳಿಗೆ ಕಡಿವಾಣ ಹಾಕಲು ಅಂತರ್ಜಾತಿ ವಿವಾಹಗಳನ್ನು ನಾವು ಪ್ರೋತ್ಸಾಹಿಸಬೇಕು. ಕುವೆಂಪು ಅವರ ಮಂತ್ರಮಾಂಗಲ್ಯದ ಸರಳ ವಿವಾಹಗಳು ಹೆಚ್ಚಾಗಿ ನಡೆಯಬೇಕು,'' ಎಂದರು.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ.ಪಿ.ಕೃಷ್ಣ ಅವರು ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ''ನಮ್ಮ ಕೆಲಸಗಳನ್ನು ನಾವು ಶ್ರದ್ಧೆಯಿಂದ ಮಾಡುತ್ತ ಹೋಗಬೇಕು. ಪ್ರಶಸ್ತಿಯ ಹಿಂದೆ ನಾವು ಹೋಗಬಾರದು. ಅದು ನಮ್ಮನ್ನು ಹುಡುಕಿಕೊಂಡು ಬರಬೇಕು,'' ಎಂದರು.

**ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ:** ಇದೇ ಸಂದರ್ಭದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಕೆ. ಆರ್. ನರಸಿಂಹನ್, ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಡಾ. ಆರ್. ಶ್ರೀನಿವಾಸ್, ಕೆನರಾ ಬ್ಯಾಂಕ್‌ನ ವೃತ್ತ ಕಚೇರಿಯ ಸಹಾಯಕ ಮುಖ್ಯ ಪ್ರಬಂಧಕಿ ಲಲಿತಾ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ ಎಂ. ಸುರೇಶ್ ಬಾಬು, ಛಾಯಾಗ್ರಾಹಕ ವಿ. ಚಂದ್ರಶೇಖರ್ ಅವರಿಗೆ ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ಕುವೆಂಪು ಗಾನನೃತ್ಯ :** ಹೆಸರಾಂತ ಕಲಾವಿದ ಹಾಗೂ ಎನ್ನೆಸ್ಸೆಸ್ ರಾಜ್ಯ ಪ್ರಶಸ್ತಿ ವಿಜೇತ ಎ. ಎಸ್. ಚಂದ್ರಕುಮಾರ್ (ಡೊಳ್ಳು ಚಂದ್ರು) ತಂಡದವರಿಂದ ಡೊಳ್ಳು ಕುಣಿತ ಗಮನಸೆಳೆಯಿತು. ಹೆಸರಾಂತ ಗಾಯಕ ಗಾಯಕಿಯರು ಹಾಗೂ ಸಮೂಹ ಗಾಯನದಲ್ಲಿ ಸ್ವರ ಚಿರಂತನ ತಂಡದ ಸದಸ್ಯರು ಕುವೆಂಪು ಅವರ ಗೀತೆಗಳಿಗೆ ದನಿಯಾದರು. ವಂದನಾ ಭಟ್ ತಂಡ ನೃತ್ಯ ಪ್ರದರ್ಶನ ನೀಡಿತು.

ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಕೆ. ಈಶ್ವರಪ್ರಸಾದ್, ಪದಬಂದ ಬ್ರಹ್ಮ ಅ.ನಾ. ಪ್ರಹ್ಲಾದ ರಾವ್, ವಂದೇ ಭಾರತಂನ ಸಂಸ್ಥಾಪಕ ಅಧ್ಯಕ್ಷ ಬಿ. ಎಚ್. ಲೋಕೇಶ್, ಹಂಸಜ್ಯೋತಿ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಮು. ಮುರಳೀಧರ, ವಿಶ್ವ ವೆಂಕಟೇಶ್ವರ ಇಂಟರ್‌ನ್ಯಾಷನಲ್ ಶಾಲೆಯ ಸಂಸ್ಥಾಪಕ ಕಟ್ಟಾ ಬಾಲಾಜಿಬಾಬು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಹೊಸ ದಿಗಂತ

ಶುಕ್ರವಾರ
27 ಏಪ್ರಿಲ್ 2018

ದೇಶದ ಬೆಳವಣಿಗೆಗೆ ಕನಸು ಕಾಣಲು ವಿದ್ಯಾರ್ಥಿಗಳಿಗೆ ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಶ್ ಸತ್ಯಾರ್ಥಿ ಕರೆ

# ಸಂಶೋಧನೆಯಿಂದ ದೇಶದ ಭವಿಷ್ಯ ಭದ್ರ

▶ ದಿಗಂತ ವರದಿ: ಬೆಂಗಳೂರು, ಏ. 26

ಯುವಕರು ದೇಶದ ಬೆಳವಣಿಗೆ ಕುರಿತು ಕನಸು ಕಾಣುವ ಮತ್ತು ಸಂಶೋಧನಾ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ದೇಶಕ್ಕೆ ಭವಿಷ್ಯವಿಲ್ಲ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಶ್ ಸತ್ಯಾರ್ಥಿ ತಿಳಿಸಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಗುರುವಾರ ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ರಜತ ಮಹೋತ್ಸವ ಭಾಷಣದಲ್ಲಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಸಮೃದ್ಧ ಸಮಾಜ, ದೂರದೃಷ್ಟಿಯುಳ್ಳ ಆಲೋಚನೆ, ಶಾಂತಿಯುತ ರಾಷ್ಟ್ರ ನಿರ್ಮಾಣ ಅವಶ್ಯವಿದೆ. ಇಂದಿನ ಯುವ ಜನರಿಗೆ ಮುಂದಿನ 10–15 ವರ್ಷಗಳಲ್ಲಿ ಯಾವ ರೀತಿಯ ಬದಲಾವಣೆ ಬಯಸುತ್ತೀರಿ ಎಂದು ಪ್ರಶ್ನಿಸಿದರೆ, ಅತಿ ವೇಗದ ಆರ್ಥಿಕತೆ, ಜಿಡಿಪಿ ಹೆಚ್ಚಳದ ಉತ್ತರ ನೀಡುತ್ತಿದ್ದಾರೆ. ಆದರೆ, ನಿಜವಾಗಿ ದೂರದೃಷ್ಟಿಯುಳ್ಳ ಸಮಾಜ ನಿರ್ಮಾಣವಾಗಬೇಕಿದೆ. ಪ್ರಾಧ್ಯಾಪಕರು, ಕುಲಪತಿ, ವಿಜ್ಞಾನಿಗಳಾಗುವ ದೊಡ್ಡ ದೊಡ್ಡ ಕನಸುಗಳನ್ನು ಯುವಕರು ಕಾಣಬೇಕಿದೆ ಎಂದು ಹೇಳಿದರು.

**ಭಯೋತ್ಪಾದನೆ ಜಗತ್ತಿನ ಸಮಸ್ಯೆ:** ಭಯೋತ್ಪಾದನೆ ಯಾವುದೋ ಒಂದು ದೇಶದ ಸಮಸ್ಯೆಯಲ್ಲ, ಇಡೀ ಜಗತ್ತನ್ನು ಆವರಿಸುತ್ತಿದೆ. ಮುಂದಿನ 30–40 ವರ್ಷದಲ್ಲಿ ಇದು ಇನ್ನೂ ಹೆಚ್ಚಳವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಭವಿಷ್ಯದ ಮಾನವೀಯ ಸಮಾಜದಲ್ಲಿ ಸುಸ್ಥಿರತೆ ಕಾಯ್ದುಕೊಳ್ಳುವುದಕ್ಕಾಗಿ ಕಾಳಜಿ ವಹಿಸಬೇಕಿದೆ. ಈಗಾಗಲೇ ವಿಜ್ಞಾನ, ತಂತ್ರಜ್ಞಾನದ ಮಾಹಿತಿ ಜಾಗತಿಕವಾಗಿದೆ. ಹೊಸ ಆಲೋಚನೆಗಳು, ಶಾಂತಿಯುತ ಸಮಾಜದ ಅವಶ್ಯವಿದೆ ಎಂದರು.

ದಿಗಂತ ಚಿತ್ರ



ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ರಜತ ಮಹೋತ್ಸವದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಶ್ ಸತ್ಯಾರ್ಥಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

> **“ ಅತಿ ವೇಗದ ಆರ್ಥಿಕತೆ, ಜಿಡಿಪಿ ಹೆಚ್ಚಳವಾಗುತ್ತಿದ್ದರೂ, ನಿಜವಾಗಿ ದೂರ ದೃಷ್ಟಿಯುಳ್ಳ ಸಮಾಜ ನಿರ್ಮಾಣವಾಗಬೇಕಿದೆ. ಪ್ರಾಧ್ಯಾಪಕರು, ಕುಲಪತಿ, ವಿಜ್ಞಾನಿಗಳಾಗುವ ದೊಡ್ಡ ದೊಡ್ಡ ಕನಸುಗಳನ್ನು ಯುವಕರು ಕಾಣಬೇಕಿದೆ.**
>
> **■ ಕೈಲಾಸ್ ಸತ್ಯಾರ್ಥಿ, ನೊಬೆಲ್ ಪುರಸ್ಕೃತ**

ಜಗತ್ತಿನಾದ್ಯಂತ ಅಂದಾಜು 152 ಮಿಲಿಯನ್ ಮಕ್ಕಳು ಬಾಲ ಕಾರ್ಮಿಕರಾಗಿ ಫ್ಯಾಕ್ಟರಿ, ವರ್ಕ್ ಶಾಪ್, ವಿವಿಧ ಅಂಗಡಿಗಳಲ್ಲಿ ದುಡಿಯುತ್ತಿದ್ದಾರೆ. ಅವರನ್ನು ಸಂರಕ್ಷಿಸುವ ಕೆಲಸ ಮಾಡಬೇಕಿದೆ. ಪ್ರತಿಯೊಬ್ಬರಿಗೂ ಶಿಕ್ಷಣ ನೀಡಿದರೆ ಬಾಲಕಾರ್ಮಿಕರಾಗಿ ದುಡಿಯುವುದನ್ನು ತಪ್ಪಿಸಬಹುದು ಎಂದರು.

**ಮೌಲ್ಯಯುತ ವಾತಾವರಣ ನಿರ್ಮಿಸಿ:** ಪೋಷಕರು ಮಕ್ಕಳನ್ನು ಸ್ನೇಹಭಾವದಿಂದ ಪರಸ್ಪರ ಅರ್ಥ ಮಾಡಿಕೊಂಡು ಗೌರವ ನೀಡುವ ಮೌಲ್ಯಗಳನ್ನು ಬಿತ್ತುಬೇಕಿದೆ. ದಿನ ನಿತ್ಯದ ಬೆಳವಣಿಗೆ ಬಗ್ಗೆ ಬಿಚ್ಚು ಮನಸ್ಸಿನಿಂದ ಹೇಳಿಕೊಳ್ಳುವ ವಾತಾವರಣ ನಿರ್ಮಾಣ ಮಾಡಬೇಕಿದೆ. ಶಾಂತಿಯುತವಾಗಿ ತಮ್ಮ ಆಲೋಚನೆಗಳನ್ನು ಮಕ್ಕಳಿಗೆ ಹೇಳುವ, ಮಕ್ಕಳು ಹೇಳುವುದನ್ನು ಕೇಳಿಸಿಕೊಳ್ಳುವ ಮತ್ತು ನೈತಿಕ ಮೌಲ್ಯಗಳನ್ನು ತುಂಬುವ ಕೆಲಸ ಮಾಡಬೇಕಿದೆ ಎಂದರು.

ದೇಶದಲ್ಲಿ ಪ್ರತಿ 30 ನಿಮಿಷಕ್ಕೆ ಒಂದು ಮಗು ಸಾಯುತ್ತಿದೆ. ಪ್ರತಿ ಗಂಟೆಗೆ 4 ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಪ್ರಕರಣಗಳು ಕಂಡು ಬರುತ್ತಿವೆ. ಇತ್ತೀಚೆಗೆ ವಿಶ್ವವಿದ್ಯಾಲಯವೊಂದರಲ್ಲಿ ಶೇ.67ರಷ್ಟು ವಿದ್ಯಾರ್ಥಿನಿಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದ ಪ್ರಕರಣಗಳು ಕಂಡುಬಂದಿದ್ದು, ಯಾರೊಬ್ಬರು ದೂರು ನೀಡಿಲ್ಲ. ಪ್ರಕರಣವನ್ನು ವಿದ್ಯಾರ್ಥಿಗಳು ಪೋಷಕರ ಬಳಿ ಹೇಳಿಕೊಂಡಿಲ್ಲ. ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ಹೇಳಿದರು.

ಡಿಆರ್‌ಡಿಒ ಮಾಜಿ ಅಧ್ಯಕ್ಷ ಡಾ. ವಿ.ಕೆ. ಅತ್ರೆ, ಐಐಎಸ್ಸಿ ಮಾಜಿ ನಿರ್ದೇಶಕ ಪ್ರೊ. ಬಿ. ಬಲರಾಮ್ ಮಾತನಾಡಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಐಐಎಸ್ಸಿ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ. ಎಂ.ಪಿ. ರವೀಂದ್ರ, ಶೇಷಾದ್ರಿಪುರ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ ಉಪಸ್ಥಿತರಿದ್ದರು.

ಕರ್ನಾಟಕ ಶುಕ್ರವಾರ,27 ಏಪ್ರಿಲ್ 2018

## ನೊಬೆಲ್ ಪ್ರಶಸ್ತಿ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ಅಭಿಮತ

# ಸಂಶೋಧನೆಯತ್ತ ಹೆಚ್ಚಿನ ಗಮನ ಅಗತ್ಯ

**▪ ವಿಕ ಸುದ್ದಿಲೋಕ** ಯಲಹಂಕ

ಯುವಕರು ದೇಶದ ಬೆಳವಣಿಗೆ ಕುರಿತು ಕನಸು ಕಾಣುವ ಜತೆಗೆ ಸಂಶೋಧನಾ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ದೇಶಕ್ಕೆ ಭವಿಷ್ಯವಿಲ್ಲವೆಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಶ್ ಸತ್ಯಾರ್ಥಿ ತಿಳಿಸಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ರಜತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ''ಇಂದಿನ ಯುವ ಜನರಿಗೆ ಮುಂದಿನ 10-15 ವರ್ಷಗಳಲ್ಲಿ ಯಾವ ರೀತಿಯ ಬದಲಾವಣೆ ಬಯಸುತ್ತೀರಿ ಎಂದು ಪ್ರಶ್ನಿಸಿದರೆ, ಅತಿ ವೇಗದ ಆರ್ಥಿಕತೆ, ಜಿಡಿಪಿ ಹೆಚ್ಚಳದ ಉತ್ತರ ನೀಡುತ್ತಿದ್ದಾರೆ. ಆದರೆ, ನಿಜವಾಗಿ ದೂರದೃಷ್ಟಿಯುಳ್ಳ ಸಮಾಜ ನಿರ್ಮಾಣವಾಗಬೇಕಿದೆ. ಪ್ರಾಧ್ಯಾಪಕರು, ಕುಲಪತಿ, ವಿಜ್ಞಾನಿಗಳಾಗುವ ದೊಡ್ಡ ದೊಡ್ಡ ಕನಸುಗಳನ್ನು ಯುವಕರು ಕಾಣಬೇಕಿದೆ,''ಎಂದರು.

''ಭವಿಷ್ಯದ ಮಾನವೀಯ ಸಮಾಜದಲ್ಲಿ ಸುಸ್ಥಿರತೆ ಕಾಯ್ದುಕೊಳ್ಳುವುದಕ್ಕಾಗಿ ಕಾಳಜಿ ವಹಿಸಬೇಕಿದೆ. ಈಗಾಗಲೇ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ಜಾಗತೀಕರಣವಾಗಿದೆ. ಹೊಸ ಆಲೋಚನೆಗಳು, ಸರಳತೆ, ಶಾಂತಿಯುತ ಸಮಾಜದ ಅವಶ್ಯವಿದೆ,'' ಎಂದರು.



ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜು ರಜತ ಮಹೋತ್ಸವದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಶ್ ಸತ್ಯಾರ್ಥಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

''ಭಯೋತ್ಪಾದನೆ ಯಾವುದೋ ಒಂದು ದೇಶದ ಸಮಸ್ಯೆಯಲ್ಲ, ಇಡೀ ಜಗತ್ತನ್ನು ಆವರಿಸುತ್ತಿದೆ. ಮುಂದಿನ 30-40 ವರ್ಷದಲ್ಲಿ ಇದು ಇನ್ನೂ ಹೆಚ್ಚಳವಾಗುವ ಲಕ್ಷಣಗಳು ಗೋಚರಿಸುತ್ತಿವೆ,'' ಎಂ ದರು.

''ಜಗತ್ತಿನಾದ್ಯಂತ ಅಂದಾಜು 152 ಮಿಲಿಯನ್ ಮಕ್ಕಳು ಬಾಲ ಕಾರ್ಮಿಕರಾಗಿ ಫ್ಯಾಕ್ಟರಿ, ವರ್ಕ್‌ಶಾಪ್, ವಿವಿಧ ಅಂಗಡಿಗಳಲ್ಲಿ ದುಡಿಯುತ್ತಿದ್ದಾರೆ. ಅವರನ್ನು ಸಂರಕ್ಷಿಸುವ ಕೆಲಸ ಮಾಡಬೇಕಿದೆ. ಪ್ರತಿಯೊಬ್ಬರಿಗೂ ಶಿಕ್ಷಣ ನೀಡಿದರೆ ಬಾಲಕಾರ್ಮಿಕರಾಗಿ ದುಡಿಯುವುದನ್ನು ತಪ್ಪಿಸಬಹುದು,'' ಎಂದು ವಿವರಿಸಿದರು.

ಡಿಆರ್‌ಡಿಓ ಮಾಜಿ ಅಧ್ಯಕ್ಷ ಡಾ.ವಿ.ಕೆ.ಅತ್ರೆ, ಐಐಎಸ್ಸಿ ಮಾಜಿ ನಿರ್ದೇಶಕ ಪ್ರೊ.ಬಿ. ಬಲರಾಮ್ ಮಾತನಾಡಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.. ಕೃಷ್ಣ ಐಐಎಸ್ಸಿ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ಎಂ.ಪಿ.ರವೀಂದ್ರ, ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗ ನೀಡಿತ್ತು.

### ಮಕ್ಕಳಲ್ಲಿ ಸಂಸ್ಕಾರ ಬೆಳೆಸಿ

''ಪೋಷಕರು ಮಕ್ಕಳನ್ನು ಸ್ನೇಹಭಾವದಿಂದ ಅರ್ಥ ಮಾಡಿಕೊಂಡು, ಬೇರೆಯವರಿಗೆ ಗೌರವ ನೀಡುವ ಮೌಲ್ಯಗಳನ್ನು ಬಿತ್ತುಬೇಕಿದೆ. ದಿನ ನಿತ್ಯದ ಬೆಳವಣಿಗೆ ಬಗ್ಗೆ ಬಿಚ್ಚು ಮನಸ್ಸಿನಿಂದ ಹೇಳಿಕೊಳ್ಳುವ ವಾತಾವರಣ ನಿರ್ಮಾಣ ಮಾಡಬೇಕಿದೆ. ದೇಶದಲ್ಲಿ ಪ್ರತಿ 30 ನಿಮಿಷಕ್ಕೆ ಒಂದು ಮಗು ಸಾಯುತ್ತಿದೆ, ಪ್ರತಿ ಗಂಟೆಗೆ 4 ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಪ್ರಕರಣಗಳು ಕಂಡು ಬರುತ್ತಿವೆ. ಇತ್ತೀಚೆಗೆ ವಿಶ್ವವಿದ್ಯಾಲಯವೊಂದರಲ್ಲಿ ಶೇ.67ರಷ್ಟು ವಿದ್ಯಾರ್ಥಿನಿಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದ ಪ್ರಕರಣಗಳು ಕಂಡುಬಂದಿದ್ದು, ಯಾರೊಬ್ಬರು ದೂರು ನೀಡಿಲ್ಲ, ಪ್ರಕರಣದ ಬಗ್ಗೆ ವಿದ್ಯಾರ್ಥಿಗಳು ಪೋಷಕರ ಬಳಿ ಹೇಳಿಕೊಂಡಿಲ್ಲ, ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ,''ಎಂದು ಕೈಲಾಶ್ ಸತ್ಯಾರ್ಥಿ ಕರೆ ನೀಡಿದರು.

### ಶೇಷಾದ್ರಿಪುರ ಕಾಲೇಜು ರಜತ ಮಹೋತ್ಸವದಲ್ಲಿ ಭಾಗಿ

### ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗ

ಕನ್ನಡಪ್ರಭ
ಶುಕ್ರವಾರ 27.4.2018
ಬೆಂಗಳೂರು

ಯುವ ... ಹೊಸ ಆಲೋಚನೆಗಳು, ಸರಳತೆ, ಶಾಂತಿಯುತ ಸಮಾಜದ ಅವಶ್ಯಕ

# ಸಂಶೋಧನಾ ಗುಣ ಅಗತ್ಯ: ಸತ್ಯಾರ್ಥಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಯುವಕರು ದೇಶದ ಬೆಳವಣಿಗೆ ಕುರಿತು ಕನಸು ಕಾಣುವ ಮತ್ತು ಸಂಶೋಧನಾ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ದೇಶಕ್ಕೆ ಭವಿಷ್ಯವಿಲ್ಲ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಶ್ ಸತ್ಯಾರ್ಥಿ ತಿಳಿಸಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 'ರಜತ ಮಹೋತ್ಸವ ಭಾಷಣ'ದಲ್ಲಿ ಮಾತನಾಡಿದ ಅವರು, ಇಂದಿನ ಯುವ ಜನರಿಗೆ ಮುಂದಿನ 10-15 ವರ್ಷಗಳಲ್ಲಿ ಯಾವ ರೀತಿಯ ಬದಲಾವಣೆ ಬಯಸುತ್ತೀರಿ ಎಂದು ಪ್ರಶ್ನಿಸಿದರೆ, ಅತಿ ವೇಗದ ಆರ್ಥಿಕತೆ, ಜಿಡಿಪಿ ಹೆಚ್ಚಳದ ಉತ್ತರ ನೀಡುತ್ತಿದ್ದಾರೆ. ಆದರೆ, ನಿಜವಾಗಿ ದೂರದೃಷ್ಟಿಯುಳ್ಳಸಮಾಜನಿರ್ಮಾಣವಾಗಬೇಕಿದೆ. ಪ್ರಾಧ್ಯಾಪಕರು, ಕುಲಪತಿ, ವಿಜ್ಞಾನಿಗಳಾಗುವ ದೊಡ್ಡ ದೊಡ್ಡ ಕನಸುಗಳನ್ನು ಯುವಕರು ಕಾಣಬೇಕಿದೆ ಎಂದು ಹೇಳಿದರು.

ಭಯೋತ್ಪಾದನೆ ಯಾವುದೋ ಒಂದು ದೇಶದ ಸಮಸ್ಯೆಯಲ್ಲ, ಇಡೀ ಜಗತ್ತನ್ನು ಆವರಿಸುತ್ತಿದೆ. ಮುಂದಿನ 30-40 ವರ್ಷದಲ್ಲಿ ಇದು ಇನ್ನೂ ಹೆಚ್ಚಳವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಭವಿಷ್ಯದ ಮಾನವೀಯ ಸಮಾಜದಲ್ಲಿ ಸುಸ್ಥಿರತೆ ಕಾಯ್ದುಕೊಳ್ಳುವುದಕ್ಕಾಗಿ ಕಾಳಜಿ ವಹಿಸಬೇಕಿದೆ. ಈಗಾಗಲೇ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ಜಾಗತಿಕವಾಗಿದೆ. ಹೊಸ ಆಲೋಚನೆಗಳು, ಸರಳತೆ, ಶಾಂತಿಯುತ ಸಮಾಜದ ಅವಶ್ಯವಿದೆ ಎಂದು ಹೇಳಿದರು.

ಜಗತ್ತಿನಾದ್ಯಂತ ಅಂದಾಜು 152 ಮಿಲಿಯನ್ ಮಕ್ಕಳು ಬಾಲ ಕಾರ್ಮಿಕರಾಗಿ ಫ್ಯಾಕ್ಟರಿ, ವರ್ಕ್‌ಶಾಪ್, ವಿವಿಧ ಅಂಗಡಿಗಳಲ್ಲಿ ದುಡಿಯುತ್ತಿದ್ದಾರೆ. ಅವರನ್ನು ಸಂರಕ್ಷಿಸುವ ಕೆಲಸ ಮಾಡಬೇಕಿದೆ. ಪ್ರತಿಯೊಬ್ಬರಿಗೂ ಶಿಕ್ಷಣ ನೀಡಿದರೆ ಬಾಲಕಾರ್ಮಿಕರಾಗಿ ದುಡಿಯುವುದನ್ನು ತಪ್ಪಿಸಬಹುದು ಎಂದು ತಿಳಿಸಿದರು. ಡಿಆರ್‌ಡಿಒ ಮಾಜಿ ಅಧ್ಯಕ್ಷ ಡಾ.ವಿ.ಕೆ. ಅತ್ರೆ, ಐಐಎಸ್ಸಿ ಮಾಜಿ ನಿರ್ದೇಶಕ ಪ್ರೊ.ಬಿ. ಬಲರಾಮ್ ಮಾತನಾಡಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಐಐಎಸ್ಸಿ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ. ಎಂ.ಪಿ. ರವೀಂದ್ರ, ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಉಪಸ್ಥಿತರಿದ್ದರು.




ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಸಮಾರಂಭಕ್ಕೆ ಆಗಮಿಸಿದ್ದ ನೊಬೆಲ್ ಪ್ರಶಸ್ತಿ ಪುರಸ್ಕೃತ ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಶ್ ಸತ್ಯಾರ್ಥಿ ಅವರು ವಿದ್ಯಾರ್ಥಿಗಳೊಂದಿಗೆ ಕಳೆದ ಕ್ಷಣ.

## 'ಮೌಲ್ಯಯುತ ವಾತಾವರಣ ನಿರ್ಮಿಸಿ'

ಪೋಷಕರು ಮಕ್ಕಳಿಗೆ ದಿನ ನಿತ್ಯದ ಬೆಳವಣಿಗೆ ಬಗ್ಗೆ ಬಿಚ್ಚು ಮನಸ್ಸಿನಿಂದ ಹೇಳಿಕೊಳ್ಳುವ ವಾತಾವರಣ ನಿರ್ಮಾಣ ಮಾಡಬೇಕಿದೆ. ಮಕ್ಕಳು ಹೇಳುವುದನ್ನು ಕೇಳಿಸಿಕೊಳ್ಳುವ ಮತ್ತು ನೈತಿಕ ಮೌಲ್ಯಗಳನ್ನು ತುಂಬುವ ಕೆಲಸ ಮಾಡಬೇಕಿದೆ ಎಂದು ಕೈಲಾಶ್ ಸತ್ಯಾರ್ಥಿ ಹೇಳಿದರು. ದೇಶದಲ್ಲಿ ಪ್ರತಿ 30 ನಿಮಿಷಕ್ಕೆ ಒಂದು ಮಗು ಸಾಯುತ್ತಿದೆ, ಪ್ರತಿ ಗಂಟೆಗೆ ನಾಲ್ಕು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಪ್ರಕರಣಗಳು ಕಂಡು ಬರುತ್ತಿವೆ. ಇತ್ತೀಚೆಗೆ ವಿಶ್ವವಿದ್ಯಾಲಯವೊಂದರಲ್ಲಿ ಶೇ.67ರಷ್ಟು ವಿದ್ಯಾರ್ಥಿನಿಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದ ಪ್ರಕರಣಗಳು ಕಂಡುಬಂದಿದ್ದು, ಯಾರೊಬ್ಬರು ದೂರು ನೀಡಿಲ್ಲ. ದೌರ್ಜನ್ಯದ ಬಗ್ಗೆ ವಿದ್ಯಾರ್ಥಿಗಳು ಪೋಷಕರ ಬಳಿ ಹೇಳಿಕೊಂಡಿಲ್ಲ. ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ಹೇಳಿದರು.

vishwavani.news
27.03.2018



ಕಲಾಗ್ರಾಮದಲ್ಲಿ ಹಂಸಜ್ಯೋತಿ ಸಂಸ್ಥೆ ಹಮ್ಮಿಕೊಂಡಿದ್ದ ರಸಋಷಿ ರಾಷ್ಟ್ರಕವಿ ಕುವೆಂಪು ಅವರಿಗೆ ಹಂಸಗೀತ, ನೃತ್ಯ, ನುಡಿ ನಮನ ಹಾಗೂ ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕವಿ ಡಾ. ಸಿದ್ದಲಿಂಗಯ್ಯ ಉದ್ಘಾಟಿಸಿದರು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಬೆಂಗಳೂರು ವಿವಿ ಮೌಲ್ಯಮಾಪನ ವಿಭಾಗದ ಕುಲಸಚಿವ ಪ್ರೊ.ಸಿ.ಶಿವರಾಜು, ಮತ್ತಿತರರು ಇದ್ದರು.

ಹೊಸ ದಿಗಂತ
ಭಾನುವಾರ
8 ಏಪ್ರಿಲ್ 2018

## 2ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಬೆಂದ್ರೆ ಕೃಷ್ಣಪ್ಪ ಆತಂಕ

# ಉಸಿರುಗಟ್ಟಿದ ವಾತಾವರಣದಲ್ಲಿದೆ ಕನ್ನಡ

▶ ದಿಗಂತ ವರದಿ: ಬೆಂಗಳೂರು, ಏ.7

ವಿಶ್ವ ವಾಣಿಜ್ಯೀಕರಣದಲ್ಲಿ ಜಗತ್ತಿನ ವ್ಯಾಪಾರ ವ್ಯವಹಾರದ ನಗರವಾದ ಬೆಂಗಳೂರಿನಲ್ಲಿ ಕನ್ನಡ ಇಂದು ಉಸಿರುಗಟ್ಟಿದ ವಾತಾವರಣದಲ್ಲಿದೆ ಎಂದು 2ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಬೆಂದ್ರೆ ಕೃಷ್ಣಪ್ಪ ಆತಂಕ ವ್ಯಕ್ತಪಡಿಸಿದರು.

ನಗರದ ಮಲ್ಲೇಶ್ವರ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್‌ನ 2ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಕನ್ನಡ ಸಂಸ್ಥೆಗಳು ಇಂದು ವ್ಯಾಪಾರಿ ಕೇಂದ್ರಗಳಾಗುತ್ತಿವೆ. ಈಗ ಆಂಗ್ಲಭಾಷಾ ಮೋಹದಿಂದ ಇಂಗ್ಲಿಷ್ ಮಾಧ್ಯಮ ಶಾಲೆಗಳ ಹೆಚ್ಚಳದಲ್ಲಿ ಕನ್ನಡದ ಅಸ್ಮಿತೆಯನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬ ಪ್ರಶ್ನೆ ಕಾಡುತ್ತಿದೆ ಎಂದು ತಿಳಿಸಿದರು.

ಬೆಂಗಳೂರಿಗೆ ವಲಸಿಗರು ದಂಡು ದಂಡಾಗಿ ಬರುತ್ತಿದ್ದಾರೆ. ನಾವು ಇಲ್ಲಿರುವ ಎಲ್ಲರನ್ನೂ ಕರ್ನಾಟಕಸ್ತರು ಎಂದು ಕರೆಯುತ್ತೇವೆ. ಕರ್ನಾಟಕಸ್ತರು ಆಗುವುದು ಬೇರೆ, ಕನ್ನಡಿಗರಾಗಿ ಬಾಳುವುದು ಬೇರೆ ಎಂದ ಅವರು, ಈ ಕಾರಣಕ್ಕಾಗಿ ದ.ರಾ. ಬೇಂದ್ರೆಯವರ ಕವಿತೆಯ ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ಹಾಡಿನ ಸಾಲುಗಳನ್ನು ಉಲ್ಲೇಖಿಸಿದರು.

**ನಾವೆಲ್ಲ ಆತ್ಮವಂಚಕರು:** ನಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಸೇರಿಸುತ್ತಿದ್ದೇವೆ. ಹೀಗಾಗಿ ನಾವೆಲ್ಲ ಆತ್ಮವಂಚಕರು. ಬಾಯಿ ಉಪಚಾರಕ್ಕೆ ಮಾತ್ರ ಕನ್ನಡ ಮಾತನಾಡುವುದನ್ನು ಬಿಟ್ಟು ರಾಜ್ಯದಲ್ಲಿರುವ ಎಲ್ಲರಿಗೂ ಕನ್ನಡ ಕಲಿಸುವುದರ ಜೊತೆಗೆ ನಮ್ಮ ಮಕ್ಕಳಿಗೆ ಮೊದಲು ಕನ್ನಡ ಕಲಿಸಬೇಕು ಎಂದು ಸಲಹೆ ನೀಡಿದರು.

ಕನ್ನಡ ಭಾಷಾ ಕಲಿಕಾ ನಿಯಮದಂತೆ ಎಲ್ಲ ಇಂಗ್ಲಿಷ್ ಮಾಧ್ಯಮ, .ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಒಂದು ಭಾಷೆಯಾಗಿ ಕನ್ನಡವನ್ನು ಕಲಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿರುವ ಖಾಸಗಿ ಇಂಗ್ಲಿಷ್ ಶಾಲೆಗಳನ್ನು ಕನ್ನಡಿಗರೆ ಆರಂಭಿಸಿದ್ದಾರೆ. ಅವರು ಬರಿ ಮಾತಿಗೆ ಕನ್ನಡ ಅಭಿಮಾನದ ಮಾತನಾಡದೆ, ತಾವು ಉಳಿಯಲು ತಮ್ಮ ಭಾಷೆ, ಸಂಸ್ಕೃತಿ, ಕನ್ನಡತನ ಉಳಿಸಿ ಬೆಳೆಸಲು ಈ ಅಧಿಸೂಚನೆ ಜಾರಿಗೆ ತರಬೇಕು ಎಂದು ಮನವಿ ಮಾಡಿದರು.

**ಕನ್ನಡ ಬಳಸಲು ದಟ್ಟದಾರಿದ್ರ್ಯ ಅಂಟಿದೆ:** ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಸ್. ಜಿ. ಸಿದ್ದರಾಮಯ್ಯ ಮಾತನಾಡಿ, ಜಗದಗಲ ಹರಡಿರುವ ಕನ್ನಡಕ್ಕೆ ಈಗ ಆತಂಕಕಾರಿಯಾಗಿದೆ. ಕನ್ನಡಿಗರಿಗೆ ಕನ್ನಡ ಬಳಸಲು ಈಗ ದಟ್ಟದಾರಿದ್ರ್ಯ ಅಂಟಿದೆ. ಅವರಿಗೆ ಭಾಷೆ ಬಗೆಗಿನ ಇಚ್ಛಾಶಕ್ತಿ ಕೊರತೆಯಾಗಿದೆ. ಹೀಗಾಗಿ ನಾನು ಈ ವಿಷಯವನ್ನು ಬಹಳ ಸಂಕಟದಿಂದ ಹೇಳುತ್ತಿದ್ದೇನೆ ಎಂದರು.

ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಕನ್ನಡ ಭಾಷೆ ಅಳಿಯುತ್ತಿದೆ. ಇಲ್ಲಿನ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳ ಪ್ರಭಾವ ಎಷ್ಟು ಎಂಬುದು ಇದರಿಂದ ಅರ್ಥವಾಗುತ್ತದೆ. ರಾಜ್ಯದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚಿದರೆ ಅದು ಕನ್ನಡ ಭಾಷೆ ನಾಶಕ್ಕೆ ದಾರಿ ಎಂದು ಆತಂಕ ವ್ಯಕ್ತಪಡಿಸಿದರು.

ಸಮ್ಮೇಳನ ಆರಂಭದಲ್ಲಿ ಕನ್ನಡ ರಾಜರತ್ನ ಜಿ.ಪಿ. ರಾಜರತ್ನಂ ಮಹಾದ್ವಾರದಲ್ಲಿ ಕನ್ನಡ ಧ್ವಜಾರೋಹಣ ಮಾಡಲಾಯಿತು. ಕುಮಾರಿ ದಿಯಾ ಹಚ್ಚೇವು ಕನ್ನಡದ ದೀಪ ಹಾಡಿಗೆ ನೃತ್ಯ ಪ್ರದರ್ಶನ ಮಾಡಿದರು. ಜ್ಞಾನಪೀಠ ಪುರಸ್ಕೃತ ಎಂಟು ಜನರ ಗೀತೆಗಳಿಗೆ ಶ್ರೀಸಾಯಿ ಅಂತಾರಾಷ್ಟ್ರೀಯ ಕಲಾ ತಂಡದವರು ನೃತ್ಯ ಪ್ರದರ್ಶಿದರು. ಸಮ್ಮೇಳನದಲ್ಲಿ ಪುಸ್ತಕ ಮಳಿಗೆಗಳು ಓದುಗರ ಗಮನ ಸೆಳೆದವು.

ಸಮ್ಮೇಳನದಲ್ಲಿ ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ ಸ್ಮರಣ ಸಂಚಿಕೆ ಹಾಗೂ ಹಾಸ್ಯ ಸಾಹಿತಿ ಎಂ.ಎಸ್ .ನರಸಿಂಹಮೂರ್ತಿ ಕವನ ಸಂಕಲನ ಬಿಡುಗಡೆ ಮಾಡಿದರು. ಶಾಸಕ ಡಾ. ಅಶ್ವತ್ಥನಾರಾಯಣ, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಹುಚ್ಚಪ್ಪ, ಬೈರಮಂಗಲ ರಾಮೇಗೌಡ, ಎನ್.ಆರ್. ನಂಜುಂಡೇಗೌಡ, ಆರ್.ಎ.ಪ್ರಸಾದ್, ಮಾಜಿ ಅಧ್ಯಕ್ಷ ಸಮಿವುಲ್ಲಾ ಖಾನ್ ಉಪಸ್ಥಿತರಿದ್ದರು.

### ಬಾಲ್ಯ ನೆನಪಿಸಿಕೊಂಡ ಬೆಂದ್ರೆ ಕೃಷ್ಣಪ್ಪ

ಮಲ್ಲೇಶ್ವರ ನನ್ನ ಬಾಲ್ಯವನ್ನು ರೂಪಿಸಿದೆ. ನಾನು ಈ ನೆಲದ ಅಣುಗ. ಕಾರ್ಪೊರೇಶನ್ ಸ್ಕೂಲ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕನ್ನಡದ ಶಿಕ್ಷಕ ಕೋಣಂದೂರು ಲಿಂಗಪ್ಪ ಮತ್ತು ಜೀ.ಶಂ. ಪರಮಶಿವಯ್ಯ ಅವರು ತಮಗೆ ಕನ್ನಡ ಭಾಷೆಯ ಸವಿಯುಣ್ಣಿಸಿದರು. ದ.ರಾ. ಬೇಂದ್ರೆಯವರ ಇಳಿದು ಬಾ ತಾಯಿ ನಮಗೆ ಪಠ್ಯಪುಸ್ತಕವಾಗಿದ್ದು ಅದರಿಂದ ಬೇಂದ್ರೆಯೆಡೆಗೆ ಆಕರ್ಷಿತನಾಗಿದ್ದೆ. ಮ. ರಾಮಮೂರ್ತಿ ಮತ್ತು ಅನಕೃ ಅವರ ಕನ್ನಡ ಭಾಷಣಗಳನ್ನು ಕೇಳಿ ಉತ್ಕಟ ಕನ್ನಡಾಭಿಮಾನಿಯಾಗಿದ್ದೆ ಎಂದು ತಮ್ಮ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ದಿಗಂತ ಚಿತ್ರ



ನಗರದ ಮಲ್ಲೇಶ್ವರ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್‌ನ 2ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಮ್ಮೇಳನಾಧ್ಯಕ್ಷ ಬೆಂದ್ರೆ ಕೃಷ್ಣಪ್ಪ ತಾಯಿ ಭುವನೇಶ್ವರಿ ದೇವಿಗೆ ಪುಷ್ಪನಮನ ಸಲ್ಲಿಸಿದರು. ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದರು.

> ಇಂಗ್ಲೆಂಡ್‌ನ ಬೆಂಗಳೂರು ಸ್ಟ್ರೀಟ್‌ನಲ್ಲಿ ಆ.5 ರಿಂದ 7ರವರೆಗೆ ಮೂರು ದಿನಗಳ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಸಮ್ಮೇಳನಕ್ಕೆ ಹೋಗಲು ವ್ಯವಸ್ಥೆ ಮಾಡಲಾಗುವುದು.
>
> [illegible] ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

> ಮಲ್ಲೇಶ್ವರದಲ್ಲಿ ಕನ್ನಡೇತರರಿಗೆ ಕನ್ನಡ ಕಲಿಯುವಂತೆ ಮಾಡುವುದು, ಇಲ್ಲಿನ ಪ್ರತಿಯೊಂದು ಮನೆಯಲ್ಲಿ ಕನ್ನಡ ಪತ್ರಿಕೆ ಹಾಕುವುದು, ವಾಹನಗಳಿಗೆ ಕನ್ನಡ ಅಂಕಿಗಳನ್ನು ಹಾಕಿಸುವಂತೆ ಮನವಿ ಮಾಡಲಾಗುವುದು.
>
> [illegible] ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಕಸಾಪ ಅಧ್ಯಕ್ಷ

ವಿಶ್ವವಾಣಿ

ಬೆಂಗಳೂರು
vishwavani.news
08.04.2018 ಭಾನುವಾರ

ರಾಜ್ಯದಲ್ಲಿ ಉಂಡ ಮನೆಗೆ ದ್ರೋಹ ಬಗೆಯುವ ಅಧಿಕಾರಿಗಳಿದ್ದಾರೆ: ಎಸ್.ಜಿ.ಸಿದ್ದರಾಮಯ್ಯ ಆಕ್ರೋಶ

# ಕನ್ನಡ ಭಾಷಿಕ ಅಧಿಕಾರಿಗಳಲ್ಲಿ ಇಚ್ಛಾಶಕ್ತಿ ಇಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಉಂಡ ಮನೆಗೆ ದ್ರೋಹ ಬಗೆಯುವ ಕನ್ನಡದವರೇ ಆದ ಅಧಿಕಾರಿಗಳಿದ್ದು, ಅವರಲ್ಲಿ ಕನ್ನಡದ ಬಗ್ಗೆ ಇಚ್ಛಾಶಕ್ತಿ ಕೊರತೆಯಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಲ್ಲೇಶ್ವರದ ಸರಕಾರಿ ಶಾಲಾ ಆವರಣದಲ್ಲಿ ನಡೆದ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿ, ಕನ್ನಡಿಗರೇ ಆದ ಕೆಲ ಅಧಿಕಾರಿಗಳು ಖಾಸಗಿ ಶಿಕ್ಷಣ ವಲಯದ ಕಡೆಗೆ ವಾಲುತ್ತಿದ್ದು, ಅಲ್ಲಿಯೂ ಕನ್ನಡ ಉಳಿಯದಂತೆ ಹಾಗೂ ಸರಕಾರಿ ವಲಯದಲ್ಲೂ ಕನ್ನಡದ ಬಾಗಿಲು ಮುಚ್ಚುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಎಲ್ಲ ರಾಜ್ಯಗಳ ಅಸ್ಮಿತೆ ಉಳಿದರೆ ದೇಶದ ಅಸ್ಮಿತೆ ಉಳಿಯುತ್ತದೆ. ಭಾರತ ಬಹುತ್ವದ ದೇಶ. ಬಹುತ್ವಕ್ಕೆ ನೆರೆಯ ರಾಜ್ಯ ತಮಿಳುನಾಡು ಮಾದರಿ. ಅಲ್ಲಿನ ಎಲ್ಲ ಶಾಲೆಗಳಲ್ಲಿ ಹತ್ತು ವರ್ಷದ ಹಿಂದೆಯೇ ಒಂದರಿಂದ ಹತ್ತನೇ ತರಗತಿಯವರೆಗೆ ತಮಿಳು ಭಾಷೆಯನ್ನು ಪ್ರಥಮ ಭಾಷೆಯಾಗಿ ಕಲಿಸಬೇಕು ಎಂಬುದು ಕಡ್ಡಾಯಗೊಳಿಸಲಾಗಿದೆ. ಅದನ್ನು ಭಾಷಾ ಇಚ್ಛಾ ಶಕ್ತಿ ಹೊಂದಿದ ಅಧಿಕಾರಿಗಳು ಕಟ್ಟುನಿಟ್ಟಾಗಿ ನಿಭಾಯಿಸುತ್ತಿದ್ದಾರೆ. ಅದು ನಿಜವಾದ ಭಾಷಾ ಪ್ರಜ್ಞೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಸಮ್ಮೇಳನಾಧ್ಯಕ್ಷ ಬೇಂದ್ರ ಕೃಷ್ಣಪ್ಪ ಅವರನ್ನು ರಥದಲ್ಲಿ ಮೆರವಣಿಗೆಯಲ್ಲಿ ವೇದಿಕೆಗೆ ಕರೆ ತರಲಾಯಿತು. ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಸಂಭ್ರಮದಿಂದ ಪಾಲ್ಗೊಂಡಿದ್ದರು.

ವಿದೇಶಗಳಲ್ಲೂ ಕನ್ನಡ ಸಾಹಿತ್ಯ ಸಮ್ಮೇಳನ: ಉದ್ಯೋಗ ಸೃಷ್ಟಿ, ರಾಜಕೀಯ, ಸಾಂಸ್ಕೃತಿಕ ಲೋಕ, ಮಾಧ್ಯಮಲೋಕ ಇತ್ಯಾದಿ ವಿಷಯ ಕುರಿತು ಸಾಹಿತ್ಯ ಸಮ್ಮೇಳನದಲ್ಲಿ ಚರ್ಚೆಯಾಗುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯದ ಸಮಸ್ಯೆ ಕುರಿತು ಚರ್ಚಿಸುವ ವೇದಿಕೆಯಾಗಿದೆ. ರಾಜ್ಯದಲ್ಲಿ ಮಾತ್ರವಲ್ಲದೇ ಅಮೆರಿಕ, ಆಸ್ಟ್ರೇಲಿಯಾ, ಸಿಂಗಾಪುರ, ಅರಬ್ ರಾಷ್ಟ್ರಗಳು ಸೇರಿ ಪ್ರಪಂಚದಾದ್ಯಂತ ಸಾಹಿತ್ಯ ಸಮ್ಮೇಳನ ನಡೆಸುವ ಮೂಲಕ ಕನ್ನಡ ಸಾಹಿತ್ಯ ವಿಸ್ತರಿಸುತ್ತಿದೆ ಎಂದು ಶ್ಲಾಘಿಸಿದರು. ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದ ಕವಿಗಳ ಗೀತೆಗಳನ್ನು ನೃತ್ಯದ ಮೂಲಕ ಪ್ರಸ್ತುತ ಪಡಿಸಿದ ಸಾಯಿ ಇಂಟರ್‌ನ್ಯಾಷನಲ್‌ನ ಶ್ರೀವತ್ಸ ಹಾಗೂ ತಂಡವನ್ನು ಸನ್ಮಾನಿಸಲಾಯಿತು. ಸಮ್ಮೇಳನದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಶಾಸಕ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ಮಲ್ಲೇಶ್ವರ ಪರಿಷತ್ ಅಧ್ಯಕ್ಷ ಕೆ.ಗಣೇಶ್‌ರಾವ್ ಕೇಸರ್ಕರ್, ಕರವೇ ರಾಜ್ಯಾಧ್ಯಕ್ಷ ಶಿವರಾಮೇಗೌಡ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಸಾಹಿತಿ ಬೈಮಂಗಲ ರಾಮೇಗೌಡ, ನಗರ ಕಸಾಪ ಅಧ್ಯಕ್ಷ ಮಾಯಣ್ಣ ಇದ್ದರು.

## ವ್ಯಾಪಾರಿ ಕೇಂದ್ರಗಳಾದ ಕನ್ನಡ ಸಂಸ್ಥೆಗಳು !

ರಾಜ್ಯದಲ್ಲಿ ಕನ್ನಡ ಸಂಸ್ಥೆಗಳು ವ್ಯಾಪಾರಿ ಕೇಂದ್ರಗಳಾಗಿ ಮಾರ್ಪಟ್ಟಿದ್ದಲ್ಲದೇ ಜಗತ್ತಿನ ವ್ಯಾಪಾರ-ವ್ಯವಹಾರದ ನಗರವಾದ ಬೆಂಗಳೂರಿನಲ್ಲೇ ಕನ್ನಡ ಉಸಿರುಗಟ್ಟಿದ ವಾತಾವರಣದಲ್ಲಿದೆ. ಆಂಗ್ಲ ಭಾಷೆಯ ಮೋಹ, ಆಂಗ್ಲ ಮಾಧ್ಯಮ ಶಾಲೆಗಳ ಹೆಚ್ಚಳದಿಂದ ಕನ್ನಡದ ಅಸ್ಮಿತೆಯನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ಪ್ರಶ್ನೆ ಸದಾ ಕಾಡುತ್ತಿದೆ. ದಂಡು ದಂಡಾಗಿ ಮಹಾನಗರಕ್ಕೆ ವಲಸಿಗರು ಬರುತ್ತಿದ್ದಾರೆ. ಇಲ್ಲಿರುವ ಎಲ್ಲರನ್ನೂ ಕರ್ನಾಟಕದವರೇ ಎಂದು ಕರೆಯುತ್ತೇವೆ. ಆದರೆ ಕರ್ನಾಟಕಸ್ಥರು ಆಗುವುದು ಬೇರೆ, ಕನ್ನಡಿಗರಾಗಿ ಬಾಳುವುದು ಬೇರೆ. ಈ ಸಂಬಂಧ ದ.ರಾ.ಬೇಂದ್ರೆ ಅವರ ಕರ್ನಾಟಕ ಒಂದೇ ಒಂದೆ ಎಂಬ ಕವಿತೆ ಸಾಲು ನೆನಪಾಗುತ್ತದೆ ಎಂದು ಸಮ್ಮೇಳನಾಧ್ಯಕ್ಷ ಬೇಂದ್ರೆ ಕೃಷ್ಣಪ್ಪ ಹೇಳಿದರು.

ಭಾನುವಾರ 8 ಏಪ್ರಿಲ್ 2018
VIJAYAVANI » 8 APRIL 2018

# ನೇತಾರರ ದೃಷ್ಟಿ ಬದಲಿಸಲು ಯುವ ಸಮೂಹ ಮುಂದಾಗಲಿ

## ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಆಶಯ » ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಬೆಳ್ಳಿಹಬ್ಬ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದೇಶವನ್ನಾಳುತ್ತಿರುವ ನೇತಾರರ ದೃಷ್ಟಿಕೋನ ಬದಲಿಸಲು ಯುವಜನ ಮುಂದಾಗಬೇಕಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಕರೆ ನೀಡಿದ್ದಾರೆ.

ಶುಕ್ರವಾರ ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬ ಸಂಭ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕೃಷಿ, ಕೈಗಾರಿಕೆ ಸಾಕಷ್ಟು ಮುಂದವರಿದಿದೆ. ಅದನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ಯಬೇಕಿದೆ ಎಂದರು.

ಸಮಯ ಪಾಲನೆ ಮತ್ತು ಅವಕಾಶಗಳ ಸದ್ಬಳಕೆ ಮಾಡಿಕೊಂಡು ಹೆಚ್ಚೆಚ್ಚು ಸಾಧನೆ ಮಾಡುವತ್ತ ಮುಂದಾಗಬೇಕು. ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಆತ್ಮವಿಶ್ವಾಸ ಹಾಗೂ ಧೈರ್ಯ ದಿಂದ ವ್ಯಕ್ತಿತ್ವ ರೂಢಿಸಿಕೊಳ್ಳಬೇಕು ಎಂದು ಕರೆ ನೀಡಿದರು.

**ನೈತಿಕ ಶಿಕ್ಷಣ ಅವಶ್ಯ:** ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣದ ಜತೆಗೆ ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳು, ಚಾರಿತ್ರ್ಯ, ನೈತಿಕ ಶಿಕ್ಷಣ ನೀಡುವುದು ಅವಶ್ಯವಿದೆ. ಮಕ್ಕಳಲ್ಲಿ ಭೌತಿಕ ಜ್ಞಾನವನ್ನು ಬೆಳೆಸಬೇಕಿದೆ. ಸ್ವಾಮಿ ವಿವೇಕಾನಂದ ಹಾಗೂ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ಅರಿಯಬೇಕು ಎಂದು ಹೇಳಿದರು.



ಬೆಳ್ಳಿಹಬ್ಬವನ್ನು ಡಾ.ವೀರೇಂದ್ರ ಹೆಗ್ಗಡೆ ಮತ್ತಿತರ ಗಣ್ಯರು ಉದ್ಘಾಟಿಸಿದರು.



ಬೆಳ್ಳಿಹಬ್ಬದ ಸಂಭ್ರಮದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನ ನಡೆಯಿತು.

ನಿರ್ದಿಷ್ಟ ಗುರಿ ಹೊಂದದಿದ್ದರೆ ದೇಶಕ್ಕೆ ಭವಿಷ್ಯವಿಲ್ಲ. ಭಾರತದ ಭವಿಷ್ಯವನ್ನು ಸುಭದ್ರಗೊಳಿಸಲು ದೂರದೃಷ್ಟಿ ಹೊಂದುವ ಅವಶ್ಯಕತೆಯಿದೆ. ಈಗಿನ ಪೀಳಿಗೆ ಸಾಕಷ್ಟು ಅದೃಷ್ಟ ಮಾಡಿದೆ. ಪತ್ರಿಕೆಗಳು, ದೂರದರ್ಶನ, ಸಾಮಾಜಿಕ ಜಾಲತಾಣಗಳು, ಅಂತರ್ಜಾಲಗಳಿದ್ದು, ಕ್ಷಣಾರ್ಧದಲ್ಲಿ ಮಾಹಿತಿ ಸಂಗ್ರಹಿಸಬಹುದು. 21ನೇ ಶತಮಾನದ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರಸ್ತುತ ಕಾಲಘಟ್ಟಕ್ಕೆ ತಕ್ಕಂತೆ ಆಲೋಚಿಸಬೇಕು.

[illegible] ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ, ನಿಸ್ವಾರ್ಥ, ತ್ಯಾಗ ಮತ್ತು ಸೇವಾ ಮನೋಭಾವವಿದ್ದಲ್ಲಿ ಮಾತ್ರವೇ ದೇಶದ ಅಭಿವೃದ್ಧಿ ಆಗಲು ಸಾಧ್ಯ. ವೀರೇಂದ್ರ ಹೆಗ್ಗಡೆ ಅವರು ಸಹ ನಮ್ಮದೇ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿದ್ದರು ಎಂಬುದು ಅತ್ಯಂತ ಹೆಮ್ಮೆಯ ವಿಚಾರ ಎಂದು ಹೇಳಿದರು. ಸಂಸ್ಥೆಯನ್ನು ನಿರ್ಮಿಸಿದ ಸೀತಮ್ಮ ಮತ್ತು ಆನಂದಮ್ಮರ ಕೊಡುಗೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಸ್ಮರಿಸಿದರು. ಶೇಷಾದ್ರಿಪುರ ವಿದ್ಯಾ ಸಂಸ್ಥೆ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಉಪಾಧ್ಯಕ್ಷರಾದ ಟಿ.ಎಸ್. ಹೆಂಜಾರಪ್ಪ, ಡಬ್ಲ್ಯು.ಎಚ್. ಅನಿಲ್ ಕುಮಾರ್, ಗೌರವ ಖಜಾಂಚಿ ಬಿ.ಎಂ. ಪಾರ್ಥಸಾರಥಿ, ಸಂಚಾಲಕ ಪ್ರೊ. ಶಾಂತನು ದಾಸ್, ಪ್ರಾಂಶುಪಾಲ ಡಾ. ಎಸ್.ಎನ್. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಭಾನುವಾರ ಏಪ್ರಿಲ್ 8, 2018



ಜನಪದ ವೇಷಧಾರಿ ವಿದ್ಯಾರ್ಥಿಗಳೊಂದಿಗೆ ವೀರೇಂದ್ರ ಹೆಗ್ಗಡೆ, ಡಾ.ವೂಡೇ ಪಿ.ಕೃಷ್ಣ, ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎನ್. ವೆಂಕಟೇಶ್ ಇದ್ದಾರೆ

# 'ನೇತಾರರ ದೃಷ್ಟಿಕೋನ ಬದಲಾಯಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತ ವ್ಯವಸ್ಥೆ ಹಾಗೂ ದೇಶ ಆಳುವ ನೇತಾರರ ದೃಷ್ಟಿಕೋನವನ್ನು ಬದಲಾಯಿಸುವ ನಿಟ್ಟಿನಲ್ಲಿ ಯುವ ಜನಾಂಗ ಮುನ್ನಡೆಯಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಸಲಹೆ ನೀಡಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ಬೆಳ್ಳಿ ಹಬ್ಬ'ದಲ್ಲಿ ವಿಶೇಷ ಉಪನ್ಯಾಸ ನೀಡಿದರು.

'ದೇಶದ ಬೆಳವಣಿಗೆಗೆ ದೂರದೃಷ್ಟಿ ಅತಿ ಮುಖ್ಯ. ಕೃಷಿ, ಕೈಗಾರಿಕೆ ಮತ್ತು ಮಾಹಿತಿ ತಂತ್ರಜ್ಞಾನ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು' ಎಂದರು.

ವಿದ್ಯಾರ್ಥಿಗಳು ಸಮಯ ಪಾಲನೆ ಮತ್ತು ಅವಕಾಶಗಳ ಸದ್ಬಳಕೆ ಮಾಡಿಕೊಳ್ಳಬೇಕು. ಕೀಳರಿಮೆ ಬಿಟ್ಟು ಆತ್ಮವಿಶ್ವಾಸ ಮತ್ತು ಧೈರ್ಯ ಬೆಳೆಸಿಕೊಂಡು, ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಲ್ಲಿ ಉತ್ತಮ ಚಾರಿತ್ರ್ಯವನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ 'ನಿಸ್ವಾರ್ಥ, ತ್ಯಾಗ ಮತ್ತು ಸೇವಾ ಮನೋಭಾವ ಬೆಳೆಸಿಕೊಂಡರೆ ಮಾತ್ರ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು ಸಾಧ್ಯ' ಎಂದರು.

ಯಕ್ಷಗಾನ, ಡೊಳ್ಳುಕುಣಿತ, ನಂದಿಕೋಲು, ಪೂಜಾಕುಣಿತವನ್ನು ಪ್ರದರ್ಶಿಸಿದರು. ಕರಗ ಮಹೋತ್ಸವ ಗಮನ ಸೆಳೆಯಿತು.

# [illegible]

ಬೆಂಗಳೂರು, ಏ. 7– ಕನ್ನಡ ಭಾಷಾ ಕಲಿಕಾ ನಿಯಮದಂತೆ ಎಲ್ಲಾ ಇಂಗ್ಲೀಷ್ ಮಾಧ್ಯಮ, ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಶಾಲೆಗಳಲ್ಲಿಒಂದನೇ ತರಗತಿಯಿಂದ ಒಂದು ಭಾಷೆಯಾಗಿ ಕನ್ನಡವನ್ನು ಕಲಿಸಬೇಕು ಎಂದು ಬೇಂದ್ರೆ ಕೃಷ್ಣಪ್ಪ ಅವರು ಆಗ್ರಹಿಸಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ 2ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕರ್ನಾಟಕದಲ್ಲಿ ವಾಸಿಸುವ ಎಲ್ಲರಿಗೂ ಕನ್ನಡ ಕಲಿಸುವುದರ ಜೊತೆಗೆ ನಾವು ನಮ್ಮ ಮಕ್ಕಳಿಗೆ ಮೊದಲು ಕನ್ನಡ ಕಲಿಸಬೇಕು. ಇದನ್ನು ಅರಿತು ಇಂಗ್ಲೀಷ್ ಮೋಹಿಗಳಾದ ನಾವು ಮತ್ತು ಕನ್ನಡ ನಾಡಿನಲ್ಲಿ ವಾಸಿಸುವ ಇತರ ಭಾಷಿಗರು ಸರ್ಕಾರದ ಅಧಿಸೂಚನೆಯಂತೆ ಶಾಲೆಗಳಲ್ಲಿ ಕನ್ನಡ ಕಲಿಕೆಯನ್ನು ಅನುಷ್ಠಾನಕ್ಕೆ ತರುವುದು ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಸುವರ್ಣಾವಕಾಶವಾಗಿದೆ ಎಂದರು.

ಕರ್ನಾಟಕದಲ್ಲಿ ಹೆಚ್ಚು ಖಾಸಗೀ ಇಂಗ್ಲೀಷ್ ಶಾಲೆಗಳನ್ನು ಹೊಂದಿರುವವರು ಕನ್ನಡಿಗರು. ಅವರು ಬರೀ ಬಾಯುಪಚಾರದ ಕನ್ನಡ ಅಭಿಮಾನದ ಮಾತನಾಡದೆ ತಾವು ಉಳಿಯಲು ತಮ್ಮ ಭಾಷೆ, ಸಂಸ್ಕೃತಿ, ಕನ್ನಡತನ ಉಳಿಸಿ ಬೆಳೆಸಲು ಸರ್ಕಾರದ ಅಧಿಸೂಚನೆಯನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.



ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ಅವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಾಯಣ್ಣ, ಶಿಕ್ಷಣ ತಜ್ಞ ಡಾ. ವೂಡೆ ಟಿ. ಕೃಷ್ಣ ಮುಂತಾದವರು ಭಾಗವಹಿಸಿದ್ದರು.

ಪ್ರಾಥಮಿಕ ಒಂದನೇ ತರಗತಿಯಲ್ಲಿ ನಲಿ–ಕಲಿ'ಯಿಂದ ಮಕ್ಕಳು ಕನ್ನಡವನ್ನು ಸರಿಯಾಗಿ ಕಲಿತಿಲ್ಲ. ಈ ವ್ಯವಸ್ಥೆಯನ್ನು ಬಿಟ್ಟು ಮೊದಲಿನಂತೆ ಕನ್ನಡ ಅಕ್ಷರ ಕಾಗುಣಿತ ಕಲಿತ ಮೇಲೆ ಮಕ್ಕಳು ನಲಿಯಲಿ ಎಂದು ವರನಟ ಡಾ. ಮುತ್ತುರಾಜ ವೇದಿಕೆಯಲ್ಲಿ ಅವರು ಸರ್ಕಾರಕ್ಕೆ ಮನವಿ ಮಾಡಿದರು.

ವಿಶ್ವ ವಾಣಿಜ್ಯೀಕರಣದಿಂದಾಗಿ ಬೆಂಗಳೂರಿನಲ್ಲಿ ಕನ್ನಡ ಇಂದು ಉಸಿರುಗಟ್ಟಿದ ವಾತಾವರಣದಲ್ಲಿದೆ. ಆಂಗ್ಲ ಭಾಷಾ ಮೋಹದಿಂದ ಇಂಗ್ಲೀಷ್ ಮಾಧ್ಯಮ ಶಾಲೆಗಳ ಹೆಚ್ಚಳದಲ್ಲಿ ಕನ್ನಡದ ಅಸ್ಮಿತೆಯನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬ ಪ್ರಶ್ನೆ ಎದ್ದಿದೆ ಎಂದರು.

ಬೆಂಗಳೂರಿಗೆ ವಲಸಿಗರು ದಂಡುದಂಡಾಗಿ ಬರುತ್ತಿದ್ದಾರೆ. ನಾವು ಇಲ್ಲಿರುವ ಎಲ್ಲರನ್ನೂ ಕರ್ನಾಟಕಸ್ತರು ಎಂದು ಕರೆಯುತ್ತೇವೆ. ಕರ್ನಾಟಕಸ್ತರು ಆಗುವುದು ಬೇರೆ, ಕನ್ನಡಿಗರಾಗಿ ಬಾಳುವುದು ಬೇರೆ ಎಂದ ಅವರು ಈ ಕಾರಣಕ್ಕಾಗಿ ದ.ರಾ. ಬೇಂದ್ರೆಯವರ ಕವಿತೆಯ, ಒಂದೇ ಒಂದೇ ಒಂದೇ ಕರ್ನಾಟಕ ಒಂದೇ, ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ' ಸಾಲುಗಳನ್ನು ಉಲ್ಲೇಖಿಸಿದರು.

ಮಲ್ಲೇಶ್ವರ ನನ್ನ ಬಾಲ್ಯವನ್ನು ರೂಪಿಸಿತು. ನಾನು ಈ ನೆಲದ ಅಣುಗ ಎಂದ ಅವರು ಕಾರ್ಪೊರೇಶನ್ ಸ್ಕೂಲ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕನ್ನಡದ ಶಿಕ್ಷಕರಾದ ಕೊಣಂದೂರು ಲಿಂಗಪ್ಪ ಮತ್ತು ಜಿ.ಶಂ. ಪರಮಶಿವಯ್ಯ ಅವರು ತಮಗೆ ಕನ್ನಡ ಭಾಷೆಯ ಸವಿಯುಣ್ಣಿಸಿದರು. ದ.ರಾ. ಬೇಂದ್ರೆಯವರ ಇಳಿದು ಬಾ ತಾಯೆ' ತಮಗೆ ಪಠ್ಯಪುಸ್ತಕವಾಗಿದ್ದು ಅದರಿಂದ ಬೇಂದ್ರೆಯೆಡೆಗೆ ಆಕರ್ಷಿತವಾಗಿದ್ದನ್ನು, ಮಾ. ರಾಮಮೂರ್ತಿ ಮತ್ತು ಅನಕೃ ಅವರ ಕನ್ನಡ ಭಾಷಣಗಳನ್ನು ಕೇಳಿ ಉತ್ಕಟ ಅಭಿಮಾನಿಯಾಗಿದ್ದನ್ನು ನೆನಪಿಸಿಕೊಂಡರು.

ಮಲ್ಲೇಶ್ವರ ಸರ್ಕಾರಿ ಶಾಲೆಯ ಆವರಣದಲ್ಲಿ ನಡೆದ ಸಮ್ಮೇಳನಕ್ಕೆ ಕನ್ನಡ ರಾಜರತ್ನ ಜಿ.ಪಿ. ರಾಜರತ್ನಂ ಮಹಾದ್ವಾರದ ಪ್ರವೇಶದಲ್ಲಿ ಕನ್ನಡ ಧ್ವಜಾರೋಹಣ ಮಾಡಿ ಚಾಲನೆ ನೀಡಲಾಯಿತು.

ಶಾಸಕ ಡಾ. ಪಿ.ಎಲ್. ಅಶ್ವಥನಾರಾಯಣ, ಪರಿಷತ್ತಿನ ಅಧ್ಯಕ್ಷ ಕೆ. ಗಣೇಶರಾವ್ ಕೇಸರ್ಕರ, ಮಾಜಿ ಅಧ್ಯಕ್ಷ ಸಮಿವುಲ್ಲಾ ಖಾನ ಮುಂತಾದವರು ಭಾಗವಹಿಸಿದ್ದರು.

ನಂತರ ಮಲ್ಲೇಶ್ವರ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಕನ್ನಡ ರಥದಲ್ಲಿ ಸಮ್ಮೇಳನಾಧ್ಯಕ್ಷ ಬೇಂದ್ರೆ ಕೃಷ್ಣಪ್ಪ ಅವರನ್ನು ಮಲ್ಲೇಶ್ವರ ಸಂಪಿಗೆ ಮುಖ್ಯರಸ್ತೆ ಮಾರ್ಗೋಸಾ ರಸ್ತೆಗಳ ಮೂಲಕ ಡೊಳ್ಳು ಕುಣಿತ, ಪಟ ಕುಣಿತ, ವಾದ್ಯಗೋಷ್ಠಿ ಮುಂತಾದ ಜನಪದ ತಂಡಗಳು, ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು, ಶಾಲಾ ಕಾಲೇಜುಗಳ ಮಕ್ಕಳು, ಕನ್ನಡ ಅಭಿಮಾನಿಗಳು ಭುವನೇಶ್ವರಿ ತಾಯಿಯ ಭಾವಚಿತ್ರದೊಂದಿಗೆ ಮೆರವಣಿಗೆ ಮೂಲಕ ವೇದಿಕೆಗೆ ಕರೆತಂದರು.

ಈ ಸಂಜೆ

ಶನಿವಾರ, 07-04-2018



ನಗರದಲ್ಲಿಂದು ನಡೆದ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ 2ನೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭುವನೇಶ್ವರಿ ದೇವಿಗೆ ಸಮ್ಮೇಳನಾಧ್ಯಕ್ಷ ಬೇಂದ್ರೆ ಕೃಷ್ಣಪ್ಪ ಪುಷ್ಪನಮನ ಸಲ್ಲಿಸಿ ಉದ್ಘಾಟಿಸಿದರು. ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ, ನಗರ ಕಸಾಪ ಅಧ್ಯಕ್ಷ ಮಾಯಣ್ಣ, ಮಾಜಿ ಮೇಯರ್ ಜೆ.ಹುಚ್ಚಪ್ಪ, ಕ್ಷೇತ್ರ ಕಸಾಪ ಅಧ್ಯಕ್ಷ ಕೆ.ಗಣೇಶರಾವ್ ಕೇಸರ್ಕರ್, ಬಿಜೆಪಿ ಮುಖಂಡ ಸುಬ್ಬಣ್ಣ ಮತ್ತಿತರರು ಪಾಲ್ಗೊಂಡಿದ್ದರು.

## ಮಲ್ಲೇಶ್ವರ ಕನ್ನಡ ಸಾಹಿತ್ಯ ಸಮ್ಮೇಳನ

# ಮಕ್ಕಳಿಗೆ ಕನ್ನಡ ಪ್ರೇಮ ಬೆಳೆಸಿ

ಬೆಂಗಳೂರು, ಏ.7- ಮಕ್ಕಳಿಗೆ ಕನ್ನಡ ಪ್ರೇಮ ಬೆಳೆಸಿ. ಕಲಿಕೆಗೆ ಹೆಚ್ಚು ಒತ್ತು ನೀಡುವಂತಹ ಯೋಜನೆಗಳನ್ನು ಸರ್ಕಾರ ರೂಪಿಸಬೇಕು ಎಂದು ಮಲ್ಲೇಶ್ವರಂ ಎರಡನೇ ಸಾಹಿತ್ಯ ಸಮ್ಮೇಳನಾಧ್ಯಕ್ಷ ಬೇಂದ್ರೆ ಕೃಷ್ಣಪ್ಪ ಸರ್ಕಾರಕ್ಕೆ ಮನವಿ ಮಾಡಿದರು.

ಮಲ್ಲೇಶ್ವರಂನ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾವು ಕರ್ನಾಟಕದಲ್ಲಿ ವಾಸಿಸುವ ಎಲ್ಲರಿಗೂ ಕನ್ನಡ ಕಲಿಸುವ ಜೊತೆಗೆ ನಮ್ಮ ಮಕ್ಕಳಿಗೆ ಮೊದಲು ಸೂಕ್ತ ರೀತಿಯಲ್ಲಿ ಕನ್ನಡ ಕಲಿಸಬೇಕು. ಕೇವಲ ಪ್ರಚಾರಕ್ಕಾಗಿ ಕನ್ನಡವನ್ನು ಮೈಗೂಡಿಸಿಕೊಂಡರೆ ಅದು ರೆಕ್ಕೆಪುಕ್ಕವಿಲ್ಲದ ಪಕ್ಷಿಯಂತಾಗಿ ಕನ್ನಡವೇ ನಶಿಸಿ ಹೋಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಎಸ್‌ಎಸ್‌ಎಲ್‌ಸಿ ಓದಿದರೂ ಸಹ ಕನ್ನಡ ಭಾಷೆಯ ಉಚ್ಚಾರಣೆ ಮತ್ತು ಬಳಕೆಯಲ್ಲಿ ಸಾಕಷ್ಟು ವ್ಯತ್ಯಾಸ ತಿಳಿಯದೆ ತಪ್ಪುಗುವ ವಿದ್ಯಾರ್ಥಿಗಳನ್ನೇ ಕಾಣುತ್ತೇವೆ. ಅದರಲ್ಲೂ ಉ ಕಾರ –ಹ ಕಾರ ಬಳಕೆಯಲ್ಲಿನ ವ್ಯತ್ಯಾಸದಿಂದಾಗಿ ಭಾಷಾ ಅರಿವಿಲ್ಲದೆ ಭಾವದ ಕಾವು ಕಮರಿಹೋಗುತ್ತಿದೆ ಎಂದು ವಿಷಾದಿಸಿದರು.

ಈ ಬಗೆಯ ಅವ್ಯವಸ್ಥೆಗೆ ತಂದಿಟ್ಟ ಪ್ರಾಥಮಿಕ ಪಾಠಶಾಲೆಯ ಕನ್ನಡ ಕಲಿಕಾ ಪ್ರಯೋಗಕ್ಕೆ ಏನು ಹೇಳಬೇಕು ಎಂದು ಪ್ರಶ್ನಿಸಿದರು.

ಮೊದಲಿಗೆ ಶಿಕ್ಷಣ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಜಾರಿಗೊಳ್ಳಬೇಕು. ಆ ನಿಯಮದ ಪ್ರಕಾರ ಎಲ್ಲಾ ಇಂಗ್ಲೀಷ್ ಮಾಧ್ಯಮದ ಶಾಲೆಗಳಲ್ಲಿ ರಾಜ್ಯ ಪಠ್ಯಕ್ರಮಗಳಲ್ಲಿ ಒಂದನೇ ತರಗತಿಯಿಂದ ಕನ್ನಡ ಕಲಿಸಬೇಕು. ಇದರಿಂದ ಮಾತ್ರ ಕನ್ನಡ ಭಾಷೆ ಉಳಿಸಿ ಬೆಳೆಸಲು ಸುವರ್ಣಾವಕಾಶ ಒದಗಲಿದೆ ಎಂದರು.

ನಮ್ಮ ಭಾಷೆ, ಸಂಸ್ಕೃತಿ ಉಳಿಸಿ ಬೆಳೆಸಲು ಅಧಿಸೂಚನೆ ಜಾರಿಯಾಗಬೇಕು ಆಗ ಮಾತ್ರ ನಮ್ಮ ಮಕ್ಕಳು ಸಾರ್ವಜನಿಕವಾಗಿ, ಸಾಹಿತ್ಯಕ ಹಾಗೂ ಸಾಂಸ್ಕೃತಿಕವಾಗಿ ಕರ್ನಾಟಕದ ಅರಿವಿಗೆ ಒಳಗಾಗುತ್ತಾರೆ. ಇದನ್ನು ಅರಿತು ಅಧಿಸೂಚನೆ ಜಾರಿಗೊಳಿಸಿ ಎಂದು ಶಾಲೆ ನಡೆಸುವ ಎಲ್ಲಾ ಕನ್ನಡ ಬಂಧುಗಳನ್ನು ಸಮ್ಮೇಳನದ ಮೂಲಕ ಕೈಮುಗಿದು ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ಬಡ ಕುಟುಂಬದಿಂದ ಬಂದ ಮಕ್ಕಳು ಕನ್ನಡ ಮಾಧ್ಯಮದಲ್ಲಿ ವಿಜ್ಞಾನ, ಸಮಾಜಶಾಸ್ತ್ರ, ಗಣಿತ ಕಲಿಯಬೇಕಾಗಿರುವುದರಿಂದ ಅವರಿಗೆ ಕಲಿಕೆ ಭಾಷೆಯ ತೊಡಕು ಉಂಟಾಗುವುದಿಲ್ಲ. ಆದರೆ ಸಂವಹನ ಕೊರತೆ ಮಾತ್ರ ಎದುರಾಗುತ್ತದೆ ಎಂದು ತಿಳಿಸಿದರು.

ಬಡತನದ ಅಸಹಾಯಕ ಕನ್ನಡ ಮಕ್ಕಳು ಉನ್ನತ ಶಿಕ್ಷಣ ಪಡೆಯದೆ ಉತ್ತಮ ಉದ್ಯೋಗದಿಂದ ವಂಚಿತರಾಗಿ ಆರ್ಥಿಕವಾಗಿ ಹಿಂದುಳಿಯುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದರು.


ಮಲ್ಲೇಶ್ವರಂನ ಕುವೆಂಪು ಪ್ರತಿಮೆಯಿಂದ ಸಂಪಿಗೆ ರಸ್ತೆ ಮೂಲಕ ವಿವಿಧ ಜಾನಪದ ಕಲಾತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರನ್ನು ವೇದಿಕೆಗೆ ಕರೆತರಲಾಯಿತು. ಕನ್ನಡ ಜಾಗೃತಿ ಕುರಿತ ನೃತ್ಯ ಪ್ರದರ್ಶನ ಏರ್ಪಡಿಸಲಾಗಿತ್ತು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ, ಕ್ಷೇತ್ರ ಕಸಾಪ ಅಧ್ಯಕ್ಷ ಕೆ.ಗಣೇಶರಾವ್ ಕೇಸರ್ಕರ್, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಕ್ರೀಡಾಪಟು ಟಿ.ಕೆ.ನಾರಾಯಣಪ್ಪ ಮಲ್ಲೇಶ್ವರಂ ಶಾಸಕ ಅಶ್ವತ್ಥನಾರಾಯಣ, ಶಿಕ್ಷಣ ತಜ್ಞ ಪ್ರೊ.ಪಿ.ಕೃಷ್ಣ ಸಾಹಿತಿ ಬೈರಮಂಗಲ ರಾಮೇಗೌಡ, ಕಸಾಪ ನಗರಾಧ್ಯಕ್ಷ ಮಾಯಣ್ಣ ಮತ್ತಿತರರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ

ಶನಿವಾರ, 7, ಏಪ್ರಿಲ್, 2018.

# ರಾಜಕೀಯ ದೃಷ್ಟಿ ಬದಲಾಗಲಿ



ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿ ಹಬ್ಬ ಸಮಾರಂಭವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಇದ್ದರು.

ಸಂ.ಕ.ಸಮಾಚಾರ ಬೆಂಗಳೂರು

ಕೃಷಿ, ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಯಲ್ಲಿ ದೇಶ ಮುಂಚೂಣಿಯಲ್ಲಿದ್ದು ದೇಶದ ಆಡಳಿತ ವ್ಯವಸ್ಥೆ ಹಾಗೂ ದೇಶವನ್ನಾಳುವ ನೇತಾರರ ದೃಷ್ಟಿಕೋನ ಬದಲಾಯಿಸಲು ಯುವ ಜನತೆ ಮುಂದಾಗಬೇಕೆಂದು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅಭಿಪ್ರಾಯಪಟ್ಟರು.

- ಯುವಕರು ಆತ್ಮವಿಶ್ವಾಸ ರೂಢಿಸಿಕೊಳ್ಳಿ
- ಹೊಸ ಹೊಸ ಆವಿಷ್ಕಾರಗಳನ್ನು ಆಲೋಚಿಸಿ
- ನೈತಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿ ಹಬ್ಬ ಸಮಾರಂಭದಲ್ಲಿ ಮಾತನಾಡಿದ ಅವರು, ಯುವಕರು ಕೀಳರಿಮೆ ಬಿಟ್ಟು ಆತ್ಮವಿಶ್ವಾಸ ಹಾಗೂ ಧೈರ್ಯದಿಂದ ವ್ಯಕ್ತಿತ್ವ ರೂಢಿಸಿಕೊಳ್ಳಬೇಕು. ಮೂಲಕ ಭವಿಷ್ಯದ ಭಾರತಕ್ಕೆ ಕೊಡುಗೆ ನೀಡುವತ್ತ ಗಮನ ಹರಿಸಬೇಕು. ಭವಿಷ್ಯದ ತಲೆಮಾರಿನ ದೂರದೃಷ್ಟಿ ಗಮನದಲ್ಲಿಟ್ಟುಕೊಂಡು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು.

ಈಗಾಗಲೇ ಕೃಷಿ, ಕೈಗಾರಿಕಾ ಕ್ಷೇತ್ರದಲ್ಲಿ ದೇಶ ಮುಂಚೂಣಿಯಲ್ಲಿದ್ದು ದೇಶದ ಆಡಳಿತ ವ್ಯವಸ್ಥೆ ಬದಲಾಯಿಸಲು ಯುವ ಜನತೆ ಸಂಕಲ್ಪ ಮಾಡಬೇಕೆಂದರು.

ನಿರ್ದಿಷ್ಟ ಗುರಿ, ದೂರದೃಷ್ಟಿಯಿಲ್ಲದೇ ದೇಶದ ಅಭಿವೃದ್ಧಿ ಕನಸು ಕಂಡರೇ ಅಂತಹ ದೇಶಕ್ಕೆ ಭವಿಷ್ಯವಿಲ್ಲ. ಇಂದಿನ ಪಾಶ್ಚಾತ್ಯ ರಾಷ್ಟ್ರಗಳ ಬೆಳವಣಿಗೆಯು ಹಿಂದಿನ ನಾಯಕರ ಕೊಡುಗೆಯಾಗಿದೆ. ಭವಿಷ್ಯದ ತಲೆಮಾರಿನ ದುರದೃಷ್ಟಿಯನ್ನಿಟ್ಟುಕೊಂಡು ಮುಂದೆ ಸಾಗಬೇಕು. ಜಾಗತೀಕವಾಗಿ ತಂತ್ರಜ್ಞಾನಗಳು ಸಾಕಷ್ಟು ಬೆಳವಣಿಗೆಯಾಗಿದ್ದು, ಹೊಸ ಹೊಸ ಆವಿಷ್ಕಾರಗಳ ಬಗ್ಗೆ ಆಲೋಚಿಸಬೇಕೆಂದು ಹೇಳಿದರು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ನಿಸ್ವಾರ್ಥ, ತ್ಯಾಗ ಮತ್ತು ಸೇವಾ ಮನೋಭಾವನೆಯಿಂದ ಮಾತ್ರ ಯಾವುದೇ ಕ್ಷೇತ್ರಕ್ಕೆ ಕೊಡುಗೆ ನೀಡಲು ಸಾಧ್ಯ. ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳ ಜೊತೆಗೆ ಚಾರಿತ್ರ್ಯ, ನೈತಿಕ ಶಿಕ್ಷಣಕ್ಕೆ ಒತ್ತು ನೀಡುವುದು ಅವಶ್ಯವಿದೆ. ಸ್ವಾಮಿ ವಿವೇಕಾನಂದ ಹಾಗೂ ಮಹಾತ್ಮ ಗಾಂಧೀಜಿಯವರ ಆದರ್ಶಗಳನ್ನು ವಿದ್ಯಾರ್ಥಿಗಳು ಅರಿಯಬೇಕು ಎಂದು ಹೇಳಿದರು.

ಶೇಷಾದ್ರಿಪುರ ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಉಪಾಧ್ಯಕ್ಷರಾದ ಟಿ.ಎಸ್. ಹಂಜಾರಪ್ಪ, ಪ್ರಾಂಶುಪಾಲ ಡಾ. ಎಸ್.ಎನ್. ವೆಂಕಟೇಶ್ ಇದ್ದರು.

ವಿಶ್ವವಾಣಿ

ಬೆಂಗಳೂರು
vishwavani.news
07.04.2018 ಶನಿವಾರ

ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ ಡಾ. ವೀರೇಂದ್ರ ಹೆಗ್ಗಡೆ ಅಭಿಮತ

# ವಿದ್ಯಾರ್ಥಿಗಳು ನೈತಿಕ ಮೌಲ್ಯ ಬೆಳೆಸಿಕೊಳ್ಳಲಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣದ ಜತೆಗೆ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಬೇಕು. ಹಾಗೆಯೇ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ತಿಳಿಸಿದರು.

ಯಲಹಂಕ ಉಪನಗರದಲ್ಲಿ ಶುಕ್ರವಾರ ನಡೆದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಮಹಾತ್ಮ ಗಾಂಧೀಜಿ ಹಾಗೂ ಸ್ವಾಮಿ ವಿವೇಕಾನಂದ ಅವರಂಥ ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ಪರಿಪಾಲಿಸಬೇಕು. ಭವಿಷ್ಯದ ತಲೆಮಾರಿನ ದೂರದೃಷ್ಟಿ ಗಮನದಲ್ಲಿಟ್ಟುಕೊಂಡು ದೇಶಕ್ಕೆ ಕೊಡುಗೆ ನೀಡಬೇಕೆಂಬ ಹಂಬಲದೊಂದಿಗೆ ವ್ಯಾಸಂಗ ಮಾಡಬೇಕು. ನಮ್ಮ ದೇಶ ಕೃಷಿ ಹಾಗೂ ಕೈಗಾರಿಕೆಯಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಸಮಯ ಪಾಲನೆ ಹಾಗೂ ಅವಕಾಶಗಳ ಸದ್ಬಳಕೆಯ ಮೂಲಕ ಸಾಧನೆಯ ಹಾದಿಯಲ್ಲಿ ಮುಂದುವರಿಯಬೇಕು. ದೇಶದ ಭವಿಷ್ಯಕ್ಕೆ ಕೊಡುಗೆ ನೀಡುವತ್ತ ಹೆಚ್ಚು ಗಮನ ಹರಿಸಬೇಕು. ದೇಶದ ಬೆಳವಣಿಗೆಗೆ ಅಗತ್ಯವಾದ ದೂರದೃಷ್ಟಿ ಇಟ್ಟುಕೊಂಡು ದೇಶವನ್ನಾಳುವ ನೇತಾರರ ದೃಷ್ಟಿಕೋನ ಬದಲಾಯಿಸುವತ್ತ ಯುವ ಜನತೆ ಕಾರ್ಯಪ್ರವೃತ್ತರಾಗಬೇಕಿದೆ ಎಂದು ಸಂದೇಶ ನೀಡಿದರು. ಕಾರ್ಯಕ್ರಮದಲ್ಲಿ ವೀರೇಂದ್ರ ಹೆಗ್ಗಡೆ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ವಿದ್ಯಾರ್ಥಿಗಳು ನಾಡಿನ ಜನಪದ ಕಲೆಗಳಾದ ಯಕ್ಷಗಾನ, ಡೊಳ್ಳು ಕುಣಿತ, ನಂದಿಕೋಲು, ಪೂಜಾ ಕುಣಿತ ಮುಂತಾದ ನೃತ್ಯ ಪ್ರದರ್ಶಿಸಿದರು.



ಯಲಹಂಕ ಉಪನಗರದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬ ಸಮಾರಂಭವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ.ಕೃಷ್ಣ ಮತ್ತಿತರರು ಇದ್ದರು.

## ಹೆಗ್ಗಡೆ ಅವರಿಂದ ಸಂಸ್ಥೆಗೆ ಕೀರ್ತಿ

ನಿಸ್ವಾರ್ಥ, ತ್ಯಾಗ ಮತ್ತು ಸೇವಾ ಮನೋಭಾವನೆ ಇದ್ದಲ್ಲಿ ಮಾತ್ರ ದೇಶದ ಪ್ರಗತಿಗೆ ಕೊಡುಗೆ ನೀಡಲು ಸಾಧ್ಯ. ವಿರೇಂದ್ರ ಹೆಗ್ಗಡೆ ಅವರು ಈ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿ ಕಲಿತು ಸಮಾಜದಲ್ಲಿ ಇಂದು ಬಹುದೊಡ್ಡ ಸ್ಥಾನ ಪಡೆಯುವ ಮೂಲಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ ಎಂದು ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ.ಕೃಷ್ಣ ಶ್ಲಾಘಿಸಿದರು.

ಮೊದಲು ಮಾಧ್ಯಮ ಜಗತ್ತು ಇಷ್ಟೊಂದು ವೇಗದ ಗತಿ ಹೊಂದಿರಲಿಲ್ಲ. ಈಗ ಪತ್ರಿಕೆಗಳು, ದೂರದರ್ಶನ, ಸಾಮಾಜಿಕ ಜಾಲತಾಣಗಳು ಸಮರ್ಪಕ ರೀತಿಯಲ್ಲಿದ್ದು, ಕ್ಷಣಾರ್ಧದಲ್ಲಿ ಮಾಹಿತಿ ಲಭ್ಯವಾಗಲಿದೆ. ಈ ಎಲ್ಲ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಪ್ರಸ್ತುತ ಕಾಲಘಟ್ಟಕ್ಕೆ ತಕ್ಕಂತೆ ಬದಲಾಗಬೇಕಿದೆ.

-ಡಾ. ಡಿ.ವೀರೇಂದ್ರ ಹೆಗ್ಗಡೆ
ಧರ್ಮಸ್ಥಳದ ಧರ್ಮಾಧಿಕಾರಿ

# ಕನ್ನಡಪ್ರಭ

ಶನಿವಾರ 7.4.2018



ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಕಲಾತಂಡಗಳ ಜೊತೆ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಇತರರಿದ್ದರು.

ಹೊಸ ದಿಗಂತ
ಶನಿವಾರ
7 ಏಪ್ರಿಲ್ 2018

# ನೈತಿಕ ಶಿಕ್ಷಣ ದೊರೆಯದಿರುವುದೇ ದೊಡ್ಡ ಕೊರತೆ: ಡಾ.ಹೆಗ್ಗಡೆ

ದಿಗಂತ ವರದಿ: ಯಲಹಂಕ, ಏ.6

ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಶಿಕ್ಷಣ ದೊರೆಯದೆ ಇರುವುದು ದೊಡ್ಡ ಕೊರತೆ ಎಂದು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ವಿಷಾದ ವ್ಯಕ್ತಪಡಿಸಿದರು.

ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬ ಸಂಭ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು, ಯುವ ಮನಸ್ಸುಗಳನ್ನು ತಿದ್ದಿ ಉತ್ತಮ ಪ್ರಜೆಗಳನ್ನಾಗಿ ಮಾಡುವದಕ್ಕಾಗಿ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣದ ಜತೆಗೆ ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳು, ಚಾರಿತ್ರ್ಯ, ನೈತಿಕ ಶಿಕ್ಷಣ ನೀಡುವುದು ಅವಶ್ಯವಿದೆ. ಮಕ್ಕಳಲ್ಲಿ ಭೌತಿಕ ಜ್ಞಾನವನ್ನು ಬೆಳೆಸಬೇಕಿದೆ ಎಂದು ಶಿಕ್ಷಣ ಸಂಸ್ಥೆಗಳಿಗೆ ಕರೆ ನೀಡಿದರು.

ಸಮಯ ಪಾಲನೆ ಮತ್ತು ಅವಕಾಶಗಳ ಸದ್ಬಳಕೆ ಮಾಡಿಕೊಂಡು ಹೆಚ್ಚೆಚ್ಚು ಸಾಧನೆ ಮಾಡುವತ್ತ ಮುಂದಾಗಬೇಕು. ಈಗಿನ ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಆತ್ಮ ವಿಶ್ವಾಸ ಹಾಗೂ ಧೈರ್ಯದಿಂದ ವ್ಯಕ್ತಿತ್ವ ರೂಢಿಸಿಕೊಳ್ಳುವ ಮೂಲಕ ಭವಿಷ್ಯದ ಭಾರತಕ್ಕೆ ಕೊಡುಗೆ ನೀಡುವತ್ತ ಗಮನ ಹರಿಸಬೇಕು. ಸಮಯ ಪಾಲನೆ ಮತ್ತು ಅವಕಾಶಗಳ ಸದ್ಬಳಕೆ ಮಾಡಿಕೊಂಡು ಹೆಚ್ಚೆಚ್ಚು ಸಾಧನೆ ಮಾಡುವತ್ತ ಮುಂದಾಗಬೇಕು. ಈಗಿನ ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಆತ್ಮವಿಶ್ವಾಸ ಹಾಗೂ ಧೈರ್ಯದಿಂದ ವ್ಯಕ್ತಿತ್ವ ರೂಢಿಸಿಕೊಳ್ಳುವ ಮೂಲಕ ಭವಿಷ್ಯದ ಭಾರತಕ್ಕೆ ಕೊಡುಗೆ ನೀಡುವತ್ತ ಗಮನ ಹರಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ವಿದ್ಯಾ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಉಪಾಧ್ಯಕ್ಷರಾದ ಟಿ.ಎಸ್. ಹೆಂಜಾರಪ್ಪ, ಡಬ್ಲ್ಯು.ಎಚ್. ಅನಿಲ್‌ಕುಮಾರ್, ಗೌರವ ಖಜಾಂಚಿ ಬಿ.ಎಂ. ಪಾರ್ಥಸಾರಥಿ, ಸಂಚಾಲಕ ಪ್ರೊ. ಶಾಂತನು ದಾಸ್, ಪ್ರಾಂಶುಪಾಲರಾದ ಡಾ. ಎಸ್.ಎನ್. ವೆಂಕಟೇಶ್ಇದ್ದರು.

ದಿಗಂತ ಚಿತ್ರ



ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬ ಸಂಭ್ರಮ ಕಾರ್ಯಕ್ರಮಕ್ಕೆ ಡಾ. ವೀರೇಂದ್ರ ಹೆಗ್ಗಡೆ ಚಾಲನೆ ನೀಡಿದರು.

ಪ್ರಜಾವಾಣಿ ಶುಕ್ರವಾರ, ಏಪ್ರಿಲ್ 6, 2018

# ಮಕ್ಕಳ ಭೌತಿಕ ಬೆಳವಣಿಗೆ ಮುಖ್ಯ: ವೀರೇಂದ್ರ ಹೆಗ್ಡೆ



ನಗರದ ಯಲಹಂಕದ ಶೇಷಾದ್ರಿಪುರಂನ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿ ಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಜಾನಪದ ಕಲಾತಂಡಗಳ ಮೆರವಣಿಗೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಡೆ, ಶೇಷಾದ್ರಿಪುರಂ ಶಿಕ್ಷಣದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

**ಬೆಂಗಳೂರು, ಏ. ೬– ಮಕ್ಕಳಿಗೆ ಭೌತಿಕ ಬೆಳವಣಿಗೆ ಬಹಳ ಮುಖ್ಯ. ಹಾಗಾಗಿ ಮಕ್ಕಳು ಜ್ಞಾನದ ಹಸಿವು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಭೌತಿಕವಾಗಿ ಮೇಲ್ಪಟ್ಟಕ್ಕೆ ಏರಬೇಕೆಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಡೆ ಇಂದಿಲ್ಲಿ ತಿಳಿಸಿದ್ದಾರೆ.**


ನಗರದ ಯಲಹಂಕ, ಶೇಷಾದ್ರಿಪುರಂ, ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ, ಬೆಳ್ಳಿ ಹಬ್ಬದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಭೌತಿಕ ಬೆಳವಣಿಗೆಯಿಂದ ಉತ್ತಮ ಶಿಕ್ಷಣ ಪಡೆದು ಸಮಾಜದಲ್ಲಿ ಸಾಧಕರಾಗಲು ಸಾಧ್ಯ. ಹೀಗಾಗಿ ಮಕ್ಕಳು ಜ್ಞಾನದ ಹಸಿವು ಬೆಳಸಿಕೊಂಡು ಶಿಕ್ಷಣ ಪಡೆಯಬೇಕು ಎಂದರು.

ವಿದ್ಯಾರ್ಥಿ ಜೊತೆಯಲ್ಲಿ ಇತರರ ಬಗ್ಗೆ ಚಿಂತಿಸದೆ ಒಂದು ನಿರ್ದಿಷ್ಟ ಗುರಿ ಇಟ್ಟುಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳುವಂತ ಗಮನ ಹರಿಸಬೇಕು. ನಾವು ಬೆಳೆಯದೆ ಇತರರನ್ನು ಉದ್ಧಾರ ಮಾಡಲು ಸಾಧ್ಯವಿಲ್ಲ. ಹೀಗಾಗಿ ತಮ್ಮ ಬೆಳವಣಿಗೆಯಂತ ಗಮನಹರಿಸಬೇಕು ಎಂದ ಅವರು ಹಿಂದಿನ ಯುವಪೀಳಿಗೆಗೆ ಮಾಹಿತಿ ತಂತ್ರಜ್ಞಾನಂತಹ ಅನೇಕ ಸೌಲಭ್ಯಗಳನ್ನು ಅವುಗಳನ್ನು ಬಳಸಿಕೊಂಡು ಉತ್ತಮ ಸಾಧಕರಾಗಬೇಕು ಎಂದು ಕರೆ ನೀಡಿದರು..

ಹಿಂದಿನ ಕೆಲವು ಮಕ್ಕಳಿಗೆ ತಾವು ಇತರರಿಗಿಂತ ಬುದ್ಧಿವಂತರಲ್ಲ ಎಂಬ ಕೀಳರಿಮೆ ಇದೆ. ಅದನ್ನು ಕಿತ್ತುಹಾಕಿ ಮುನ್ನುಗ್ಗುವ ಸ್ಥಿರತೆಯನ್ನು ಬೆಳೆಸಿಕೊಳ್ಳಬೇಕಿದೆ ಎಂದು ಅವರು ಹೇಳಿದರು.

ವಿದ್ಯಾರ್ಥಿ ಜೊತೆಯಲ್ಲಿಯಾವುದೇ ಆಕರ್ಷಣೆಗೆ ಒಳಗಾಗದೆ ಪ್ರಬುದ್ಧ ವಿದ್ಯಾಭ್ಯಾಸವನ್ನುಮೈಗೂಡಿಸಿಕೊಂಡು ಅಕ್ಷರಗಳೊಂದಿಗೆ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕೆಂದು ವೀರೇಂದ್ರ ಹೆಗ್ಡೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಉಪಾಧ್ಯಕ್ಷ ಡಬ್ಲ್ಯು. ಎಚ್. ಅನಿಲ್ ಕುಮಾರ್, ಖಜಾಂಚಿ ಡಿ.ಎಂ. ಪಾರ್ಥಸಾರಥಿ, ಜಂಟಿ ಕಾರ್ಯದರ್ಶಿ ಎಚ್. ಶೇಷಾನಾರಾಯಣ, ಸೇರಿದಂತೆ ಕಾಲೇಜಿನ ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳು ಇದ್ದರು.



ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿ ಹಬ್ಬದ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ , ಅಧ್ಯಕ್ಷ ಎನ್.ಆರ್.ಪಂಡಿತರಾಧ್ಯ , ಉಪಾಧ್ಯಕ್ಷ ಎಸ್ .ಹೆಂಜಾರಪ್ಪ , ಪಾರ್ಥಸಾರಥಿ ಮತ್ತಿತರರು ಪಾಲ್ಗೊಂಡಿದ್ದರು. ಇದೇ ವೇಳೆ ವಿದ್ಯಾರ್ಥಿಗಳ ವೇಷಭೂಷಣ ಗಮನಸೆಳೆಯಿತು.

ವಿಜಯ ಕರ್ನಾಟಕ
ಸೋಮವಾರ,26 ಮಾರ್ಚ್ 2018
ಬೆಂಗಳೂರ್ ಬಾರ್ಡರ್



ಘಟಿಕೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು.

## ‘ಸೌಜನ್ಯದಿಂದ ಪದವಿಗೆ ಘನತೆ’

**ಕೆಂಗೇರಿ ಉಪನಗರ:** ಪದವಿ ಪಡೆದ ವಿದ್ಯಾರ್ಥಿಗಳು ವೃತ್ತಿಯಲ್ಲಿ ತೊಡಗಿಸಿಕೊಳ್ಳುವಾಗ ಗೌರವಕ್ಕೆ ಧಕ್ಕೆ ಹಾಗೆ ನಡೆದುಕೊಳ್ಳಬೇಕು ಎಂದು ಕರ್ನಾಟಕ ಎಲೆಕ್ಟ್ರಿಸಿಟಿ ನಿಯಂತ್ರಣಾ ಆಯೋಗದ ಗೌರವಾಧ್ಯಕ್ಷ ಡಾ ಎಂ ಕೆ ಶಂಕರಲಿಂಗೇಗೌಡ ಹೇಳಿದರು.

ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ನಾನಾ ಅಂಗಸಂಸ್ಥೆಗಳಲ್ಲಿ ಪದವಿಯನ್ನು ಪೂರೈಸಿದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

“ಯುವ ಜನಾಂಗ ಪದವಿಯ ಜತೆ ತಾಳ್ಮೆ, ಸಹನೆ, ಮತ್ತು ಸೌಮ್ಯ ಭಾವನೆ ಹೊಂದಿರಬೇಕು. ಜಾಗತೀಕರಣ ಹಾಗೂ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಓದಿ ಗೆಲುವು ಸಾಧಿಸಬೇಕು,” ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವಾನ್ವಿತ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಮಾತನಾಡಿ “ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳ ಮೂಲಕ ಅತ್ಯುನ್ನತ ಶಿಕ್ಷಣ ನೀಡುತ್ತವೇ,” ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ ಕೃಷ್ಣ ಅವರು ಪ್ರಮಾಣ ವಚನ ಬೋಧಿಸಿದರು. ಶಿಕ್ಷಣ ದತ್ತಿಯ ಅಂಗಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ, ಎಂಫಿಲ್, ಪಿಎಚ್‌ಡಿ ಪದವಿ ಪಡೆದ ಅಧ್ಯಾಪಕರಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಪ್ರೊ ಜಯರಾಮ್, ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಅನುರಾಧ ರಾಯ್ ಮತ್ತಿತರರು ಇದ್ದರು.

ಸಂಯುಕ್ತ ಕರ್ನಾಟಕ

ಶನಿವಾರ, 24, ಮಾರ್ಚ್, 2018, ಬೆಂಗಳೂರು



ಗಾಂಧಿಭವನದಲ್ಲಿ ನಡೆದ 'ಡಾ.ಎಂ.ವಿ. ರಾಜಶೇಖರನ್ ದತ್ತಿ ಉಪನ್ಯಾಸ ಕಾರ್ಯಕ್ರಮ'ವನ್ನು ಮಾಜಿ ಕೇಂದ್ರ ಸಚಿವ ಡಾ.ಎಂ.ವಿ. ರಾಜಶೇಖರನ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾಜಿ ರಾಜ್ಯಸಭಾ ಸದಸ್ಯ ಡಾ.ಎಚ್. ಹನುಮಂತಪ್ಪ, ಡಾ. ಜೀವನ್ ಕುಮಾರ್, ಡಾ. ವೂಡೇ ಪಿ ಕೃಷ್ಣ, ಇಂದಿರಾ ಕೃಷ್ಣಪ್ಪ ಸೇರಿದಂತೆ ಇತರರಿದ್ದರು.

ಸಂಜೆವಾಣಿ ಶುಕ್ರವಾರ, ಮಾರ್ಚ್ 23, 2018



ಮಹಾತ್ಮಗಾಂಧಿ ಮತ್ತು ಅಂಬೇಡ್ಕರ್ ದೃಷ್ಟಿಕೋನದ ಭಾರತ ಎಂಬ ಉಪನ್ಯಾಸ ಮಾಲಿಕೆಯನ್ನು ಇಂದು ಗಾಂಧಿ ಭವನದಲ್ಲಿ ಮಾಜಿ ಕೇಂದ್ರ ಸಚಿವ ಎಂ.ವಿ.ರಾಜಶೇಖರನ್ ಉದ್ಘಾಟಿಸಿದರು. ವೂಡೆ ಕೃಷ್ಣ ಮತ್ತಿತರರು ಇದ್ದಾರೆ.

ಪ್ರಜಾವಾಣಿ
ಶನಿವಾರ • ಮಾರ್ಚ್ 17, 2018



## ಪುಷ್ಪ ನಮನ

ಕೆ.ಎಚ್. ಪಾಟೀಲ ಅಭಿಮಾನಿಗಳ ಬಳಗ ಮತ್ತು ಬೆಂಗಳೂರು ನಗರದ ವಿವಿಧ ಸಹಕಾರ ಸಂಘ ಸಂಸ್ಥೆಗಳು ಶುಕ್ರವಾರ ಜಂಟಿಯಾಗಿ ಆಯೋಜಿಸಿದ್ದ ಕೆ.ಎಚ್. ಪಾಟೀಲ ಅವರ 94ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಇಂದಿರಾ ಗಾಂಧಿ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ತೇಜಸ್ವಿ ಕಟ್ಟಿಮನಿ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಪಾಟೀಲರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು -ಪ್ರಜಾವಾಣಿ ಚಿತ್ರ

ಕನ್ನಡಪ್ರಭ ಶನಿವಾರ 17.3.2018



ಕೆ.ಎಚ್. ಪಾಟೀಲರ ಅಭಿಮಾನಿಗಳ ಬಳಗ ಆಯೋಜಿಸಿದ್ದ 'ಕೆ.ಎಚ್. ಪಾಟೀಲರ 94ನೇ ಜನ್ಮ ದಿನ' ಕಾರ್ಯಕ್ರಮದಲ್ಲಿ ಆದಿಚುಂಚನಗಿರಿಮಠದ ನಿರ್ಮಲಾನಂದನಾಥ ಸ್ವಾಮೀಜಿ, ಡಾ. ವೂಡೆ ಪಿ.ಕೃಷ್ಣ, ಇಂದಿರಾಗಾಂಧಿ ಬುಡಕಟ್ಟು ವಿವಿ ಕುಲಪತಿ ತೇಜಸ್ವಿ ಕಟ್ಟೀಮನಿ ಇದ್ದರು.

ಸಮಾಜದ ಕಟ್ಟಕಡೆಯ ವ್ಯಕ್ತಿ, ರೈತರ ಹಿತ ಬಯಸುವ, ಮಾನವೀಯ ಅಂತಃಕರಣ ಹಾಗೂ ಮೌಲ್ಯವುಳ್ಳ ರಾಜಕಾರಣಿಗಳ ಸಂಖ್ಯೆ ಹೆಚ್ಚಬೇಕಿದೆ.

○ ನಿರ್ಮಲಾನಂದನಾಥ ಸ್ವಾಮೀಜಿ
ಆದಿಚುಂಚನಗಿರಿ ಮಠ

ಶುಕ್ರವಾರ, 16-3-2018



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಉದಯ ಪ್ರಕಾಶನ ಸಂಯುಕ್ತಾಶ್ರಯದಲ್ಲಿ ಕಸಪಾದಲ್ಲಿ ಹಮ್ಮಿಕೊಂಡಿದ್ದ ಸಾಹಿತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಭಾರತೀಯ ಕಾವ್ಯ ಪರಿಭಾಷೆ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರೊ. ಹಂಪನಾ, ಡಾ. ವೂಡೇ ಪಿ. ಕೃಷ್ಣ ಡಾ. ನಾ. ಗೀತಾಚಾರ್ಯ, ಪ್ರೊ. ಸಿಸಿರಾ, ಪ್ರೊ. ಎಚ್. ಟಿ. ಪೋತೆ ಮತ್ತಿತರರು ಉಪಸ್ಥಿತರಿದ್ದರು.


ಹೊಸ ದಿಗಂತ

ಬುಧವಾರ
14 ಮಾರ್ಚ್ 2018

### ಸಂಸ್ಕೃತಿ ಚಿಂತಕ ಪ್ರೊ.ಎನ್.ಮನು ಚಕ್ರವರ್ತಿ ಅಭಿಪ್ರಾಯ

# ಸರ್ವೋದಯ ಎಂಬುದೇ ಒಂದು ಚಿಂತನೆ

ದಿಗಂತ ಚಿತ್ರ



ಗಾಂಧೀ ಶಾಂತಿ ಪ್ರತಿಷ್ಠಾನ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯಿಂದ ಗಾಂಧೀ ಭವನದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾದ ಶ್ರೀಸತ್ಯವ್ರತ ಸ್ಮಾರಕ ದತ್ತಿ ಉಪನ್ಯಾಸ ಉದ್ಘಾಟನಾ ಕಾರ್ಯಕ್ರಮದಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ರಾಜ್ಯಸಭೆ ಮಾಜಿ ಸದಸ್ಯ ಎಚ್.ಹನುಮಂತಪ್ಪ, ಸಾಹಿತಿ ಮಲ್ಲೇಪುರಂ ಜಿ.ವೆಂಕಟೇಶ್ ಮತ್ತಿತರರು ಹಾಜರಿದ್ದರು.

▸ ಬೆಂಗಳೂರು, ಮಾ.13

ಸರ್ವೋದಯ ಎಂಬುದು ಒಂದು ಕಲ್ಪನೆಯಲ್ಲ, ಆದೊಂದು ಕ್ರಿಯೆ ಎಂದು ಸಂಸ್ಕೃತಿ ಚಿಂತಕ ಪ್ರೊ.ಎನ್.ಮನು ಚಕ್ರವರ್ತಿ ಅಭಿಪ್ರಾಯಪಟ್ಟರು.

ಗಾಂಧೀ ಶಾಂತಿ ಪ್ರತಿಷ್ಠಾನ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯಿಂದ ಗಾಂಧೀ ಭವನದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾದ ಶ್ರೀಸತ್ಯವ್ರತ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಅವರು ಸರ್ವೋದಯ ಪರಿಕಲ್ಪನೆ: ಅಂದು ಮತ್ತು ಇಂದು ಕುರಿತು ವಿಚಾರ ಮಂಡಿಸಿದರು.

ಸರ್ವೋದಯ ಎಂಬುದು ಒಂದು ತತ್ವವಲ್ಲ, ಅದೊಂದು ಚಿಂತನೆ. ಪ್ರಭುತ್ವದ ವರ್ತನೆಗಳಿಗೆ ಯಾವ ಮಜಲುಗಳಲ್ಲಿ ಕ್ರಿಯೆಗೆ ತೊಡಗಿಸಿಕೊಳ್ಳಬಹುದೆಂದು ತಿಳಿಸುವುದು ಸರ್ವೋದಯ. ಅಧ್ಯಾತ್ಮದ ವಿಶ್ಲೇಷಣೆಗೆ ಒಳಪಡಿಸುವ ಬೇರೆ ಮಾರ್ಗಗಳನ್ನು ಸೂಚಿಸುವುದು ಸರ್ವೋದಯ ಎಂದರು.

**ಸಂಘರ್ಷವಿಲ್ಲದೆ ಸರ್ವೋದಯ ಅಸಾಧ್ಯ:** ಕೇವಲ ವಿಚಾರ ಬೋಧನೆಯಿಂದ ಹಸಿದೊಡಲು ತುಂಬುವುದಿಲ್ಲ. ಹಸಿದ ಒಡಲಿಗೆ ಅನ್ನ ನೀಡುವುದು ಮುಖ್ಯ ಎಂಬುದು ಗಾಂಧೀಜಿ ಚಿಂತನೆಗಳಲ್ಲಿ ಕಾಣುತ್ತವೆ. ಪ್ರಭುತ್ವ ಇರುವೆಡೆ ಆ ತತ್ವಗಳಿಗೆ ನಮ್ಮ ಸಿದ್ಧಾಂತಗಳು ಮುಖಾಮುಖಿಯಾಗದಿದ್ದರೆ ಅದು ಸರ್ವೋದಯವಾಗುವುದಿಲ್ಲ. ಸಂಘರ್ಷವಿಲ್ಲದೆ ಸರ್ವೋದಯ ಸಾಧ್ಯವಿಲ್ಲ. ಆರ್ಥಿಕ ನೆಲೆಯಲ್ಲಿ ಸಮಾನತೆ ಮತ್ತು ನ್ಯಾಯದ ಪ್ರಶ್ನೆ ಉದ್ಭವಿಸದೆ ಸರ್ವೋದಯದ ಬಗ್ಗೆ ಚರ್ಚಿಸುವುದು ಸೂಕ್ತವಲ್ಲ ಎಂದು ಹೇಳಿದರು.

ಉತ್ಪಾದನೆ ಅಂದರೆ ಅದು ಕೇವಲ ಕೈಗಾರಿಕೆಗೆ ಸಂಬಂಧಿಸಿದ್ದು ಎಂದು ಗಾಂಧೀಜಿ ನಂಬಿರಲಿಲ್ಲ. ನಮ್ಮ ಗ್ರಾಮೀಣ ಭಾಗದ ಕರಕುಶಲ ವಸ್ತುಗಳು ಹಾಗೂ ರೈತರನ್ನು ಒಳಗೊಂಡ ಆರ್ಥಿಕತೆ ಕುರಿತು ಗಾಂಧೀಜಿ ಚಿಂತಿಸಿದ್ದರು. ಇಂತಹ ಆರ್ಥಿಕತೆಯಿಂದ ಭಾರತದ ಉಳಿವು ಸಾಧ್ಯ. ಗ್ರಾಮೀಣ ಭಾರತದ ಅಭಿವೃದ್ಧಿ ಸಾಧ್ಯ ಎಂದು ನಂಬಿದ್ದರು ಎಂದು ಹೇಳಿದರು.


**ಅಂತ್ಯದವರು ಮೇಲೇಳಬೇಕು:** ರಾಜ್ಯಸಭೆ ಮಾಜಿ ಸದಸ್ಯ ಎಚ್. ಹನುಮಂತಪ್ಪ ಮಾತನಾಡಿ, ಅಂತ್ಯದವರನ್ನು ಮೇಲೆತ್ತದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ವಸಾಹತುಶಾಹಿ ವ್ಯವಸ್ಥೆಯೊಂದಿಗೆ, ಭಾರತದೊಳಗಿನ ಶ್ರೇಣೀಕೃತ ವ್ಯವಸ್ಥೆಯ ಕುರಿತು ಗಾಂಧೀಜಿ ಮುಖಾಮುಖಿಯಾಗುತ್ತಿದ್ದರು. ದೇಶದ ಜನರಿಗೆ ಬಾಹ್ಯ ಸ್ವಾತಂತ್ರ್ಯ ಒಂದೆಡೆಯಾದರೆ ಆಂತರಿಕ ಸ್ವಾತಂತ್ರ್ಯದ ಕುರಿತು ಗಾಂಧೀಜಿ ಯೋಚಿಸಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದಿ.ಸತ್ಯವ್ರತ ಸಂಬಂಧಿ ಗೋಪಾಲಕೃಷ್ಣ, ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಹಾಜರಿದ್ದರು.

ಸಂಯುಕ್ತ ಕರ್ನಾಟಕ

ಭಾನುವಾರ, 11, ಮಾರ್ಚ್, 2018

# ಅಭಿವೃದ್ಧಿ ಹೆಸರಿನಲ್ಲಿ ಪರಿಸರ ಸಂಪತ್ತು ನಾಶ



ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸರ್ದಾರ್ ವೆಂಕಟರಾಮಯ್ಯ ದತ್ತಿ' ಪುರಸ್ಕಾರವನ್ನು ರೈತ ಮಹಿಳೆ ಪುಟ್ಟರಮ್ಮ ಅವರಿಗೆ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಹಿರಿಯ ವಕೀಲರಾದ ಅಶೋಕ್ ಹಾರನಹಳ್ಳಿ, ಪರಿಸರ ತಜ್ಞ ಡಾ. ಎ.ಎಸ್.ಯಲ್ಲಪ್ಪರೆಡ್ಡಿ, ಗಾಂಧೀ ಸ್ಮಾರಕನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಮತ್ತಿತರರಿದ್ದರು.

ಸಂ.ಕ.ಸಮಾಚಾರ ಬೆಂಗಳೂರು

ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಂಬಲ ಬೆಲೆ ಮತ್ತು ಪ್ರೋತ್ಸಾಹ ಸಿಗದಿದ್ದಾಗ ದೇಶದ ಅಭಿವೃದ್ಧಿ ಅಸಾಧ್ಯ ಎಂದು ಪರಿಸರ ತಜ್ಞ ಡಾ. ಎ.ಎಸ್. ಯಲ್ಲಪ್ಪರೆಡ್ಡಿ ಅಭಿಪ್ರಾಯಪಟ್ಟಿದ್ದಾರೆ.

ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ಸರ್ದಾರ್ ವೆಂಕಟರಾಮಯ್ಯ ದತ್ತಿ ಪುರಸ್ಕಾರ' ಪ್ರದಾನ ಮತ್ತು ಉಪನ್ಯಾಸ ಹಾಗೂ ಔಷಧಿ ಸಸ್ಯಗಳ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ಕಾರಗಳು ರೈತರನ್ನು ಕಡೆಗಣಿಸುತ್ತಿವೆ. ಜನಪ್ರತಿನಿಧಿಗಳು ತಮ್ಮತಮ್ಮ ಲೆಕ್ಕಾಚಾರದಲ್ಲಿ ದೇಶ ಅಭಿವೃದ್ಧಿ ಕಂಡಿದೆ ಎಂದು ಹೇಳುತ್ತಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ಸಂಪತ್ತು ನಾಶ ಮಾಡಲಾಗುತ್ತಿದೆ. ಪರಿಸರ ಸಂಪತ್ತು ನಾಶ ಮಾಡುವುದೇ ಅಭಿವೃದ್ಧಿ ಎಂದು ಭಾವಿಸಿದ್ದಾರೆಂದು ಕಿಡಿಕಾರಿದರು.

ರೈತಾಪಿ ವರ್ಗವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕಿದೆ. ಆಧುನಿಕ ಕಾಲಮಾನದಲ್ಲೂ ಕಮ್ಮಿ ಬೆಲೆಗೆ ಬಿತ್ತನೆ ಬೀಜ ನೀಡುತ್ತಿರುವ ರೈತ ಮಹಿಳೆ ಪುಟ್ಟರಮ್ಮ ಅವರನ್ನು ಪುರಸ್ಕರಿಸುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ. ಪುಟ್ಟರಮ್ಮ ಅವರ ಮಾನವೀಯತೆಯನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕೆಂದರು.

## ಅಧಿಕಾರದ ಆಸೆ

ಮಾಜಿ ಅಡ್ವೋಕೇಟ್ ಜನರಲ್ ಡಾ. ಅಶೋಕ್ ಹಾರನಹಳ್ಳಿ ಮಾತನಾಡಿ, ಮಹಾತ್ಮಾ ಗಾಂಧೀಜಿ ಸೇರಿದಂತೆ ಲಕ್ಷಗಟ್ಟಲೇ ಜನ ಸ್ವಾತಂತ್ರ್ಯಕ್ಕಾಗಿ ಯಾವುದೇ ಫಲಾಪೇಕ್ಷೆ ಇಲ್ಲದೇ ಹೋರಾಟ ಮಾಡಿದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆ. ಈಗಿನ ದಿನಗಳಲ್ಲಿ ಅಧಿಕಾರದ ಆಸೆಗಾಗಿ ನಡೆಯುತ್ತಿರುವ ಕಚ್ಚಾಟ ಸಮಾಜದ ಮೇಲೆ ತೀವ್ರ ದುಷ್ಪರಿಣಾಮ ಬೀರಲಿವೆ ಎಂದರು.

## ಸ್ಮರಣೀಯ ಸಂಗತಿ

ಸರ್ದಾರ್ ವೆಂಕಟರಾಮಯ್ಯ ಅವರನ್ನು ಸ್ಮರಿಸುತ್ತಿರುವುದು ಸಂತಸದ ಸಂಗತಿ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅವರನ್ನು ಬಂಧಿಸಿ ಬಳ್ಳಾರಿ ಜೈಲಿನಲ್ಲಿಟ್ಟಿದ್ದರೂ, 'ಕುಮಾರವ್ಯಾಸ' ಭಾರತ' ಕುರಿತು ಉಪನ್ಯಾಸ ನೀಡುತ್ತಿದ್ದರು. ಹೀಗೆ ದೇಶಕ್ಕೆ ದುಡಿದವರನ್ನು ಸ್ಮರಿಸಬೇಕಿದೆ. ಯುವಪೀಳಿಗೆಗೆ ಗಾಂಧೀಜಿಯವರ ತತ್ವಾದರ್ಶಗಳನ್ನು ತಲುಪಿಸುವ ಕೆಲಸವಾಗಬೇಕಿದೆ' ಎಂದವರು ಅಭಿಪ್ರಾಯಪಟ್ಟರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಸಹಜ ಸಾಗುವಳಿ ಪತ್ರಿಕೆಯ ಸಂಪಾದಕಿ ವಿ.ಗಾಯತ್ರಿ, ಯೋಗ ಗುರು ಸುಶ್ರೀ ವನಿತಾ ಮತ್ತಿತರರಿದ್ದರು.

ಈ ಸಂಜೆ
ಶನಿವಾರ, 10-3-2018



ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್, ಇಕ್ರಾ ಸಾವಯವ ಕೃಷಿ ಸಂಘಟನೆ ಸಂಯುಕ್ತಾಶ್ರಯದಲ್ಲಿ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರೈತ ಮಹಿಳೆ ಪುಟ್ಟೀರಮ್ಮ ಅವರಿಗೆ ಸರ್ದಾರ ವೆಂಕಟರಾಮಯ್ಯ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೆ. ಪಿ. ಕೃಷ್ಣ, ಪರಿಸರ ತಜ್ಞ ಡಾ. ಎ. ಎನ್. ಯಲ್ಲಪ್ಪರೆಡ್ಡಿ, ಯೋಗ ಗುರು ಸುಶ್ರೀ ವನಿತಾ, ಇಕ್ರಾ ಸಂಸ್ಥೆಯ ವಿ. ಗಾಯತ್ರಿ, ಇಂದಿರಾ ಕೃಷ್ಣಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ಶುಕ್ರವಾರ 9 ಮಾರ್ಚ್ 2018

ಬಿಬಿಎಂಪಿ ಮೇಯರ್ ಸಂಪತ್‌ರಾಜ್ ಅಭಿಮತ 13ನೇ ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ

# ರಾಜಧಾನಿಯಲ್ಲಿ ಕನ್ನಡ ರಕ್ಷಿಸುವ ಕಾರ್ಯವಾಗಬೇಕಿದೆ

■ ವಿಜಯವಾಣಿ ಸುದ್ದಿಜಾಲ ರಾಜರಾಜೇಶ್ವರಿನಗರ

ಮಾಗಡಿ ರಸ್ತೆ ಟೋಲ್ ಜಂಕ್ಷನ್ ಬಳಿಯ ಎಸ್.ಜಿ. ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಬೆಂಗಳೂರು ನಗರ ಜಿಲ್ಲಾ 13ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಗುರುವಾರ ಮೇಯರ್ ಸಂಪತ್‌ರಾಜ್ ಚಾಲನೆ ನೀಡಿದರು.

ರಾಜಧಾನಿಯಲ್ಲಿ ಕನ್ನಡ ಕಟ್ಟುವ ಕೆಲಸ ಆಗಬೇಕಿದೆ. ಭಾಷೆ ಉಳಿವಿಗೆ ಸಾಹಿತ್ಯ ಸಮ್ಮೇಳನಗಳು ಸಹಕಾರಿಯಾಗಿವೆ ಎಂದು ಸಂಪತ್ ರಾಜ್ ಹೇಳಿದರು.

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಶ್ರೇಯಾ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಎನ್. ವೆಂಟಸ್ವಾಮಿ ಸಮ್ಮೇಳನದ ಮೆರವಣಿಗೆಗೆ ಚಾಲನೆ ನೀಡಿದರು. ಕೋಡಿಪಾಳ್ಯ ವಿಶ್ವವೆಂಕಟೇಶ್ವರ ಇಂಟರ್ ನ್ಯಾಷನಲ್ ಶಾಲೆ ಮಕ್ಕಳು ವಾದ್ಯಘೋಷದೊಂದಿಗೆ ಹೆಜ್ಜೆ ಹಾಕಿದರು. ಎಂಬಿಸಿ ಶಾಲೆ, ವಿದ್ಯಾ ಸಂಸ್ಕಾರ್, ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಡೊಳ್ಳುಕುಣಿತ, ಕಂಸಾಳೆನೃತ್ಯ, ಯಕ್ಷಗಾನ ಮತ್ತಿತರರ ಜಾನಪದ ಕಲಾ ಪ್ರದರ್ಶನ ಮೆರವಣಿಗೆ ಮೆರುಗು ನೀಡಿದವು.



ನಗರಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನ್ಯಾ. ಎ.ಜೆ. ಸದಾಶಿವ, ಡಾ. ವೂಡೇ ಪಿ ಕೃಷ್ಣ, ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ ಮತ್ತಿತರರು ಉಪಸ್ಥಿತರಿದ್ದರು.

ಸಮ್ಮೇಳನಾಧ್ಯಕ್ಷ ವಿಶ್ರಾಂತ ನ್ಯಾಯಮೂರ್ತಿ ಎ.ಜೆ. ಸದಾಶಿವ ಹಾಗೂ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಜ್ಯೋತಿ ಬೆಳಗಿಸುವ ಮೂಲಕ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಿಮರ್ಶಕ ಬೈರಮಂಗಲ ರಾಮೇಗೌಡ, ಶಿಕ್ಷಣ ತಜ್ಞೆ ಡಾ.ಗೀತಾರಾಮಾನುಜಮ್, ಗೌರವಾಧ್ಯಕ್ಷ ತಿಮ್ಮಯ್ಯ, ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ, ಕಸಾಪ ಯಶವಂತಪುರ ಘಟಕಾಧ್ಯಕ್ಷ ಬಿ.ಟಿ. ಶ್ರೀನಿವಾಸ್, ವಿಶ್ವವೆಂಕಟೇಶ್ವರ ಇಂಟರ್ ನ್ಯಾಷನಲ್ ಶಾಲೆ ಸಂಸ್ಥಾಪಕ ಅಧ್ಯಕ್ಷ ಕಟ್ಟಾ ಬಾಲಾಜಿ ನಾಯ್ಡು ಹಾಜರಿದ್ದರು.

ವಿಚಾರಗೋಷ್ಠಿಯಲ್ಲಿ ಬೆಂ. ಉತ್ತರ ತಾಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ. ರಾಜಕುಮಾರ್ ಪಾಲ್ಗೊಂಡಿದ್ದರು. ಮಹಿಳೆಯರ ಮೇಲಿನ ದೌರ್ಜನ್ಯಗಳ ಕುರಿತು ನಿಮ್ಸ್ ಪ್ರಾಂಶುಪಾಲೆ ಡಾ. ಸುಕನ್ಯಾಹೆಗಡೆ ವಿಷಯ ಮಂಡಿಸಿದರು. ಆರಕ್ಷಕ ನಿರೀಕ್ಷಕ ಶಿವಕುಮಾರ್ ಉಪಸ್ಥಿತರಿದ್ದರು.



ಮೆರವಣಿಗೆಯಲ್ಲಿ ಕಲಾ ತಂಡಗಳು.

ಪ್ರಜಾವಾಣಿ
ಶುಕ್ರವಾರ, ಮಾರ್ಚ್ 9, 2018

# ಕನ್ನಡ ಕಲಿಯಿರಿ, ಇಲ್ಲವೇ ಜಾಗ ಖಾಲಿ ಮಾಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೀವು ನೆಲೆಸಿರುವ ರಾಜ್ಯದ ಭಾಷೆಯಾದ ಕನ್ನಡವನ್ನು ಕಲಿಯಿರಿ, ಇಲ್ಲ ಜಾಗ ಖಾಲಿ ಮಾಡಿ' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಜೆ.ಸದಾಶಿವ ಕಿಡಿ ಕಾರಿದರು.

ಕನ್ನಡ ಬೇಡವೆಂದವರಿಗೆ ಕರ್ನಾಟಕದಲ್ಲಿ ನೆಲೆಸಲು ಅವಕಾಶವಿರಬಾರದು ಎಂದು ಸ್ಪಷ್ಟವಾಗಿ ಹೇಳಿದರು.

ಸಾಹಿತ್ಯ ಪರಿಷತ್ತಿನ ನಗರ ಜಿಲ್ಲಾ ಘಟಕದ ಆಶ್ರಯದಲ್ಲಿ ಸೀಗೇಹಳ್ಳಿ ದ್ವಾರದ ಬಳಿ ಆರ್.ಗೋಪಾಲ ಸ್ವಾಮಿ ಅಯ್ಯರ್ ವೇದಿಕೆಯಲ್ಲಿ ಗುರುವಾರ ಆರಂಭವಾದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ನೆಲೆಸಿರುವವರು ಕನ್ನಡ ಕಲಿಕೆಗೆ ನಿರಾಸಕ್ತಿ ತೋರಿಸುತ್ತಿರುವ ಕುರಿತು ಕಟುಶಬ್ದಗಳಿಂದ ಟೀಕಿಸಿ, 'ನಾಡಭಾಷೆಯನ್ನು ಕಲಿಯದವ, ಪ್ರೀತಿಸದವ ನಾಡನ್ನು ಹೇಗೆ ತಾನೇ ಪ್ರೀತಿಸಿಯಾನು. ಅಂತಹವರಿಗೆ ಧಿಕ್ಕಾರವಿರಲಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಪ್ರೀತಿಯಿಂದ, ವಿಶ್ವಾಸದಿಂದ ಕೇಳಿಕೊಳ್ಳುತ್ತೇನೆ. ನೀವು ನಿಮ್ಮ ಮಾತೃಭಾಷೆಯನ್ನು ಗೌರವಿಸುವ ಹಾಗೆ ನೆಲೆಸಿರುವ ರಾಜ್ಯದ ಭಾಷೆಯನ್ನೂ ಗೌರವಿಸಿ. ಪರದೇಶಿ ಭಾಷೆಯ ದಾಸ್ಯದಿಂದ ಬಿಡುಗಡೆ ಹೊಂದಿ. ನಿಮಗಿಷ್ಟವಾದ ಭಾಷೆಯೊಡನೆ ಕನ್ನಡವನ್ನೂ ಕಲಿಯಿರಿ' ಎಂದು ಅನ್ಯಭಾಷಿಕರಲ್ಲಿ ಮನವಿ ಮಾಡಿದರು.

ಮಕ್ಕಳಿಗೆ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡಬೇಕಾದ ಅಗತ್ಯವನ್ನು ಶಿಕ್ಷಣ ತಜ್ಞರು ಮನವರಿಕೆ ಮಾಡಿಕೊಟ್ಟಿದ್ದರೂ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಹೆಚ್ಚುತ್ತಿವೆ. ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಇದು ತಾಯಿನುಡಿಯ ಬಗ್ಗೆ ಸರ್ಕಾರ ಹೊಂದಿರುವ ಅನಾದರವನ್ನು, ಅಭಿಮಾನಶೂನ್ಯತೆಯನ್ನು ತೋರಿಸುತ್ತಿದೆ. ಇದಕ್ಕೆ ಸರ್ಕಾರದ ಭಾಗವೇ ಆಗಿರುವ ರಾಜಕಾರಣಿಗಳೇ ನೇರ ಹೊಣೆ ಎಂದರು.

ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ತೆರೆದು ವಿದ್ಯಾರ್ಥಿಗಳನ್ನು ಆಕರ್ಷಿಸಲಾಗುತ್ತಿದೆ. ಶಿಕ್ಷಣ ಈಗ ಪವಿತ್ರ ಕಾರ್ಯವಾಗಿ ಉಳಿದಿಲ್ಲ. ಕ್ಷಿಪ್ರವಾಗಿ ಭಾರಿ ಲಾಭ ತಂದು ಕೊಡುವ ಉದ್ಯಮವಾಗಿದೆ. ವ್ಯಾಪಾರದಲ್ಲಿ ದ್ರೋಹ ಚಿಂತನೆಯೇ ಪ್ರಧಾನ. ಬಂಡವಾಳ ಹೂಡಿ,ಲಾಭ ಸಂಪಾದಿಸುವುದು ಅವರ ಉದ್ದೇಶ. ಈ ಪಾಪಕಾರ್ಯದಲ್ಲಿ ಎಲ್ಲ ರಾಜಕಾರಣಿಗಳೂ ಪಾಲುದಾರರು ಎಂದು ಟೀಕಿಸಿದರು.

'ಕೆಲವು ರಾಜಕಾರಣಿಗಳು ತಮ್ಮ ಹೆಸರಿನಲ್ಲಿ, ಹೆಂಡತಿ– ಮಕ್ಕಳ ಹೆಸರಿನಲ್ಲಿ, ಬಂಧುಗಳ ಹೆಸರಿನಲ್ಲಿ ಈ ಪಾಪದ ಉದ್ಯಮ ನಡೆಸಿ ಕೋಟ್ಯಧೀಶರಾಗಿದ್ದಾರೆ. ಇವರಿಗೆ ಕನ್ನಡದ ಬಗ್ಗೆ ಯಾವ ಕಾಳಜಿಯೂ ಇಲ್ಲ. ಕನ್ನಡದ ಕೊರಳನ್ನು ಕಿಂಚಿತ್ ನಾಚಿಕೆಯೂ ಇಲ್ಲದೇ ಹಿಸುಕುತ್ತಿರುವ ಇಂಥವರನ್ನು ಅಧಿಕಾರಕ್ಕೆ ತಂದರೆ ನಮ್ಮ ಭಾಷೆಯ ಕಗ್ಗೊಲೆಯನ್ನು ನಾವೇ ಪ್ರೋತ್ಸಾಹಿಸಿದಂತೆ. ಈ ಬಗ್ಗೆ ಮತದಾರರು ತೀವ್ರವಾಗಿ ಚಿಂತಿಸಬೇಕು' ಎಂದರು.

ಬೆಂಗಳೂರಿನಲ್ಲಿ ಮಾತ್ರವಲ್ಲದೇ ರಾಜ್ಯದ ಹಳ್ಳಿ ಹಳ್ಳಿಗಳಲ್ಲೂ ಪೋಷಕರು ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಕಳುಹಿಸುತ್ತಿದ್ದಾರೆ. ಇಂಗ್ಲಿಷ್ ವ್ಯಾಮೋಹಕ್ಕೆ ಬಲಿಯಾಗುತ್ತಿರುವ ಕನ್ನಡದ ಪೋಷಕರ ಮನಸ್ಸು ಬದಲಾಯಿಸಲು ಹೊಸತೊಂದು ಮಾರ್ಗವನ್ನು ಕಂಡುಕೊಳ್ಳಬೇಕು. ಖಾಸಗಿ ಶಾಲೆಗಳೂ ಕನ್ನಡವನ್ನು ಪ್ರಧಾನ ಭಾಷೆಯಾಗಿ, ಇಂಗ್ಲಿಷ್‌ಗೆ ಸರಿಸಮಾನವಾಗಿ ಬೋಧಿಸಬೇಕು. ಈ ನಿಟ್ಟಿನಲ್ಲಿ ಪರಿಷತ್ತಿನ ಅಂಗಸಂಸ್ಥೆಗಳು, ಕನ್ನಡದ ಸಾಂಸ್ಕೃತಿಕ ಸಂಸ್ಥೆಗಳು ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಸ್ಮರಣ ಸಂಚಿಕೆ 'ಸಾಹಿತ್ಯ ಸಿರಿ'ಯನ್ನು ಶಿಕ್ಷಣ ತಜ್ಞ ವೂಡೆ ಪಿ.ಕೃಷ್ಣ ಬಿಡುಗಡೆ ಮಾಡಿದರು. ಎ.ವಿ. ಲಕ್ಷ್ಮಿನಾರಾಯಣ್ ಇದನ್ನು ಸಂಪಾದಿಸಿದ್ದಾರೆ.

ಕರ್ನಾಟಕದ ಮಹಿಳಾ ಹೋರಾಟಗಳ ಕುರಿತು ವಿಚಾರಗೋಷ್ಠಿ, ಯುವ ಕವಿಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸಾಹಿತ್ಯ ಹಬ್ಬದ ಅಂಗವಾಗಿ ಪುಸ್ತಕ ಮಾರಾಟ, ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಲಾಗಿದೆ.



ಸಾಹಿತ್ಯ ಸಮ್ಮೇಳನದಲ್ಲಿ ವಿದ್ಯಾರ್ಥಿಗಳು ಯಕ್ಷಗಾನ ಪ್ರಸ್ತುತ ಪಡಿಸಿದರು



ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹಾಗೂ ಎ.ಜೆ.ಸದಾಶಿವ ಅವರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು

**ಕರ್ನಾಟಕ ರಚನೆಯಾಗಿದ್ದು ಕನ್ನಡದ ಏಕತೆಗಾಗಿ. ಆದರೆ, ಇಂಗ್ಲಿಷ್ ವ್ಯಾಮೋಹದಿಂದಾಗಿ ಕನ್ನಡಕ್ಕೆ ಕನ್ನಡಿಗರೇ ಹಿತಶತ್ರುಗಳಾಗಿದ್ದಾರೆ**

**ಎ.ಜೆ.ಸದಾಶಿವ,** ಸಮ್ಮೇಳನದ ಸರ್ವಾಧ್ಯಕ್ಷ

**ಕನ್ನಡ ಕುರಿತು ಪ್ರೀತಿಗಿಂತ ಹೆಚ್ಚಾಗಿ ಭಕ್ತಿ ಇರಬೇಕು. ಭಕ್ತಿಯು ಸಮರ್ಪಣಾ ಭಾವ. ಇಲ್ಲಿ ಸ್ವಾರ್ಥಕ್ಕೆ ಅವಕಾಶ ಇಲ್ಲ**

**ಗೀತಾ ರಾಮಾನುಜಂ,** ಶಿಕ್ಷಣ ತಜ್ಞೆ

## 'ಪದೇ ಪದೇ ಸಮ್ಮೇಳನ ಒಳ್ಳೆಯದಲ್ಲ'

ಸಾಹಿತ್ಯ ಪರಿಷತ್ತು ರಾಜ್ಯ, ಜಿಲ್ಲೆ, ತಾಲ್ಲೂಕು, ಹೋಬಳಿ ಹಾಗೂ ವಾರ್ಡ್ ಮಟ್ಟಗಳಲ್ಲಿ ಪದೇ ಪದೇ ಸಮ್ಮೇಳನಗಳನ್ನು ಆಯೋಜಿಸುತ್ತಿದೆ. ಇದರಿಂದ ಸಾಹಿತ್ಯ ಸಮ್ಮೇಳನದ ನಿಜವಾದ ಉದ್ದೇಶ ಈಡೇರುತ್ತಿಲ್ಲ. ಇವುಗಳಲ್ಲಿನ ನಿರ್ಣಯಗಳು ಏನಾದವು ಎಂಬ ಬಗ್ಗೆ ಅರಿವೇ ಇರುವುದಿಲ್ಲ ಎಂದು ಸದಾಶಿವ ಅಸಮಾಧಾನ ವ್ಯಕ್ತಪಡಿಸಿದರು.

ನಿರ್ಣಯ ಮಂಡನೆ ನಾಮಕಾವಸ್ತೆ ಆಗಬಾರದು. ಅವುಗಳ ಜಾರಿಗೆ ಸರ್ಕಾರದ ಮೇಲೆ ನಿರಂತರ ಒತ್ತಡ ಹೇರಬೇಕು. ದಕ್ಷಿಣ ಭಾರತ ವಿವಿಧ ಭಾಷೆಗಳು ಸೇರಿಕೊಂಡು ಐದು ವರ್ಷಗಳಿಗೊಮ್ಮೆ ಸರ್ವ ಭಾಷಾ ಸಾಹಿತ್ಯ ಸಮ್ಮೇಳನವನ್ನು ಆಚರಿಸಬೇಕು. ಪ್ರತಿ ಮೂರು ವರ್ಷಗಳಿಗೊಮ್ಮೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು, ಪ್ರತಿ ಎರಡು ವರ್ಷಗಳಿಗೊಮ್ಮೆ ಜಿಲ್ಲಾ ಮಟ್ಟದ ಸಮ್ಮೇಳನಗಳನ್ನು ಏರ್ಪಡಿಸಬೇಕು. ತಾಲ್ಲೂಕು, ಹೋಬಳಿ ಹಾಗೂ ವಾರ್ಡ್ ಮಟ್ಟದ ಸಮ್ಮೇಳನಗಳು ಪ್ರತಿ ವರ್ಷ ನಡೆಸಬಹುದು ಎಂದರು.

## ಸಮ್ಮೇಳನದಲ್ಲಿ ಹರ್ಷ

ಹೊಸತಾಗಿ ವಿನ್ಯಾಸಗೊಳಿಸಿದ ಕನ್ನಡ ಧ್ವಜಕ್ಕೆ ರಾಜ್ಯ ಸರ್ಕಾರವು ಅಂಗೀಕಾರ ನೀಡಿದ್ದಕ್ಕೆ ಸಮ್ಮೇಳನದಲ್ಲಿ ಸ್ವಾಗತಿಸಲಾಯಿತು.

ಸಭಿಕರೆಲ್ಲ ಎದ್ದು ನಿಂತು ಚಪ್ಪಾಳೆ ಬಡಿಯುವ ಮೂಲಕ ಸರ್ಕಾರದ ಈ ನಿರ್ಧಾರವನ್ನು ಬೆಂಬಲಿಸಿದರು.

'ನಮಗೆ ರಾಷ್ಟ್ರಧ್ವಜದಷ್ಟೇ ನಾಡ ಧ್ವಜವೂ ಪವಿತ್ರವಾದುದು. ರಾಷ್ಟ್ರಧ್ವಜಕ್ಕೆ ನೀಡುವಷ್ಟೇ ಗೌರವವನ್ನು ಇದಕ್ಕೂ ನೀಡಬೇಕು' ಎಂದು ಸಾಹಿತ್ಯ ಪರಿಷತ್ತಿನ ನಗರ ಜಿಲ್ಲಾ ಘಟಕದ ಅಧ್ಯಕ್ಷ ಮಾಯಣ್ಣ ತಿಳಿಸಿದರು. ಕನ್ನಡ ಜಾಗೃತಿ ಮೆರವಣಿಗೆ: ಮಾಗಡಿ ರಸ್ತೆಯ ಬಳಿಯ ನೈಸ್‌ರಸ್ತೆ ಜಂಕ್ಷನ್‌ನಿಂದ ಸಮ್ಮೇಳನ ಸಭಾಂಗಣದವರೆಗೆ ಕನ್ನಡ ಜಾಗೃತಿ ಮೆರವಣಿಗೆ ನಡೆಯಿತು. ಕೆಂಗೇರಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಪೀಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಚಾಲನೆ ನೀಡಿದರು. ಭುವನೇಶ್ವರಿ ಪ್ರತಿಮೆಯನ್ನು ಕೂರಿಸಿದ್ದ ಅಲಂಕೃತ ವಾಹನದಲ್ಲಿ ಸ್ವಾಮೀಜಿ ಹಾಗೂ ಎ.ಜೆ.ಸದಾಶಿವ ಅವರನ್ನು ಕರೆತರಲಾಯಿತು. ಕಲಶ ಹೊತ್ತ ಮಹಿಳೆಯರು, ಜಾನ ಪದ ಕಲಾ ತಂಡ ಗಳು ಭಾಗವಹಿಸಿದವು. ನಂದಿಕೋಲು, ಪಟಕುಣಿತ, ಕಂಸಾಳೆ, ಡೊಳ್ಳುಕುಣಿತ. ಯಕ್ಷಗಾನ, ಕೋಲಾಟ ತಂಡಗಳು ಮೆರವಣಿಗೆಗೆ ಮೆರುಗು ತುಂಬಿದವು.

ಕರ್ನಾಟಕ ನಮ್ಮ ಬೆಂಗಳೂರು ಶುಕ್ರವಾರ,9 ಮಾರ್ಚ್ 2018

# ಕನ್ನಡಿಗರಿಂದಲೇ ಕನ್ನಡದ ಅವಗಣನೆ: ಎ.ಜೆ.ಸದಾಶಿವ

## ಬೆಂಗಳೂರು ನಗರ 13ನೇ ಜಿಲ್ಲಾ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣ

▪ ವಿಕ ಸುದ್ದಿಲೋಕ ಬೆಂಗಳೂರು

ಕನ್ನಡಿಗರಿಂದಲೇ ಕನ್ನಡ ಅವಗಣನೆಗೆ ಒಳಗಾಗಿರುವುದು ವಿಪರ್ಯಾಸ ಎಂದು 13ನೇ ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ನ್ಯಾ. ಎ.ಜೆ.ಸದಾಶಿವ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಾಗಡಿ ಮುಖ್ಯ ರಸ್ತೆಯ ಸೀಗೆಹಳ್ಳಿ ಗೇಟ್ ಬಳಿಯ ಎಸ್.ಜಿ. ಕಲ್ಯಾಣ ಮಂಟಪದಲ್ಲಿ ಗುರುವಾರ ಆಯೋಜಿಸಿದ್ದ 13ನೇ ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

''ಕರ್ನಾಟಕದ ಇತಿಹಾಸ ನೋಡಿದರೆ ಹಲವು ಧರ್ಮ, ಜಾತಿಗೆ ಸೇರಿದ ರಾಜರು ಆಳ್ವಿಕೆ ಮಾಡಿರುವುದು ಗೊತ್ತಾಗುತ್ತದೆ. ಜತೆಗೆ ಬ್ರಿಟಿಷರೂ ರಾಜ್ಯವನ್ನು ಆಳಿದ್ದರು. ಆದರೆ, ಅವರ್‍ಯಾರೂ ಕನ್ನಡವನ್ನು ಕಡೆಗಣಿಸಿರಲಿಲ್ಲ. ಆದರೆ, ನಮ್ಮ ಜನರೇ ಕನ್ನಡವನ್ನು ನಿರ್ಲಕ್ಷಿಸುತ್ತಿದ್ದಾರೆ,'' ಎಂದರು.

''ಕನ್ನಡ ಬೇಡ ಎಂದವರಿಗೆ ರಾಜ್ಯದಲ್ಲಿ ನೆಲೆಸಲು ಅವಕಾಶ ನೀಡಬಾರದು. ಅನ್ಯಭಾಷಿಕರು ತಮ್ಮ ಮಾತೃಭಾಷೆಯ ಹಾಗೆ ಕನ್ನಡ ಪ್ರೀತಿಸಬೇಕು,'' ಎಂದರು.


13ನೇ ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಮೆರವಣಿಗೆಗೆ ಬಿಬಿಎಂಪಿ ಮೇಯರ್ ಆರ್. ಸಂಪತ್ ರಾಜ್ ಚಾಲನೆ ನೀಡಿದರು.

**ಸಮ್ಮೇಳನಾಧ್ಯಕ್ಷರ ಮೆರವಣಿಗೆ**

ನೈಸ್ ರಸ್ತೆ ತಿರುವು, ಕಡಬಗೆರೆ-ಮಾಚೋಹಳ್ಳಿ ಗೇಟ್, ಮಾಗಡಿ ರಸ್ತೆಯ ಮೂಲಕ ಸೀಗೆಹಳ್ಳಿ ಗೇಟ್‌ನ ಬಿಡಿಎ ಕೆಂಪೇಗೌಡ ಲೇಔಟ್‌ವರೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಿತು. ಮೆರವಣಿಗೆಗೆ ಬಿಬಿಎಂಪಿ ಮೇಯರ್ ಆರ್. ಸಂಪತ್‌ರಾಜ್ ಚಾಲನೆ ನೀಡಿದರು. ಜನಪದ ಕಲಾತಂಡಗಳು ಮೆರವಣಿಗೆಯ ಅಂದ ಹೆಚ್ಚಿಸಿದವು.

ವಿಚಾರಗೋಷ್ಠಿ, ಯುವ ಕವಿಗೋಷ್ಠಿ, ಸಾಧಕರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ, ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ವಿಮರ್ಶಕ ಬೈರಮಂಗಲ ರಾಮೇಗೌಡ, ಯಶವಂತಪುರ ಕಸಾಪ ಅಧ್ಯಕ್ಷ ಬಿ.ಟಿ. ಶ್ರೀನಿವಾಸ ಮೂರ್ತಿ, ಬೆಂ.ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ, ಶಿಕ್ಷಣ ತಜ್ಞೆ ಡಾ.ಗೀತಾ ರಾಮಾನುಜ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
ಗುರುವಾರ ● 8 ಮಾರ್ಚ್ 2018 ● 8 MARCH 2018

# ವ್ಯಾಕರಣ ಪ್ರಾಮುಖ್ಯತೆ ಇಲ್ಲದ ವಿದ್ವತ್ ಲೋಕ

## ಸಾಹಿತಿ ಪ್ರೊ.ಹಂಪನಾ ಬೇಸರ » ಪ್ರೊ.ಮಲ್ಲೇಪುರಂ ವಿರಚಿತ 'ಕಾವ್ಯಶಾಸ್ತ್ರ ಪರಿಭಾಷೆ' ಕೃತಿ ಲೋಕಾರ್ಪಣೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪಾಂಡಿತ್ಯದಲ್ಲಿ ನಂಬಿಕೆ ಇಟ್ಟುಕೊಂಡು ತಮ್ಮ ಕಾರ್ಯಕ್ಷೇತ್ರ ವಿಸ್ತರಿಸಿಕೊಳ್ಳುವವರ ನಡುವೆ ವಿದ್ವತ್ ಲೋಕವನ್ನು ಟೀಕಿಸುವವರೂ ಇದ್ದಾರೆ ಎಂದು ಹಿರಿಯ ಸಂಶೋಧಕ ಪ್ರೊ.ಹಂ.ಪ. ನಾಗರಾಜಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಉದಯ ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸಾಹಿತಿ ಹಾಗೂ ವಿಜಯವಾಣಿ ಅಂಕಣಕಾರ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಅವರ 'ಕಾವ್ಯಶಾಸ್ತ್ರ ಪರಿಭಾಷೆ' ಕೃತಿ ಲೋಕಾರ್ಪಣೆ ಮತ್ತು ಶಾಸ್ತ್ರ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ವತ್ತಿಗೆ ವ್ಯಾಕರಣ ಬಹು ಮುಖ್ಯ. ಆದರೆ, ಇಂದಿನವರು ವ್ಯಾಕರಣಕ್ಕೆ ಪ್ರಾಮುಖ್ಯತೆಯನ್ನೇ ನೀಡುತ್ತಿಲ್ಲ. ಆಧುನಿಕತೆ ಮತ್ತು ಪ್ರಾಚೀನತೆಗೆ ಸುವರ್ಣ ಕೊಂಡಿಯಾಗಿರುವವರು ಮಲ್ಲೇಪುರಂ, ಉನ್ನತ ತರಗತಿಗಳಿಗೆ ಮತ್ತು ಸ್ವ ಆಸಕ್ತಿಯಿಂದ ಅಧ್ಯಯನ ಮಾಡುವವರಿಗೂ ವ್ಯಾಕರಣ, ಶಾಸ್ತ್ರ ತಿಳಿಸುವ ಕೃತಿ ರಚಿಸಿದ್ದಾರೆಂದು ಹೇಳಿದರು.

> ಇತ್ತೀಚಿನ ಯುವಪೀಳಿಗೆಯಲ್ಲಿ ಶಾಸ್ತ್ರ ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿ ಮೂಡುತ್ತಿಲ್ಲ. ಆದರೆ, ಒಮ್ಮೆ ರುಚಿ ಹತ್ತಿಸುವ ಮೂಲಕ ಈ ಕುರಿತು ಆಸಕ್ತಿ ಮೂಡಿಸಬೇಕಾಗಿದೆ.
>
> । ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ
> ಹಿರಿಯ ವಿದ್ವಾಂಸ

**ಅಧ್ಯಯನ ಕೇಂದ್ರ ಸ್ಥಾಪನೆಯಾಗಲಿ:** ಪೂರ್ಣಪ್ರಮಾಣದಲ್ಲಿ ಶಾಸ್ತ್ರೀಯ ಭಾಷೆಯನ್ನು ಅಧ್ಯಯನ ಮಾಡುವ ಕೇಂದ್ರ ಅಥವಾ ಪೀಠ ಬೆಂಗಳೂರಿನಲ್ಲಿ ಆರಂಭವಾದರೆ ಭಾಷೆಯ ಬೆಳವಣಿಗೆಗೆ ಸಹಾಯಕವಾಗುತ್ತದೆ. ಈ ಬಗ್ಗೆ ವಿದ್ವಾಂಸರು ಚರ್ಚಿಸಿ ರೂಪುರೇಷೆ ಸಿದ್ಧಪಡಿಸಬೇಕು ಎಂದು ಕನ್ನಡ ಪ್ರಾಧ್ಯಾಪಕ ಪ್ರೊ.ನಾ. ಗೀತಾಚಾರ್ಯ ಹೇಳಿದರು.

**ಸಾಧಕರಿಗೆ ಸನ್ಮಾನ:** ತೆರೆಮರೆಯಲ್ಲಿದ್ದುಕೊಂಡೇ ವಿದ್ವತ್ ಕ್ಷೇತ್ರಕ್ಕೆ ಅಪಾರ ಕೊಡುಗೆ ಸಲ್ಲಿಸಿದ ಡಾ.ಶ್ರೀಕೃಷ್ಣ ಭಟ್, ಡಾ.ಎಸ್.ಎಂ. ಹಿರೇಮಠ, ಡಾ. ಮಾನಕರಿ ಶ್ರೀನಿವಾಸಾಚಾರ್ಯ, ವಿದ್ವಾನ್ ವಿ.ಜಿ. ಹೆಗಡೆ ಗುಡ್ಗೆ ಮತ್ತು ಪ್ರೊ.ಜಿ. ಅಬ್ದುಲ್ ಬಷೀರ್ ಅವರನ್ನು ಸನ್ಮಾನಿಸಲಾಯಿತು. ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಎಸ್. ರಾಮಲಿಂಗೇಶ್ವರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ವಿಜಯವಾಣಿ ಚಿತ್ರ



'ಕಾವ್ಯಶಾಸ್ತ್ರ ಪರಿಭಾಷೆ' ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಕೃತಿಕಾರ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ, ಹಿರಿಯ ಸಂಶೋಧಕ ಪ್ರೊ.ಹಂ.ಪ. ನಾಗರಾಜಯ್ಯ ಮತ್ತಿತರರು ಉಪಸ್ಥಿತರಿದ್ದರು.

### ಇನ್ನಷ್ಟು ಪರಿಷ್ಕರಣೆಯ ಆಶಯ

18 ವರ್ಷಗಳ ಹಿಂದೆ ಮೊದಲ ಮುದ್ರಣ ಕಂಡಿದ್ದ ಈ ಕೃತಿ ಇನ್ನಷ್ಟು ಪರಿಭಾಷೆಗಳನ್ನು ಸೇರಿಸಿಕೊಂಡು ಪರಿಷ್ಕರಣೆ ಆಗಬೇಕಿತ್ತು. ಆದರೆ, ಈಗ ಮರುಮುದ್ರಣ ಮಾತ್ರವಾಗಿದೆ. ಸಂಸ್ಕೃತ ಸಾಹಿತ್ಯ ಕಾವ್ಯಾಲಂಕಾರದಲ್ಲಿ ಬೆಳೆದುಬಂದ ಚರಿತ್ರೆಗಳನ್ನು ತುಂಬ ಸುಲಭವಾಗಿ ರೂಪಿಸಬೇಕು ಎಂಬುದು ನನ್ನ ಯೋಜನೆಯಾಗಿದೆ ಎಂದು ಕೃತಿಕಾರ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಹೇಳಿದರು.

ವಿಜಯ ಕರ್ನಾಟಕ

ಬುಧವಾರ,7 ಮಾರ್ಚ್ 2018

# ವ್ಯಾಕರಣಕ್ಕೆ ಪ್ರಾಮುಖ್ಯತೆ ದೊರೆಯುತ್ತಿಲ್ಲ: ಹಂಪನಾ ಕಳವಳ

**ವಿಕ ಸುದ್ದಿಲೋಕ** ಬೆಂಗಳೂರು

ವಿದ್ವತ್ ಅಪರೂಪವಾಗುತ್ತಿರುವ ಈ ಕಾಲ ಘಟ್ಟದಲ್ಲಿ, ವಿದ್ವತ್ತಿಗೆ ಬಹಳ ಮುಖ್ಯವಾಗಿರುವ ವ್ಯಾಕರಣಕ್ಕೆ ಪ್ರಾಮುಖ್ಯತೆ ದೊರೆಯುತ್ತಿಲ್ಲ ಎಂದು ಸಾಹಿತಿ ಪ್ರೊ. ಹಂ.ಪ. ನಾಗರಾಜಯ್ಯ ಕಳವಳ ವ್ಯಕ್ತಪಡಿಸಿದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಉದಯ ಪ್ರಕಾಶನದ ಸಹಯೋಗದಲ್ಲಿ ಮಂಗಳವಾರ ನಗರದ ಕಸಾಪ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಕಾವ್ಯಶಾಸ್ತ್ರ ಪರಿಭಾಷೆ' ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.


''ವಿದ್ವತ್ತಿನಲ್ಲಿ ನಂಬಿಕೆ ಇಟ್ಟುಕೊಂಡು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುವವರ ನಡುವೆ ವಿದ್ವತ್ ಲೋಕವನ್ನು ಟೀಕಿಸುವವರೂ ಇದ್ದಾರೆ. ಇಂತಹ ಸಂದರ್ಭದಲ್ಲೂ ಆಧುನಿಕತೆ ಮತ್ತು ಪ್ರಾಚೀನತೆಗೆ ಸುವರ್ಣ ಕೊಂಡಿಯಾಗಿರುವ ಮಲ್ಲೇಪುರಂ ಜಿ. ವೆಂಕಟೇಶ್ ಅವರು ನಿರಂತರ ಅಭ್ಯಾಸ, ಶ್ರದ್ಧೆಯಿಂದ ವಿದ್ವತ್ತನ್ನು ಗಳಿಸಿದ್ದಾರೆ,'' ಎಂದರು.

ಮಲ್ಲೇಪುರಂ ಜಿ. ವೆಂಕಟೇಶ್, ಕನ್ನಡ ಪ್ರಾಧ್ಯಾಪಕ ಪ್ರೊ. ನಾ. ಗೀತಾಚಾರ್ಯ ಮಾತನಾಡಿದರು. ಸಾಧಕರಾದ ದಕ್ಷಿಣ ಕರ್ನಾಟಕದ ಪ್ರೊ. ಜಿ. ಅಬ್ದುಲ್ ಬಷೀರ್, ದಕ್ಷಿಣ ಕನ್ನಡದ ಡಾ. ಶ್ರೀಕೃಷ್ಣ ಭಟ್, ಹೈದರಾಬಾದ್ ಕರ್ನಾಟಕದ ಡಾ. ಎಸ್. ಎಂ. ಹಿರೇಮಠ, ಉತ್ತರ ಕರ್ನಾಟಕದ ಡಾ. ಮಾನಕರಿ ಶ್ರೀನಿವಾಸಾಚಾರ್ಯ, ಉತ್ತರ ಕನ್ನಡದ ವಿದ್ವಾನ್ ವಿ.ಜಿ. ಹೆಗಡೆ ಗುಡ್ಗೆ ಅವರನ್ನು ಸನ್ಮಾನಿಸಲಾಯಿತು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಎಸ್. ರಾಮಲಿಂಗೇಶ್ವರ, ಡಾ. ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

ಪ್ರಜಾವಾಣಿ

ಬುಧವಾರ ● ಮಾರ್ಚ್ 7, 2018




ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಉದಯ ಪ್ರಕಾಶನ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ವಾನ್ ವಿ.ಜಿ.ಹೆಗಡೆ ಗುಡ್ಡೆ (ಹೊನ್ನಾವರ), ಡಾ.ಎಸ್.ಎಂ. ಹಿರೇಮಠ (ಕಲಬುರ್ಗಿ), ಪ್ರೊ. ಅಬ್ದುಲ್ ಬಷೀರ್ ಹಾಗೂ ಡಾ.ಶ್ರೀಕೃಷ್ಣ ಭಟ್ (ಇಬ್ಬರೂ ದಕ್ಷಿಣ ಕನ್ನಡ) ಅವರನ್ನು ಸನ್ಮಾನಿಸಲಾಯಿತು. ಉದಯ ಪ್ರಕಾಶನದ ಎಂ.ಡಿ.ಶೈಲಜಾ, ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಸಾಹಿತಿ ಪ್ರೊ.ಹಂ.ಪ. ನಾಗರಾಜಯ್ಯ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ, ಕನ್ನಡ ಪ್ರಾಧ್ಯಾಪಕ ಪ್ರೊ.ನಾ. ಗೀತಾಚಾರ್ಯ ಹಾಗೂ ಟ್ರಸ್ಟ್ ಅಧ್ಯಕ್ಷ ಎಸ್.ರಾಮಲಿಂಗೇಶ್ವರ ಇದ್ದಾರೆ
–ಪ್ರಜಾವಾಣಿ ಚಿತ್ರ

ಕನ್ನಡಪ್ರಭ ಬುಧವಾರ 7.3.2018


# ವ್ಯಾಕರಣವಿಲ್ಲದೆ ಭಾಷಾಧ್ಯಯನ ಅಪೂರ್ಣ: ಹಂಪನಾ ಅಭಿಮತ

**ಬೆಂಗಳೂರು:** ವಿದ್ವತ್ ಸಾಧನೆಗೆ ವ್ಯಾಕರಣದ ಅಧ್ಯಯನ ಅಗತ್ಯವಾಗಿದೆ. ಪ್ರಸ್ತುತ ಹೆಚ್ಚಿನವರು ವ್ಯಾಕರಣ ಕಲಿಕೆಗೆ ಆಸಕ್ತಿ ವಹಿಸದಿರುವುದು ವಿಷಾದನೀಯ ಎಂದು ನಾಡೋಜ ಪ್ರೊ. ಹಂ.ಪ.ನಾಗರಾಜಯ್ಯ ಬೇಸರ ವ್ಯಕ್ತಪಡಿಸಿದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಉದಯ ಪ್ರಕಾಶನ ಮಂಗಳವಾರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಕಾವ್ಯಶಾಸ್ತ್ರ ಪರಿಭಾಷೆ' ಕೃತಿ ಲೋಕಾರ್ಪಣೆ ಮತ್ತು ಎಲೆಮರೆಯ ಶಾಸ್ತ್ರ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಧುನಿಕತೆ ಮತ್ತು ಪ್ರಾಚೀನತೆಗೆ ಸುವರ್ಣ ಕೊಂಡಿಯಾಗಿರುವವರು ಮಲ್ಲೇಪುರಂ ವೆಂಕಟೇಶ್. ಸತತ ಅಭ್ಯಾಸ, ಶ್ರದ್ಧೆಯಿಂದ ವಿದ್ವತ್ತನ್ನು ಗಳಿಸಿ, ಉನ್ನತ ಅಧ್ಯಯನಕಾರರಿಗೆ ಮಾತ್ರವಲ್ಲ ಸ್ವ ಆಸಕ್ತಿಯಿಂದ ಅಧ್ಯಯನ ಮಾಡುವವರಿಗೂ ವ್ಯಾಕರಣ, ಶಾಸ್ತ್ರಗಳನ್ನು ತಿಳಿಸುವ ಈ ಕೃತಿ ಕೈಪಿಡಿಯಾಗಿದೆ. ವ್ಯಾಕರಣ ಅಭ್ಯಸಿಸುವ ಪರಂಪರೆ ಮುಂದುವರೆಸಿ ವಿದ್ವತ್ ಸಾಧನೆಗೆ ಯುವ ಜನಾಂಗ ಮುಂದಾಗಬೇಕು ಎಂದರು.

ಪ್ರಾಧ್ಯಾಪಕರಾದ ಪ್ರೊ.ನಾ.ಗೀತಾಚಾರ್ಯ ಮಾತನಾಡಿ, ಬಹುಜನರ ಒತ್ತಾಯದ ಮೇರೆಗೆ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರ ಸ್ಥಾಪನೆಯಾಗಿದೆ. ಅದು ಶಾಸ್ತ್ರೀಯ ಕನ್ನಡ ಭಾಷೆಯನ್ನು ಪೂರ್ಣ ಪ್ರಮಾಣದಲ್ಲಿ ಅಧ್ಯಯನ ನಡೆಸುವ ಕುರಿತು ವಿದ್ವಾಂಸರು ಚರ್ಚೆ ನಡೆಸಿ ರೂಪುರೇಷೆ ಸಿದ್ಧಪಡಿಸಬೇಕು. ಶಾಸ್ತ್ರೀಯ ಭಾಷಾ ಅಧ್ಯಯನ ಪೀಠ ಮೈಸೂರಿನ ಬದಲು ಬೆಂಗಳೂರಿನಲ್ಲಿ ಸ್ಥಾಪನೆಯಾದರೆ ಹೆಚ್ಚು ಉಪಯೋಗವಾಗುತ್ತಿತ್ತು ಎಂದರು. ಹೈದರಾಬಾದ್-ಕರ್ನಾಟಕ ಡಾ.ಎಸ್.ಎಂ.ಹಿರೇಮಠ ಇತರರಿದ್ದರು.



**ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರ ಕಾವ್ಯಶಾಸ್ತ್ರ ಪರಿಭಾಷೆ ಕೃತಿಯನ್ನು ನಾಡೋಜ ಹಂಪನಾಗರಾಜಯ್ಯ ಲೋಕಾರ್ಪಣೆ ಮಾಡಿದರು.**

ಕರ್ನಾಟಕ ನಮ್ಮ ಮಂಗಳವಾರ,6 ಮಾರ್ಚ್ 2018

# ಚಿಕಿತ್ಸೆ ಪಡೆಯುವಲ್ಲೂ ಸ್ವದೇಶಿ ಕಲ್ಪನೆ ಜಾಗೃತವಾಗಲಿ

ವಿಕ ಸುದ್ದಿಲೋಕ ಬೆಂಗಳೂರು

ನಮ್ಮ ಅಡುಗೆ ಮನೆಯಲ್ಲಿಯೇ ಸಾಕಷ್ಟು ಕಾಯಿಲೆಗಳಿಗೆ ಔಷಧಿ ಇದೆ. ಆದರೂ, ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗಳಿಗೂ ನಾವು ಪಾಶ್ಚಾತ್ಯ ವೈದ್ಯ ಪದ್ಧತಿಗೆ ಮೊರೆ ಹೋಗುತ್ತಿದ್ದೇವೆ. ಇನ್ನಾದರೂ ನಮ್ಮಲ್ಲಿ ಸ್ವದೇಶಿ ಕಲ್ಪನೆ ಜಾಗೃತ ವಾಗಲಿ ಎಂದು ಮಾಜಿ ರಾಜ್ಯಪಾಲ, ನಿವೃತ್ತ ನ್ಯಾ.ಎಂ. ರಾಮಾ ಜೋಯಿಸ್ ಹೇಳಿದರು.



ನಗರದ ಗಾಂಧಿ ಭವನದಲ್ಲಿ ಭಾನುವಾರ 'ಕಿಶೋರಿ ಸೂತ್ರ' ಪುಸ್ತಕ ಬಿಡುಗಡೆಗೊಳಿಸಲಾಯಿತು.

ಭಾರತೀಯ ಆಯುರ್ವೇದ ಪ್ರತಿಷ್ಠಾನವು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಡಾ. ಸಿ.ಎ.ಕಿಶೋರ್ ಅವರು ರಚಿಸಿರುವ 'ಅಂಗೈಯಲ್ಲಿ ಆರೋಗ್ಯ ಮಂತ್ರ -ಕಿಶೋರ ಸೂತ್ರ' ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

''ಮನೆಯಲ್ಲಿನ ಜೀರಿಗೆ, ಮೆಣಸು, ಅರಿಶಿಣ, ಜೇನುತುಪ್ಪದ ಡಬ್ಬಿಗಳಲ್ಲೇ ಸಾಕಷ್ಟು ಕಾಯಿಲೆಗಳಿಗೆ ಔಷಧವಿದೆ. ಆದರೂ ಕೆಮ್ಮು, ನೆಗಡಿಯಂತಹ ಸಮಸ್ಯೆಗೂ ಮಾತ್ರೆಗಳನ್ನು ತೆಗೆದುಕೊಳ್ಳುತ್ತೇವೆ. ಪ್ರತಿಯೊಂದಕ್ಕೂ ವಿದೇಶಿ ಮಂತ್ರ ಜಪಿಸುತ್ತಿರುವ ನಮ್ಮಲ್ಲಿ ಗಾಂಧೀಜಿ ಕನಸಿನ ಸ್ವದೇಶಿ ಮಂತ್ರ ಅರಿವಿಗೆ ಬಂದಿಲ್ಲ. ಇನ್ನಾದರೂ ಪಾಶ್ಚಾತ್ಯ ವೈದ್ಯ ಪದ್ಧತಿ ಬಿಟ್ಟು ದೇಶಿ ವೈದ್ಯಪದ್ಧತಿಯತ್ತ ಗಮನ ಹರಿಸಬೇಕು'' ಎಂದು ಆಶಿಸಿದರು.

''ಡಾ.ಕಿಶೋರ್ ಚಂದ್ರ ಅವರು ತಮ್ಮ ಪುಸ್ತಕದ ಮೂಲಕ ದೇಶೀ ವೈದ್ಯ ಪದ್ಧತಿ ಮೂಲಕ ಆರೋಗ್ಯ ಕಾಪಾಡಿಕೊಳ್ಳುವ ಅನೇಕ ಮಾಹಿತಿ ನೀಡಿದ್ದಾರೆ. ಪ್ರತಿಯೊಬ್ಬರಿಗೂ ಉಪಯೋಗವಾಗುವಂತಹ ಅನೇಕ ವಿಚಾರಗಳು ಪುಸ್ತಕದಲ್ಲಿವೆ'' ಎಂದರು.

ಮಾಜಿ ಸಚಿವ ರಾಮಚಂದ್ರಗೌಡ , ಎಂಎಲ್‌ಸಿ ತಾರಾ ಮಾತನಾಡಿದರು. ನಿರ್ದೇಶಕ ಟಿ.ಎನ್.ಸೀತಾರಾಂ ಪುಸ್ತಕ ಬಿಡುಗಡೆಗೊಳಿಸಿದರು. ಡಾ.ವೂಡೇ ಪಿ. ಕೃಷ್ಣ, ಪುಸ್ತಕದ ಕರ್ತೃ ಡಾ.ಕಿಶೋರ್‌ಚಂದ್ರ ಉಪಸ್ಥಿತರಿದ್ದರು.

ಕನ್ನಡಪ್ರಭ ಸೋಮವಾರ 5.3.2018

# ಸ್ವಾತಂತ್ರ್ಯ ಬಂದರೂ ಸ್ವದೇಶಿತ್ವ ಬಂದಿಲ್ಲ

## ಸಾಕಾರಗೊಳ್ಳದ ಗಾಂಧೀಜಿ ಕನಸು | ವಿದೇಶಿ ಮಂತ್ರ ಜಪ ದುರಂತ: ನ್ಯಾ.ರಾಮಾ ಜೋಯಿಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರತಿಯೊಂದು ಕ್ಷೇತ್ರದಲ್ಲೂ ನಾವು ವಿದೇಶಿಮಂತ್ರ ಜಪಿಸುತ್ತಿರುವುದರಿಂದ ಸ್ವಾತಂತ್ರ್ಯ ಬಂದ70ವರ್ಷಗಳಾದರೂ ಗಾಂಧೀಜಿ ಕನಸಿನ ಸ್ವದೇಶಿತ್ವ ಮಾತ್ರ ಸಾಕಾರವಾಗಿಲ್ಲ ಎಂದು ಮಾಜಿ ರಾಜ್ಯಪಾಲ ನ್ಯಾಯಮೂರ್ತಿ ಡಾ. ಎಂ.ರಾಮಾ ಜೋಯಿಸ್ ವಿಷಾದ ವ್ಯಕ್ತಪಡಿಸಿದರು.

ಭಾರತೀಯ ಆಯುರ್ವೇದ ಪ್ರತಿಷ್ಠಾನ ಭಾನುವಾರ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಕಿಶೋರ್‌ಚಂದ್ರ ಅವರ 'ಕಿಶೋರ ಸೂತ್ರ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮನೆಯಲ್ಲಿನ ಜೀರಿಗೆ, ಮೆಣಸು, ಅರಿಶಿಣ, ಜೇನುತುಪ್ಪದ ಡಬ್ಬಿಗಳಲ್ಲೇ ಸಾಕಷ್ಟು ಕಾಯಿಲೆಗಳಿಗೆ ಔಷಧಿ ಇದೆ. ಆದರೂ, ಕೆಮ್ಮಿನಂತಹಸಣ್ಣಆರೋಗ್ಯ ಸಮಸ್ಯೆಯಾದರೂ ಪಾಶ್ಚಾತ್ಯ ವೈದ್ಯ ಪದ್ಧತಿಗೆ ಮೊರೆ ಹೋಗುತ್ತಿದ್ದೇವೆ. ನಿಂಬೆಹಣ್ಣಿನ ಲೇಹದಿಂದ ನಿವಾರಣೆ ಆಗುವ ಕಾಯಿಲೆಗೆ ತಿಂಗಳುಗಟ್ಟಲೆ ಮಾತ್ರೆ, ಔಷಧ ಸೇವಿಸುತ್ತಿದ್ದೇವೆ. ಭಾರತೀಯ ಆರೋಗ್ಯ ಶಾಸ್ತ್ರವನ್ನು ಸಂಪೂರ್ಣ ಮರೆತಿದ್ದೇವೆ. ಪಾಶ್ಚಾತ್ಯ ವೈದ್ಯ ಪದ್ಧತಿ ಬಿಟ್ಟು ಜನರು ಈಗಲಾದರೂ ದೇಶೀ ವೈದ್ಯಪದ್ಧತಿಯತ್ತ ಗಮನ ಹರಿಸಬೇಕು ಎಂದು ಅವರು ಮನವಿ ಮಾಡಿದರು.



ಭಾರತೀಯ ಆಯುರ್ವೇದ ಪ್ರತಿಷ್ಠಾನವು, ಭಾನುವಾರ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಯುರ್ವೇದ ಚಿಕಿತ್ಸೆ ಕುರಿತ 'ಕಿಶೋರ ಸೂತ್ರ' ಪುಸ್ತಕವನ್ನು ಮಾಜಿ ರಾಜ್ಯಪಾಲ ನ್ಯಾಯಮೂರ್ತಿ ಡಾ.ಎಂ.ರಾಮಾ ಜೋಯಿಸ್ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯರಾದ ರಾಮಚಂದ್ರಗೌಡ, ತಾರಾ ಅನುರಾಧ, ಚಿತ್ರ ನಿರ್ದೇಶಕ ಟಿ.ಎನ್.ಸೀತಾರಾಂ, ಡಾ.ವೂಡೇ ಪಿ.ಕೃಷ್ಣ, ಪುಸ್ತಕ ಕರ್ತೃ ಡಾ.ಕಿಶೋರ್ ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

ವಿಧಾನ ಪರಿಷತ್ ಸದಸ್ಯ ರಾಮಚಂದ್ರಗೌಡ ಮಾತನಾಡಿ, ಪಾಶ್ಚಾತ್ಯ ಸಂಸ್ಕೃತಿ ಪ್ರಭಾವದಿಂದಾಗಿ ಹಿತ್ತಲಗಿಡ ಮದ್ದಲ್ಲ, ಪಕ್ಕದ ಮನೆಯವ ಸ್ನೇಹಿತನಲ್ಲ ಎನ್ನುವ ಸ್ಥಿತಿಗೆ ತಲುಪಿದ್ದೇವೆ. ವೈದ್ಯೋ ನಾರಾಯಣೋಹರಿ ಎಂಬುದಕ್ಕೆ ವಿರುದ್ಧವಾದ ಕೆಲಸ ನಡೆಯುತ್ತಿದೆ. ಯಮ ಪ್ರಾಣವನ್ನು ಕೊಂಡೊಯ್ದರೆ, ವೈದ್ಯರು ಪ್ರಾಣದ ಜತೆ ಹಣವನ್ನೂ ಕೊಂಡೊಯ್ಯುತ್ತಿದ್ದಾರೆ. ಆಯುರ್ವೇದ ಔಷಧಿಯಲ್ಲ, ದಿನ ನಿತ್ಯದ ಊಟವಿದ್ದಂತೆ. ಕಡಿಮೆ ವೆಚ್ಚದ ಇಂತಹ ದೇಸಿ ವೈದ್ಯಪದ್ಧತಿಗೆ ಜನರು ಒತ್ತು ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯೆ ತಾರಾ ಅನುರಾಧ, ಕಿರುತೆರೆ ನಿರ್ದೇಶಕ ಟಿ.ಎನ್.ಸೀತಾರಾಂ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಪುಸ್ತಕದ ಕರ್ತೃ ಡಾ.ಕಿಶೋರ್ ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

ವಿಜಯವಾಣಿ ಸೋಮವಾರ 5 ಮಾರ್ಚ್ 2018 ● 5 MARCH 2018

# ಸ್ವದೇಶಿ ಕಲ್ಪನೆ ಮೂಡಲಿ

## ರಾಮಾಜೋಯಿಸ್ ಆಶಯ | ಕಿಶೋರ ಸೂತ್ರ ಕೃತಿ ಬಿಡುಗಡೆ



ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಕಿಶೋರ ಸೂತ್ರ ಬಿಡುಗಡೆ ಸಮಾರಂಭದಲ್ಲಿ ಎಂ. ರಾಮಾಜೋಯಿಸ್, ರಾಮಚಂದ್ರಗೌಡ, ತಾರಾ, ಟಿ.ಎನ್. ಸೀತಾರಾಮ್, ಡಾ.ಸಿ.ಎ. ಕಿಶೋರ್, ಡಾ.ಶ್ರೀನಿವಾಸ ಬನ್ನಿಗೋಳ್ ಇದ್ದರು.

◻ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಊಟದಿಂದ ಹಿಡಿದು ಔಷಧ ಪದ್ಧತಿಯವರೆಗೂ ಭಾರತೀಯರಾದ ನಾವು ಪಾಶ್ಚಾತ್ಯ ಅನುಕರಣೆಗೆ ಬಲಿಯಾಗಿದ್ದೇವೆ. ಇದರ ಬದಲಾಗಿ, ಸ್ವದೇಶಿ ಕಲ್ಪನೆ ಶೀಘ್ರ ಜಾಗೃತವಾಗಬೇಕು ಎಂದು ಜಾರ್ಖಂಡ್ ಮಾಜಿ ರಾಜ್ಯಪಾಲ ಎಂ. ರಾಮಾಜೋಯಿಸ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗಾಂಧಿಭವನದಲ್ಲಿ ಭಾರತೀಯ ಆಯುರ್ವೇದ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಭಾನುವಾರ ಆಯೋಜಿಸಿದ್ದ ವಿಜಯವಾಣಿ ಅಂಕಣಕಾರ ಡಾ.ಸಿ.ಎ. ಕಿಶೋರ್ ವಿರಚಿತ 'ಕಿಶೋರ ಸೂತ್ರ- ಅಂಗೈಯಲ್ಲಿ ಆರೋಗ್ಯದ ಮಂತ್ರ' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

**ಸ್ವಾತಂತ್ರ್ಯ ನಂತರ ಬದಲಾದ ಭಾರತೀಯರ ಧೋರಣೆ**

ಆರೋಗ್ಯವೇ ಭಾಗ್ಯ, ಆರೋಗ್ಯ ವಿಲ್ಲದಿದ್ದರೆ ಯಾವ ಪದವಿಯಿದ್ದರೂ ಅದು ವ್ಯರ್ಥ. ಆದರೆ, ಇಂದು ಸ್ವದೇಶಿ ಮರೆತು ಹಾಳಾಗಿದ್ದೇವೆ. ಉಡುಗೆ, ತೊಡುಗೆಯಲ್ಲೂ ಸ್ವದೇಶಿತನವಿರಬೇಕು ಎಂದು ಗಾಂಧೀಜಿ ಕರೆ ನೀಡಿದ್ದರು. ಆದರೆ ಸ್ವಾತಂತ್ರ್ಯನಂತರ ಎಲ್ಲ ವಿದೇಶಿಮಯಯಾಗಿದೆ. ವೈದ್ಯರ ಬಳಿ ಹೋದರೆ ಔಷಧದ ದೊಡ್ಡ ಪಟ್ಟಿಯನ್ನೇ ನೀಡುತ್ತಾರೆ. ಇದನ್ನು ಕೊಳ್ಳಲು ಸಾವಿರಾರು ರೂಪಾಯಿ ಖರ್ಚು ಮಾಡಬೇಕು. ಆದರೆ, ಅಡುಗೆ ಮನೆಯಲ್ಲಿರುವ ಎಲ್ಲ ವಸ್ತುಗಳೂ ಔಷಧ ಎಂಬುವುದನ್ನು ನಾವು ಮರೆಯುತ್ತಿದ್ದೇವೆ ಎಂದರು.

**ಆಯುರ್ವೇದ ನಮ್ಮದು:** ಎಲ್ಲ ವೈದ್ಯಕೀಯ ಪದ್ಧತಿಗಳನ್ನು ನಾನು ಗೌರವಿಸುತ್ತೇನೆ. ಆದರೆ, ಆಯುರ್ವೇದ ಪದ್ಧತಿ ನಮ್ಮದು. ರೋಗಗಳನ್ನು ಸೂಕ್ತವಾಗಿ ಅರ್ಥ ಮಾಡಿಕೊಳ್ಳದೆ ಜನ ಔಷಧ ಸೇವಿಸುತ್ತಿದ್ದಾರೆ. ಈ ಕುರಿತು ಬೆಳಕು ಚೆಲ್ಲಲು 'ಕಿಶೋರ ಸೂತ್ರ' ಪುಸ್ತಕದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದು ಡಾ.ಕಿಶೋರ್ ಹೇಳಿದರು.

ಸೌಂದರ್ಯ, ಚಿಕಿತ್ಸೆ ಮತ್ತು ಸಂರಕ್ಷಣಾತ್ಮಕ ದೃಷ್ಟಿಕೋನದಲ್ಲೂ ಆಯುರ್ವೇದವಿದೆ. ಗುರುಮುಖೇನ ಪಾರಂಪರಿಕವಾಗಿ ಬಂದ ವಿಶಿಷ್ಟ ಜ್ಞಾನವೇ ಆಯುರ್ವೇದ. ಮನೆಮದ್ದು ಬಳಸುವ ಹಿರಿಯೊಬ್ಬರು ಒಂದು ಕುಟುಂಬದಲ್ಲಿದ್ದರೆ ಇಡೀ ಕುಟುಂಬವೇ ಆರೋಗ್ಯಕರವಾಗಿರುತ್ತದೆ ಎಂದು ಕಿಶೋರ್ ಅಭಿಪ್ರಾಯಪಟ್ಟರು. ಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಂ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

### ಅಲೋಪಥಿಗೆ ಬಲಿ!

ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು ಎಂಬಂತೆ ಮೂಲ ಆರೋಗ್ಯಶಾಸ್ತ್ರ ಮರೆತು, ಒಂದು ರೋಗದ ಜತೆ ಇನ್ನೊಂದನ್ನು ಪಡೆಯುತ್ತಿದ್ದೇವೆ. ಸ್ವಾತಂತ್ರ್ಯ ಬಂದ ನಂತರ ದೇಶದಲ್ಲಿ ಆಯುರ್ವೇದ ಆಸ್ಪತ್ರೆ ಸಂಖ್ಯೆ ಜಾಸ್ತಿಯಾಗಬೇಕಿತ್ತು. ಆದರೆ, ಪಾಶ್ಚಾತ್ಯ ಔಷಧಗಳನ್ನೇ ಬಳಸಿ ಬಲಿಯಾಗುತ್ತಿದ್ದೇವೆ. ಸಂವಿಧಾನದ ಮೊದಲ ವಾಕ್ಯದಲ್ಲೇ ಇರುವ ಇಂಡಿಯಾ ಎನ್ನುವ ಪದ ತೆಗೆದು ಭಾರತ ಎಂದು ಮಾಡಿದರೆ ಎಲ್ಲ ಸರಿಹೋಗಬಹುದು ಎಂದು ರಾಮಾಜೋಯಿಸ್ ಹೇಳಿದರು.

ಮನೆಮದ್ದುಗಳ ಕುರಿತು ಇರುವ ಸಲಹೆಗಳನ್ನು ಪುಸ್ತಕ ರೂಪದಲ್ಲಿ ಹೊರತಂದಿರುವುದು ಬಹಳ ಉಪಯುಕ್ತವಾಗಲಿದೆ. ಕಿಶೋರ್ ಇದೇ ರೀತಿ ಜನರಿಗೆ ಕೃತಿಯ ರೂಪೇನ ಆರೋಗ್ಯದ ಟಿಪ್ಸ್ ನೀಡುತ್ತಿರಲಿ.

| ತಾರಾ ಅನೂರಾಧಾ ವಿಧಾನಪರಿಷತ್ ಸದಸ್ಯೆ

ಗುರುವನ್ನು ಮೀರಿಸಿ ಶಿಷ್ಯ ಬೆಳೆದಾಗ ಗುರುವಿಗೆ ಆಗುವ ಸಂತೋಷಕ್ಕೆ ಪಾರವಿಲ್ಲ. ಅನೇಕ ವಿಷಯಗಳನ್ನು ಪುಸ್ತಕದಲ್ಲಿ ಕಿಶೋರ್ ಸರಳ ರೂಪದಲ್ಲಿ ಜನರಿಗೆ ನೀಡಿದ್ದಾನೆ. ನಿಶ್ಚಿತವಾಗಿಯೂ ಈ ಪುಸ್ತಕ ಸಮಾಜದ ಸ್ವಾಸ್ಥ್ಯ ಸುಧಾರಿಸುವ ಕೈಪಿಡಿಯಾಗಿದೆ.

| ಡಾ.ಶ್ರೀನಿವಾಸ ಬನ್ನಿಗೋಳ್ ಸೆಂಟ್ರಲ್ ಕೌನ್ಸಿಲ್ ಫಾರ್ ಇಂಡಿಯನ್ ಮೆಡಿಸಿನ್ ಸದಸ್ಯ

ಆಯುರ್ವೇದ ಔಷಧವಲ್ಲ. ಅದು ದಿನ ಬಳಸುವ ಊಟ. ಆದರೆ, ಇದನ್ನು ಮರೆತಿದ್ದೇವೆ. ಹೀಗಾಗಿಯೇ ಇಷ್ಟೆಲ್ಲ ತೊಂದರೆ ಅನುಭವಿಸುತ್ತಿದ್ದೇವೆ. ಔಷಧ ತಯಾರಕರು ಹೊಸ ರೋಗ ಹುಟ್ಟುಹಾಕುತ್ತಿದ್ದಾರೆ. ಇದೊಂದು ಸಂಚು.

| ರಾಮಚಂದ್ರ ಗೌಡ ಮಾಜಿ ಸಚಿವ

ಸಂಯುಕ್ತ ಕರ್ನಾಟಕ ಶುಕ್ರವಾರ, 02, ಮಾರ್ಚ್, 2018,


# ಮಾನವ ಹಕ್ಕು ಉಲ್ಲಂಘನೆ ನಿರಂತರ: ಕಳವಳ

ಸಂ.ಕ.ಸಮಾಚಾರ ಬೆಂಗಳೂರು

ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಕಾರ್ಪೋರೇಟ್ ಸಂಸ್ಥೆಗಳು ಸಾಮಾನ್ಯರ ಹಕ್ಕುಗಳನ್ನು ಗುತ್ತಿಗೆಗೆ ಪಡೆದಿರುವಂತೆ ವರ್ತಿಸುತ್ತಿವೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ರಾಘವೇಂದ್ರ ಎಸ್. ಚೌಹಾಣ್ ಕಳವಳ ವ್ಯಕ್ತಪಡಿಸಿದರು.

ರಾಜ್ಯ ಮಾನವ ಹಕ್ಕುಗಳ ಆಯೋಗ, ಸಮತಾ ಸಂಘಟನೆ ಹಾಗೂ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಸಹಭಾಗಿತ್ವದಲ್ಲಿ ಶೇಷಾದ್ರಿಪುರ ಕಾಲೇಜಿನಲ್ಲಿ ಆಯೋಜಿಸಿದ್ದ 'ಸಮಕಾಲೀನ ಜಗತ್ತಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಕುರಿತು' ರಾಜ್ಯ ಮಟ್ಟದ ವಿದ್ಯಾರ್ಥಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, ದೇಶದ ಎಲ್ಲಾ ಜನರಿಗೂ ಉತ್ತಮ ಗುಣ ಮಟ್ಟದ ಗಾಳಿ, ನೀರು ಹಾಗೂ ಆಹಾರ ಲಭ್ಯವಾಗುವಂತಾಗಬೇಕು ಎನ್ನುವುದು ಸಂವಿಧಾನದ ಆಶಯ. ಆದರೆ, ಕಾರ್ಪೋರೇಟ್ ಸಂಸ್ಕೃತಿಯಿಂದ ಜನಸಾಮಾನ್ಯರು ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಇದಕ್ಕೆ ಬೆಳ್ಳಂದೂರು ಕೆರೆ ಉತ್ತಮ ಉದಾಹರಣೆ ಎಂದರು.

ಹೆಣ್ಣುಮಕ್ಕಳು ಇಚ್ಛಿಸಿದವರನ್ನು ಮದುವೆಯಾಗುವ ಅವಕಾಶ ಸೃಷ್ಟಿಯಾಗುತ್ತಿಲ್ಲ. ಆಹಾರ ಪದ್ಧತಿಯಲ್ಲೂ ಸ್ವಾತಂತ್ರ್ಯವಿಲ್ಲ. ಪಾಕಿಸ್ತಾನದಲ್ಲಿ ಸಿಖ್ ಹಾಗೂ ಹಿಂದೂಗಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ.



ಶೇಷಾದ್ರಿಪುರ ಕಾಲೇಜಿನಲ್ಲಿ ಆಯೋಜಿಸಿದ್ದ 'ಸಮಕಾಲೀನ ಜಗತ್ತಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಕುರಿತು' ರಾಜ್ಯ ಮಟ್ಟದ ವಿದ್ಯಾರ್ಥಿಗಳ ಸಮಾವೇಶವನ್ನು ಹೈಕೋರ್ಟ್ ನ್ಯಾ. ರಾಘವೇಂದ್ರ ಎಸ್. ಚೌಹಾಣ್ ಉದ್ಘಾಟಿಸಿದರು.

ಬೌದ್ಧ ಧರ್ಮದ ಪ್ರಭಾವ ಇರುವಡೆಯೂ ಅಲ್ಪಸಂಖ್ಯಾತರ ಹಕ್ಕು ಉಲ್ಲಂಘನೆಯಾಗುತ್ತಿದ್ದು, ಇವೆಲ್ಲವೂ ನೇರವಾಗಿ ಮಾನವ ಹಕ್ಕುಗಳ ಉಲ್ಲಂಘನೆಗೆ ಉದಾಹರಣೆಯಾಗಿವೆ ಎಂದು ತಿಳಿಸಿದರು.

ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಮಧುಶರ್ಮಾ ಮಾತನಾಡಿ, ವಿಶ್ವದ ಎಲ್ಲಾ ಭಾಗಗಳಲ್ಲಿಯೂ ಮಹಿಳೆಯರ ಹಕ್ಕುಗಳಿಗೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ. ರಾಜ್ಯದಲ್ಲಿ ಮೊಟ್ಟಮೊದಲ ಮಹಿಳಾ ಐಪಿಎಸ್ ಅಧಿಕಾರಿಯಾಗಿ ನಾನು ನೇಮಕವಾಗಿದ್ದೆ. ಅಂತಹ ಸಂದರ್ಭದಲ್ಲಿ ಅರಣ್ಯ ಭವನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕಚೇರಿಯ ಎಲ್ಲಾ ಸಿಬ್ಬಂದಿ ಪ್ರಾಣಿ ಸಂಗ್ರಹಾಲಯದಲ್ಲಿನ ವಿಶಿಷ್ಟ ಪ್ರಾಣಿಯಂತೆ ನನ್ನನು ನೋಡುತ್ತಿದ್ದರು. ಅಲ್ಲದೆ, ದಕ್ಷಿಣ ಕನ್ನಡದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಅಲ್ಲಿನ ಸಂಪ್ರದಾಯ ಮಹಿಳೆಯರ ಹೆಸರಿನಲ್ಲಿ ಆಸ್ತಿ ಇದ್ದರೂ, ನಿರ್ವಹಣೆ ಮಾತ್ರ ಪುರುಷರೇ ಮಾಡುತ್ತಾರೆ. ಈ ಅಂಶ ಮಹಿಳೆಯರ ಹಕ್ಕುಗಳ ಉಲ್ಲಂಘನೆಗೆ ನೇರ ಉದಾಹರಣೆಯಾಗಿದೆ ಎಂದರು. ಸಮಾವೇಶದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ, ಪ್ರಾಂಶುಪಾಲರಾದ ಡಾ. ಅನುರಾಧಾ ರಾಯ್, ಸಮತ ಸಂಘಟನೆಯ ಸಂಚಾಲಕಿ ಡಿ.ಎಸ್. ಮಲ್ಲಿಕಾ ಮತ್ತಿತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಗುರುವಾರ 1 ಮಾರ್ಚ್ 2018 ● 1 MARCH 2018

# ಮಾನವಹಕ್ಕು ಉಲ್ಲಂಘನೆ ಸಲ್ಲ

## ನ್ಯಾಯಮೂರ್ತಿ ರಾಘವೇಂದ್ರ ಎಸ್. ಚೌಹಾಣ್ ಅಭಿಮತ




ವಿಜಯವಾಣಿ ಚಿತ್ರ

ಮಾನವ ಹಕ್ಕುಗಳ ಉಲ್ಲಂಘನೆ ಕುರಿತ ವಿಚಾರಸಂಕಿರಣದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ರಾಘವೇಂದ್ರ ಚೌಹಾಣ್, ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಮಧುಶರ್ಮಾ, ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಹುರಾಷ್ಟ್ರೀಯ ಸಂಸ್ಥೆಗಳ ಹೆಚ್ಚಳದಿಂದ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ಹೆಚ್ಚಾಗುತ್ತಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ರಾಘವೇಂದ್ರ ಎಸ್. ಚೌಹಾಣ್ ಕಳವಳ ವ್ಯಕ್ತ ಪಡಿಸಿದ್ದಾರೆ.

ಶೇಷಾದ್ರಿಪುರ ಕಾಲೇಜಿನಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗ, ಸಮತಾ ಸಂಘಟನೆ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾದ ಸಮಕಾಲೀನ ಜಗತ್ತಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಕುರಿತ ರಾಜ್ಯಮಟ್ಟದ ವಿದ್ಯಾರ್ಥಿ ಸಮಾವೇಶದಲ್ಲಿ ಮಾತನಾಡಿದರು.

ಬಹುರಾಷ್ಟ್ರೀಯ ಕಂಪನಿಗಳು ಸಂವಿಧಾನದ ಆಶಯಗಳಿಗೆ ಧಕ್ಕೆ ಉಂಟು ಮಾಡುತ್ತಿರುವುದು ಬೇಸರದ ಸಂಗತಿ. ಇಂತಹ ಸಂಸ್ಥೆಗಳು ಹೆಚ್ಚಾದ ನಗರಗಳಲ್ಲಿ ಜನರ ಸಮಾನ್ಯ ಜೀವನಕ್ಕೆ ತೊಡಕಾಗಿರುವುದು ಕಾಣುತ್ತಿದ್ದೇವೆ. ಇಂತಹ ವಿದ್ಯಮಾನಕ್ಕೆ ಬೆಳ್ಳಂದೂರು ಕೆರೆಯೇ ಸಾಕ್ಷಿ ಎಂದರು.

ಮಹಿಳೆಯರ ಜೀವನ, ಕೆಲ ವರ್ಗಗಳ ಆಹಾರ ಪದ್ಧತಿಯಲ್ಲಿನ ಬದಲಾವಣೆ ಸೇರಿ ನಿತ್ಯ ಅನೇಕ ವಿಷಯಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು ಬೇಸರದ ಸಂಗತಿ. ಈ ಎಲ್ಲ ವಿಚಾರಗಳ ಬಗ್ಗೆ ದೊಡ್ಡ ಮಟ್ಟದಲ್ಲಿ ಚರ್ಚೆಯಾಗಬೇಕಿದೆ. ವಿದ್ಯಾರ್ಥಿಗಳು ಇಂತಹ ವಿಷಯಗಳ ಅಧ್ಯಯನಕ್ಕೆ ಮುಂದಾಗಬೇಕು ಎಂದರು.

ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಮಧು ಶರ್ಮಾ ಮಾತನಾಡಿ, ತಂತ್ರಜ್ಞಾನ, ಜೀವನಶೈಲಿ ಬದಲಾಗುತ್ತಿದ್ದರೂ, ಮಹಿಳೆಯರ ಮೇಲಿನ ಶೋಷಣೆ, ಪುರುಷ ಪ್ರಧಾನ ಕಲ್ಪನೆ ಇನ್ನೂ ಮಾಸುತ್ತಿಲ್ಲ. ವಿಶ್ವದ ಎಲ್ಲ ಭಾಗಗಳಲ್ಲಿ ಮಹಿಳೆಯರ ಹಕ್ಕುಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಮಹಿಳೆಯರನ್ನು ಮುಂದಿಟ್ಟುಕೊಂಡು, ಸರ್ಕಾರಿ ಸೌಲಭ್ಯ, ಆಸ್ತಿಗಳಿಕೆ ಇತ್ಯಾದಿ ಎಲ್ಲ ತರಹದ ವಿಷಯಗಳಿಗೆ ಪುರುಷರೇ ಪ್ರಧಾನ ಭೂಮಿಕೆಯಲ್ಲಿ ಕಾಣಬಹುದು. ಇವೆಲ್ಲವೂ ಮಾನವ ಹಕ್ಕುಗಳ ಉಲ್ಲಂಘನೆಯ ಭಾಗವಾಗಿದೆ ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಪ್ರಾಂಶುಪಾಲೆ ಡಾ.ಅನುರಾಧಾ ರಾಯ್, ಸಮತಾ ಸಂಘಟನೆ ಸಂಚಾಲಕಿ ಡಿ.ಎಸ್. ಮಲ್ಲಿಕಾ ಮತ್ತಿತರರು ಇದ್ದರು.

ಪ್ರಜಾವಾಣಿ ಗುರುವಾರ ● ಮಾರ್ಚ್ 1, 2018

# 'ಭಾಷೆಯ ಬಗ್ಗೆ ಸಂಕುಚಿತತೆ ತೊರೆಯಬೇಕು'



ಬೆಂಗಳೂರು: ಭಾಷೆಯ ಬಗ್ಗೆ ಸಂಕುಚಿತ ಭಾವನೆ ತೊರೆದು ವಿಶಾಲಮನೋಭಾವ ಬೆಳೆಸಿಕೊಳ್ಳಬೇಕು ಎಂದು ಶೇಷಾದ್ರಿಪುರ ಶಿಕ್ಷಣದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಅಭಿಪ್ರಾಯಪಟ್ಟರು.

ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಭಾಷಾಸಂಗಮ ವೇದಿಕೆ ಆಶ್ರಯದಲ್ಲಿ ಆಯೋಜಿಸಿದ್ದ 'ಭಾಷಾ ಸಾಮರಸ್ಯ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿವಿಎಸ್ ಪದವಿಕಾಲೇಜಿನ ಪ್ರಾಂಶುಪಾಲ ಡಾ.ಎಂ.ಸಿ.ಪ್ರಕಾಶ್, 'ಸಾಹಿತಿಗಳಾದ ಮಾಸ್ತಿ, ಕುವೆಂಪು, ಡಿವಿಜಿ, ಅಡಿಗರು ಇಂಗ್ಲಿಷ್ ಭಾಷೆಯಿಂದ ಪುಷ್ಟಿ ಪಡೆದರೂ, ತಮ್ಮ ಭಾವನೆಗಳನ್ನು ಮಾತೃಭಾಷೆಯಲ್ಲಿಯೇ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು ಈ ದಿಸೆಯಲ್ಲಿ ಚಿಂತನೆ ನಡೆಸಬೇಕು' ಎಂದು ಸಲಹೆ ನೀಡಿದರು.

ವಿದ್ವಾಂಸ ಡಾ.ಮಲ್ಲೇಪುರ ಜಿ. ವೆಂಕಟೇಶ್, 'ವಿದ್ಯಾರ್ಥಿಗಳು ಭಾಷೆಯನ್ನು ಬಳಸುವಾಗ ಬಹಳ ಎಚ್ಚರಿಕೆಯಿಂದ ಯೋಚಿಸಿ, ಮಾತನಾಡಬೇಕು. ಅದೊಂದು ವ್ಯಕ್ತಿತ್ವದ ಭಾಗವಾಗಿದೆ' ಎಂದರು.

ಹೊಸ ದಿಗಂತ

ಬುಧವಾರ
28 ಫೆಬ್ರವರಿ 2018

ದಿಗಂತ ಚಿತ್ರ



ಶೇಷಾದ್ರಿಪುರ ಕಾಲೇಜಿನ ವತಿಯಿಂದ ಹಮ್ಮಿಕೊಳ್ಳಲಾದ ರಾಷ್ಟ್ರಮಟ್ಟದ ವಿದ್ಯಾರ್ಥಿ ಸಮ್ಮೇಳನವನ್ನು ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶ ರಾಘವೇಂದ್ರ ಎಸ್.ಚೌಹಾಣ್ ಉದ್ಘಾಟಿಸಿದರು.

# ಮಾನವ ಹಕ್ಕುಗಳ ಉಲ್ಲಂಘನೆ ದೇಶದ ಸಮಸ್ಯೆಯಲ್ಲಿ ಒಂದು

ದಿಗಂತ ವರದಿ: ಬೆಂಗಳೂರು, ಫೆ.27

ಮಾನವ ಹಕ್ಕುಗಳ ಉಲ್ಲಂಘನೆ ಎಂಬುದು ಇಂದು ದೇಶವನ್ನು ದಹಿಸುತ್ತಿರುವ ಸಮಸ್ಯೆಗಳಲ್ಲಿ ಮುಖ್ಯವಾದುದಾಗಿದೆ ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶ ರಾಘವೇಂದ್ರ ಎಸ್.ಚೌಹಾಣ್ ತಿಳಿಸಿದರು.

ಶೇಷಾದ್ರಿಪುರ ಕಾಲೇಜಿನ ವತಿಯಿಂದ ಸಮಕಾಲೀನ ಜಗತ್ತಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಎಂಬ ವಿಷಯದ ಕುರಿತು ಹಮ್ಮಿಕೊಳ್ಳಲಾದ ರಾಷ್ಟ್ರಮಟ್ಟದ ವಿದ್ಯಾರ್ಥಿ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಇತಿಹಾಸದುದ್ದಕ್ಕೂ ವಿವಿಧ ದೇಶಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಲು ಕಾರಣ ಕಾನೂನಿನ ಅನುಪಸ್ಥಿತಿ. ಪ್ರತಿಯೊಬ್ಬ ವ್ಯಕ್ತಿಯೂ ಮೂಲಭೂತ ಹಕ್ಕುಗಳು ನಮಗಿವೆಯೇ ಎಂದು ಪ್ರಶ್ನಿಸಿಕೊಳ್ಳಬೇಕಾದ ಮತ್ತು ಉತ್ತರ ಕಂಡುಕೊಳ್ಳಬೇಕಾದ ಅಗತ್ಯತೆಯನ್ನು ಅವರು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಇಂದಿನ ಯುವ ಜನಾಂಗ ಮಾನವ ಹಕ್ಕುಗಳ ಬಗ್ಗೆ ಸಂವಾದ -ಚರ್ಚೆ ನಡೆಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಮಧುಶರ್ಮಾ ಮಾತನಾಡಿ, ಸಮಾಜದಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವವರೇ ಕಾನೂನಿನ ಉಲ್ಲಂಘನೆ ಮಾಡುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಜೀವನದಲ್ಲಿ ಮಾನವೀಯತೆಯನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರ ಸಾಧ್ಯವೆಂದು ಎಂದು ತಿಳಿಸಿದರು.


ಪ್ರಸ್ತುತ ಕಾಲಮಾನದ ಮಾನವ ಹಕ್ಕುಗಳ ಚಿಕ್ಕಟ್ಟು ವಿಷಯದ ಕುರಿತು ನಡೆದ ಸಂವಾದ ಕಾರ್ಯಕ್ರಮದಲ್ಲಿ ಡಾ.ಎಸ್.ಜೆ.ಸೆಲ್ವರಾಜ್ ಅರುಳ್‌ನಾಥನ್, ಡಾ.ಸರಸು ಎಸ್ತರ್ ಥಾಮಸ್, ಲಿಯೋ ಎಫ್.ಸಾಲ್ಡಾನಾ ಭಾಗಹಿಸಿದ್ದರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಪ್ರಾಂಶುಪಾಲೆ ಡಾ.ಅನುರಾಧರಾಯ್ ಮತ್ತಿತರರು ಹಾಜರಿದ್ದರು.

ಈ ಸಂಜೆ

28 ಫೆಬ್ರವರಿ ಬುಧವಾರ, 2018

# ದೇಶವನ್ನೇ ದಹಿಸುತ್ತಿರುವ ಸಮಸ್ಯೆಗಳಲ್ಲಿ ಮಾನವ ಹಕ್ಕು ಉಲ್ಲಂಘನೆ ಒಂದು



**ಬೆಂಗಳೂರು, ಫೆ.28-** ಮಾನವ ಹಕ್ಕುಗಳ ಉಲ್ಲಂಘನೆ ಎಂಬುದು ಇಂದು ಇಡೀ ದೇಶವನ್ನೇ ದಹಿಸುತ್ತಿರುವ ಸಮಸ್ಯೆಗಳಲ್ಲಿ ಅತಿ ಮುಖ್ಯವಾದುದಾಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ರಾಘವೇಂದ್ರ ಎಸ್.ಚೌಹಾಣ್ ಹೇಳಿದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಸಮಕಾಲೀನ ಜಗತ್ತಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಎಂಬ ವಿಷಯದ ಬಗ್ಗೆ ಏರ್ಪಡಿಸಿದ್ದ ಒಂದು ದಿನದ ರಾಷ್ಟ್ರಮಟ್ಟದ ವಿದ್ಯಾರ್ಥಿ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧ ದೇಶಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿರುವ ಬಗ್ಗೆ ವಿವರಿಸಿದರಲ್ಲದೆ, ಕಾನೂನಿನ ಅನುಪಸ್ಥಿತಿಯೇ ಇದಕ್ಕೆ ಪ್ರಮುಖ ಕಾರಣ ಎಂದು ವಿಷಾದಿಸಿದರು.


ಪ್ರತಿಯೊಬ್ಬ ವ್ಯಕ್ತಿಯು ಮೂಲಭೂತ ಹಕ್ಕುಗಳು ನಮಗಿವೆಯೇ ಎಂದು ಪ್ರಶ್ನಿಸಿಕೊಳ್ಳಬೇಕಾದ ಹಾಗೂ ಉತ್ತರ ಕಂಡುಕೊಳ್ಳಬೇಕಾದ ಅಗತ್ಯತೆ ಇದೆ. ಯುವಜನಾಂಗ ಮಾನವ ಹಕ್ಕುಗಳ ಬಗ್ಗೆ ಸಂವಾದ ನಡೆಸಬೇಕು ಎಂದು ಸಲಹೆ ನೀಡಿದರು.

ಶೇಷಾದ್ರಿಪುರಂ ಶಿಕ್ಷಣದತ್ತಿಯ ಗೌರವ ಪ್ರಧಾನಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಕಾನೂನುಗಳನ್ನು ಮಾನವನ ಅಗತ್ಯಗಳಿಗೆ, ಅನುಕೂಲಗಳಿಗೆ ಹೇಗೆ ಸಾಕಾರಾತ್ಮಕವಾಗಿ ಬಳಸಿಕೊಂಡು ಜೀವನದ ರೀತಿಯನ್ನು ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ತಿಳಿಸಿಕೊಟ್ಟರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಮಧುಶರ್ಮಾ ಅವರು ಸಮಾಜದಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವವರೇ ಕಾನೂನಿನ ಉಲ್ಲಂಘನೆ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂವಾದ ಕಾರ್ಯಕ್ರಮದಲ್ಲಿ ಡಾ.ಎಸ್.ಜೆ.ಸೆಲ್ವರಾಜ್ ಅರುಳ್ ನಾಥನ್, ಡಾ.ಸರಸು ಎಸ್ತರ್ ಥಾಮಸ್, ಲಿಯೋ ಎಫ್.ಸಾಲ್ಡಾನಾ ಪಾಲ್ಗೊಂಡಿದ್ದರು. ಪ್ರಾಂಶುಪಾಲರಾದ ಡಾ. ಅನುರಾಧ ರಾಯ್, ಸಮತಾದ ಡಿ.ಎಸ್.ಮಲ್ಲಿಕಾ, ಪ್ರೊ.ಸತೀಶ್ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಮಂಗಳವಾರ 27 ಫೆಬ್ರವರಿ 2018



» ವಿಚಾರಗೋಷ್ಠಿ: ಶೇಷಾದ್ರಿಪುರಂ ಕಾಲೇಜು ಆಯೋಜನೆ. ಸಹಯೋಗ: ರಾಜ್ಯ ಮಾನವ ಹಕ್ಕುಗಳ ಆಯೋಗ. 'ಹ್ಯೂಮನ್ ರೈಟ್ಸ್ ವೈಲೇಷನ್ಸ್ ಇನ್ ದ ಕಾಂಟೆಂಪರರಿ ವರ್ಲ್ಡ್' ಕುರಿತಾಗಿ ವಿಚಾರಗೋಷ್ಠಿ. ಉದ್ಘಾಟನೆ, ಆಶಯ ನುಡಿ: ಹೈಕೋರ್ಟ್ ನ್ಯಾಯಮೂರ್ತಿ ರಾಘವೇಂದ್ರ ಎಸ್. ಚೌಹಾಣ್. ಗೌರವ ಅತಿಥಿ: ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಮಧು ಶರ್ಮ. ಅಧ್ಯಕ್ಷತೆ: ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ **ಡಾ.ವೂಡೇ ಪಿ. ಕೃಷ್ಣ**. ಸ್ಥಳ: ಕಾನ್ಫರೆನ್ಸ್ ಸಭಾಂಗಣ, ಶೇಷಾದ್ರಿಪುರಂ ಕಾಲೇಜು, ನಂ. 27, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರ. ಬೆಳಗ್ಗೆ 9ರಿಂದ.

ಕನ್ನಡಪ್ರಭ

ಭಾನುವಾರ 25.2.2018

ಬೆಂಗಳೂರು

# ಕಾವೇರಿ ತೀರ್ಪಿನಿಂದ ಲಾಭವಿಲ್ಲ!

## ಇದು ಕಣ್ಣೊರೆಸುವ ತಂತ್ರ: ರವಿವರ್ಮ ಕುಮಾರ್ | ಮರುಪರಿಶೀಲನೆ ಅರ್ಜಿ ಸಲ್ಲಿಸದಿದ್ದರೆ ಅಪಾಯ

**• ಕನ್ನಡಪ್ರಭ ವಾರ್ತೆ ಬೆಂಗಳೂರು**

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಕಣ್ಣೊರೆಸುವ ತಂತ್ರ. ಇದರಿಂದ ರಾಜ್ಯಕ್ಕೆ ಅನುಕೂಲವಾಗಿದೆ ಎಂಬುದು ಸರಿಯಲ್ಲ. ಹೆಚ್ಚುವರಿ ನೀರಿಗಾಗಿ ಮರುಪರಿಶೀಲನಾ ಅರ್ಜಿ ಸಲ್ಲಿಸದಿದ್ದರೆ ಬರಗಾಲದಲ್ಲಿ ಸಂಕಷ್ಟದ ದಿನಗಳು ಎದುರಾಗಲಿವೆ ಎಂದು ಮಾಜಿ ಅಡ್ವೋಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್ ಎಚ್ಚರಿಸಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ವಕೀಲರ ಸಂಘ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ವಕೀಲರ ವೇದಿಕೆ, ನಗರದ ಗಾಂಧಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಕಾವೇರಿ ತೀರ್ಪು ಕುರಿತ ವಿಚಾರ ಸಂಕಿರಣ'ದಲ್ಲಿ ಅವರು ಮಾತನಾಡಿದರು.

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ 14.5 ಟಿಎಂಸಿ ನೀರು ಹೆಚ್ಚುವರಿಯಾಗಿ ಸಿಕ್ಕಿದೆ ಎಂದು ರಾಜ್ಯ ಹೆಮ್ಮೆ ಪಡುತ್ತಿದೆ. ಆದರೆ, ಅದೇ ತೀರ್ಪಿನಲ್ಲಿ ಕಾವೇರಿ ನಿರ್ವಹಣಾ ಮಂಡಳಿ ರಚನೆಗೆ ಸೂಚಿಸಿದೆ. ಇದರಿಂದ ಕಾವೇರಿ ನದಿಯ ಉಪನದಿಗಳ ಅಣೆಕಟ್ಟುಗಳನ್ನು ಮಂಡಳಿ ನಿರ್ವಹಿಸಲಿದ್ದು, ರಾಜ್ಯದ ನೀರು ಪಡೆಯಲು ಅರ್ಜಿ ಸಲ್ಲಿಸಿ ಕಾಯಬೇಕಾಗುತ್ತದೆ. ಆದ್ದರಿಂದ ಹೆಚ್ಚುವರಿ ನೀರು ಪಡೆಯಲು ಕಾನೂನು ಹೋರಾಟ ಅಗತ್ಯ ಎಂದರು.

ಕಾವೇರಿ ತೀರ್ಪಿಗೆ ಸಂಭ್ರಮಿಸಬೇಕಾದ್ದ ತಮಿಳುನಾಡು ಸರ್ಕಾರ ಸರ್ವಪಕ್ಷ ಸಭೆ ಕರೆದು ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಮುಂದಾಗಿದೆ. ತೀರ್ಪಿನ ಕುರಿತು ವಿಶ್ಲೇಷಣೆ ಮಾಡಬೇಕಾದ ಕರ್ನಾಟಕ ಸಂಭ್ರಮಿಸುತ್ತಿದೆ. ಅಲ್ಲದೆ, ತೀರ್ಪಿನ ಸಂಬಂಧ ವಾದ ಮಂಡಿಸಿದ ವಕೀಲರ ತಂಡದೊಂದಿಗೆ ಇಲ್ಲಿಯವರೆಗೂ ಒಂದು ಸಭೆಯನ್ನೂ ನಡೆಸಿಲ್ಲ. ಈ ಬೆಳವಣಿಗೆಯಿಂದ ಕಾವೇರಿ ತೀರ್ಪು ಅನಾಥವಾಗಿ ಬಿದ್ದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ತಜ್ಞರ ಮಾಹಿತಿ ಪಡೆದಿಲ್ಲ:** ಯಾವುದೇ ವಿಚಾರದಲ್ಲಿ ಸುಪ್ರೀಂಕೋರ್ಟ್ ತೀರ್ಪು ಅಂತಿಮ. ಅಲ್ಲದೆ, ದೇಶದ ಇತಿಹಾಸದಲ್ಲಿ ನದಿ ನೀರು ಹಂಚಿಕೆ ಕುರಿತು ಹೊರಬಂದ ಮೊದಲ ತೀರ್ಪು ಇದು. ಆದರೆ, ನೀರಾವರಿ ಹಾಗೂ ಪರಿಸರ ತಜ್ಞರ ಸಲಹೆಯನ್ನು ಕೋರ್ಟ್ ಪಡೆದಿಲ್ಲ. ಜೀವಂತವಾಗಿ ಹರಿಯುವ ನದಿ ನೀರಿನ ಹಂಚಿಕೆಯ ಕುರಿತು ತೀರ್ಪು ಪ್ರಕಟಿಸುತ್ತಿದ್ದೇವೆ ಎಂಬುದನ್ನು ಗಮನಿಸದೆ, ಕೇವಲ ಕಾನೂನಿನ ಕೋನದಲ್ಲಿ ತೀರ್ಪು ಪ್ರಕಟಿಸಿದೆ. ರಾಜ್ಯದ ರೈತರ ಸಮಸ್ಯೆಗಳನ್ನು ಪರಿಗಣಿಸಿಲ್ಲ. 14 ಟಿಎಂಸಿ ಹೆಚ್ಚುವರಿ ನೀರು ಹರಿಸುವ ಅಂಶ ಬಿಟ್ಟು ಕಾವೇರಿ ನ್ಯಾಯಾಧಿಕರಣ ನೀಡಿರುವ ತೀರ್ಪಿನ ಬೇರೆ ಯಾವುದೇ ಅಂಶ ಬದಲಾಯಿಸಿಲ್ಲ ಎಂದರು.

ತೀರ್ಪು ಮಹದಾಯಿಗೂ ಅನ್ವಯ: ಹಿರಿಯ ವಕೀಲ ಹಾಗೂ ಮಾಜಿ ಅಡ್ವೋಕೇಟ್ ಜನರಲ್ ಉದಯ್ ಹೊಳ್ಳ ಮಾತನಾಡಿ, ಕಾವೇರಿ ನದಿ ನೀರಿನಲ್ಲಿ ಎರಡೂ ರಾಜ್ಯಗಳಿಗೆ ಸಮವಾಗಿ ಹಂಚಿಕೆ ಮಾಡಬೇಕಾಗಿತ್ತು. ಆದರೆ, ತಮಿಳುನಾಡಿಗೆ ಹೆಚ್ಚು, ಕರ್ನಾಟಕಕ್ಕೆ ಕಡಿಮೆ ನೀರು ಹಂಚಿಕೆ ಮಾಡಲಾಗಿದೆ. ಕರ್ನಾಟಕಕ್ಕೆ ಕನಿಷ್ಠ 40 ಟಿಎಂಸಿ ಹೆಚ್ಚುವರಿ ನೀರು ನೀಡಬೇಕಾಗಿತ್ತು. ಕೇವಲ 14.5 ಟಿಎಂಸಿ ನೀಡಿರುವುದು ಅನ್ಯಾಯವಾಗಿದೆ. ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಮೆತ್ತಗಿರುವವರನ್ನು ಹೆಚ್ಚಿಗೆ ಹೊಡೆಯಿರಿ ಎಂಬ ಗಾದೆಯಂತಾಗಿದೆ. ಆದರೆ, ಬೆಂಗಳೂರಿನ ಜನರ ಕುಡಿಯುವ ನೀರಿನ ಸಮಸ್ಯೆ ಪರಿಗಣಿಸಿ 14 ಟಿಎಂಸಿ ನೀರು ಹಂಚಿಕೆ ಮಾಡಿರುವುದು ಸ್ವಾಗತಾರ್ಹ. ಈ ತೀರ್ಪು ಮಹದಾಯಿ ಪ್ರಕರಣದಲ್ಲಿ ರಾಜ್ಯಕ್ಕೆ ವರವಾಗಿ ಪರಿಣಮಿಸಲಿದೆ ಎಂದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಮಾತನಾಡಿ, ಕಾವೇರಿ ತೀರ್ಪು ರಾಜ್ಯಕ್ಕೆ ಸಣ್ಣ ಪ್ರಮಾಣದ ಗೆಲುವಾದರೆ, ದೊಡ್ಡ ಪ್ರಮಾಣದ ಸೋಲಾಗಿದೆ. ಆದ್ದರಿಂದ ಸರ್ಕಾರ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರ ಸರ್ವಪಕ್ಷ ಸಭೆ ಕರೆದು ಸುಪ್ರೀಂಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಬೇಕು. ಈ ವಿಚಾರದಲ್ಲಿ ಸರ್ಕಾರ ಕೈಗೊಳ್ಳುವ ನಿರ್ಧಾರಕ್ಕೆ ವಕೀಲರ ಸಂಘ ಅಗತ್ಯ ನೆರವು ನೀಡಲಿದೆ ಎಂದರು.

ಗೋಷ್ಠಿಯಲ್ಲಿ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಪರ ವಾದ ಮಂಡಿಸಿದ ವಕೀಲರ ತಂಡದ ಗಂಗಾಧರ್ ಉಪಸ್ಥಿತರಿದ್ದರು.



ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ 'ಕಾವೇರಿ ತೀರ್ಪು ಕುರಿತ ವಿಚಾರ ಸಂಕಿರಣ'ದಲ್ಲಿ ಹಿರಿಯ ವಕೀಲ ಉದಯ್ ಹೊಳ್ಳ ಅವರು ಗಾಂಧಿ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

> ಕಾವೇರಿ ನದಿ ನೀರು ಹಂಚಿಕೆ ತೀರ್ಪಿನಿಂದ ಸಂಕಷ್ಟದ ಕಾಲದಲ್ಲಿ ರಾಜ್ಯಕ್ಕೆ ದೊಡ್ಡ ಪ್ರಮಾಣದ ತೊಂದರೆಯಾಗಲಿದೆ. ಹಾಗಾಗಿ ಕಾನೂನು ಹೋರಾಟ ಮುಂದುವರೆಸುವ ಅಗತ್ಯವಿದೆ. ವಿಚಾರಗೋಷ್ಠಿಯಲ್ಲಿ ಹಿರಿಯ ವಕೀಲರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಸರ್ಕಾರದ ಮುಂದಿಟ್ಟು ಕಾನೂನು ಹೋರಾಟದ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗುವುದು.
>
> **• ದಿನೇಶ್ ಗುಂಡೂರಾವ್, ಶಾಸಕರು**

ಸಂಯುಕ್ತ ಕರ್ನಾಟಕ
ಭಾನುವಾರ, 25, ಫೆಬ್ರವರಿ, 2018

# ಕಾವೇರಿ ತೀರ್ಪು: ಕನ್ನಡಿಗರಿಗೆ ಮತ್ತಷ್ಟು ಸಂಕಷ್ಟ

ಸಂ. ಕ ಸಮಾಚಾರ ಬೆಂಗಳೂರು: ಕಾವೇರಿ ಜಲವಿವಾದ ಸುಪ್ರೀಂ ಕೋರ್ಟ್‌ನ ತೀರ್ಪು ಕಣ್ಣೊರೆಸುವ ತಂತ್ರವಾಗಿದೆಯಷ್ಟೇ. ಇದರಿಂದ ನ್ಯಾಯ ದೊರಕಿದಂತೇನೂ ಆಗಿಲ್ಲ ಎಂದು ಮಾಜಿ ಎಜಿ ಪ್ರೊ. ರವಿವರ್ಮಕುಮಾರ್ ಹೇಳಿದ್ದಾರೆ.

ಗಾಂಧಿ ಭವನದಲ್ಲಿ ಬೆಂಗಳೂರು ವಕೀಲರ ಸಂಘ ಆಯೋಜಿಸಿದ್ದ ಕಾವೇರಿ ತೀರ್ಪು ಕುರಿತ ವಿಚಾರಸಂಕಿರಣದಲ್ಲಿ ಮಾತನಾಡಿ, ಈ ತೀರ್ಪಿನಿಂದ ರಾಜ್ಯಕ್ಕೆ 14.7 ಟಿಎಂಸಿ ನೀರು ಹೆಚ್ಚುವರಿಯಾಗಿ ಸಿಕ್ಕಿದೆ ಎಂದು ಹೆಮ್ಮೆ ಪಡುತ್ತಿದ್ದಾರೆ. ಆದರೆ, ಸುಪ್ರೀಂಕೋರ್ಟ್ ಕಾವೇರಿ ನಿರ್ವಹಣಾ ಮಂಡಳಿ ರಚಿಸುವಂತೆ ನಿರ್ದೇಶಿಸಿದೆ. ಇದು ಅತ್ಯಂತ ಗಂಡಾಂತರಕಾರಿ. ಮಂಡಳಿ ರಚನೆ ತೀರ್ಪಿಗೆ ಸಂಬಂಧಿಸಿದಂತೆ ಮರುಪರಿಶೀಲನಾ ಅರ್ಜಿ ಸಲ್ಲಿಸುವುದು ಅನಿವಾರ್ಯ ಎಂದು ಹೇಳಿದರು.

ಕಾವೇರಿ ನಿರ್ವಹಣಾ ಮಂಡಳಿ ರಚನೆಯಾದಲ್ಲಿ ಕಾವೇರಿ ಕಣಿವೆಯ ಎಲ್ಲ ಅಣೆಕಟ್ಟುಗಳು ಮಂಡಳಿ ವ್ಯಾಪ್ತಿಗೆ ಸೇರುತ್ತವೆ. ಇದರಿಂದಾಗಿ ಕಾವೇರಿ ನದಿ ನೀರು ಪಡೆಯಲೂ ಪದೇಪದೇ ಅರ್ಜಿ ಸಲ್ಲಿಸುತ್ತಿರಬೇಕಾಗುತ್ತದೆ ಎಂದರು.

ಕಾವೇರಿ ತೀರ್ಪು ತಮಿಳುನಾಡು ಪರವಾಗಿದೆ. ವಾಸ್ತವವಾಗಿ ಅಲ್ಲಿನ ಜನರು ಸಂಭ್ರಮಾಚರಣೆ ಮಾಡಬೇಕಾಗಿತ್ತು. ಅಲ್ಲಿನ ಸರ್ಕಾರ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಮುಂದಾಗಿದೆ. ಆದರೆ, ಕರ್ನಾಟಕ ಸರ್ಕಾರಕ್ಕೆ ಈ ಬಗ್ಗೆ ಆಸಕ್ತಿಯೇ ಇಲ್ಲ. ತೀರ್ಪಿನ ಬಗ್ಗೆ ವಿಶ್ಲೇಷಣೆ ಮಾಡಿ, ಕಾನೂನಾತ್ಮಕ ಹೆಜ್ಜೆ ಇಡುವುದನ್ನು ಮರೆತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.




> ಸುಪ್ರೀಂ ತೀರ್ಪಿನಿಂದಾಗಿ ರಾಜ್ಯ ಸಂಕಷ್ಟಕ್ಕೆ ಸಿಲುಕಿದೆ. ಈ ಬಗ್ಗೆ ಕಾನೂನು ಹೋರಾಟ ನಡೆಸುವ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯಲಾಗುವುದು.
>
> – ದಿನೇಶ್ ಗುಂಡೂರಾವ್
> ಕೆಪಿಸಿಸಿ ಕಾರ್ಯಾಧ್ಯಕ್ಷ

## ಮಹದಾಯಿಗೂ ಅನ್ವಯ

ಹಿರಿಯ ವಕೀಲ ಉದಯ್ ಹೊಳ್ಳ ಮಾತನಾಡಿ, ಕಾವೇರಿ ಕಣಿವೆಯಲ್ಲಿ ಸಂಗ್ರಹವಾದ ನೀರು ಸಮವಾಗಿ ಹಂಚಬೇಕಿತ್ತು. ಆದರೆ, ಮೂರನೇ ಎರಡು ಭಾಗ ತಮಿಳುನಾಡಿಗೆ, ಹಾಗೂ ಒಂದು ಭಾಗ ಮಾತ್ರ ಕರ್ನಾಟಕ್ಕೆ ನೀಡಿದ್ದು, ರಾಜ್ಯಕ್ಕೆ ಆಗಿರುವ ಮೊದಲ ಅನ್ಯಾಯ. ಬೆಂಗಳೂರಿಗೆ ಕುಡಿಯುವ ನೀರಿನ ಸಮಸ್ಯೆ ಪರಿಗಣಿಸಿ 4 ಟಿಎಂಸಿ ನೀರು ನೀಡಿರುವುದು ಸ್ವಾಗತಾರ್ಹ.

ಕನಿಷ್ಠ 40 ಟಿಎಂಸಿ ಹೆಚ್ಚುವರಿ ನೀರಿನ ಬದಲು 14.5 ಟಿಎಂಸಿ ಸಿಕ್ಕಿದೆ. ಇದು ರಾಜ್ಯಕ್ಕೆ ದೊಡ್ಡ ನಷ್ಟವಾಗಿದ್ದು ಹೆಚ್ಚುವರಿ ನೀರಿಗೆ ಬೇಡಿಕೆ ಸಲ್ಲಿಸುವ ಅಗತ್ಯವಿದೆ. ಈ ತೀರ್ಪು ಮಹದಾಯಿ ಪ್ರಕರಣಕ್ಕೂ ನೆರವಾಗಲಿದೆ ಎಂದರು.

ವಿಜಯ ಕರ್ನಾಟಕ VK ಭಾನುವಾರ, 25 ಫೆಬ್ರವರಿ 2018, ಬೆಂಗಳೂರು

## ಕಾವೇರಿ ತೀರ್ಪು ವಿಚಾರ ಸಂಕಿರಣದಲ್ಲಿ ವಕೀಲರ ಅಭಿಪ್ರಾಯ

# ಮರುಪರಿಶೀಲನಾ ಅರ್ಜಿ ಸಲ್ಲಿಸಲಿ



ಬೆಂಗಳೂರಿನಲ್ಲಿ ನಡೆದ ಕಾವೇರಿ ತೀರ್ಪು ವಿಚಾರ ಸಂಕಿರಣದಲ್ಲಿ ರವಿವರ್ಮ ಕುಮಾರ್, ದಿನೇಶ್ ಗುಂಡೂರಾವ್, ಎ.ಪಿ. ರಂಗನಾಥ್, ಉದಯ್ ಹೊಳ್ಳ ಮತ್ತಿತರರು ಭಾಗವಹಿಸಿದ್ದರು.

■ ವಿಕ ಸುದ್ದಿಲೋಕ ಬೆಂಗಳೂರು

ಸುಪ್ರೀಂ ಕೋರ್ಟ್ ಕರ್ನಾಟಕಕ್ಕೆ 14.75 ಟಿಎಂಸಿ ಹೆಚ್ಚುವರಿ ಕಾವೇರಿ ನೀರನ್ನು ಹಂಚಿಕೆ ಮಾಡಿರುವುದು ಸ್ವಾಗತಾರ್ಹವಾದರೂ, ನಮಗೆ ಇನ್ನೂ ಹೆಚ್ಚಿನ ನೀರು ಬರಬೇಕಿದೆ. ಹೀಗಾಗಿ, ಸಿಎಂ ಸಿದ್ದರಾಮಯ್ಯನವರು ಮರುಪರಿಶೀಲನಾ ಅರ್ಜಿ ಸಲ್ಲಿಸಬೇಕು ಎಂದು ಹಿರಿಯ ವಕೀಲರು ಒತ್ತಾಯಿಸಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಗಾಂಧಿ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಕಾವೇರಿ ತೀರ್ಪು ವಿಚಾರ ಸಂಕಿರಣದಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ.

ಮಾಜಿ ಅಡ್ವೋಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್ ಮಾತನಾಡಿ, "ಮೇಲ್ಮನವಿಗೆ ಸ್ಪಂದಿಸಿದ ಸುಪ್ರೀಂ ಕೋರ್ಟ್‌ನ ಇತಿಹಾಸದಲ್ಲಿ ಮೊದಲ ಬಾರಿಗೆ ರಾಜ್ಯದ ಪರವಾಗಿ ಕಾವೇರಿ ತೀರ್ಪು ಬಂದಿದೆ. ಆದರೆ, ರಾಜ್ಯ ಸರಕಾರ ತೀರ್ಪು ಸಂಬಂಧ ಇದುವರೆಗೂ ಒಂದು ಬಾರಿಯೂ ಚರ್ಚೆ, ವಿಶ್ಲೇಷಣೆಗೆ ಮುಂದಾಗದಿರುವುದು ಅತ್ಯಂತ ಬೇಸರದ ಸಂಗತಿಯಾಗಿದೆ," ಎಂದು ಹೇಳಿದರು.

"ಕಾವೇರಿ ನಿರ್ವಹಣೆ ಮಂಡಳಿ ಅಸ್ತಿತ್ವಕ್ಕೆ ಬಂದರೆ, ನಾವು ಶ್ರಮಪಟ್ಟು ಕಟ್ಟಿದ ಎಲ್ಲಾ ಅಣೆಕಟ್ಟುಗಳು ಕೈತಪ್ಪಿ ಹೋಗಲಿವೆ. 14.75 ಟಿಎಂಸಿ ನೀರು ನೀಡಿ, ನಮಗೆ ಕಣ್ಣೊರೆಸುವ ತಂತ್ರ ಮಾಡಲಾಗಿದೆ ಅಷ್ಟೆ. ಈಗ ನಾವು ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ನೀರಿನ ವಿಚಾರದಲ್ಲಿ ಆಪತ್ತು ಕಟ್ಟಿಟ್ಟಬುತ್ತಿ," ಎಂದು ಎಚ್ಚರಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಮಾತನಾಡಿ, "ಸುಪ್ರೀಂ ಕೋರ್ಟ್ ಕರ್ನಾಟಕಕ್ಕೆ 14.75 ಟಿಎಂಸಿ ನೀರು ನೀಡಿದರೂ, ಅನೇಕ ಅವಕಾಶಗಳು ನಮ್ಮ ಕೈತಪ್ಪಿವೆ. ಹೀಗಾಗಿ, ಈ ಕೂಡಲೇ, ರಾಜ್ಯ ಸರಕಾರ ಸುಪ್ರೀಂ ಕೋರ್ಟ್‌ನ ತೀರ್ಪು ಸಂಬಂಧ ಮರುಪರಿಶೀಲನಾ ಅರ್ಜಿ ಸಲ್ಲಿಸಬೇಕು. ಈ ಬಗ್ಗೆ ನಮ್ಮ ವಕೀಲರ ತಂಡ ಅಗತ್ಯ ಸಲಹೆಗಳನ್ನು ನೀಡಲಿದೆ," ಎಂದರು.

**ಪ್ರಾಧಿಕಾರ ರಚನೆ ಬಗ್ಗೆ ಚರ್ಚೆಯಾಗಬೇಕು:** ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಮಾತನಾಡಿ, "ಕಾವೇರಿ ತೀರ್ಪು ಸಂಬಂಧ ಸುಪ್ರೀಂ ಕೋರ್ಟ್ ಈ ಬಾರಿ ನಮಗೆ ನ್ಯಾಯ ನೀಡಿದೆ. ಈ ನೀರು ಹಳೆ ಜನರಿಗೆ ಉಪಯುಕ್ತವಾಗಲಿದೆ. ಇದನ್ನು ಎಲ್ಲರೂ ಸ್ವಾಗತಿಸಬೇಕು. ರಾಜ್ಯದಲ್ಲಿ ನಾಲ್ಕು ಅಣೆಕಟ್ಟುಗಳಿದ್ದು, ಇವು ನಮ್ಮಿಂದ ಕೈತಪ್ಪದಂತೆ ನಾವು ನೋಡಿಕೊಳ್ಳಬೇಕು. ಜತೆಗೆ ಸರ್ವ ಪಕ್ಷಗಳ ಸಭೆ ನಡೆಸಿ ಕೇಂದ್ರಕ್ಕೆ ಒತ್ತಾಯ ಮಾಡಬೇಕು. ಇನ್ನೂ ಪ್ರಾಧಿಕಾರ ರಚಿಸಲು ಅವಕಾಶ ನೀಡಲಾಗಿದ್ದು, ಇದರ ಅನುಷ್ಠಾನ ಹೇಗೆ ಎಂದು ನಾವು ಚರ್ಚಿಸಬೇಕು," ಎಂದರು.

ಹಿರಿಯ ವಕೀಲ ಉದಯ್ ಹೊಳ್ಳ, ಹೈಕೋರ್ಟ್ ವಕೀಲರಾದ ಜಿ.ಎಂ. ಗಂಗಾಧರ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ಪ್ರಜಾವಾಣಿ
ಭಾನುವಾರ • ಫೆಬ್ರುವರಿ 25, 2018

# ‘ಬರಗಾಲದಲ್ಲಿ ಕಾದಿದೆ ಗಂಡಾಂತರ’

## ಕಾವೇರಿ ತೀರ್ಪು: ಮರುಪರಿಶೀಲನಾ ಅರ್ಜಿ ಸಲ್ಲಿಸಲು ಕಾನೂನು ತಜ್ಞರ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿ ನೀರು ಹಂಚಿಕೆ ವಿಷಯದಲ್ಲಿ ಅಲ್ಪತೃಪ್ತರಾಗಿ ಸುಪ್ರೀಂ ಕೋರ್ಟ್‌ಗೆ ಮರು ಪರಿಶೀಲನಾ ಅರ್ಜಿ ಹಾಕದಿದ್ದರೆ ಬರಗಾಲದಲ್ಲಿ ...ಾಂತರ ಎದುರಿಸಬೇಕಾ ...ತ್ತದೆ ಎಂದು ಹಿರಿಯ ವಕೀಲ ಪ್ರೊ. ಕೆ. ರವಿವರ್ಮಕುಮಾರ್ ಎಚ್ಚರಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ವಕೀಲರ ಸಂಘ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ವಕೀಲರ ವೇದಿಕೆ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಕಾವೇರಿ ತೀರ್ಪು ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಇದು ಕರ್ನಾಟಕದ ಪರವಾದ ತೀರ್ಪು ಎಂಬುದು ತಪ್ಪು ಕಲ್ಪನೆ ಎಂದು ಪ್ರತಿಪಾದಿಸಿದ ಅವರು, ರಾಜ್ಯದ ಜಲಾಶಯಗಳಿಂದ ಮಳೆಗಾಲದ ನಾಲ್ಕು ತಿಂಗಳಲ್ಲಿ (ಜೂನ್‌ನಿಂದ ಸೆಪ್ಟೆಂಬರ್ ತನಕ) 134 ಟಿಎಂಸಿ ಅಡಿ ನೀರು ಹರಿಸಬೇಕಾಗುತ್ತದೆ. ಬರಗಾಲ ...ರ್ಭದಲ್ಲಿ ಇದರಲ್ಲಿ ಅರ್ಧದಷ್ಟು ...ೀರು ಹರಿಸುವುದು ಕೂಡ ಕಷ್ಟ. ಆಗ ಏನು ಮಾಡಬೇಕು ಎಂಬುದು ತೀರ್ಪಿನಲ್ಲಿ ಇಲ್ಲ ಎಂದರು.

ನೀರು ನಿರ್ವಹಣಾ ಮಂಡಳಿ ಅಥವಾ ಪ್ರಾಧಿಕಾರ ರಚನೆಯಾದರೆ ಅದಕ್ಕೆ ಕಾವೇರಿ ಕೊಳ್ಳದ ಎಲ್ಲ ಜಲಾಶಯಗಳನ್ನು ಒಪ್ಪಿಸಿ ಕರ್ನಾಟಕ ಸರ್ಕಾರ ಕೈಕಟ್ಟಿ ಕೂರಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ತೀರ್ಪು ಪ್ರಕಟವಾದ ಕೂಡಲೇ ತಮಿಳುನಾಡು ಸರ್ಕಾರ ಹಲವು ಸಭೆಗಳನ್ನು ನಡೆಸಿ ಮುಂದೇನು ಮಾಡಬೇಕು ಎಂಬ ಚರ್ಚೆ ನಡೆಸುತ್ತಿದೆ. ರಾಜ್ಯ ಸರ್ಕಾರ ಈವರೆಗೆ ಒಂದೇ ಒಂದು ಸಭೆ ನಡೆಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಿರಿಯ ವಕೀಲ ಉದಯ ಹೊಳ್ಳ ಮಾತನಾಡಿ, ನದಿ ನೀರು ಹಂಚಿಕೆ ವಿಷಯದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಮೊದಲ ತೀರ್ಪು ಇದಾಗಿದೆ. ಮಹದಾಯಿ ನದಿ ನೀರು ಹಂಚಿಕೆ ಗೊಂದಲಗಳ ನಿವಾರಣೆಗೂ ಇದು ಅನುಕೂಲ ಆಗಲಿದೆ ಎಂದು ಅವರು ಹೇಳಿದರು.

14.75 ಟಿಎಂಸಿ ಅಡಿ ನೀರು ಸಿಕ್ಕಿದ ಕಾರಣಕ್ಕೆ ತೃಪ್ತಿ ಪಟ್ಟುಕೊಳ್ಳುವುದರಲ್ಲಿ ಅರ್ಥ ಇಲ್ಲ. ಕನಿಷ್ಠ 40 ಟಿಎಂಸಿ ಅಡಿ ನೀರು ಸಿಕ್ಕಿದ್ದರೆ ಖುಷಿಯಾಗುತ್ತಿತ್ತು ಎಂದು ಹೇಳಿದರು.

ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಮಾತನಾಡಿ, ಕಾವೇರಿ ವಿಷಯದಲ್ಲಿ ನ್ಯಾಯ ಸಿಕ್ಕಿದೆ ಎಂದು ಭಾವಿಸಿಕೊಂಡರೆ ಕಷ್ಟದ ದಿನಗಳು ಎದುರಾಗಲಿವೆ. ಸರ್ಕಾರ ಕಾನೂನು ತಜ್ಞರ ಸಲಹೆ ಪಡೆದು ತೀರ್ಪು ಮರು ಪರಿಶೀಲನೆಗೆ ಅರ್ಜಿ ಹಾಕಬೇಕು ಎಂದು ಒತ್ತಾಯಿಸಿದರು.




ವಿಚಾರ ಸಂಕೀರಣದಲ್ಲಿ ಹಿರಿಯ ವಕೀಲ ಉದಯ ಹೊಳ್ಳ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಚರ್ಚೆಯಲ್ಲಿ ತೊಡಗಿದ್ದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಹಿರಿಯ ವಕೀಲ ಪ್ರೊ. ಕೆ. ರವಿವರ್ಮಕುಮಾರ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಇದ್ದಾರೆ –ಪ್ರಜಾವಾಣಿ ಚಿತ್ರ

> ತೀರ್ಪು ಮರು ಪರಿಶೀಲನೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಲು ಮುಖ್ಯಮಂತ್ರಿಗೆ ಸಲಹೆ ನೀಡುತ್ತೇನೆ
>
> **ದಿನೇಶ್ ಗುಂಡೂರಾವ್**
> ಕೆಪಿಸಿಸಿ ಕಾರ್ಯಾಧ್ಯಕ್ಷ

> ಬರಗಾಲದಲ್ಲಿ ನೀರು ಹಂಚಿಕೆ ಹೇಗೆ ಎಂಬುದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಇಲ್ಲ. ಹೀಗಾಗಿ ಕರ್ನಾಟಕಕ್ಕೆ ನ್ಯಾಯ ಸಿಕ್ಕಿಲ್ಲ.
>
> **ಜೆ.ಎಂ. ಗಂಗಾಧರ**
> ಸುಪ್ರೀಂ ಕೋರ್ಟ್ ವಕೀಲ

ಸಂಜೆವಾಣಿ
ಶನಿವಾರ, ಫೆಬ್ರವರಿ 24, 2018

# ಸುಪ್ರೀಂಗೆ ಮರು ಪರಿಶೀಲನಾ ಅರ್ಜಿ ಸಲ್ಲಿಕೆಗೆ ಆಗ್ರಹ

ಬೆಂಗಳೂರು, ಫೆ.24–ಸುಪ್ರೀಂ ಕೋರ್ಟ್ ಕರ್ನಾಟಕ ರಾಜ್ಯಕ್ಕೆ ನೀರಿನ 14.75 ಸಾವಿರ ದಶಲಕ್ಷ ಘನ ಅಡಿಗಳಷ್ಟು (ಟಿಎಂಸಿ ಅಡಿಗಳು) ಹೆಚ್ಚುವರಿ ಕಾವೇರಿ ನೀರನ್ನು ಹಂಚಿಕೆ ಮಾಡಿರುವುದು ಸ್ವಾಗತವಾದರೂ, 'ನಮಗೆ ಮತ್ತಷ್ಟು ಪಾಲು ಬರಬೇಕಿದೆ'. ಹೀಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮರುಪರಿಶೀಲನೆ ಅರ್ಜಿ ಸಲ್ಲಿಸಬೇಕೆಂಬುದು ವಕೀಲರ ಒತ್ತಾಸೆಯಾಗಿದೆ.

ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿವತಿಯಿಂದ ಹಮ್ಮಿಕೊಂಡಿದ್ದ 'ಕಾವೇರಿ ತೀರ್ಪು ಕುರಿತು' ಒಂದು ದಿನದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಹಿರಿಯ ವಕೀಲರು ಮಾತನಾಡಿದರು.

ಹಿರಿಯ ವಕೀಲ, ಸಂವಿಧಾನ ತಜ್ಞ ಪ್ರೊ.ರವಿವರ್ಮ ಕುಮಾರ್ ಮಾತನಾಡಿ, ಸುಪ್ರೀಂ ಕೋರ್ಟ್ ಇತಿಹಾಸದಲ್ಲಿ ಕಾವೇರಿ ತೀರ್ಪು ನಮಗೆ ತುಸು ನೆಮ್ಮದಿ ಸಿಕ್ಕಿದೆ. ಆದರೆ, ರಾಜ್ಯ ಸರ್ಕಾರ ಈ ತೀರ್ಪು ಸಂಬಂಧ ಇದುವರೆಗೂ ಒಂದು ಬಾರಿಯೂ, ಚರ್ಚೆ, ವಿಶ್ಲೇಷಣೆಗೆ ಮುಂದಾಗದಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಕಾವೇರಿ ಮ್ಯಾನೇಜ್‌ಮೆಂಟ್ ಬೋರ್ಡ್ ಅಸ್ತಿತ್ವಕ್ಕೆ ಬಂದರೆ, ನಾವು ಶ್ರಮಪಟ್ಟು ಕಟ್ಟಿದ ಎಲ್ಲಾ ಅಣೆಕಟ್ಟುಗಳು ಕೈತಪ್ಪಿ ಹೋಗಲಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, 14 ಟಿಎಂಸಿ ನೀರು ನೀಡಿ, ನಮಗೆ ಕಣ್ಣು ಒರೆಸುವ ಕೆಲಸ ಮಾಡಲಾಗಿದೆ ಎಂದು ಕಿಡಿಕಾರಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ.ರಂಗನಾಥ್ ಮಾತನಾಡಿ, ಸುಪ್ರೀಂ ಕೋರ್ಟ್ ಕರ್ನಾಟಕ ರಾಜ್ಯಕ್ಕೆ 14.75 ಟಿಎಂಸಿ ನೀರು ನೀಡಿದರೂ, ಅನೇಕ ಅವಕಾಶಗಳು ನಮ್ಮ ಕೈತಪ್ಪಿವೆ. ಹೀಗಾಗಿ, ಈ ಕೂಡಲೇ, ರಾಜ್ಯ ಸರ್ಕಾರ ಸುಪ್ರೀಂಗೆ ತೀರ್ಪು ಸಂಬಂಧ ಮರುಪರಿಶೀಲನಾ ಅರ್ಜಿ ಸಲ್ಲಿಸಬೇಕು. ಈ ಬಗ್ಗೆ ನಮ್ಮ ವಕೀಲರ ತಂಡ ಸಲಹೆಗಳನ್ನು ನೀಡಲಿದೆ ಎಂದರು.

ಹಿರಿಯ ವಕೀಲ ಉದಯ್ ಹೊಳ್ಳ ಮಾತನಾಡಿ, ಕರ್ನಾಟಕಕ್ಕೆ 40 ಟಿಎಂಸಿ ನೀರು ಬರಬೇಕಿತ್ತು. ಆದರೆ, 14.75 ಟಿಎಂಸಿ ನೀಡಿ ಸಾಧ್ಯಕ್ಕೆ ನಮ್ಮ ಪಾಲಿಗೆ ಬಂದಿದೆ. ಇದು ನಮ್ಮ ಜಯ ಎಂದು ಹೇಳಿದರು.

ಹೈಕೋರ್ಟ್ ವಕೀಲ ಜಿ.ಎಂ.ಗಂಗಾಧರ ಮಾತನಾಡಿ, ಈ ಬಾರಿಯ ಕಾವೇರಿ ನದಿ ನೀರು ಹಂಚಿಕೆ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಕರ್ನಾಟಕ ಸೇರಿ ನಾಲ್ಕು ರಾಜ್ಯಗಳಿಗೆ ಸೀಮಿತವಲ್ಲದೆ, ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಮಾತನಾಡಿ, ಕಾವೇರಿ ತೀರ್ಪು ಸಂಬಂಧ ಸುಪ್ರೀಂ ಕೋರ್ಟ್ ಈ ಬಾರಿ ನಮಗೆ ನ್ಯಾಯ ನೀಡಿದೆ. ಈ ನೀರು ಹಳ್ಳಿ ಜನರಿಗೆ ಉಪಯುಕ್ತವಾಗಲಿದೆ. ಇದನ್ನು ಎಲ್ಲರೂ ಸ್ವಾಗತಿಸಬೇಕು ಎಂದು ಹೇಳಿದರು.

ಕರ್ನಾಟಕದಲ್ಲಿ ನಾಲ್ಕು ಅಣೆಕಟ್ಟುಗಳಿದ್ದು, ಅವು ನಮ್ಮಿಂದ ಕೈತಪ್ಪದಂತೆ ನಾವು ನೋಡಿಕೊಳ್ಳಬೇಕು. ಜೊತೆಗೆ, ಸರ್ವ ಪಕ್ಷಗಳ ಸಭೆ ನಡೆಸಿ ಕೇಂದ್ರಕ್ಕೆ ಒತ್ತಾಯ ಮಾಡಬೇಕು. ಜಲ ಪ್ರಾಧಿಕಾರ ರಚಿಸಲು ಅವಕಾಶ ನೀಡಲಾಗಿದ್ದು, ಇದರ ಅನುಷ್ಠಾನ ಹೇಗೆ ಎಂದು ನಾವು ಚರ್ಚಿಸಬೇಕು ಎಂದರು.

ಜೂನ್–ಜುಲೈನಲ್ಲಿ ಬೇಸಿಗೆ ಹೆಚ್ಚಾಗಿ ನೀರಿನ ಪ್ರಮಾಣ ಕಡಿಮೆ ಆಗಲಿದೆ. ಈ ಬಗ್ಗೆ ನಾವು ವೈಜ್ಞಾನಿಕ ಕ್ರಮಗಳನ್ನು ಅನುಸರಿಸಬೇಕು. ಅದೇ ರೀತಿ, ಮಳೆ ಕೈ ತಪ್ಪಿದರೆ ನಾವು ಯಾವ ರೀತಿ ಯೋಜನೆಗಳನ್ನು ರೂಪಿಸಿಕೊಳ್ಳಬೇಕೆಂದು ಈಗಲೇ ಚರ್ಚೆ ನಡೆಸಬೇಕು ಎಂದರು.

ಸಂವಾದದಲ್ಲಿ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಸೇರಿ ಪ್ರಮುಖರಿದ್ದರು.



ನಗರದ ಗಾಂಧಿ ಭವನದಲ್ಲಿ ಇಂದು ನಡೆದ ಕಾವೇರಿ ತೀರ್ಪು ಕುರಿತು ವಿಚಾರ ಸಂಕಿರಣದಲ್ಲಿ ಶಾಸಕ ದಿನೇಶ್ ಗುಂಡೂರಾವ್, ನ್ಯಾಯವಾದಿ ರವಿವರ್ಮ ಕುಮಾರ್, ವೂಡೆ ಪಿ ಕೃಷ್ಣ, ವಕೀಲರ ಸಂಘದ ಅಧ್ಯಕ್ಷ ರಂಗನಾಥ್ ಮತ್ತಿತರರು ಭಾಗವಹಿಸಿದ್ದರು.

ಈ ಸಂಜೆ
ಶನಿವಾರ, 24-02-2018

## ಕಾವೇರಿ ತೀರ್ಪಿನ ಬಗ್ಗೆ ಚರ್ಚೆಗೆ ಮುಂದಾಗದ ಸರ್ಕಾರ

# ರವಿವರ್ಮ ಕುಮಾರ್ ಬೇಸರ



ಬೆಂಗಳೂರು, ಫೆ.24- ಸುಪ್ರೀಂಕೋರ್ಟ್ ಕಾವೇರಿ ನದಿನೀರು ಹಂಚಿಕೆ ವಿಚಾರದಲ್ಲಿ ನೀಡಿರುವ ತೀರ್ಪಿನ ಬಗ್ಗೆ ಇದುವರೆಗೂ ರಾಜ್ಯ ಸರ್ಕಾರ ಒಂದು ಬಾರಿಯೂ ಚರ್ಚೆ ಅಥವಾ ವಿಶ್ಲೇಷಣೆಗೆ ಮುಂದಾಗಿಲ್ಲ ಎಂದು ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಬೇಸರ ವ್ಯಕ್ತಪಡಿಸಿದರು.

ನಗರದ ಗಾಂಧಿಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಹಮ್ಮಿಕೊಂಡಿದ್ದ ಕಾವೇರಿ ತೀರ್ಪು ಕುರಿತ ಒಂದು ದಿನದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಕರ್ನಾಟಕ ರಾಜ್ಯಕ್ಕೆ 14.75 ಸಾವಿರ ದಶಲಕ್ಷ ಘನ ಅಡಿಗಳಷ್ಟು (ಟಿಎಂಸಿ) ಹೆಚ್ಚುವರಿ ಕಾವೇರಿ ನೀರನ್ನು ಹಂಚಿಕೆ ಮಾಡಿ ರಾಜ್ಯದ ಜನರ ಕಣ್ಣೊರೆಸಿದೆ ಎಂದು ಕಿಡಿಕಾರಿದರು.

ರಾಜ್ಯಕ್ಕೆ ಕಾವೇರಿ ನದಿ ನೀರು ಹಂಚಿಕೆಯಲ್ಲಿ ಮತ್ತಷ್ಟು ಪಾಲು ಬರಬೇಕಿದೆ. ಹೀಗಾಗಿ ಮುಖ್ಯಮಂತ್ರಿಗಳು ಮರುಪರಿಶೀಲನೆ ಅರ್ಜಿ ಸಲ್ಲಿಸಬೇಕೆಂದು ಒತ್ತಾಯಿಸಿದರು.

ಕಾವೇರಿ ನಿರ್ವಹಣಾ ಮಂಡಳಿ ಅಸ್ತಿತ್ವಕ್ಕೆ ಬಂದರೆ, ನಾವು ಶ್ರಮಪಟ್ಟು ಕಟ್ಟಿದ ಎಲ್ಲ ಅಣೆಕಟ್ಟುಗಳು ಕೈತಪ್ಪಲಿವೆ. ಅದರಲ್ಲೂ ರಾಜ್ಯದ ಪ್ರಮುಖ ಜಲಾಶಯಗಳಾದ ಕೆಆರ್‌ಎಸ್, ಕಬಿನಿ, ಹೇಮಾವತಿ ಎಲ್ಲವೂ ಕೈ ತಪ್ಪಿ ಹೋಗಲಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಮಾತನಾಡಿ, ಸುಪ್ರೀಂಕೋರ್ಟ್ ರಾಜ್ಯಕ್ಕೆ 14.75 ಟಿಎಂಸಿ ನೀರು ನೀಡಿದರೂ ಅನೇಕ ಅವಕಾಶಗಳು ನಮ್ಮ ಕೈ ತಪ್ಪಿವೆ. ಹೀಗಾಗಿ ಈ ಕೂಡಲೇ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ತೀರ್ಪಿನ ಸಂಬಂಧ ಮರುಪರಿಶೀಲನಾ ಅರ್ಜಿ ಸಲ್ಲಿಸಬೇಕು. ಈ ಬಗ್ಗೆ ವಕೀಲರ ತಂಡ ಸಲಹೆ ನೀಡಲಿದೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಮಾತನಾಡಿ, ಸುಪ್ರೀಂಕೋರ್ಟ್ ನೀಡಿರುವ ಕಾವೇರಿ ತೀರ್ಪು ಈ ಬಾರಿ ಜನರಿಗೆ ಉಪಯುಕ್ತವಾಗಿದೆ. ಇದನ್ನು ಎಲ್ಲರೂ ಸ್ವಾಗತಿಸಬೇಕು ಎಂದರು. [illegible]

ಕರ್ನಾಟಕದಲ್ಲಿ ನಾಲ್ಕೈದು ಅಣೆಕಟ್ಟುಗಳಿದ್ದು, ಇವು ನಮ್ಮಿಂದ ಕೈ ತಪ್ಪದಂತೆ ನೋಡಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಸರ್ವಪಕ್ಷ ಸಭೆ ನಡೆಸಿ ಕೇಂದ್ರಕ್ಕೆ ಒತ್ತಾಯ ಮಾಡಬೇಕು. ಇನ್ನು ಪ್ರಾಧಿಕಾರ ರಚನೆಗೆ ಅವಕಾಶ ನೀಡಲಾಗಿತ್ತು. ಅನುಷ್ಠಾನ ಹೇಗೆ ಎಂಬ ಬಗ್ಗೆ ಚರ್ಚಿಸಬೇಕಿದೆ ಎಂದರು.

ಜೂನ್-ಜುಲೈ ವೇಳೆಗೆ ಬೇಸಿಗೆ ಹೆಚ್ಚಾಗಲಿದ್ದು, ನೀರಿನ ಪ್ರಮಾಣ ಕಡಿಮೆಯಾಗಲಿದೆ. ಆಗ ವೈಜ್ಞಾನಿಕ ಕ್ರಮ ಅನುಸರಿಸಬೇಕು. ಅದೇ ರೀತಿ ಮಳೆ ಕೈಕೊಟ್ಟರೆ ಯಾವ ರೀತಿಯ ಯೋಜನೆ ರೂಪಿಸಿಕೊಳ್ಳಬೇಕು ಎಂಬುದನ್ನು ಈಗಲೇ ಚರ್ಚಿಸಿ ನಿರ್ಧರಿಸಬೇಕಿದೆ ಎಂದು ಹೇಳಿದರು.

ಹಿರಿಯ ವಕೀಲ ಉದಯ್ ಹೊಳ್ಳ ಮಾತನಾಡಿ, ಕರ್ನಾಟಕಕ್ಕೆ ನ್ಯಾಯವಾಗಿ 40 ಟಿಎಂಸಿ ನೀರು ಬರಬೇಕಿತ್ತು. ಆದರೆ 14.75 ಟಿಎಂಸಿ ನೀರು ಮಾತ್ರ ಪಾಲಿಗೆ ಬಂದಿದೆ. ಇದು ನಮ್ಮ ಅಲ್ಪ ಪ್ರಮಾಣದ ಗೆಲುವಷ್ಟೇ ಎಂದು ಅಭಿಪ್ರಾಯಪಟ್ಟರು.


ಹೈಕೋರ್ಟ್ ವಕೀಲ ಗಂಗಾಧರ್ ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆ ಸಂಬಂಧ ಸುಪ್ರೀಂಕೋರ್ಟ್ ನೀಡಿರುವ ನ್ಯಾಯ ಕರ್ನಾಟಕ ಸೇರಿದಂತೆ ನಾಲ್ಕು ರಾಜ್ಯಗಳಿಗೆ ಸೀಮಿತವಾಗಿಲ್ಲ. ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ತಿಳಿಸಿದರು.

# ವಿದ್ಯಾರ್ಥಿ ಸಂಘಟನೆ ನಿಷೇಧ: ಯುವ ನಾಯಕರ ಕೊರತೆ

**ಸಂ.ಕ.ಸಮಾಚಾರ ಬೆಂಗಳೂರು**

ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಟನೆಗಳ ನಿಷೇಧಿಸಿರುವುದರಿಂದ ಯುವ ನಾಯಕರ ಕೊರತೆ ಕಾಡುತ್ತಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ತಿಳಿಸಿದರು.

ಶೇಷಾದ್ರಿಪುರಂ ಕಾಲೇಜು ಹಾಗೂ ಜಾಣ-ಜಾಣೆಯರ ವೇದಿಕೆಯ ಸಂಂ-ಯುಕ್ತಾಶ್ರಯದಲ್ಲಿ ನಡೆದ "ಇಂದಿನ ರಾಜ-ಕೀಯದಲ್ಲಿ ಯುವಕರ ಪಾತ್ರ ಹಾಗೂ ತೊಡಗಿಸಿಕೊಳ್ಳುವಿಕೆ" ಎಂಬ ವಿಷಯ ಕುರಿತಂತೆ ವಿದ್ಯಾರ್ಥಿಗಳ ನಿಲುವು ಹಾಗೂ ರಾಜಕೀಯ ಮುಖಂಡರ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಲೇಜುಗಳಲ್ಲಿ ಪ್ರಸ್ತುತ ಸ್ಟುಡೆಂಟ್ ಯೂನಿಯನ್ ಇಲ್ಲದೆ ಇರುವುದ-ರಿಂದ ಅಲ್ಲಿಂದ ರಾಜಕೀಯಕ್ಕೆ ಬರಲು ಇದ್ದಂತಹ ಕೊಂಡಿ ತಪ್ಪಿಹೋಗಿದೆ ಎಂದು ಅಭಿಪ್ರಾಯಪಟ್ಟರು.



**ಶೇಷಾದ್ರಿಪುರ ಕಾಲೇಜು ಆವರಣದಲ್ಲಿ ನಡೆದ ವಿದ್ಯಾರ್ಥಿಗಳ ನಿಲುವು ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಶಾಸಕ ದಿನೇಶ್ ಗುಂಡೂರಾವ್, ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ, ವಿಧಾನಸಭಾ ಮಾಜಿ ಸದಸ್ಯ ಮರಿಲಿಂಗೇಗೌಡ, ಡಾ. ವೂಡೇ ಪಿ ಕೃಷ್ಣ ಮತ್ತಿತರರಿದ್ದರು.**

ಸಚಿವರಾಗಿರುವ ಡಿ.ಕೆ.ಶಿವಕುಮಾರ, ಎಚ್.ಡಿ. ರೇವಣ್ಣ ಮುಂತಾದವರು ಸ್ಟುಡೆಂಡ್ ಯೂನಿಯನ್ ಮೂಲಕವೇ ರಾಜಕೀಯವಾಗಿ ಬೆಳೆದು ಈ ಮಟ್ಟಕ್ಕೆ ಬಂದವರಾಗಿದ್ದಾರೆಂದ ಅವರು ಪ್ರಸ್ತುತ ಯುವ ಜನತೆ ರಾಜ-ಕೀಯದಲ್ಲಿ ಆಸಕ್ತಿ ಕಳೆದುಕೊಂಡಿಲ್ಲ. ಯಾಕೆಂದರೆ ಮಾಹಿತಿ ತಂತ್ರಜ್ಞಾನದಲ್ಲಿ ತೊಡಗಿಸಿಕೊಂಡಿರುವುದರಿಂದ ಹತ್ತು ವರ್ಷದ ಹಿಂದೆ ಇದ್ದ ಪರಿಸ್ಥಿತಿ ಈಗ ಇಲ್ಲ. ಮಾಹಿತಿ ತಂತ್ರಜ್ಞಾನ, ಸಾಮಾಜಿಕ ಜಾಲತಾಣಗಳಿಂದಾಗಿ ಯುವ ಜನರು ಸಕ್ರಿಯವಾಗಿಯೇ ಭಾಗವಹಿಸಬಹುದಾಗಿದ್ದು, ಎಲ್ಲಿಯೂ ರಾಜಕೀಯ ಭರವಸೆ ಕಳೆದುಕೊಂಡಿಲ್ಲ ಎಂದರು.

ವಿಧಾನಪರಿಷತ್ ಸದಸ್ಯ ಡಿ.ಎಸ್. ವೀರಯ್ಯ ಮಾತನಾಡಿದರು. ಡಾ. ವೂಡೇ ಪಿ ಕೃಷ್ಣ ಅವರ 'ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ' ಎಂಬ ಪುಸ್ತಕ ಬಿಡುಗಡೆ ಮಾಡಲಾಯಿತು. ಸಂವಾದ ಕಾರ್ಯಕ್ರಮದಲ್ಲಿ ಮಾಜಿ ವಿಧಾನಸಭಾ ಸದಸ್ಯ ಮರಿಲಿಂಗೇಗೌಡ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ ಕೃಷ್ಣ, ಸಾಹಿತಿ ಎಂ.ಎಸ್. ನರಸಿಂಹಮೂರ್ತಿ, ಪ್ರಾಚಾರ್ಯ ಡಾ. ಅನುರಾಧ ರಾಯ್ ಇದ್ದರು.

ಹೊಸ ದಿಗಂತ

ಶನಿವಾರ
10 ಫೆಬ್ರವರಿ 2018

## ರಾಜಕೀಯದಲ್ಲಿ ವಿದ್ಯಾರ್ಥಿಗಳ ನಿಲುವು ಸಂವಾದ ಕಾರ್ಯಕ್ರಮ

# ರಾಜಕೀಯದಲ್ಲಿ ಯುವಕರ ಸಂಖ್ಯೆ ಕ್ಷೀಣ

ದಿಗಂತವರದಿ: ಬೆಂಗಳೂರು, ಫೆ.9


ದಿಗಂತ ಚಿತ್ರ

ಕಾಲೇಜುಮಟ್ಟದಲ್ಲಿ ವಿದ್ಯಾರ್ಥಿ ಸಂಘಟನೆ ನಿಷೇಧಿಸಿರುವುದು ಯುವ ರಾಜಕಾರಣಿಗಳು ಹೆಚ್ಚು ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಗುತ್ತಿಲ್ಲ ಎಂದು ಶಾಸಕ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಶುಕ್ರವಾರ ಶೇಷಾದ್ರಿಪುರ ಕಾಲೇಜು ಹಾಗೂ ಜಾಣಜಾಣೆಯರ ವೇದಿಕೆ ಆಯೋಜಿಸಿದ್ದ ಇಂದಿನ ರಾಜಕೀಯದಲ್ಲಿ ಯುವಕರ ಪಾತ್ರ ಹಾಗೂ ತೊಡಗಿಸಿಕೊಳ್ಳುವಿಕೆ ಕುರಿತಂತೆ ವಿದ್ಯಾರ್ಥಿ ಗಳ ನಿಲುವು ಹಾಗೂ ರಾಜಕೀಯ ಮುಖಂಡರ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು ಯುವಕರೇ ಇದ್ದಾರೆ. ಆದರೆ, ರಾಜಕಾರಣದಲ್ಲಿ ಯುವಕರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಟನೆಗೆ ನಿಷೇಧ ಹೇರಿರುವುದು ಇದಕ್ಕೆ ಪ್ರಮುಖ ಕಾರಣ. ಇಂತಹ ಸಂಘಟನೆಗಳ ಮೂಲಕವೇ ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರವೇಶದ ಹಾಗೂ ಹೋರಾಟಗಳ ಕುರಿತು ಆಸಕ್ತಿ ಮೂಡಲಿದೆ. ನಿಷೇಧದಿಂದ ಸಂಪರ್ಕ ಕೂಡ ಕಡಿತಗೊಂಡಿದೆ ಎಂದರು.

ರಾಜಕೀಯದಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕವೂ ಸಕ್ರಿಯರಾಗಿರಬಹುದು. ಆದರೆ, ಯುವಕರು ಮಾಹಿತಿ ಕೊರತೆಯಿಂದ ಒಬ್ಬರೂ ನಬ್ಬರ ಕಾಲೆಳೆಯುವ ಮೂಲಕ ಸಮಯ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ, ಅಸಮಾನತೆ, ಜಾತಿವ್ಯವಸ್ಥೆ ಎಲ್ಲಿಯ ವರೆಗೆ ಮುಂದುವರೆಯುವುದೋ ಅಲ್ಲಿಯ ವರೆಗೆ ಮೀಸಲಾತಿ ಅಗತ್ಯವಿದೆ. ಹಾಗೆಯೇ, ಅಲ್ಲಿಯವರೆಗೂ ತಾಳ್ಮೆಯಿಂದ ಕಾಯಬೇಕಾದ ಅನಿವಾರ್ಯತೆ ಇದೆ ಎಂದರು.

ಗುಜರಾತ್‌ನಲ್ಲಿ ನಡೆದ ಒಂದು ಪ್ರಕರಣದಿಂದ ಜಿಗ್ನೇಶ್ ಮೇವಾನಿ ಯುವ ನಾಯಕನಾಗಿ ಬಿಂಬಿತ ರಾದರು. ಇದೀಗ ಚುನಾವಣೆಯಲ್ಲಿ ಗೆದ್ದು ಪ್ರಧಾನಿ ಮೋದಿಯವರ ಬಗ್ಗೆ ಪ್ರಸ್ತಾಪಿಸುವ ಮಟ್ಟಕ್ಕೆ ಬೆಳೆ ದಿದ್ದಾರೆ. ರಾಜಕೀಯದಲ್ಲಿ ತೊಡಗಲು ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸಿ ರಾಜಕಾರಣಕ್ಕೆ ಬರಬಹುದು ಎಂದರು. ನಂತರ ಇದಕ್ಕೆ ಪ್ರತಿಕ್ರಿಯಿಸಿದ ವಿದ್ಯಾರ್ಥಿಗಳು, ಯುವಜನತೆಗೆ ರಾಜಕೀಯ ಪ್ರವೇಶ ಸುಲಭವಲ್ಲ. ಹಣಬಲ, ಕೌಟುಂಬಿಕ ಹಿನ್ನೆಲೆ ಹಾಗೂ ಅಪರಾಧ ಹಿನ್ನೆಲೆಯುಳ್ಳವರು ಮಾತ್ರ ರಾಜಕಾರಣ ಪ್ರವೇಶ ಸುಲಭ. ರಾಜಕೀಯ ಕ್ಷೇತ್ರದಲ್ಲಿ ಯುವ ಜನತೆಯನ್ನು ಉತ್ತೇಜಿಸುವ ಕಾರ್ಯ ಆಗಬೇಕಿದೆ ಹಾಗೂ ಅವಕಾಶ ದೊರಕಬೇಕಾಗಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ವೂಡೇ ಪಿ ಕೃಷ್ಣ ಅವರ ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ ಎಂಬ ಕೃತಿ ಬಿಡುಗಡೆ ಮಾಡಲಾಯಿತು. ಸಂವಾದ ಕಾರ್ಯಕ್ರಮದಲ್ಲಿ ಮಾಜಿ ವಿಧಾನಸಭಾ ಸದಸ್ಯ ಮರಿಲಿಂಗೇಗೌಡ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ ಕೃಷ್ಣ, ಸಾಹಿತಿ ಎಂ.ಎಸ್. ನರಸಿಂಹಮೂರ್ತಿ, ಪ್ರಾಚಾರ್ಯರಾದ ಡಾ. ಅನುರಾಧ ರಾಯ್ ಉಪಸ್ಥಿತರಿದ್ದರು.

9/2/2018

## ರಾಜಕೀಯದಲ್ಲಿ ವಿದ್ಯಾರ್ಥಿಗಳ ನಿಲುವು ಸಂವಾದ ಕಾರ್ಯಕ್ರಮ

# ರಾಜಕೀಯದಲ್ಲಿ ಯುವಕರ ಸಂಖ್ಯೆ ಕ್ಷೀಣ

▸ ದಿಗಂತವರದಿ: ಬೆಂಗಳೂರು, ಫೆ.9

ದಿಗಂತ ಚಿತ್ರ



ಕಾಲೇಜುಮಟ್ಟದಲ್ಲಿ ವಿದ್ಯಾರ್ಥಿ ಸಂಘಟನೆ ನಿಷೇಧಿಸಿರುವುದು ಯುವ ರಾಜಕಾರಣಿಗಳು ಹೆಚ್ಚು ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಗುತ್ತಿಲ್ಲ ಎಂದು ಶಾಸಕ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಶುಕ್ರವಾರ ಶೇಷಾದ್ರಿಪುರ ಕಾಲೇಜು ಹಾಗೂ ಜಾಣಜಾಣೆಯರ ವೇದಿಕೆ ಆಯೋಜಿಸಿದ್ದ ಇಂದಿನ ರಾಜಕೀಯದಲ್ಲಿ ಯುವಕರ ಪಾತ್ರ ಹಾಗೂ ತೊಡಗಿಸಿಕೊಳ್ಳುವಿಕೆ ಕುರಿತಂತೆ ವಿದ್ಯಾರ್ಥಿ ಗಳ ನಿಲುವು ಹಾಗೂ ರಾಜಕೀಯ ಮುಖಂಡರ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು ಯುವಕರೇ ಇದ್ದಾರೆ. ಆದರೆ, ರಾಜಕಾರಣದಲ್ಲಿ ಯುವಕರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಟನೆಗೆ ನಿಷೇಧ ಹೇರಿರುವುದು ಇದಕ್ಕೆ ಪ್ರಮುಖ ಕಾರಣ. ಇಂತಹ ಸಂಘಟನೆಗಳ ಮೂಲಕವೇ ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರವೇಶದ ಹಾಗೂ ಹೋರಾಟಗಳ ಕುರಿತು ಆಸಕ್ತಿ ಮೂಡಲಿದೆ. ನಿಷೇಧದಿಂದ ಸಂಪರ್ಕ ಕೂಡ ಕಡಿತಗೊಂಡಿದೆ ಎಂದರು.


ರಾಜಕೀಯದಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕವೂ ಸಕ್ರಿಯರಾಗಿರಬಹುದು. ಆದರೆ, ಯುವಕರು ಮಾಹಿತಿ ಕೊರತೆಯಿಂದ ಇಬ್ಬರೊ ನಬ್ಬರ ಕಾಲೆಳೆಯುವ ಮೂಲಕ ಸಮಯ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ, ಅಸಮಾನತೆ, ಜಾತಿವ್ಯವಸ್ಥೆ ಎಲ್ಲಿಯ ವರೆಗೆ ಮುಂದುವರೆಯುವುದೋ ಅಲ್ಲಿಯ ವರೆಗೆ ಮೀಸಲಾತಿ ಅಗತ್ಯವಿದೆ. ಹಾಗೆಯೇ, ಅಲ್ಲಿಯವರೆಗೂ ತಾಳ್ಮೆಯಿಂದ ಕಾಯಬೇಕಾದ ಅನಿವಾರ್ಯತೆ ಇದೆ ಎಂದರು.

ಗುಜರಾತ್‌ನಲ್ಲಿ ನಡೆದ ಒಂದು ಪ್ರಕರಣದಿಂದ ಜಿಗ್ನೇಶ್ ಮೇವಾನಿ ಯುವ ನಾಯಕನಾಗಿ ಬಿಂಬಿತ ರಾದರು. ಇದೀಗ ಚುನಾವಣೆಯಲ್ಲಿ ಗೆದ್ದು ಪ್ರಧಾನಿ ಮೋದಿಯವರ ಬಗ್ಗೆ ಪ್ರಸ್ತಾಪಿಸುವ ಮಟ್ಟಕ್ಕೆ ಬೆಳೆ ದಿದ್ದಾರೆ. ರಾಜಕೀಯದಲ್ಲಿ ತೊಡಗಲು ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸಿ ರಾಜಕಾರಣಕ್ಕೆ ಬರಬಹುದು ಎಂದರು. ನಂತರ ಇದಕ್ಕೆ ಪ್ರತಿಕ್ರಿಯಿಸಿದ ವಿದ್ಯಾರ್ಥಿಗಳು, ಯುವಜನತೆಗೆ ರಾಜಕೀಯ ಪ್ರವೇಶ ಸುಲಭವಲ್ಲ. ಹಣಬಲ, ಕೌಟುಂಬಿಕ ಹಿನ್ನೆಲೆ ಹಾಗೂ ಅಪರಾಧ ಹಿನ್ನೆಲೆಯುಳ್ಳವರು ಮಾತ್ರ ರಾಜಕಾರಣ ಪ್ರವೇಶ ಸುಲಭ. ರಾಜಕೀಯ ಕ್ಷೇತ್ರದಲ್ಲಿ ಯುವ ಜನತೆಯನ್ನು ಉತ್ತೇಜಿಸುವ ಕಾರ್ಯ ಆಗಬೇಕಿದೆ ಹಾಗೂ ಅವಕಾಶ ದೊರಕಬೇಕಾಗಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ವೂಡೇ ಪಿ ಕೃಷ್ಣ ಅವರ ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ ಎಂಬ ಕೃತಿ ಬಿಡುಗಡೆ ಮಾಡಲಾಯಿತು. ಸಂವಾದ ಕಾರ್ಯಕ್ರಮದಲ್ಲಿ ಮಾಜಿ ವಿಧಾನಸಭಾ ಸದಸ್ಯ ಮರಿಲಿಂಗೇಗೌಡ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ ಕೃಷ್ಣ, ಸಾಹಿತಿ ಎಂ.ಎಸ್. ನರಸಿಂಹಮೂರ್ತಿ, ಪ್ರಾಚಾರ್ಯರಾದ ಡಾ. ಅನುರಾಧ ರಾಯ್ ಉಪಸ್ಥಿತರಿದ್ದರು.

ಈ ಸಂಜೆ

ಶುಕ್ರವಾರ, 09 ಫೆಬ್ರವರಿ, 2018



ಜಾಣ ಜಾಣೆಯರು ಮತ್ತು ಶೇಷಾದ್ರಿಪುರಂ ಕಾಲೇಜು ವತಿಯಿಂದ ನಗರದಲ್ಲಿಂದು ಹಮ್ಮಿಕೊಂಡಿದ್ದ ಇಂದಿನ ರಾಜಕೀಯದಲ್ಲಿ ಯುವಕರ ಪಾತ್ರ ಹಾಗೂ ತೊಡಗಿಸಿಕೊಳ್ಳುವಿಕೆ ವಿಷಯ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಗಾಂಧಿ ವಿಚಾರ ಧಾರೆ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ವಿಧಾನ ಪರಿಷತ್ ಸದಸ್ಯ ಡಿ.ಎಸ್.ವೀರಯ್ಯ, ಮಾಜಿ ಶಾಸಕ ಮರಿಲಿಂಗೇಗೌಡ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ.ಪಿ.ಕೃಷ್ಣ, ಹಾಸ್ಯ ಸಾಹಿತಿ ಎಂ.ಎಸ್. ನರಸಿಂಹಮೂರ್ತಿ ಮತ್ತಿತರರು ಪಾಲ್ಗೊಂಡಿದ್ದರು.

ಸಂಜೆವಾಣಿ ಶುಕ್ರವಾರ, ಫೆಬ್ರವರಿ 9, 2018




ನಗರದ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿಂದು ಆಯೋಜಿಸಿದ್ದ 'ಇಂದಿನ ರಾಜಕೀಯದಲ್ಲಿ ಯುವಕರ ಪಾತ್ರ ಹಾಗೂ ತೊಡಗಿಸಿಕೊಳ್ಳುವಿಕೆ' ಸಂವಾದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ, ವಿಧಾನಸಭಾ ಸದಸ್ಯ ಮರಿಲಿಂಗೇಗೌಡ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಾಹಿತಿ ಎಂ.ಎಸ್. ನರಸಿಂಹಮೂರ್ತಿ ಮತ್ತಿತರರು ಭಾಗವಹಿಸಿರುವುದು.

# ವಿದ್ಯಾರ್ಥಿ ಸಂಘಗಳ ನಿಷೇಧ ಯುವ ಮುಖಂಡರ ಕೊರತೆ

ಬೆಂಗಳೂರು, ಫೆ. 9- ಕಾಲೇಜು ಮತ್ತು ವಿಶ್ವವಿದ್ಯಾಲಯ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿ ಸಂಘಗಳ ನಿಷೇಧಿಸಿರುವುದರಿಂದ ಅಲ್ಲಿ ಯುವ ರಾಜಕೀಯ ಧುರೀಣರು ಹುಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡುರಾವ್ ಇಂದಿಲ್ಲಿ ಹೇಳಿದರು.

ಶೇಷಾದ್ರಿಪುರಂ ಕಾಲೇಜು ಮತ್ತು ಜಾಣ ಜಾಣೆಯರು ಸಂಘಟನೆಯ ಸಂಯುಕ್ತಾಶ್ರಯದಲ್ಲಿ ಇಂದಿನ ರಾಜಕೀಯದಲ್ಲಿ ಯುವಕರ ಪಾತ್ರ ಹಾಗೂ ತೊಡಗಿಸಿಕೊಳ್ಳುವಿಕೆ ಕುರಿತಂತೆ ವಿದ್ಯಾರ್ಥಿಗಳ ನಿಲುವು ಹಾಗೂ ರಾಜಕೀಯ ಮುಖಂಡರೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ರಾಜಕೀಯದಲ್ಲಿ ಭರವಸೆ ಕಳೆದುಕೊಳ್ಳುತ್ತಿರುವ ಯುವ ಪೀಳಿಗೆಗೆ ಪ್ರೇರಣೆ ಏನು ಎಂಬ ಪ್ರಶ್ನೆಗೆ ಉತ್ತರಿಸಿದರು.

ಕಾಲೇಜುಗಳಲ್ಲಿ ಪ್ರಸ್ತುತ ಸ್ಟುಡೆಂಟ್ ಯೂನಿಯನ್ ಇಲ್ಲದೆ ಇರುವುದರಿಂದ ಅಲ್ಲಿಂದ ರಾಜಕೀಯಕ್ಕೆ ಬರಲು ಇದ್ದಂತಹ ಕೊಂಡಿ ತಪ್ಪಿಹೋಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಸಚಿವರಾಗಿರುವ ಡಿ.ಕೆ. ಶಿವಕುಮಾರ, ಹೆಚ್.ಡಿ. ರೇವಣ್ಣ ಮುಂತಾದವರು ಸ್ಟುಡೆಂಡ್ ಯೂನಿಯನ್ ಮೂಲಕವೇ ರಾಜಕೀಯವಾಗಿ ಬೆಳೆದು ಈ ಮಟ್ಟಕ್ಕೆ ಬಂದವರಾಗಿದ್ದಾರೆ ಎಂದ ಅವರು ಪ್ರಸ್ತುತ ಯುವ ಜನತೆ ರಾಜಕೀಯದಲ್ಲಿ ಆಸಕ್ತಿ ಕಳೆದುಕೊಂಡಿಲ್ಲ.

ಯಾಕೆಂದರೆ ಮಾಹಿತಿ ತಂತ್ರಜ್ಞಾನದಲ್ಲಿ ತೊಡಗಿಸಿಕೊಂಡಿರುವುದರಿಂದ ಹತ್ತು ವರ್ಷದ ಹಿಂದೆ ಇದ್ದ ಪರಿಸ್ಥಿತ ಈಗ ಇಲ್ಲ. ಮಾಹಿತಿ ತಂತ್ರಜ್ಞಾನ, ಸಾಮಾಜಿಕ ಜಾಲತಾಣಗಳಿಂದಾಗಿ ಯುವ ಜನರು ಸಕ್ರಿಯವಾಗಿಯೇ ಭಾಗವಹಿಸಬಹುದಾಗಿದ್ದು, ಎಲ್ಲಿಯೂ ರಾಜಕೀಯ ಭರವಸೆ ಕಳೆದುಕೊಂಡಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೂರಾರು ವಿದ್ಯಾರ್ಥಿಗಳಲ್ಲಿ ಎಷ್ಟು ಜನರು ಮತ ನೊಂದಾವಣೆ ಮಾಡಿಸಿಕೊಂಡಿದ್ದೀರಾ ಎಂದು ನೇರವಾಗಿ ಪ್ರಶ್ನಿಸಿದ ಅವರು ಅದರಲ್ಲಿ ಸುಮಾರು ಶೇ. 20 ರಷ್ಟು ಕೈಮೇಲೆ ಎತ್ತಿದಾಗ ಮೊದಲು ಮತ ನೊಂದಾವಣಿ ಮಾಡಿಸಿ, ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಮತವನ್ನು ಮಾಡಿ ಎಂದು ತಮಾಷೆಯಾಗಿಯೇ ಕೇಳಿದರು.

ಮೀಸಲಾತಿ ಬೇಕೆ? ಪಾಲಿಟಿಕ್ಸ್, ಪಬ್ಲಿಕ್, ಪೊಲೀಸ್ ಮತ್ತು ಪ್ರೆಸ್‌ನಲ್ಲಿ ಭ್ರಷ್ಟಾಚಾರವಿದೆಯಲ್ಲ ಎಂದ ವಿದ್ಯಾರ್ಥಿಗಳ ಪ್ರಶ್ನೆಗೆ ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ ಅವರು ಉತ್ತರಿಸಿ ಅಂಬೇಡ್ಕರ್ ರಚಿಸಿರುವ ಸಂವಿಧಾನದಲ್ಲಿ ಸಮಾನತೆಗೆ ಅವಕಾಶವಿದೆ. ಇದರಿಂದ ವಂಚಿತರಾದವರಿಗೆ ಸಮಾನತೆ ಕೊಡಲು ಮೀಸಲಾತಿ ಇದೆ. ಅಸಮಾನತೆ, ಜಾತಿ ವ್ಯವಸ್ಥೆ ಎಲ್ಲಿಯವರೆಗೆ ಮುಂದುವರೆಯುವುದೋ ಅಲ್ಲಿಯವರೆಗೆ ಮೀಸಲಾತಿಯ ಅಗತ್ಯವಿದೆ. ಅಲ್ಲಿಯವರೆಗೆ ತಾಳ್ಮೆಯಿಂದ ಕಾಯಬೇಕು ಎಂದ ಅವರು ಪ್ರಗತಿಯ ಎಲ್ಲಾ ಭಾಗವನ್ನು ರಾಜಕೀಯ ಕೀಲಿಯಿಂದ ತೆಗೆಯಬಹುದು ಎಂದು ಅಂಬೇಡ್ಕರ್ ಅವರು ತಿಳಿಸಿದ್ದಾರೆ.

ಗುಜರಾತ್‌ನಲ್ಲಿ ಒಂದೇ ಒಂದು ಪ್ರಕರಣದಿಂದ ಜಿಗ್ನೇಶ್ ಮೇವಾನಿ ಬೆಳಕಿಗೆ ಬಂದು ಚುನಾವಣೆಯಲ್ಲಿ ಗೆದ್ದು ಪ್ರಧಾನಿ ಮೋದಿ ಅವರು ಪ್ರಶ್ನಿಸುವ ಮಟ್ಟಕ್ಕೆ ಬೆಳೆದಿದ್ದಾರೆ. ರಾಜಕೀಯವಾಗಿ ಬೆಳೆಯಬೇಕೆಂದರೆ ಮೊದಲು ಸುಶಿಕ್ಷಿತರಾಗಿ, ಸಮಾಜಮುಖಿಯಾಗಿ ತೊಡಗಿಸಿಕೊಂಡು ದೇಶದ ರಾಜಕಾರಣಕ್ಕೆ ಬರಬೇಕು ಎಂದು ಹೇಳಿದರು. ಇದು ಅವರು ಬಹುತೇಕ ರಾಜಕಾರಣದಲ್ಲಿ ವಯಸ್ಸಾದವರೆ ಇದ್ದಾರೆ. ಯುವಕರಿಗೆ ಅವಕಾಶವಾಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ್ದಾಗಿತ್ತು.

ಹೊಸ ದಿಗಂತ

ಶನಿವಾರ
3 ಫೆಬ್ರವರಿ 2018

## ಸೋಲು ಪುಸ್ತಕದ ಒಂದು ಪುಟ ಮಾತ್ರ:ಡಾ.ವೂಡೇ ಪಿ.ಕೃಷ್ಣ

# ಆತ್ಮಹತ್ಯೆ ತಡೆ: ಯುವಕರಿಗೆ ತಿಳಿವಳಿಕಾ ಶಿಬಿರ

**ಬೆಂಗಳೂರು:** ಆತ್ಮಹತ್ಯೆಗೆ ಯೋಚಿಸುವುದನ್ನು ತಡೆಗಟ್ಟುವ ಕುರಿತು ಯುವ ಜನರಲ್ಲಿ ಅರಿವು ಮೂಡಿಸುವ ಶಿಬಿರವನ್ನು ನಗರದ ಶೇಷಾದ್ರಿಪುರ ಕಾಲೇಜು ಹಮ್ಮಿಕೊಂಡಿತ್ತು.

ಸಾ-ಮುದ್ರಾ ಫೌಂಡೇಷನ್ ಸಹಯೋಗದಲ್ಲಿ ನಡೆದ ತಿಳಿವಳಿಕಾ ಶಿಬಿರವನ್ನು ಡಾ.ವೂಡೇ ಪಿ.ಕೃಷ್ಣ ಉದ್ಘಾಟಿಸಿದರು.

ಪೊಲೀಸ್ ಅಧಿಕಾರಿ ಡಿ.ರೂಪ ಮಾತನಾಡಿ, ಜೀವನದಲ್ಲಿ ಬರುವ ಕಷ್ಟಗಳಿಗೆ ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಪರೀಕ್ಷೆಗಳು ಬಂದಾಗ ಶ್ರಮಪಟ್ಟು ಕಲಿಯಬೇಕು. ಸೋಲು ಗೆಲುವಿನ ಮೆಟ್ಟಿಲು, ಸೋಲು ಎಂಬುದು ಪುಸ್ತಕದ ಒಂದು ಪುಟ ಮಾತ್ರ. ಮತ್ತೊಮ್ಮೆ ಪ್ರಯತ್ನಿಸಿದರೆ ಗೆಲುವು ಖಚಿತ. ಹೀಗಾಗಿ, ಆತ್ಮಹತ್ಯೆ ಕುರಿತು ಯೋಚಿಸ ಜೀವನದಲ್ಲಿ ಸೋಲು ಕಾಣಬಾರದು ಎಂದರು.

ಶಿಬಿರದಲ್ಲಿ ಸಾ-ಮುದ್ರಾದ ಭಾರತೀ ಸಿಂಗ್, ಡಾ.ಅನುರಾಧಾರಾಯ್, ನಾರಾಯಣಸ್ವಾಮಿ ಸೇರಿದಂತೆ ಹಲವು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿಗಂತ ಚಿತ್ರ



ಸಂಯುಕ್ತ ಕರ್ನಾಟಕ
ಶನಿವಾರ । 3 । ಫೆಬ್ರವರಿ । 2018



ಶೇಷಾದ್ರಿಪುರಂ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಬೃಹತ್ ರಕ್ತದಾನ ಮೇಳವನ್ನು ಪ್ರಸಾರ ಭಾರತಿ ಹೆಚ್ಚುವರಿ ಮಹಾ ನಿರ್ದೇಶಕ ಡಾ. ರಾಜಕುಮಾರ್ ಉಪಾಧ್ಯಾಯ ಉದ್ಘಾಟಿಸಿದರು. ಈ ಸಂದರ್ಭ ಎನ್.ಆರ್. ಪಂಡಿತಾರಾಧ್ಯ, ಡಾ. ವೂಡೆ ಪಿ ಕೃಷ್ಣ, ರಾಜು ಚಂದ್ರಶೇಖರ್ ಸೇರಿದಂತೆ ಹಲವರಿದ್ದರು.

# ರಕ್ತದಾನ ಸಮಾಜಮುಖಿ ಚಿಂತನೆಯಾಗಬೇಕು

ಸಂ.ಕ ಸಮಾಚಾರ ಬೆಂಗಳೂರು

ಭಾರತ ಜನಸಂಖ್ಯೆಯಲ್ಲಿ ಕೇವಲ ಶೇ.37 ಜನರು ಮಾತ್ರವೇ ರಕ್ತದಾನ ಮಾಡಲು ಅರ್ಹರಾಗಿದ್ದಾರೆ. ರಕ್ತದಾನ ಸಮಾಜಮುಖಿ ಚಿಂತನೆಯಾಗಬೇಕು ಎಂದು ಪ್ರಸಾರ ಭಾರತಿ ಹೆಚ್ಚುವರಿ ಮಹಾ ನಿರ್ದೇಶಕ ಡಾ. ರಾಜಕುಮಾರ್ ಉಪಾಧ್ಯಾಯ ತಿಳಿಸಿದರು.


ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯ ವತಿಯಿಂದ ಮಾಜಿ ಅಧ್ಯಕ್ಷ ಕೆ.ಎಂ. ನಂಜಪ್ಪನವರ 106ನೇ ಹುಟ್ಟುಹಬ್ಬದ ಪ್ರಯುಕ್ತ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಬೃಹತ್ ರಕ್ತದಾನ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಕ್ತದಾನ ಮಹಾದಾನವಾಗಿದ್ದು, ಮಾನವನ ಪ್ರಾಣ ರಕ್ಷಣೆಯಲ್ಲಿ ರಕ್ತ ಬಹುಮುಖ್ಯ ಪಾತ್ರ ವಹಿಸುತ್ತದೆ. ಹೆಚ್ಚು ಜನರು ಇಂತಹ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಮಾಡಬಲು ಮುಂದಾಗಬೇಕು. ಇದರಿಂದ ಬೇರೆಯವರ ಪ್ರಾಣ ಉಳಿಸಲು ನೆರವಾಗುತ್ತದೆ ಎಂದು ತಿಳಿಸಿದರು.

ರಕ್ತದಾನ ಮೇಳದಲ್ಲಿ 750 ಯೂನಿಟ್ಸ್ ರಕ್ತವನ್ನು ಸಂಗ್ರಹಿಸಿ ವಿವಿಧ ಆಸ್ಪತ್ರೆಗಳ ಬ್ಲಡ್ ಬ್ಯಾಂಕ್‌ಗಳಿಗೆ ನೀಡಲಾಯಿತು.

ಮೇಳದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೆ ಪಿ ಕೃಷ್ಣ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಮಾಜಿ ಅಧ್ಯಕ್ಷ ರಾಜು ಚಂದ್ರಶೇಖರ್ ., ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಈ ಸಂಜೆ
ಶನಿವಾರ, 3 ಫೆಬ್ರವರಿ, 2018

# ಸ್ವಯಂ ಬೃಹತ್ ರಕ್ತದಾನ ಶಿಬಿರ



**ಬೆಂಗಳೂರು, ಫೆ.3–** ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆ ಮಾಜಿ ಅಧ್ಯಕ್ಷ ಕೆ.ಎಂ.ನಂಜಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ಶೇಷಾದ್ರಿಪುರಂ ಕಾಲೇಜು ಆವರಣದಲ್ಲಿಂದು ಸ್ವಯಂ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಬ್ಲಡ್ ಬ್ಯಾಂಕ್, ವಿಕ್ಟೋರಿಯಾ ಆಸ್ಪತ್ರೆ ಬ್ಲಡ್ ಬ್ಯಾಂಕ್ ಸೇರಿದಂತೆ ಮತ್ತಿತರ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ 750 ಯೂನಿಟ್‌ನಷ್ಟು ರಕ್ತ ಸಂಗ್ರಹಿಸಲಾಯಿತು.

ಇದೇ ವೇಳೆ ಮಾತನಾಡಿದ ರೆಡ್‌ಕ್ರಾಸ್ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಡಬ್ಲ್ಯು.ಪಿ.ಕೃಷ್ಣ 1984ರಲ್ಲಿ ರೆಡ್‌ಕ್ರಾಸ್ ಸದಸ್ಯನಾದಾಗಿನಿಂದ ಇದುವರೆಗೂ 22 ಬಾರಿ ರಕ್ತದಾನ ಮಾಡಿದ್ದೇನೆ ಎಂದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಜುಚಂದ್ರ ಶೇಖರ್ ರಕ್ತದಾನ ಮಹತ್ವದ ಬಗ್ಗೆ ತಿಳಿಸಿಕೊಟ್ಟರು.

ಶಿಬಿರದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಪ್ರಸಾರ ಭಾರತಿ ಹೆಚ್ಚುವರಿ ಮಹಾನಿರ್ದೇಶಕ ಡಾ.ರಾಜ್‌ಕುಮಾರ್ ಉಪಾಧ್ಯಾಯ, ಧರ್ಮದರ್ಶಿ ಪರಮಶಿವಯ್ಯ, ಮುಖಂಡರಾದ ರಮಣನ್, ಸರೋಜಾ, ಮೃತ್ಯುಂಜಯ ಮತ್ತಿತರರು ಹಾಜರಿದ್ದರು.

ಕನ್ನಡಪ್ರಭ
ಗುರುವಾರ 1.2.2018



ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯ ಮಾಜಿ ಅಧ್ಯಕ್ಷ ಕೆ.ಎಂ. ನಂಜಪ್ಪ ಅವರ 106ನೇ ಜನ್ಮದಿನದ ಅಂಗವಾಗಿ ಬುಧವಾರ ಕಾಲೇಜಿನಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಶಿಬಿರದಲ್ಲಿ 750 ಯೂನಿಟ್ಸ್ ರಕ್ತವನ್ನು ಸಂಗ್ರಹಿಸಿ ವಿವಿಧ ರಕ್ತ ಬ್ಯಾಂಕ್‌ಗಳಿಗೆ ನೀಡಲಾಯಿತು.

# ರೈತರ ಬಗ್ಗೆ ಗಮನ ಹರಿಸದ ಮೋದಿ

## ಸರ್ವೋದಯ ಸಮ್ಮೇಳನ ಸಮಾರೋಪದಲ್ಲಿ ಡಾ.ಪಾಟೀಲ ಪುಟ್ಟಪ್ಪ



ಸರ್ವೋದಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಡಾ.ಪಾಟೀಲ ಪುಟ್ಟಪ್ಪ ಮಾತನಾಡಿದರು. ಎಚ್.ಎಸ್.ದೊರೆಸ್ವಾಮಿ, ಎಸ್.ನಾಗಣ್ಣ, ಡಾ.ವೂಡೇ ಪಿ.ಕೃಷ್ಣಪ್ಪ ಎಂ.ಬಸವಯ್ಯ, ತುಂಡೋಟಿ ನರಸಿಂಹಯ್ಯ ಇತರರು ಭಾಗವಹಿಸಿದ್ದರು.

ತುಮಕೂರು

ನರೇಂದ್ರ ಮೋದಿ ಸ್ವಲ್ಪ ಮನಸ್ಸು ಮಾಡಿದ್ದರೆ ರೈತರ ಉತ್ಸಾಹವನ್ನು ಇಮ್ಮಡಿ ಗೊಳಿಸಬಹುದಾಗಿತ್ತು. ಆದರೆ ಮೋದಿ ಮನಸ್ಸು ಮಾಡುತ್ತಿಲ್ಲ ಎಂದು ನಾಡೋಜ ಡಾ.ಪಾಟೀಲ ಪುಟ್ಟಪ್ಪ ಬೇಸರ ವ್ಯಕ್ತ ಪಡಿಸಿದರು.

ಸಿದ್ದಗಂಗಾಮಠದ ಉದ್ಧಾನೇಶ್ವರ ಸಮುದಾಯ ಭವನದಲ್ಲಿ ಕರ್ನಾಟಕ ಸರ್ವೋದಯ ಮಂಡಲ, ಬೆಂಗಳೂರು ವತಿಯಿಂದ ನಡೆದ ರಾಜ್ಯ ಮಟ್ಟದ ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನ 2018 ಕಾರ್ಯಕ್ರಮದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಡಾ.ಪಾಟೀಲ ಪುಟ್ಟಪ್ಪ ಮಾತನಾಡಿದರು.

ಕೇಂದ್ರ ಸಾರಿಗೆ ಸಚಿವರ ಮಗನ ಮದುವೆಗೆ 20 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಇದನ್ನು ಮೋದಿ ಏಕೆ ಗಮನಿಸಲಿಲ್ಲ ಎಂದು ಪ್ರಶ್ನಿಸಿದರು. ದೇಶದಲ್ಲಿ ಸಂಪೂರ್ಣ ಪಾನ ನಿರೋಧವಾಗಬೇಕು ಎಂಬ ಒತ್ತಾಯ ಸರ್ವೋದಯ ಸಮಾಜದಿಂದ ಆಗಬೇಕು ಎಂದು ಹೇಳಿದರು.

ಟಿಪ್ಪು ಸುಲ್ತಾನ್‌ನನ್ನು ಗೌರವಿಸಿದರೆ ಮುಸಲ್ಮಾನರನ್ನು ಗೌರವಿಸಿದಂತೆ ಎಂದು ಅನೇಕರು ತಪ್ಪು ತಿಳಿದಿದ್ದಾರೆ. ಇದರಲ್ಲಿ ತಪ್ಪೇನಿದೆ, ಟಿಪ್ಪು ಕಾಲದಲ್ಲಿ ಗೋವಾ, ಅವನದಾಗಿದ್ದರಿಂದ ಮಹದಾಯಿ ನೀರು ನಮಗೆ ಸುಲಭದಲ್ಲಿ ಸಿಗುತ್ತಿತ್ತು . ಆದರೆ ಇಂದು ಮಹದಾಯಿ ನೀರಿಗಾಗಿ ಹೋರಾಟ ಮಾಡಬೇಕಾಗಿದೆ. ಟಿಪ್ಪು ಬಹುತೇಕರನ್ನು ಮತಾಂತರ ಮಾಡಿದ ಎನ್ನುತ್ತಾರೆ ಆದರೆ ದಿವಾನ್ ಪೂರ್ಣಯ್ಯನವರನ್ನು ದಿವಾನರಾಗಿ ಏಕೆ ಮಾಡಿದ ಮತ್ತು ಶ್ರೀರಂಗ ಪಟ್ಟಣದ ದೇವಸ್ಥಾನವನ್ನು ಏಕೆ ಜೀರ್ಣೋದ್ಧಾರ ಮಾಡಿದ, ಆದ್ದರಿಂದ ಸತ್ಯವನ್ನು ಯೋಚಿಸಬೇಕಾಗಿದೆ ಎಂದು ಹೇಳಿದರು.

ಹತ್ತಿ ನಮ್ಮದು, ನೂಲು ನಮ್ಮದು, ಬಟ್ಟೆ ಮಾತ್ರ ವಿದೇಶಿ. ಮಿಲ್‌ನದ್ದು, ಗಾಂಧೀಜಿ ಖಾದಿ ಬಟ್ಟೆ ಮೂಲಕ ಬ್ರಿಟೀಷರಿಗೆ ಬಿಸಿ ಮುಟ್ಟಿಸಿದರು. ಆದರೆ ಈಗ ಹಲವರು ನಕಲಿ ಖಾದಿ ಬಟ್ಟೆ ಮಾರಾಟದಲ್ಲಿ ತೊಡಗಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರ ಗಮನಹರಿಸಬೇಕು.ನಾವು ಕೆಲಸವನ್ನು ಪ್ರೀತಿಸಬೇಕು. ದೇಶಕಟ್ಟುವ ಕಾರ್ಯದಲ್ಲಿ ನಾವು ತೊಡಗಬೇಕು. ಗಾಂಧೀಜಿ ತಮ್ಮನ್ನು ತಾವೇ ಸವೆಸಿಕೊಂಡು ಮಹಾನ್ ಕಾರ್ಯ ಮಾಡಿದ್ದಾರೆ. ಇದನ್ನು ನಾವು ಸ್ಮರಿಸುತ್ತಿಲ್ಲ ಎಂದರು. ಹಣದಿಂದ ಏನನ್ನೂ ಸಾಧಿಸಲಾಗದು. ಹಣದಿಂದ ಸಿಗುವ ಸುಖಕ್ಕಿಂತ ಶ್ರಮದಿಂದ ಸಿಗುವ ಸುಖವೇ ಬೇರೆ. ಆದ್ದರಿಂದ ಆಸ್ತಿಯ ಬಗ್ಗೆ ಜನರು ವ್ಯಾಮೋಹ ಪಡಬಾರದು ಎಂದು ಹೇಳಿದರು.

ಇಂದು ಸರ್ಕಾರದಿಂದ ಸಿಗುವ ಆಸ್ತಿ ಮತ್ತು ಪ್ರಶಸ್ತಿಗೆ ಲಾಬಿ ಮಾಡುವವರೂ ಇದ್ದಾರೆ. ನಾನು ಯಾವ ಆಸ್ತಿಯನ್ನೂ ಸರ್ಕಾರದಿಂದ ಪಡೆಯಲಿಲ್ಲ, ಯಾವ ಪ್ರಶಸ್ತಿಗೂ ಆಸೆ ಪಡಲಿಲ್ಲ ಎಂದರು. ಇಂದು ಹಳ್ಳಿಯ ಕಸುಬುಗಳೆಲ್ಲ ಹಾಳಾಗಿ ಹೋಗಿವೆ. ಎಲ್ಲರೂ ನಗರದ ಕೆಲಸಗಳನ್ನು ಅವಲಂಬಿಸಿದ್ದಾರೆ. ಗುಡಿ . >>> 7ನೇ ಪುಟಕ್ಕೆ

## ರೈತರ ಬಗ್ಗೆ ಗಮನ ಹರಿಸದ ಮೋದಿ

>>>1ನೇ ಪುಟದಿಂದ ಕೈಗಾರಿಕೆಗಳೆಲ್ಲಾ ಹಾಳಾಗಿವೆ. ... ಎಲ್ಲರಿಗೂ ಅಮೇರಿಕಾ, ಇಂಗ್ಲೆಂಡ್ ವಸ್ತುಗಳು ಬೇಕಾಗಿವೆ ಆದ್ದರಿಂದ ಸರ್ವೋದಯ ಸಮಾಜದ ಬಗ್ಗೆ ಆಸಕ್ತಿ ಇರುವವರು ಒಳ್ಳೆಯ ವಿಚಾರಗಳನ್ನು ಪ್ರಚಾರ ಪಡಿಸಬೇಕೆಂದರು.


ಬೆಂಗಳೂರು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣಪ್ಪ ಮಾತನಾಡಿ ಗಾಂಧೀ ಮತ್ತು ಸರ್ವೋದಯದ ಬಗ್ಗೆ ನಾವು ಶಾಲಾ-ಕಾಲೇಜು ಹಂತದಲ್ಲಿ ತಿಳಿಸುವುದರಿಂದ ಯುವ ಸಮೂಹವನ್ನು ಆರೋಗ್ಯವಂತರಾಗಿಸಬಹುದು, ಸರ್ವೋದಯ ಸಮಾಜದ ಮೂಲಕ ರಾಜಕೀಯ ನಾಯಕರಿಗೆ ಹಳ್ಳಿ, ರೈತ ಮತ್ತು ಬಡವರ ಪರ ಇರುವಂತೆ ತಿಳಿಸುವ ಕಾರ್ಯವಾಗಬೇಕೆಂದರು.

ಕರ್ನಾಟಕ ಸರ್ವೋದಯ ಮಂಡಲ, ಬೆಂಗಳೂರು ಸಮಿತಿ ಹೊಸದಾಗಿ 7 ತಾಲ್ಲೂಕುಗಳಲ್ಲಿ ತನ್ನ ಪದಾಧಿಕಾರಿಗಳನ್ನು ನೇಮಿಸಿದೆ. ಸಮಾರೋಪ ಸಮಾರಂಭದಲ್ಲಿ ಎಲ್ಲಾ ಗಣ್ಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಹೆಚ್.ಎಸ್.ದೊರೆಸ್ವಾಮಿ, ಪ್ರಜಾ ಪ್ರಗತಿ ದಿನ ಪತ್ರಿಕೆ ಸಂಪಾದಕರಾದ ಎಸ್.ನಾಗಣ್ಣ, ಕರ್ನಾಟಕ ಸರ್ವೋದಯ ಮಂಡಲ,ಬೆಂಗಳೂರು ಸಮಿತಿಯ ರಾಜ್ಯಾಧ್ಯಕ್ಷ ಎಲ್.ನರಸಿಂಯ್ಯ, ರಾಜ್ಯ ಕಾರ್ಯದರ್ಶಿ ಡಾ.ಎಚ್.ಎಸ್. ಸುರೇಶ್, ತುಮಕೂರು ಜಿಲ್ಲಾಧ್ಯಕ್ಷ ಎಂ.ಬಸವಯ್ಯ, ಜಿಲ್ಲಾ ಕಾರ್ಯದರ್ಶಿ ಆರ್.ಎ.ಪುಟ್ಟರಾಮಣ್ಣ ಮೊದಲಾದವರು ಭಾಗವಹಿಸಿದ್ದರು.

ಸಂಯುಕ್ತ ಕರ್ನಾಟಕ

1 ಫೆಬ್ರವರಿ 2018
ಗುರುವಾರ




ನಂದಿನಿ ಬಡಾವಣೆಯಲ್ಲಿ ಕಲಾನಿಕೇತನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಾಡೋಜ ಡಾ.ಪಾಟೀಲ್ ಪುಟ್ಟಪ್ಪ ಅವರಿಗೆ "ಕರುನಾಡ ಗಾಂಧಿ" ಪ್ರಶಸ್ತಿ ನೀಡಲಾಯಿತು. ಶಾಸಕ ಕೆ.ಗೋಪಾಲಯ್ಯ, ಗಾಂಧಿ ಭವನದ ಅಧ್ಯಕ್ಷ ಡಾ. ವುಡೇ ಪಿ. ಕೃಷ್ಣ, ಮಾಜಿ ಉಪಮೇಯರ್ ಹೇಮಲತಾ ಗೋಪಾಲಯ್ಯ, ಡಾ.ಡಿ.ಎಸ್. ಅಶ್ವಥ್, ಕಲಾನಿಕೇತನದ ಅಧ್ಯಕ್ಷ ಡಿ.ಪ್ರಕಾಶ್ ಇದ್ದಾರೆ.

ಕನ್ನಡಪ್ರಭ
ಗುರುವಾರ 1.2.2018
ಬೆಂಗಳೂರು

# ಇಂದಿನ ರಾಜಕಾರಣಿ ಕೇವಲ ಭಾಷಣಪ್ರಿಯ

## ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ ವಿಷಾದ | ಎರಡನೇ ಸರ್ವೋದಯ ಸಮಾಜ ಸಮ್ಮೇಳನದ ಸಮಾರೋಪ



ತುಮಕೂರಿನಲ್ಲಿ ನಡೆದ ಎರಡನೇ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಸಮಾರೋಪ ಭಾಷಣ ಮಾಡಿದ ಪಾಟೀಲ್ ಪುಟ್ಟಪ್ಪ

• **ಕನ್ನಡಪ್ರಭ ವಾರ್ತೆ** ತುಮಕೂರು

ದೇಶದ ಜನತೆಗೆ ಸರಳತೆ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಪ್ರಧಾನಿ ನರೇಂದ್ರಮೋದಿ ಅವರಿಗೆ ಅವರ ಸಂಪುಟದಲ್ಲಿರುವ ಸಾರಿಗೆ ಮಂತ್ರಿ ಮಗನ ಮದುವೆಗೂ ಸಾವಿರಾರು ಕೋಟಿ ಖರ್ಚು ಮಾಡಿರುವುದು ಕಣ್ಣಿಗೆ ಬೀಳದಿರುವುದು ವಿಪರ್ಯಾಸ ಎಂದು ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ ಹೇಳಿದರು.

ನಗರದ ಸಿದ್ಧಗಂಗಾ ಮಠದಲ್ಲಿ ಕರ್ನಾಟಕ ಸರ್ವೋದಯ ಮಂಡಲ ಬೆಂಗಳೂರು ಆಯೋಜಿಸಿದ್ದ ರಾಜ್ಯ ಮಟ್ಟದ ಎರಡನೇ ಸರ್ವೋದಯ. ಸಮಾಜ ಸಮ್ಮೇಳನದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇಂದಿನ ರಾಜಕಾರಣಿ ಕೇವಲ ಭಾಷಣ ಪ್ರಿಯರಾಗಿದ್ದಾರೆಯೇ ಹೊರತು, ನುಡಿದಂತೆ ನಡೆಯುವುದನ್ನು ನೋಡಲು ಸಾಧ್ಯವಾಗುತ್ತಿಲ್ಲ. ಪ್ರಧಾನಿ ನರೇಂದ್ರಮೋದಿ ಮುಂದಿನ ಎರಡು ವರ್ಷಗಳಲ್ಲಿ ರೈತರ ಆದಾಯ ದ್ವಿಗುಣಗೊಳಿಸುವ ಮಾತನಾಡುತ್ತಿದ್ದಾರೆ. ಇದು ಕಷ್ಟದ ಕೆಲಸವಲ್ಲ. ಆದರೆ ಇಂದು ಹಳ್ಳಿಗಳಲ್ಲಿ ದುಡಿವ ಜನರೇ ಇಲ್ಲ. ಇದ್ದ ಗುಡಿ ಕೈಗಾರಿಕೆಗಳ ಮುಚ್ಚಿ, ಯುವಕರು ಪಟ್ಟಣ ಸೇರುತ್ತಿದ್ದಾರೆ. ಗಾಂಧೀಜಿ ರೈತರ ನಂತರ ನೂಲುವವರು ಮತ್ತು ನೇಕಾರರಿಗೆ ಹೆಚ್ಚಿನ ಪ್ರಾಶಸ್ತ ನೀಡಿದ್ದರು. ಈ ಎರಡು ವೃತ್ತಿಗಳು ಇಂದು ಮೂಲೆ ಸೇರಿವೆ. ಮಿಲ್ ಬಟ್ಟೆಗಳನ್ನ ಖಾದಿ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರ ವಿರುದ್ಧ ಹೋರಾಟಗಳು ನಡೆಯಬೇಕಾಗಿದೆ ಎಂದು ಪಾಟೀಲ್ ಪುಟ್ಟಪ್ಪ ತಿಳಿಸಿದರು.

ಎರಡು ದಿನಗಳ ಕಾಲ ನಡೆದ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಸಂಪೂರ್ಣ ಪಾನ ನಿಷೇಧಕ್ಕೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗಿದೆ ಕರ್ನಾಟಕವನ್ನು ಆಳಿದ ಸರಕಾರಗಳ ಮೇಲೆ ಈ ನಿಟ್ಟಿನಲ್ಲಿ ಒತ್ತಡ ಹೆಚ್ಚಬೇಕಾಗಿದೆ ಎಂದರು.

**ಸಂಪೂರ್ಣ ಪಾನ ನಿಷೇಧ:** ರಾಜ್ಯದಲ್ಲಿ ಸಂಪೂರ್ಣ ಪಾನ ನಿಷೇಧ ಜಾರಿಗೆ ತಂದ ಗಂಡಸು ಎಂದರೆ ಟಿಪ್ಪು ಸುಲ್ತಾನ್, ಸೇಲಂ, ಕೊಯಮುತ್ತೂರಿನಿಂದ ಗೋವಾದವರೆಗೆ ಹರಡಿದ್ದ ವಿಶಾಲ ಕರ್ನಾಟಕದಲ್ಲಿ ಸಂಪೂರ್ಣ ಪಾನ ನಿಷೇಧವಿತ್ತು.ಅಲ್ಲದೆ ಕೆಲವರು ಹೇಳುವಂತೆ ಹಿಂದುಗಳನ್ನು ಇಸ್ಲಾಂಗೆ ಮತಾಂತರ ಮಾಡುತ್ತಿದ್ದ ಎಂಬುದು ಸಹ ಸುಳ್ಳು. ಇದು ನಿಜವೇ ಆದರೆ ಅವರ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ದಿವಾನ್ ಪ್ರರ್ಣಯ್ಯ ಏಕೆ ಮತಾಂತರವಾಗಲಿಲ್ಲ. ಆತನ ಆಳ್ವಿಕೆಗೆ ಒಳಪಟ್ಟ ಉತ್ತರ ಕರ್ನಾಟಕದ ಜನತೆ ಏಕೆ ಮುಸ್ಲಿಂರಾಗಿ ಬದಲಾಗಲಿಲ್ಲ ಎಂದು ಪ್ರಶ್ನಿಸಿದರು.

ಸರ್ವೋದಯ ಸಮಾಜದ ಜಿಲ್ಲಾಧ್ಯಕ್ಷ ಎಂ.ಬಸವಯ್ಯ ಮಾತನಾಡಿದರು. ಪತ್ರಿಕೋದ್ಯಮಿ ಎಸ್. ನಾಗಣ್ಣ,ಸರ್ವೋದಯ ಸಮಾಜದ ರಾಜ್ಯಾಧ್ಯಕ್ಷ ಎಲ್.ನರಸಿಂಹಯ್ಯ,ರಾಜ್ಯ ಕಾರ್ಯದರ್ಶಿ ಡಾ.ಎಚ್.ಎಸ್.ಸುರೇಶ್ ,ಜಿಲ್ಲಾ ಕಾರ್ಯದರ್ಶಿ ಆರ್.ವಿ.ಪುಟ್ಟಕಾಮಣ್ಣ ಮತ್ತಿತರರು ಉಪಸ್ಥಿತರಿದ್ದರು.

### ತಿಳಿವಳಿಕೆ ಇಲ್ಲದೇ ಟೀಕೆ

1799ರಲ್ಲಿ ನಡೆದ 4ನೇ ಆಂಗ್ಲೋ ಮೈಸೂರು ಯುದ್ದದಲ್ಲಿ ಟಿಪ್ಪು ಸುಲ್ತಾನ್ ಸೋಲದೆ ಇದ್ದಿದ್ದರೆ, ಇಂದು ಮಹಾದಾಯಿ ನೀರಿಗಾಗಿ ನಾವು ಬೇಡುವ ಅಗತ್ಯ ಬರುತ್ತಿರಲಿಲ್ಲ. ಕರ್ನಾಟಕ ರೇಷ್ಮೆಯ ನಾಡಾಗಿ ಪರಿವರ್ತನೆಯಾಗುತ್ತಿತ್ತು. ಅವನು ಹಿಂದೂ ವಿರೋಧಿಯಾಗಿದ್ದರೆ, ಆತನ ಅರಮನೆಯ ಪಕ್ಕದಲ್ಲಿಯೇ ರಂಗ ನಾಥ ದೇವಾಲಯ ನೆಲೆಗೊಳ್ಳಲು ಸಾಧ್ಯ ವಾಗುತ್ತಿರಲಿಲ್ಲ. ಇದರ ಬಗ್ಗೆ ತಿಳಿವಳಿಕೆ ಯಿಲ್ಲದೆ ಕೆಲವರು ಟೀಕಿಸುತ್ತಿರುವುದು ಸರಿಯಲ್ಲ. ಯೋಗ್ಯತೆ ಇರುವ ವನಿಗೆ ಮಾತ್ರ ಮೆಚ್ಚುಗೆ ವ್ಯಕ್ತಪಡಿಸಲು . ಸಾಧ್ಯ. ಇಲ್ಲಸಲ್ಲದ ವಿಷಯಗಳಿಗೆ ತಲೆಕೆಡಿಸಿ ಕೊಳ್ಳುವ ಬದಲು, ಸೌಹಾರ್ದ ಸಮಾಜ ಕಟ್ಟುವ ಕೆಲಸ ಸರ್ವೋದಯ ಅನುಯಾಯಿಗಳಿಂದ ನಡೆಯಬೇಕು ಎಂದು ಪಾಟೀಲ್ ಪುಟ್ಟಪ್ಪ ತಿಳಿಸಿದರು.

ಸರ್ವೋದಯ ಸಮಾಜ ಸಮ್ಮೇಳನದ ಸಮಾರೋಪ ಭಾಷಣವನ್ನು ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ವೊಡೆ.ಪಿ.ಕೃಷ್ಣ ಮಾಡಿದರು. ಹಿರಿಯ ಸ್ವಾತಂತ್ರ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಸರ್ವೋದಯ ಮನುಷ್ಯನ ಜೀವನ ಪರಿವರ್ತಿಸಬಲ್ಲ ಒಂದು ಪರಿಕಲ್ಪನೆ. ಸಮಾಜಕೋಸ್ಕರ ಬದುಕಬೇಕು ಎಂಬ ಮನೋಭಾವವನ್ನು ಮೂಡಿಸುತ್ತದೆ.ನಮ್ಮ ಕೈಯಲ್ಲಿ ಶಕ್ತಿ ಇರುವಷ್ಟು ದಿನ ಸಮಾಜಕ್ಕಾಗಿ ದುಡಿಯೋಣ ಎಂದರು.

ವಿಜಯ ಕರ್ನಾಟಕ VK
ಗುರುವಾರ,1 ಫೆಬ್ರವರಿ 2018, ಬೆಂಗಳೂರು

# ಮಹದಾಯಿ ಬೇಡುವಂತಾಗಿರುವುದು ವಿಷಾದನೀಯ: ಪಾಪು

**ವಿಕ ಸುದ್ದಿಲೋಕ** ತುಮಕೂರು ಗ್ರಾಮಾಂತರ

ಅಂದು ಗೋವಾ ರಾಜ್ಯ ಟಿಪ್ಪು ಸುಲ್ತಾನ್ ಒಡೆತನದಲ್ಲಿದ್ದು, ಮಹದಾಯಿ ಕರ್ನಾಟಕಕ್ಕೆ ಸೇರಿತ್ತು. ಆದರೆ ಇಂದು ಒಡೆದು ಚೂರಾದ್ದರಿಂದ ಮಹದಾಯಿ ನೀರಿಗೆ ಬೇಡುವಂತಾಗಿದೆ, ಟಿಪ್ಪು ಸೋಲದಿದ್ದರೆ ಹೀಗೆ ಬೇಡಬೇಕಿರಲಿಲ್ಲವೆಂದು ಹಿರಿಯ ಪತ್ರಕರ್ತ, ನಾಡೋಜ ಡಾ.ಪಾಟೀಲ್ ಪುಟ್ಟಪ್ಪ ತಿಳಿಸಿದರು.

ಗ್ರಾಮಾಂತರದ ಸಿದ್ಧಗಂಗಾ ಮಠದಲ್ಲಿ ಬುಧವಾರ ಜಿಲ್ಲಾ ಸರ್ವೋದಯ ಮಂಡಲದ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಹೋರಾಟಗಾರ ಟಿಪ್ಪು ಸುಲ್ತಾನ್ ಒಬ್ಬ ಪರೋಪಕಾರಿ. 1799ರಲ್ಲಿ ನಡೆದ 4ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಸೋಲದಿದ್ದರೆ ಮಹದಾಯಿಗಾಗಿ ಬೇಡಬೇಕಿರಲಿಲ್ಲ' ಎಂದರು.

ಕರ್ನಾಟಕ ಶ್ರೇಷ್ಠನಾಡಾಗಿ ಪರಿವರ್ತನೆಯಾಗುತ್ತಿತ್ತು. ಅವನು ಹಿಂದೂ ವಿರೋಧಿಯಾಗಿದ್ದರೆ, ಆತನ ಅರಮನೆಯ ಪಕ್ಕದಲ್ಲಿಯೇ ಶ್ರೀರಂಗನಾಥ ದೇವಾಲಯ ನೆಲೆಗೊಳ್ಳುತ್ತಿರಲಿಲ್ಲ, ಈ ಬಗ್ಗೆ ತಿಳಿವಳಿಕೆ ಇಲ್ಲದವರ ಟೀಕೆ ಸರಿಯಲ್ಲ, ಇಲ್ಲಸಲ್ಲದ ವಿಷಯಗಳಿಗೆ ತಲೆಕೆಡಿಸಿಕೊಳ್ಳುವ ಬದಲು, ಸೌಹಾರ್ದ ಸಮಾಜ ಕಟ್ಟುವ ಕೆಲಸ ಸರ್ವೋದಯ ಅನುಯಾಯಿಗಳಿಂದ ನಡೆಯಬೇಕು ಎಂದರು.



**ತುಮಕೂರು ಗ್ರಾಮಾಂತರದ ಸಿದ್ಧಗಂಗಾ ಮಠದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ನಾಡೋಜ ಡಾ.ಪಾಟೀಲ್ ಪುಟ್ಟಪ್ಪ ಮಾತನಾಡಿದರು.**

ಎರಡು ದಿನ ನಡೆದ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಸಂಪೂರ್ಣ ಪಾನ ನಿಷೇಧಕ್ಕೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗಿದೆ. ಕರ್ನಾಟಕವನ್ನು ಆಳಿದ ಸರಕಾರಗಳ ಮೇಲೆ ಈ ನಿಟ್ಟಿನಲ್ಲಿ ಒತ್ತಡ ಹೆಚ್ಚಬೇಕಾಗಿದೆ. ರಾಜ್ಯದಲ್ಲಿ ಸಂಪೂರ್ಣ ಪಾನ ನಿಷೇಧ ಜಾರಿಗೆ ತಂದ ಗಂಡಸು ಎಂದರೆ ಟಿಪ್ಪು ಸುಲ್ತಾನ್. ಸೇಲಂ, ಕೊಯಮುತ್ತೂರಿನಿಂದ ಗೋವಾದವರೆಗೆ ಹರಡಿದ್ದ ವಿಶಾಲ ಕರ್ನಾಟಕದಲ್ಲಿ ಸಂಪೂರ್ಣ ಪಾನ ನಿಷೇಧವಿತ್ತು. ಅಲ್ಲದೆ ಕೆಲವರು ಹೇಳುವಂತೆ ಹಿಂದೂಗಳನ್ನು ಇಸ್ಲಾಂಗೆ ಮತಾಂತರ ಮಾಡುತ್ತಿದ್ದ ಎಂಬುದು ಸಹ ಸುಳ್ಳು, ಇದು ನಿಜವೇ ಆದರೆ ಅವರ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ದಿವಾನ್ ಪೂರ್ಣಯ್ಯ ಏಕೆ ಮತಾಂತರವಾಗಲಿಲ್ಲ, ಆತನ ಆಳ್ವಿಕೆಗೆ ಒಳಪಟ್ಟ ಉತ್ತರ ಕರ್ನಾಟಕದ ಜನತೆ ಏಕೆ ಮುಸ್ಲಿಮರಾಗಿ ಬದಲಾಗಲಿಲ್ಲ ಎಂದು ಪ್ರಶ್ನಿಸಿದರು.

ಸರ್ವೋದಯ ಸಮಾಜ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ. ಪಿ.ಕೃಷ್ಣ, ಸರಕಾರ ನಾನಾ ಭಾಗ್ಯಗಳ ಮೂಲಕ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ. ಇದು ಗಾಂಧಿಜೀ ಅವರ ಶ್ರಮ ಸಂಸ್ಕೃತಿಯ ತತ್ವಕ್ಕೆ ವಿರುದ್ಧವಾಗಿದೆ. ಎಲ್ಲರೂ ದುಡಿದು ತಿನ್ನಬೇಕೆಂಬುದು ಗಾಂಧೀಜಿ ಅವರ ತತ್ವವಾಗಿತ್ತು. ಸಂಸದೀಯ ಕೆಲಸಗಳಿಗಿಂತ ರಚನಾತ್ಮಕ ಕೆಲಸಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದ ಗಾಂಧೀಜಿ, ಜನರ ನಡುವೆ ಇದ್ದ ಸಮುದಾಯವನ್ನು ಕಟ್ಟಬೇಕೆಂದು ಬಲವಾಗಿ ನಂಬಿದ್ದರು. ಭಾರತೀಯರು ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವನ್ನೇ ಪಡೆದಿದ್ದು, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ವಾತಂತ್ರ್ಯ ಲಭ್ಯವಾಗಬೇಕು ಎಂಬುದು ಗಾಂಧೀಜಿ ಪರಿಕಲ್ಪನೆಯಾಗಿತ್ತು. ಅವರ ಕನಸಿನ ಸ್ವಾತಂತ್ರ್ಯವನ್ನು ಪಡೆಯಲು ನಾವೆಲ್ಲರೂ ಪ್ರಯತ್ನಿಸಬೇಕು ಎಂದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಸರ್ವೋದಯ ಮನುಷ್ಯನ ಜೀವನ ಪರಿವರ್ತಿಸಬಲ್ಲ ಒಂದು ಪರಿಕಲ್ಪನೆ. ಸಮಾಜಕ್ಕೋಸ್ಕರ ಬದುಕಬೇಕು ಎಂಬ ಮನೋಭಾವವನ್ನು ಮೂಡಿಸುತ್ತದೆ. ನಮ್ಮ ಕೈಯಲ್ಲಿ ಶಕ್ತಿ ಇರುವಷ್ಟು ದಿನ ಸಮಾಜಕ್ಕಾಗಿ ದುಡಿಯೋಣ ಎಂದರು.

ಕಾರ್ಯಕ್ರಮದಲ್ಲಿ ಸರ್ವೋದಯ ಸಮಾಜದ ಜಿಲ್ಲಾಧ್ಯಕ್ಷ ಬಸವಯ್ಯ, ಪತ್ರಿಕೋದ್ಯಮಿ ಎಸ್.ನಾಗಣ್ಣ ಸರ್ವೋದಯ ಸಮಾಜದ ರಾಜ್ಯಾಧ್ಯಕ್ಷ ನರಸಿಂಹಯ್ಯ, ರಾಜ್ಯ ಕಾರ್ಯದರ್ಶಿ ಡಾ.ಎಚ್.ಎಸ್.ಸುರೇಶ್, ಜಿಲ್ಲಾ ಕಾರ್ಯದರ್ಶಿ ಪುಟ್ಟಕಾಮಣ್ಣ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಗುರುವಾರ 1 ಫೆಬ್ರವರಿ 2018 • 1 FEBRUARY 2018

# ರಾಜಕಾರಣಿಗಳು ಕೇವಲ ಭಾಷಣಕ್ಕಷ್ಟೇ ಸೀಮಿತ

ವಿಜಯವಾಣಿ ಚಿತ್ರ



ತುಮಕೂರಿನ ಶ್ರೀ ಸಿದ್ದಗಂಗಾ ಮಠದಲ್ಲಿ ಕರ್ನಾಟಕ ಸರ್ವೋದಯ ಮಂಡಲ ಆಯೋಜಿಸಿದ್ದ ರಾಜ್ಯಮಟ್ಟದ ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನ ಸಮಾರೋಪದಲ್ಲಿ ನಾಡೋಜ ಪಾಟೀಲ್ ಪುಟ್ಟಪ್ಪ ಮಾತನಾಡಿದರು.

□ ವಿಜಯವಾಣಿ ಸುದ್ದಿಜಾಲ ತುಮಕೂರು

ರಾಜಕಾರಣಿಗಳು ಕೇವಲ ಭಾಷಣ ಪ್ರಿಯರೇ ಹೊರತು ನುಡಿದಂತೆ ನಡೆಯುವರು ಯಾರೂ ಇಲ್ಲ ಎಂದು ನಾಡೋಜ ಡಾ.ಪಾಟೀಲ್ ಪುಟ್ಟಪ್ಪ ಹೇಳಿದರು. ಶ್ರೀ ಸಿದ್ದಗಂಗಾ ಮಠದಲ್ಲಿ ಕರ್ನಾಟಕ ಸರ್ವೋದಯ ಮಂಡಲ ಆಯೋಜಿಸಿದ್ದ ರಾಜ್ಯಮಟ್ಟದ ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನದ ಸಮಾರೋಪದಲ್ಲಿ ಮಾತನಾಡಿದರು.

ಸರಳತೆ ಬಗ್ಗೆ ಭಾಷಣ ಬಿಗಿಯುವ ಪ್ರಧಾನಿ ನರೇಂದ್ರಮೋದಿಗೆ ಅವರ ಸಂಪುಟದಲ್ಲಿನ ಸಾರಿಗೆ ಮಂತ್ರಿ ಮಗನ ಮದುವೆಗೆ ಸಾವಿರಾರು ಕೋಟಿ ರೂ. ದುಂದು ವೆಚ್ಚ ಮಾಡಿರುವುದು ಕಣ್ಣಿಗೆ ಬೀಳದಿರುವುದು ವಿಪರ್ಯಾಸ ಎಂದರು.

2 ವರ್ಷಗಳಲ್ಲಿ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಪ್ರಧಾನಿ ಮೋದಿ ಮಾತನಾಡುತ್ತಿದ್ದಾರೆ. ಇದೇನು ಕಷ್ಟದ ಕೆಲಸವಲ್ಲ. ಹಳ್ಳಿಗಳಿಂದ ಯುವಕರು ಪಟ್ಟಣಗಳಿಗೆ ಗುಳೆ ಹೋಗುತ್ತಿದ್ದಾರೆ. ಹಳ್ಳಿಗಳಲ್ಲಿ ದುಡಿವ ಜನರೇ ಇಲ್ಲ. ಗುಡಿ ಕೈಗಾರಿಕೆಗಳು ಮುಚ್ಚಿವೆ. ನೂಲುವಿಕೆ ಮತ್ತು ನೇಕಾರಿಕೆ ಮೂಲೆ ಸೇರಿವೆ. ಮಿಲ್‌ನಲ್ಲಿ ತಯಾರಿಸಿದ ಬಟ್ಟೆಗಳನ್ನೆ ಖಾದಿ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರ ವಿರುದ್ಧ ಹೋರಾಡಬೇಕಿದೆ ಎಂದು ಹೇಳಿದರು. ಸಮ್ಮೇಳನದಲ್ಲಿ ಸಂಪೂರ್ಣ ಮದ್ಯಪಾನ ನಿಷೇಧಕ್ಕೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗಿದೆ. ರಾಜ್ಯವನ್ನು ಆಳಿದ ಸರ್ಕಾರಗಳ ಮೇಲೆ ಈ ನಿಟ್ಟಿನಲ್ಲಿ ಒತ್ತಡ ತರಬೇಕಿದೆ. ರಾಜ್ಯದಲ್ಲಿ ಸಂಪೂರ್ಣ ಮದ್ಯಪಾನ ನಿಷೇಧ ಜಾರಿಗೆ ತಂದ ಟಿಪ್ಪು ಸುಲ್ತಾನ್ ಹಿಂದುಗಳನ್ನು ಇಸ್ಲಾಂಗೆ ಮತಾಂತರ ಮಾಡುತ್ತಿದ್ದ ಎಂಬುದು ಸುಳ್ಳು. ನಿಜವೇ ಆದರೆ ಆತನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ದಿವಾನ್ ಪೂರ್ಣಯ್ಯ ಏಕೆ ಮತಾಂತರವಾಗಲಿಲ್ಲ. ಆತನ ಆಳ್ವಿಕೆ ಒಳಪಟ್ಟ ಉತ್ತರ ಕರ್ನಾಟಕದ ಜನತೆ ಏಕೆ ಮುಸ್ಲಿಮರಾಗಲಿಲ್ಲ ಎಂದು ಪ್ರಶ್ನಿಸಿದರು.

> 1799ರಲ್ಲಿ ನಡೆದ 4ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಸೋಲದೇ ಇದ್ದಿದ್ದರೆ ಇಂದು ಮಹಾದಾಯಿ ನೀರಿಗಾಗಿ ನಾವು ಬೇಡುವ ಆಗತ್ಯ ಬರುತ್ತಿರಲಿಲ್ಲ.
> **ನಾಡೋಜ ಪಾಟೀಲ್ ಪುಟ್ಟಪ್ಪ ಹಿರಿಯ ಪತ್ರಕರ್ತ**

ಸಮಾರೋಪ ಭಾಷಣ ಮಾಡಿದ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ.ಪಿ.ಕೃಷ್ಣ, ಸರ್ಕಾರದ ವಿವಿಧ ಭಾಗ್ಯ ಜನರನ್ನು ಸೋಮಾರಿಗಳನ್ನಾಗಿಸಿದ್ದು, ಇದು ಗಾಂಧೀಜಿ ಅವರ ಶ್ರಮ ಸಂಸ್ಕೃತಿ ತತ್ವಕ್ಕೆ ವಿರುದ್ಧವಾಗಿದೆ ಎಂದರು. ಸಮ್ಮೇಳನಾ ಸರ್ವಾಧ್ಯಕ್ಷ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಮನುಷ್ಯನ ಜೀವನ ಪರಿವರ್ತಿಸಬಲ್ಲ ಪರಿಕಲ್ಪನೆ ಸರ್ವೋದಯ. ಸಮಾಜಕೋಸ್ಕರ ಬದುಕಬೇಕು ಎಂಬ ಮನೋಭಾವ ಮೂಡಿಸುತ್ತದೆ. ಶಕ್ತಿ ಇರುವಷ್ಟು ದಿನ ಸಮಾಜಕ್ಕಾಗಿ ದುಡಿಯೋಣ ಎಂದರು. ಸರ್ವೋದಯ ಮಂಡಲ ರಾಜ್ಯಾಧ್ಯಕ್ಷ ಎಲ್.ನರಸಿಂಹಯ್ಯ, ಜಿಲ್ಲಾಧ್ಯಕ್ಷ ಎಂ.ಬಸವಯ್ಯ, ಪತ್ರಿಕೋದ್ಯಮಿ ಎಸ್.ನಾಗಣ್ಣ, ರಾಜ್ಯ ಕಾರ್ಯದರ್ಶಿ ಡಾ.ಎಚ್.ಎಸ್.ಸುರೇಶ್, ಜಿಲ್ಲಾ ಕಾರ್ಯದರ್ಶಿ ಆರ್.ವಿ.ಪುಟ್ಟಕಾಮಣ್ಣ ಮತ್ತಿತರರು ಉಪಸ್ಥಿತರಿದ್ದರು.


ಪ್ರಜಾವಾಣಿ

ಗುರುವಾರ ○ ಫೆಬ್ರುವರಿ 1, 2018

### ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಡಾ.ಪಾಟೀಲ ಪುಟ್ಟಪ್ಪ

# ಮದ್ಯ ನಿಷೇಧ: ಧೈರ್ಯ ಮಾಡದ ಸರ್ಕಾರ

ಪ್ರಜಾವಾಣಿ ವಾರ್ತೆ



ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಪಾಟೀಲ್ ಪುಟ್ಟಪ್ಪ ಮಾತನಾಡಿದರು. ಎಲ್‌.ನರಸಿಂಹಯ್ಯ, ಎಂ.ಬಸವಯ್ಯ, ವೂಡೇ ಪಿ.ಕೃಷ್ಣ, ಎಚ್‌.ಎಸ್‌.ದೊರೆಸ್ವಾಮಿ, ಎಸ್‌.ನಾಗಣ್ಣ ಇದ್ದರು

ತುಮಕೂರು: ಆಡಳಿತಕ್ಕೆ ಬಂದ ಸರ್ಕಾರಗಳೆಲ್ಲ ಮದ್ಯಪಾನ ನಿಷೇಧದ ಬಗ್ಗೆ ಹೇಳಿಕೊಂಡು ಬಂದಿವೆ. ನಿಷೇಧ ಮಾಡುವ ಧೈರ್ಯವನ್ನು ಯಾವ ಸರ್ಕಾರಗಳೂ ಮಾಡಿಲ್ಲ. ಟಿಪ್ಪು ಸುಲ್ತಾನ್ ಆಡಳಿತದಲ್ಲಿ ಮಾತ್ರ ಮದ್ಯಪಾನ ನಿಷೇಧವಿತ್ತು' ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಪಾಟೀಲ ಪುಟ್ಟಪ್ಪ ಹೇಳಿದರು.

ಬೆಂಗಳೂರು ಸರ್ವೋದಯ ಮಂಡಲವು ನಗರದ ಸಿದ್ಧಗಂಗಾಮಠದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನ ಮತ್ತು ಸರ್ವೋದಯ ದಿನಾಚರಣೆ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಗುಡಿ ಕೈಗಾರಿಕೆಗಳು ನಶಿಸಿ ಹೋಗುತ್ತವೆ. ಇವುಗಳೆಲ್ಲವೂ ಪುನಶ್ಚೇತನವಾಗಬೇಕಾದರೆ ಗಾಂಧೀಜಿಯವರ ಸರ್ವೋದಯ ಪರಿಕಲ್ಪನೆಯ ಎಲ್ಲರ ಮನದಲ್ಲೂ ದಟ್ಟವಾಗಿ ಬೇರೂರಬೇಕು' ಎಂದು ಹೇಳಿದರು.

ಸಮಾರೋಪ ಭಾಷಣ ಮಾಡಿದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, 'ರಾಜ್ಯ ಸರ್ಕಾರವು ಅನ್ನಭಾಗ್ಯ ಯೋಜನೆ ಸೇರಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಆದರೆ, ಮದ್ಯಪಾನ ನಿಷೇಧ ಮಾಡಿಲ್ಲ' ಎಂದು ಹೇಳಿದರು.

'ಸರ್ಕಾರಕ್ಕೆ ವರ್ಷಕ್ಕೆ ₹ 18 ಸಾವಿರ ಕೋಟಿ ಆದಾಯ ಲಭಿಸುತ್ತಿದೆ. ಬಿಹಾರ ರಾಜ್ಯದಲ್ಲಿ ಅಲ್ಲಿನ ಸರ್ಕಾರಕ್ಕೆ ₹ 5 ಸಾವಿರ ಕೋಟಿ ಆದಾಯ ಬರುತ್ತದೆ. ಅಲ್ಲಿನ ಮಹಿಳೆಯರು ಸಂಘಟಿತ ಹೋರಾಟದ ಫಲವಾಗಿ ಅಲ್ಲಿ ಮದ್ಯಪಾನ ನಿಷೇಧವಾಗಿದೆ' ಎಂದು ತಿಳಿಸಿದರು.

ಸರ್ವೋದಯ ಸಂಘಟನೆ ಜಿಲ್ಲಾ ಘಟಕ ಅಧ್ಯಕ್ಷ ಎಂ.ಬಸವಯ್ಯ ಮಾತನಾಡಿ, ' ಸರ್ಕಾರದ ಅನ್ನಭಾಗ್ಯ ಯೋಜನೆ ಸೇರಿದಂತೆ ಅನೇಕ ಯೋಜನೆಗಳು ಸೋಮಾರಿಗಳನ್ನು ಸೃಷ್ಟಿಸಿವೆ. ಸರ್ಕಾರಕ್ಕೆ ಜನರ ಬಗ್ಗೆ ನಿಜವಾದ ಕಾಳಜಿ ಇದ್ದರೆ ಮದ್ಯಪಾನ ಮಾರಾಟ, ಮೀಟರ್ ಬಡ್ಡಿ ದಂಧೆಯನ್ನು ಕಟ್ಟುನಿಟ್ಟಾಗಿ ನಿಷೇಧ ಮಾಡಬೇಕು' ಎಂದು ಒತ್ತಾಯಿಸಿದರು.

ಸರ್ವಾಧ್ಯಕ್ಷತೆ ವಹಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಎಚ್.ಎಸ್.ದೊರೆಸ್ವಾಮಿ ಮಾತನಾಡಿ, 'ಸರ್ವೋದಯ ಚಳವಳಿ ದಾನವನನ್ನು ಮಾನವನನ್ನಾಗಿ ಮಾಡುತ್ತದೆ. ಇಂತಹ ಅನೇಕ ಉದಾಹರಣೆಗಳಿವೆ' ಎಂದು ಹೇಳಿದರು.

ಸರ್ವೋದಯ ಮಂಡಲ ರಾಜ್ಯ ಘಟಕ ಅಧ್ಯಕ್ಷ ಎಲ್. ನರಸಿಂಹಯ್ಯ, ಕಾರ್ಯದರ್ಶಿ ಡಾ.ಎಚ್.ಎಸ್.ಸುರೇಶ್, ಜಿಲ್ಲಾ ಘಟಕದ ಕಾರ್ಯದರ್ಶಿ ಆರ್. ವಿ.ಪುಟ್ಟಕಾಮಣ್ಣ, ಪತ್ರಕರ್ತ ಎಸ್.ನಾಗಣ್ಣ ವೇದಿಕೆಯಲ್ಲಿದ್ದರು.

### ಮುಖ್ಯಾಂಶಗಳು


- ಗುಡಿ ಕೈಗಾರಿಕೆಗಳು ಪುನಶ್ಚೇತನವಾಗಲಿ
- ಸೋಮಾರಿಗಳನ್ನು ಸೃಷ್ಟಿಸಿದ ಸರ್ಕಾರದ ಯೋಜನೆ
- ಮದ್ಯಪಾನ ನಿಷೇಧಕ್ಕೆ ಮುಂದಾಗಲಿ

### ಮೋದಿ ಸರ್ಕಾರದಲ್ಲೇ ಆಡಂಬರದ ಸಚಿವರು

'ಪ್ರಧಾನಿ ನರೇಂದ್ರ ಮೋದಿ ಅವರು ಮಹಾತ್ಮ ಗಾಂಧೀಜಿಯವರ ಸರಳ ಜೀವನ, ತತ್ವ ಚಿಂತನೆಗಳ ಬಗ್ಗೆ ಮಾತನಾಡುತ್ತಾರೆ. ಆದರೆ, ಅವರ ಸರ್ಕಾರದಲ್ಲೇ ಒಬ್ಬ ಸಚಿವರು ತಮ್ಮ ಮಗಳ ಮದುವೆಗೆ 20 ವಿಮಾನಗಳನ್ನು ಬಳಸುತ್ತಾರೆ. ಅದ್ಧೂರಿ ಮದುವೆ ಮಾಡುತ್ತಾರೆ. ಮೋದಿಯವರಿಗೆ ತಮ್ಮ ಸುತ್ತಮುತ್ತಲಿರುವವರು ಎಂತಹವರು ಎಂಬುದು ಗೊತ್ತಿಲ್ಲವೇ. ದೇಶದ ಜನರಿಗೆ ಏನು ಸಂದೇಶ ಹೇಳಲು ಹೊರಟಿದ್ದಾರೆ' ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಪಾಪು ಪ್ರಶ್ನಿಸಿದರು.

ಕಸ್ತೂರಿ ಪ್ರಭ

ಫೆಬ್ರವರಿ, 2018



ಅ.ನ.ಕೃ. ಕನ್ನಡ ಸಂಘ ಹಾಗೂ ಶೇಷಾದ್ರಿಪುರಂ ಪ್ರೌಢಶಾಲೆಯ ಸಹಯೋಗದಲ್ಲಿ ರಾಷ್ಟ್ರಕವಿ ಕುವೆಂಪುರವರ 114ನೇ ಹುಟ್ಟುಹಬ್ಬವನ್ನು ಕಾರ್ಯಕ್ರಮ ನಡೆಯಿತು. ಮುಖ್ಯೋಪಾಧ್ಯಾಯರಾದ ಏಕಾಂಬರ, ಡಾ. ಅಶೋಕ್ ಕುಮಾರ್, ಡಾ. ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ, ಶ್ರೀಮತಿ ರಾಣಿ ಗೋವಿಂದರಾಜು, ಎಂ. ತಿಮ್ಮಯ್ಯ ಅಧ್ಯಕ್ಷರಾದ ರು. ಬಸಪ್ಪ ಮತ್ತು ಶಿಶಿರಾ ಚಿತ್ರದಲ್ಲಿದ್ದಾರೆ.

ಪ್ರಜಾವಾಣಿ
ಬುಧವಾರ • ಜನವರಿ 31, 2018



# ಗಾಂಧಿಗೆ ನಮನ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ 'ಸರ್ವೋದಯ ದಿನಾಚರಣೆ'ಯಲ್ಲಿ (ಎಡದಿಂದ) ಗಾಂಧಿ ಭವನದ ಹಿತೈಷಿ ನರಸಿಂಹಯ್ಯ, ಕಾಂಗ್ರೆಸ್ ಮುಖಂಡ ಎಂ.ವಿ.ರಾಜಶೇಖರನ್, ವಿಶ್ರಾಂತ ಕುಲಪತಿ ಓ.ಅನಂತರಾಮಯ್ಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಅಧ್ಯಕ್ಷ ವೂಡೇ ಪಿ.ಕೃಷ್ಣ, ಎಸ್.ಆರ್.ಖುರೇಷಿ ಅವರು ಗಾಂಧಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ಚಿತ್ರ

ಸಂಯುಕ್ತ ಕರ್ನಾಟಕ

ಬುಧವಾರ, 31, ಜನವರಿ, 2018,

# ಅಸಮಾನತೆಯಿಂದ ಸಾಮಾಜಿಕ ಮೌಲ್ಯಕ್ಕೆ ಧಕ್ಕೆ

ಸಂ.ಕ.ಸಮಾಚಾರ ಬೆಂಗಳೂರು

ಸ್ವಾತಂತ್ರ್ಯ ನಂತರ ಗಾಂಧಿಜಿಯವರ ಗ್ರಾಮೋದ್ಯೋಗ ನೀತಿಯನ್ನು ಕಡೆಗಣಿಸಿದ್ದರಿಂದ ಬಡತನ ನಿರ್ಮೂಲನೆ ಸಾಧ್ಯವಾಗಿಲ್ಲ ಎಂದು ಕೇಂದ್ರದ ಮಾಜಿ ಸಚಿವ ಎಂ.ವಿ. ರಾಜಶೇಖರನ್ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ ಸರ್ವೋದಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಜನಸಂಖ್ಯೆಯಲ್ಲಿ ಶೇ.45ರಷ್ಟು ಯುವಕರನ್ನು ಹೊಂದಿದ್ದು ವಿಶ್ವದಲ್ಲಿಯೇ ಅತಿ ಹೆಚ್ಚು ಯುವ ಸಂಪತ್ತನ್ನು ಹೊಂದಿರುವ ದೇಶ ನಮ್ಮದಾಗಿದೆ. ಯುವಕರಿಗೆ ವೃತ್ತಿ ಕೌಶಲ್ಯಗಳ ತರಬೇತಿ ನೀಡಿ, ಉದ್ಯೋಗ ಸೃಷ್ಟಿಸಬೇಕೆಂದರು.

ಭಾರತ ವಿಶ್ವದಲ್ಲಿಯೇ ಶಾಂತಿ ಪಾಲನೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವುದಕ್ಕೆ ಗಾಂಧೀಜಿಯವರ ಕೊಡುಗೆ ಅಪಾರ. ಪಶ್ಚಿಮ ಬಂಗಾಳದಲ್ಲಿ ಮತೀಯ ದ್ವೇಷದಲ್ಲಿ ಸಿಲುಕಿದ್ದ ಜನರನ್ನು ಕಾಪಾಡಲು ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದರು. ಸ್ವಾತಂತ್ರ್ಯ ಪಡೆಯುವುದಕ್ಕೆ ಅಹಿಂಸೆ ಸೂಕ್ತ ಮಾರ್ಗ ಎಂದು ನಂಬಿದವರು. ಯಾವುದೇ ಒಂದು ದೇಶದ ಗಣ್ಯವ್ಯಕ್ತಿ ಸತ್ತಾಗ, ವಿಶ್ವಸಂಸ್ಥೆಯಲ್ಲಿ ಸತ್ತ ವ್ಯಕ್ತಿಯ ದೇಶದ ಬಾವುಟವನ್ನು ಮಾತ್ರ ಅರ್ಧಕ್ಕೆ ಇಳಿಸಲಾಗುತ್ತಿತ್ತು. ಆದರೆ, ಗಾಂಧೀಜಿಯವರು ಸತ್ತಾಗ ವಿಶ್ವಸಂಸ್ಥೆ ಕಚೇರಿಯಲ್ಲಿ ಎಲ್ಲ ದೇಶಗಳ ಬಾವುಟಗಳನ್ನು ಅರ್ಧಕ್ಕೆ ಇಳಿಸುವ ಮೂಲಕ ಗೌರವ ಸಲ್ಲಿಸಿದ್ದರು. ಅವರ ಜೀವನ ಸಂದೇಶಗಳ ಬಗ್ಗೆ ಮಾತನಾಡಲು ಇಳಿವಯಸ್ಸಿನಲ್ಲಿಯೂ ಹುಮ್ಮಸ್ಸು ಬರುತ್ತದೆ ಎಂದು ಹೇಳಿದರು.



ಗಾಂಧಿ ಭವನದಲ್ಲಿ ನಡೆದ ಸರ್ವೋದಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಕೇಂದ್ರದ ಮಾಜಿ ಸಚಿವ ಎಂ.ವಿ.ರಾಜಶೇಖರನ್ ಪುಷ್ಪನಮನ ಸಲ್ಲಿಸಿದರು.

ವಿಜ್ಞಾನ, ತಂತ್ರಜ್ಞಾನ, ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಿದ್ದೇವೆ. ಆದರೆ, ಅಸಮಾನತೆ, ಅಸ್ಪೃಶ್ಯತೆ ಆಚರಣೆ ಇನ್ನು ಜೀವಂತವಾಗಿದ್ದು, ಸಾಮಾಜಿಕ ಮೌಲ್ಯಗಳು ಪಾತಾಳಕ್ಕಿಳಿಯುತ್ತಿವೆ ಎಂದು ವಿಷಾದಿಸಿದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಚ್.ಸಿ. ರುದ್ರಪ್ಪ ಮಾತನಾಡಿ, ಮನ ಪರಿವರ್ತನೆಯಾಗದೇ ಮದ್ಯಪಾನ ನಿಷೇಧಿಸಲು ಸಾಧ್ಯವಿಲ್ಲ ಎಂದು ಗಾಂಧೀಜಿ ಹೇಳಿದ್ದರು. ಜನರ ಮನ ಪರಿವರ್ತನೆ ಮಾಡುವಂತಹ ಕೆಲಸ ಗ್ರಾಮ ಮಟ್ಟದಿಂದ ಕೈಗೊಳ್ಳಲಾಗುತ್ತಿದೆ ಎಂದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ, ತುಮಕೂರು ವಿವಿ ನಿವೃತ್ತ ಕುಲಪತಿ ಪ್ರೊ. ಓ.ಅನಂತರಾಮಯ್ಯ, ನರಸಿಂಹಯ್ಯ ಮತ್ತಿತರರಿದ್ದರು.

ವಾರ್ತಾ ಭಾರತಿ


# ಮೋದಿ ಭಾಷಣ ಕೇವಲ ಬೂಟಾಟಿಕೆ: ಪಾಟೀಲ ಪುಟ್ಟಪ್ಪ

## ತುಮಕೂರು: ರಾಜ್ಯ ಮಟ್ಟದ 2ನೇ ಸರ್ವೋದಯ ಸಮಾಜ ಸಮ್ಮೇಳನಕ್ಕೆ ತೆರೆ

ತುಮಕೂರು, ಜ.31: ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಸರಳತೆಯ ಬಗ್ಗೆ ಉದ್ದುದ್ದ ಭಾಷಣ ಮಾಡುತ್ತಿರುವುದು ಕೇವಲ ಬೂಟಾಟಿಕೆಯಾಗಿದೆ. ತಮ್ಮ ಸಂಪುಟದಲ್ಲಿರುವ ಸಾರಿಗೆ ಮಂತ್ರಿ ಮಗನ ಮದುವೆಗೂ ಸಾವಿರಾರು ಕೋಟಿ ರೂ. ಖರ್ಚು ಮಾಡಿರುವುದು ಅವರ ಕಣ್ಣಿಗೆ ಬೀಳದಿರುವುದು ವಿಪರ್ಯಾಸ ಎಂದು ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಟೀಕಿಸಿದ್ದಾರೆ.

ನಗರದ ಶ್ರೀಸಿದ್ಧಗಂಗಾ ಮಠದಲ್ಲಿ ಕರ್ನಾಟಕ ಸರ್ವೋದಯ ಮಂಡಲ ಬೆಂಗಳೂರು ಆಯೋಜಿಸಿದ್ದ ರಾಜ್ಯ ಮಟ್ಟದ ಎರಡನೇ ಸರ್ವೋದಯ ಸಮಾಜ ಸಮ್ಮೇಳನದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಇಂದಿನ ರಾಜಕಾರಣಿಗಳು ಕೇವಲ ಭಾಷಣ ಪ್ರಿಯರಾಗಿದ್ದಾರೆಯೇ ಹೊರತು, ನುಡಿದಂತೆ ನಡೆಯುವ ಯಾವೊಬ್ಬ ರಾಜಕಾರಣಿಯನ್ನು ನೋಡಲು ಸಾಧ್ಯವಾಗುತ್ತಿಲ್ಲ ಎಂದರು.

ಎರಡು ದಿನಗಳ ಕಾಲ ನಡೆದ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಸಂಪೂರ್ಣ ಪಾನ ನಿಷೇಧಕ್ಕೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗಿದೆ. ಕರ್ನಾಟಕವನ್ನು ಆಳಿದ ಸರಕಾರಗಳ ಮೇಲೆ ಈ ನಿಟ್ಟಿನಲ್ಲಿ ಒತ್ತಡ ಹೇರಬೇಕಾಗಿದೆ ಎಂದ ಅವರು, ರಾಜ್ಯದಲ್ಲಿ ಸಂಪೂರ್ಣ ಪಾನ ನಿಷೇಧ ಜಾರಿಗೆ ತಂದ ಗಂಡಸು ಎಂದರೆ ಟಿಪ್ಪು ಸುಲ್ತಾನ್, ಸೇಲಂ, ಕೊಯಮುತ್ತೂರಿನಿಂದ ಗೋದಾವರಿವರೆಗೆ ಹರಡಿದ್ದ ವಿಶಾಲ ಕರ್ನಾಟಕದಲ್ಲಿ ಸಂಪೂರ್ಣ ಪಾನ ನಿಷೇಧವಿತ್ತು. ಅಲ್ಲದೆ, ಕೆಲವರು ಹೇಳುವಂತೆ ಹಿಂದೂಗಳನ್ನು ಇಸ್ಲಾಂಗೆ ಮತಾಂತರ ಮಾಡುತ್ತಿದ್ದ ಎನ್ನುವುದು ಸಹ ಸುಳ್ಳು.



ಇದು ನಿಜವೇ ಆದರೆ, ಅವರ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ದಿವಾನ್ ಪೂರ್ಣಯ್ಯ ಏಕೆ ಮತಾಂತರವಾಗಲಿಲ್ಲ. ಆತನ ಆಳ್ವಿಕೆ ಒಳಪಟ್ಟ ಉತ್ತರ ಕರ್ನಾಟಕದ ಜನತೆ ಏಕೆ ಮುಸ್ಲಿಂರಾಗಿ ಬದಲಾಗಲಿಲ್ಲ ಎಂದು ಪ್ರಶ್ನಿಸಿದರು.

ಸರ್ವೋದಯ ಸಮಾಜ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ.ಪಿ.ಕೃಷ್ಣ, ಸರಕಾರ ವಿವಿಧ ಭಾಗ್ಯಗಳ ಮೂಲಕ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ. ಇದು ಗಾಂಧೀಜಿ ಅವರ ಶ್ರಮ ಸಂಸ್ಕೃತಿಯ ತತ್ವಕ್ಕೆ ವಿರುದ್ಧವಾಗಿದೆ. ಎಲ್ಲರೂ ದುಡಿದು ತಿನ್ನಬೇಕೆಂಬುವುದು ಗಾಂಧೀಜಿ ಅವರ ತತ್ವವಾಗಿತ್ತು. ಸಂಸದೀಯ ಕೆಲಸಗಳಿಗಿಂತ ರಚನಾತ್ಮಕ ಕೆಲಸಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದ ಗಾಂಧಿ, ಜನರ ನಡುವೆ ಇದ್ದ ಸಮುದಾಯವನ್ನು ಕಟ್ಟಬೇಕೆಂದು ಬಲವಾಗಿ ನಂಬಿದ್ದರು. ಅವರ ಕನಸಿನ ಸ್ವಾತಂತ್ರ್ಯವನ್ನು ಪಡೆಯಲು ನಾವೆಲ್ಲರೂ ಪ್ರಯತ್ನಿಸಬೇಕಿದೆ ಎಂದು ತಿಳಿಸಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮಾತನಾಡಿ, ಸರ್ವೋದಯ ಮನುಷ್ಯನ ಜೀವನ ಪರಿವರ್ತಿಸುವ ಒಂದು ಪರಿಕಲ್ಪನೆ. ಸಮಾಜಕ್ಕೋಸ್ಕರ ಬದುಕಬೇಕು ಎಂಬ ಮನೋಭಾವವನ್ನು ಮೂಡಿಸುತ್ತದೆ. ನಮ್ಮ ಕೈಯಲ್ಲಿ ಶಕ್ತಿ ಇರುವಷ್ಟು ದಿನ ಸಮಾಜಕ್ಕಾಗಿ ದುಡಿಯೋಣ ಎಂದರು.

ಸರ್ವೋದಯ ಸಮಾಜದ ಜಿಲ್ಲಾಧ್ಯಕ್ಷ ಎಂ.ಬಸವಯ್ಯ ಮಾತನಾಡಿದರು. ವೇದಿಕೆಯಲ್ಲಿ ಪತ್ರಿಕೋದ್ಯಮಿ ಎಸ್.ನಾಗಣ್ಣ, ಸರ್ವೋದಯ ಸಮಾಜದ ರಾಜ್ಯಾಧ್ಯಕ್ಷ ಎಲ್.ನರಸಿಂಹಯ್ಯ, ರಾಜ್ಯ ಕಾರ್ಯದರ್ಶಿ ಡಾ.ಎಚ್.ಎಸ್.ಸುರೇಶ್, ಜಿಲ್ಲಾ ಕಾರ್ಯದರ್ಶಿ ಆರ್.ವಿ.ಪುಟ್ಟಕಾಮಣ್ಣ ಮತ್ತಿತರರು ಉಪಸ್ಥಿತರಿದ್ದರು.

> “ಪ್ರಧಾನಿ ನರೇಂದ್ರ ಮೋದಿ ಮುಂದಿನ ಎರಡು ವರ್ಷಗಳಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಮಾತನಾಡುತ್ತಿದ್ದಾರೆ. ಇದು ಕಷ್ಟದ ಕೆಲಸವಲ್ಲ. ಆದರೆ, ಇಂದು ಹಳ್ಳಿಗಳಲ್ಲಿ ದುಡಿವ ಜನರೇ ಇಲ್ಲ. ಇದ್ದ ಗುಡಿ ಕೈಗಾರಿಕೆಗಳ ಮುಚ್ಚಿ, ಯುವಕರು ಪಟ್ಟಣ ಸೇರುತ್ತಿದ್ದಾರೆ. ಗಾಂಧೀಜಿ ರೈತರ ನಂತರ ನೂಲುವವರು ಮತ್ತು ನೇಕಾರರಿಗೆ ಹೆಚ್ಚಿನ ಒತ್ತು ನೀಡಿದ್ದರು. ಈ ಎರಡೂ ವೃತ್ತಿಗಳು ಇಂದು ಮೂಲೆ ಸೇರಿವೆ. ಮಿಲ್ ಬಟ್ಟೆಗಳನ್ನೇ ಖಾದಿ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರ ವಿರುದ್ಧ ಹೋರಾಟ ನಡೆಸಬೇಕಾದ ಅನಿವಾರ್ಯತೆ ಇದೆ.
>
> ■ ಪಾಟೀಲ ಪುಟ್ಟಪ್ಪ, ಹಿರಿಯ ಪತ್ರಕರ್ತ

# ರೈತರ ಬಗ್ಗೆ ಗಮನ ಹರಿಸದ ಮೋದಿ

## ಸರ್ವೋದಯ ಸಮ್ಮೇಳನ ಸಮಾರೋಪದಲ್ಲಿ ಡಾ.ಪಾಟೀಲ ಪುಟ್ಟಪ್ಪ



ಸರ್ವೋದಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಡಾ.ಪಾಟೀಲ ಪುಟ್ಟಪ್ಪ ಮಾತನಾಡಿದರು. ಎಚ್.ಎಸ್.ದೊರೆಸ್ವಾಮಿ, ಎಸ್.ನಾಗಣ್ಣ, ಡಾ.ವೂಡೇ ಪಿ.ಕೃಷ್ಣಪ್ಪ ಎಂ.ಬಸವಯ್ಯ, ಕುಂಡೋಟಿ ನರಸಿಂಹಯ್ಯ ಇತರರು ಭಾಗವಹಿಸಿದ್ದರು.

ತುಮಕೂರು

ನರೇಂದ್ರ ಮೋದಿ ಸ್ವಲ್ಪ ಮನಸ್ಸು ಮಾಡಿದ್ದರೆ ರೈತರ ಉತ್ಪಾದನೆಯನ್ನು ಇಮ್ಮಡಿ ಗೊಳಿಸಬಹುದಾಗಿತ್ತು. ಆದರೆ ಮೋದಿ ಮನಸ್ಸು ಮಾಡುತ್ತಿಲ್ಲ ಎಂದು ನಾಡೋಜ ಡಾ.ಪಾಟೀಲ ಪುಟ್ಟಪ್ಪ ಬೇಸರ ವ್ಯಕ್ತ ಪಡಿಸಿದರು.

ಸಿದ್ದಗಂಗಾಮಠದ ಉದ್ದಾನೇಶ್ವರ ಸಮುದಾಯ ಭವನದಲ್ಲಿ ಕರ್ನಾಟಕ ಸರ್ವೋದಯ ಮಂಡಲ, ಬೆಂಗಳೂರು ವತಿಯಿಂದ ನಡೆದ ರಾಜ್ಯ ಮಟ್ಟದ ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನ 2018 ಕಾರ್ಯಕ್ರಮದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಡಾ.ಪಾಟೀಲ ಪುಟ್ಟಪ್ಪ ಮಾತನಾಡಿದರು.

ಕೇಂದ್ರ ಸಾರಿಗೆ ಸಚಿವರ ಮಗನ ಮದುವೆಗೆ 20 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಇದನ್ನು ಮೋದಿ ಏಕೆ ಗಮನಿಸಲಿಲ್ಲ ಎಂದು ಪ್ರಶ್ನಿಸಿದರು. ದೇಶದಲ್ಲಿ ಸಂಪೂರ್ಣ ಪಾನ ನಿರೋಧವಾಗಬೇಕು ಎಂಬ ಒತ್ತಾಯ ಸರ್ವೋದಯ ಸಮಾಜದಿಂದ ಆಗಬೇಕು ಎಂದು ಹೇಳಿದರು.

ಟಿಪ್ಪು ಸುಲ್ತಾನ್‌ನನ್ನು ಗೌರವಿಸಿದರೆ ಮುಸಲ್ಮಾನರನ್ನು ಗೌರವಿಸಿದಂತೆ ಎಂದು ಅನೇಕರು ತಪ್ಪು ತಿಳಿದಿದ್ದಾರೆ. ಇದರಲ್ಲಿ ತಪ್ಪೇನಿದೆ, ಟಿಪ್ಪು ಕಾಲದಲ್ಲಿ ಗೋವಾ, ಅವನದಾಗಿದ್ದರಿಂದ ಮಹದಾಯಿ ನೀರು ನಮಗೆ ಸುಲಭದಲ್ಲಿ ಸಿಗುತ್ತಿತ್ತು . ಆದರೆ ಇಂದು ಮಹದಾಯಿ ನೀರಿಗಾಗಿ ಹೋರಾಟ ಮಾಡಬೇಕಾಗಿದೆ. ಟಿಪ್ಪು ಬಹುತೇಕರನ್ನು ಮತಾಂತರ ಮಾಡಿದ ಎನ್ನುತ್ತಾರೆ ಆದರೆ ದಿವಾನ್ ಪೂರ್ಣಯ್ಯನವರನ್ನು ದಿವಾನರಾಗಿ ಏಕೆ ಮಾಡಿದ ಮತ್ತು ಶ್ರೀರಂಗ ಪಟ್ಟಣದ ದೇವಸ್ಥಾನವನ್ನು ಏಕೆ ಜೀರ್ಣೋದ್ಧಾರ ಮಾಡಿದ, ಆದ್ದರಿಂದ ಸತ್ಯವನ್ನು ಯೋಚಿಸಬೇಕಾಗಿದೆ ಎಂದು ಹೇಳಿದರು.

ಹತ್ತಿ ನಮ್ಮದು, ನೂಲು ನಮ್ಮದು, ಬಟ್ಟೆ ಮಾತ್ರ ವಿದೇಶಿ ಮಿಲ್‌ನದ್ದು, ಗಾಂಧೀಜಿ ಖಾದಿ ಬಟ್ಟೆ ಮೂಲಕ ಬ್ರಿಟೀಷರಿಗೆ ಬಿಸಿ ಮುಟ್ಟಿಸಿದರು. ಆದರೆ ಈಗ ಹಲವರು ನಕಲಿ ಖಾದಿ ಬಟ್ಟೆ ಮಾರಾಟದಲ್ಲಿ ತೊಡಗಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರ ಗಮನಹರಿಸಬೇಕು.ನಾವು ಕೆಲಸವನ್ನು ಪ್ರೀತಿಸಬೇಕು. ದೇಶಕಟ್ಟುವ ಕಾರ್ಯದಲ್ಲಿ ನಾವು ತೊಡಗಬೇಕು. ಗಾಂಧೀಜಿ ತಮ್ಮನ್ನು ತಾವೇ ಸವೆಸಿಕೊಂಡು ಮಹಾನ್ ಕಾರ್ಯ ಮಾಡಿದ್ದಾರೆ. ಇದನ್ನು ನಾವು ಸ್ಮರಿಸುತ್ತಿಲ್ಲ ಎಂದರು. ಹಣದಿಂದ ಏನನ್ನೂ ಸಾಧಿಸಲಾಗದು. ಹಣದಿಂದ ಸಿಗುವ ಸುಖಕ್ಕಿಂತ ಶ್ರಮದಿಂದ ಸಿಗುವ ಸುಖವೇ ಬೇರೆ. ಆದ್ದರಿಂದ ಆಸ್ತಿಯ ಬಗ್ಗೆ ಜನರು ವ್ಯಾಮೋಹ ಪಡಬಾರದು ಎಂದು ಹೇಳಿದರು.

ಇಂದು ಸರ್ಕಾರದಿಂದ ಸಿಗುವ ಆಸ್ತಿ ಮತ್ತು ಪ್ರಶಸ್ತಿಗೆ ಲಾಬಿ ಮಾಡುವವರೂ ಇದ್ದಾರೆ. ನಾನು ಯಾವ ಆಸ್ತಿಯನ್ನೂ ಸರ್ಕಾರದಿಂದ ಪಡೆಯಲಿಲ್ಲ, ಯಾವ ಪ್ರಶಸ್ತಿಗೂ ಆಸೆ ಪಡಲಿಲ್ಲ ಎಂದರು. ಇಂದು ಹಳ್ಳಿಯ ಕಸುಬುಗಳೆಲ್ಲ ಹಾಳಾಗಿ ಹೋಗಿವೆ. ಎಲ್ಲರೂ ನಗರದ ಕೆಲಸಗಳನ್ನು ಅವಲಂಬಿಸಿದ್ದಾರೆ. ಗುಡಿ >>> 7ನೇ ಪುಟಕ್ಕೆ

## ರೈತರ ಬಗ್ಗೆ ಗಮನ ಹರಿಸದ ಮೋದಿ

>>>1ನೇ ಪುಟದಿಂದ ಕೈಗಾರಿಕೆಗಳೆಲ್ಲಾ ಹಾಳಾಗಿವೆ. ಎಲ್ಲರಿಗೂ ಅಮೇರಿಕಾ, ಇಂಗ್ಲೆಂಡ್ ವಸ್ತುಗಳು ಬೇಕಾಗಿವೆ ಆದ್ದರಿಂದ ಸರ್ವೋದಯ ಸಮಾಜದ ಬಗ್ಗೆ ಆಸಕ್ತಿ ಇರುವವರು ಒಳ್ಳೆಯ ವಿಚಾರಗಳನ್ನು ಪ್ರಚಾರ ಪಡಿಸಬೇಕೆಂದರು.

ಬೆಂಗಳೂರು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣಪ್ಪ ಮಾತನಾಡಿ ಗಾಂಧೀ ಮತ್ತು ಸರ್ವೋದಯದ ಬಗ್ಗೆ ನಾವು ಶಾಲಾ-ಕಾಲೇಜು ಹಂತದಲ್ಲಿ ತಿಳಿಸುವುದರಿಂದ ಯುವ ಸಮೂಹವನ್ನು ಆರೋಗ್ಯವಂತರಾಗಿಸಬಹುದು, ಸರ್ವೋದಯ ಸಮಾಜದ ಮೂಲಕ ರಾಜಕೀಯ ನಾಯಕರಿಗೆ ಹಳ್ಳಿ, ರೈತ ಮತ್ತು ಬಡವರ ಪರ ಇರುವಂತೆ ತಿಳಿಸುವ ಕಾರ್ಯವಾಗಬೇಕೆಂದರು.

ಕರ್ನಾಟಕ ಸರ್ವೋದಯ ಮಂಡಲ, ಬೆಂಗಳೂರು ಸಮಿತಿ ಹೊಸದಾಗಿ 7 ತಾಲ್ಲೂಕುಗಳಲ್ಲಿ ತನ್ನ ಪದಾಧಿಕಾರಿಗಳನ್ನು ನೇಮಿಸಿದೆ. ಸಮಾರೋಪ ಸಮಾರಂಭದಲ್ಲಿ ಎಲ್ಲಾ ಗಣ್ಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಹೆಚ್.ಎಸ್.ದೊರೆಸ್ವಾಮಿ, ಪ್ರಜಾ ಪ್ರಗತಿ ದಿನ ಪತ್ರಿಕೆ ಸಂಪಾದಕರಾದ ಎಸ್.ನಾಗಣ್ಣ, ಕರ್ನಾಟಕ ಸರ್ವೋದಯ ಮಂಡಲ,ಬೆಂಗಳೂರು ಸಮಿತಿಯ ರಾಜ್ಯಾಧ್ಯಕ್ಷ ಎಲ್ .ನರಸಿಂಹಯ್ಯ, ರಾಜ್ಯ ಕಾರ್ಯದರ್ಶಿ ಡಾ.ಎಚ್.ಎಸ್.

ಈ ಸಂಜೆ
ಬುಧವಾರ 30 ಜನವರಿ, 2018



ಕುವೆಂಪು ಕಲಾನಿಕೇತನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಂದಿನಿ ಬಡಾವಣೆಯಲ್ಲಿ ನಡೆದ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾಡೋಜ ಡಾ.ಪಾಟೀಲ ಪುಟ್ಟಪ್ಪರವರಿಗೆ ಕರುನಾಡ ಗಾಂಧಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶಾಸಕ ಕೆ.ಗೋಪಾಲಯ್ಯ, ಗಾಂಧಿಭವನದ ಅಧ್ಯಕ್ಷ ಡಾ.ವುಡೆ ಪಿ.ಕೃಷ್ಣ, ಮಾಜಿ ಉಪಮಹಾಪೌರರಾದ ಹೇಮಲತಾ ಗೋಪಾಲಯ್ಯ, ನಿವೃತ್ತ ಐಎಎಸ್ ಅಧಿಕಾರಿ ಡಾ.ಡಿ.ಎಸ್.ಅಶ್ವತ್ಥ್ ಹಾಗೂ ಕುವೆಂಪು ಕಲಾನಿಕೇತನ ಅಧ್ಯಕ್ಷ ಡಿ.ಪ್ರಕಾಶ್ ಉಪಸ್ಥಿತರಿದ್ದರು.

ಈ ಸಂಜೆ
ಮಂಗಳವಾರ, 30-1-2018

# ನಮ್ಮ ದೇಶ ತಂತ್ರಜ್ಞಾನದಲ್ಲಿ ಮೇರು
# ಮಾನವೀಯ ಮೌಲ್ಯಗಳಲ್ಲಿ ಪಾತಾಳ

ಬೆಂಗಳೂರು, ಜ.30- ನಮ್ಮ ದೇಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂದುವರಿದಿದೆ. ಆದರೆ, ಮಾನವೀಯ ಮೌಲ್ಯಗಳಲ್ಲಿ ಪಾತಾಳ ಕಂಡಿದೆ ಎಂದು ಮಾಜಿ ಕೇಂದ್ರ ಸಚಿವ ಎಂ.ವಿ.ರಾಜಶೇಖರನ್ ವಿಷಾದ ವ್ಯಕ್ತಪಡಿಸಿದರು.



ಗಾಂಧಿಭವನದಲ್ಲಿ ಗಾಂಧಿ ಸ್ಮಾರಕ ನಿಧಿ ವತಿಯಿಂದ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬುದ್ಧ, ಬಸವ, ಗಾಂಧಿ ವಿಶ್ವಕ್ಕೆ ಶಾಂತಿ ಬೋಧಿಸಿದ ಮಹಾನ್ ವ್ಯಕ್ತಿಗಳು. ಗಾಂಧಿ ತತ್ತ್ವಗಳನ್ನು ಈಗಿನ ಯುವಕರು ಪಾಲಿಸಬೇಕು ಎಂದು ಅವರು ಕರೆ ನೀಡಿದರು.

ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಯಾದರೆ ದೇಶ ಪ್ರಗತಿಯಾಗುತ್ತದೆ ಎಂಬ ಗಾಂಧೀಜಿಯವರ ಆರ್ಥಿಕ ಕಲ್ಪನೆ ಪಾಲಿಸಿದರೆ ದೇಶ ಮುಂದುವರಿಯುತ್ತದೆ ಎಂದರು.

2001ರ ಜನಗಣತಿ ಪ್ರಕಾರ, 133 ಕೋಟಿ ಜನಸಂಖ್ಯೆ ಅಂದರೆ ಶೇ.82ರಷ್ಟು ಯುವ ಸಮೂಹ ಭಾರತ ದೇಶದಲ್ಲಿದ್ದು, ಯುವ ಸಂಪನ್ಮೂಲ ಹೊಂದಿರುವ ರಾಷ್ಟ್ರ ಎಂದು ಭಾರತ ಗುರುತಿಸಿಕೊಂಡಿದೆ. ಆದ್ದರಿಂದ ಯುವ ಸಮುದಾಯಕ್ಕೆ ಗಾಂಧಿತತ್ತ್ವ ತಲುಪಿದಾಗ ದೇಶ ಬದಲಾಗುತ್ತದೆ ಎಂದರು.

ಗಾಂಧಿ ಸೌತ್ ಆಫ್ರಿಕಾದಿಂದ ಭಾರತಕ್ಕೆ ರೈಲಿನಲ್ಲಿ ಬರುವಾಗ ಭಾರತದ ಸಮಸ್ಯೆಗಳನ್ನು ಕಂಡು ವಿಷಾದ ವ್ಯಕ್ತಪಡಿಸಿದ್ದರು. ಅಂದು ಚರಕ ಆರ್ಥಿಕ ಚಿಹ್ನೆಯಾಗಿತ್ತು. ಇದನ್ನು ಈಗ ಬಳಸಿಕೊಂಡರೆ ಆರ್ಥಿಕ ಸುಧಾರಣೆ ಮಾಡಬಹುದು ಎಂದು ಸಲಹೆ ನೀಡಿದರು.

ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಚ್.ಸಿ.ರುದ್ರಪ್ಪ ಮಾತನಾಡಿ, ಸಂಯಮ ಮಂಡಳಿ ಗಾಂಧಿ ಹುಟ್ಟುಹಾಕಿದ್ದ ಮಂಡಳಿಯಾಗಿದ್ದು, ಗಾಂಧಿ ಒಂದು ದಿನವಾದರೂ ಅಧಿಕಾರಕ್ಕೆ ಬಂದಿದ್ದರೆ ಮದ್ಯಪಾನ ಸಂಪೂರ್ಣವಾಗಿ ನಿಷೇಧವಾಗುತ್ತಿತ್ತು. ಜವಾಹರ್‌ಲಾಲ್ ನೆಹರು ಅಧಿಕಾರದಲ್ಲಿದ್ದಾಗ ಮದ್ಯಪಾನ ಅಧಿಕೃತವಾಗಿರಲಿಲ್ಲ. ಆದರೆ, ಲಾಲ್‌ಬಹದ್ದೂರ್ ಶಾಸ್ತ್ರಿ ಪ್ರಧಾನಮಂತ್ರಿಯಾಗಿದ್ದಾಗ ಅವರ ಮೇಲೆ ಕೆಲವರು ಒತ್ತಡ ಹಾಕಿ ಭಾರತದಲ್ಲಿ ಶಾಶ್ವತವಾಗಿ ನೆಲೆಯೂರುವಂತೆ ಮಾಡಿದರು ಎಂದು ತಿಳಿಸಿದರು.

ಕುಡಿತದಿಂದ ನಮ್ಮ ಆಸೆ-ಕನಸುಗಳಿಗೆ ಭಂಗವಾಗುತ್ತದೆ. ಒತ್ತಡದಿಂದ ಅನಾರೋಗ್ಯ ಉಲ್ಬಣಗೊಳ್ಳುತ್ತದೆ. ಇದರಿಂದ ಮೃತ್ಯು ಎದುರಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ನರಸಿಂಹಯ್ಯ, ತುಮಕೂರು ವಿವಿಯ ವಿಶ್ರಾಂತ ಕುಲಪತಿ ಅನಂತರಾಮಯ್ಯ, ವೂಡೆ ಪಿ.ಕೃಷ್ಣ ಮುಂತಾದವರು ಇದ್ದರು.

ಅಬಕಾರಿ ನಿರೀಕ್ಷಕರು, ಗ್ರೇಡ್-2 ತಹಶೀಲ್ದಾರ್, ಕೆಎಸ್‌ಬಿಸಿಎಲ್ ಡಿಪೋ ಅಸಿಸ್ಟೆಂಟ್ ಮ್ಯಾನೇಜರ್ ಸಮಕ್ಷಮದಲ್ಲಿ ಗೂಳೂರು ಕೆರೆಯ ಸರಕಾರಿ ಜಾಗದಲ್ಲಿ ನಾಶಪಡಿಸಲಾಗಿದೆ. ಖಾಲಿ ಬಾಟಲ್, ಪ್ಲಾಸ್ಟಿಕ್ ಕ್ಯಾನ್ ಮತ್ತು ರಟ್ಟಿನ ಪೆಟ್ಟಿಗೆಗಳ ವಿಲೇವಾರಿಯಿಂದ ಬಂದ 11,600 ರೂಗಳನ್ನು ಸರಕಾರಕ್ಕೆ ಪಾವತಿಸಲಾಗಿದೆ ಎಂದು ಅಬಕಾರಿ ನಿರೀಕ್ಷಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಂಟೆಗೆ ನಗರದ ಟೌನ್‌ಹಾಲ್ ವೃತ್ತದಿಂದ ಸಮ್ಮೇಳನದ ಸಭಾಂಗಣದವರೆಗೆ ವೈಭವದ ಕನ್ನಡ ಜಾಗೃತಿ ಮೆರವಣಿಗೆ ನಡೆಯಲಿದೆ. ಈ ವೇಳೆ ಸಮ್ಮೇಳನಾಧ್ಯಕ್ಷರನ್ನು ನಾನಾ ಕಲಾತಂಡಗಳು, ಪೂರ್ಣಕುಂಭದೊಂದಿಗೆ ಮೆರವಣಿಗೆ ಮೂಲಕ ಸಮ್ಮೇಳನಕ್ಕೆ ಕರೆತರಲಾಗುವುದು. ಕನ್ನಡಪರ ಸಂಘಟನೆಗಳು, ಸರಕಾರಿ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಈ ಸಂಭ್ರಮಕ್ಕೆ ಸಾಕ್ಷಿಯಾಗಲಿದ್ದಾರೆ. ಬೆಳಗ್ಗೆ 11.30ಕ್ಕೆ ಸಮ್ಮೇಳನ ಉದ್ಘಾಟನೆಯಾಗಲಿದ್ದು, ಫೆ.1 ಮತ್ತು 2ರಂದು ಎರಡು ದಿನಗಳ ಕಾಲ ಕನ್ನಡದ ಹಬ್ಬ ಮೇಳೈಸಲಿದೆ.

ವಿಶೇಷ ಉಪನ್ಯಾಸ
- ಉಪನ್ಯಾಸ: ಎಂ.ಜಿ.ಸಿದ್ದರಾಮಯ್ಯ
- ವಿಷಯ: ಕೇಂದ್ರ ಕಲಾಪಗೆ ಜಿಲ್ಲೆಯ ಕೊಡುಗೆ
- ಉಪನ್ಯಾಸ: ಟಿ.ಆರ್. ಅನಂತರಾಮು
- ವಿಷಯ: ವಿಜ್ಞಾನ ಕ್ಷೇತ್ರಕ್ಕೆ ಜಿಲ್ಲೆಯ ಕೊಡುಗೆ

- ವಿಷಯ: ಜಲಸಂಬಂಧಿ ಸಮಸ್ಯೆಗಳು
- ಸಂಜೆ 7ಕ್ಕೆ
- ಸಂಸ್ಕೃತಿ ಸೌರಭ- ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ
- ಆಶಯ ನುಡಿ: ಡಾ.ಕಂಟಲಗೆರೆ ಸಣ್ಣಹೊನ್ನಯ್ಯ
- ಅಧ್ಯಕ್ಷತೆ: ಕಲಾಶ್ರೀ ಡಾ. ಲಕ್ಷ್ಮಣದಾಸ್
- ಉದ್ಘಾಟನೆ: ಬಸವರಾಜಪ್ಪ ಅಪ್ಪಸಣ್ಣ

ಕಾರರಲ್ಲಿ ಬಹಳ ಮುಖ್ಯನಾದ ವಚನಕಾರ ಸಿದ್ದರಾಮಣ್ಣ ತುಮಕೂರಿನ ಸಾಕಷ್ಟು ಕಡೆಗಳಲ್ಲಿ ಓಡಾಡಿದ್ದಾನೆ. ಅವನ ತೋರುಗದ್ದುಗೆಗಳು ತುಮಕೂರು ಜಿಲ್ಲೆಯ ಸಾಕಷ್ಟು ಕಡೆಗಳಲ್ಲಿ ಲಭಿಸಿವೆ. ಅವೆಲ್ಲವೂ ಅವನು ಲಿಂಗಾಯತ ಧರ್ಮ ಪ್ರಚಾರ ಮಾಡಿದ್ದರ ಪ್ರತೀಕಗಳು. ವಚನಕಾರರಲ್ಲಿ ಸಿದ್ದರಾಮಣ್ಣನ ವಚನಗಳು, ಕಾಯಕ ಯೋಗ ಮತ್ತು ಶಿವಯೋಗ ಎರಡನ್ನೂ ಕೂಡಾ ಅವಿನಾಭಾವವನ್ನಾಗಿಸಿಕೊಂಡಿರುವ ರೀತಿಯಲ್ಲಿ ಹುಟ್ಟಿರುವಂಥವು. ಅಂತಹ ವಚನಕಾರನಿಂದ ಮೊದಲುಗೊಂಡು ಇತ್ತೀಚಿನವರವರೆಗೆ ಬರೆಯುತ್ತಿರುವ ಉಮಾದೇವಿ, ಶಿಪಟೂರಿನ ಸ್ಮಿತಾ ಗಂಗಾಧರ್ ಅವರಂತಹ ಹೆಣ್ಣುಮಕ್ಕಳವರೆಗೆ ಬೇಕಾದಷ್ಟು ಜನ ಬಂದು ಹೋಗಿದ್ದಾರೆ. ತಿ.ನಂ.ಶ್ರೀ, ಡಿ.ಎಲ್.ಎನ್, ಸಾ.ಶಿ.ಮರುಳಯ್ಯ, ಸಣ್ಣಗುಡ್ಡಯ್ಯ,

**ಹೋರಾಟಗಳ ಕುರಿತು?**

- ರಾಜ್ಯದಲ್ಲಿ ನಡೆದ ರೈತರು, ದಲಿತ ಸಂಘರ್ಷ ಸಮಿತಿಯ ಹೋರಾಟಗಳು, ಬಂಡಾಯ ಹೋರಾಟಗಳು ಈ ಬಗೆಯ 70, 80ರ ದಶಕದಲ್ಲಿ ನಡೆದ ಎಲ್ಲಾ ಚಳವಳಿಗಳಿಗೆ ತುಮಕೂರು ಜಿಲ್ಲೆಯ ಕೊಡುಗೆ ದೊಡ್ಡದು. ಶೈಕ್ಷಣಿಕವಾಗಿ ಜಿಲ್ಲೆಯ ಸಿದ್ದಗಂಗಾ ಮಠದಂತಹ ಕೆಲವು ಮಠಗಳ ಕೊಡುಗೆ ಅಪಾರವಾದದ್ದು.

**• ರಾಜ್ಯದ ಅಭಿವೃದ್ಧಿ ಮತ್ತು ವೈಚಾರಿಕತೆಗೆ ತುಮಕೂರು ಜಿಲ್ಲೆಯ ಕೊಡುಗೆಗಳೇನು?**

- ರಾಜ್ಯದ ಮುಖ್ಯವಾಹಿನಿಯ ಜತೆಯಲ್ಲಿ ಬೆರೆತುಕೊಂಡ ಚಳವಳಿಗಳು ಕಟ್ಟಿಕೊಟ್ಟ ವೈಚಾರಿಕ ದೃಷ್ಟಿಕೋನಗಳನ್ನು ವೈಯುಕ್ತಿಕವಾಗಿ ಸಾಕಷ್ಟು ಜನ ಆ ಚಳವಳಿಗಳಲ್ಲಿ

ವಿದ್ಯಾವಂತರು ... ಕನ್ನಡ ಭಾಷೆಯ ಬಗೆಗಿ... ರಾಜ್ಯವನ್ನು ಪ್ರತಿನಿಧಿಸು... ಬಗೆಗಿನ ಇಚ್ಛಾಶಕ್ತಿಯ ... ಸಂಬಂಧಿಸಿದಂತೆ ಸಮ... ಸಂದರ್ಭದಲ್ಲಿ ತೋರಿ... ವಸ್ತುಸ್ಥಿತಿಯನ್ನು ... ಪ್ರಾಥಮಿಕ ಶಿಕ್ಷಣದ ... ತ್ತದೆ. ಹೀಗಾದಲ್ಲಿ ... ಬೆಳೆಯಲು ... ಮಕ್ಕಳು ... ಸಂವೇದನಾಶೀಲ... ಅವರೂ ಸಹ...

# ಮಹದಾಯಿ ಬೇಡುವಂತಾಗಿರುವುದು ವಿಷಾದನೀಯ: ಪಾಪು

**• ವಿಕ ಸುದ್ದಿಲೋಕ ತುಮಕೂರು ಗ್ರಾಮಾಂತರ**

ಅಂದು ಗೋವಾ ರಾಜ್ಯ ಟಿಪ್ಪು ಸುಲ್ತಾನ್ ಒಡೆತನದಲ್ಲಿದ್ದು, ಮಹದಾಯಿ ಕರ್ನಾಟಕಕ್ಕೆ ಸೇರಿತ್ತು. ಆದರೆ ಇಂದು ಒಡೆದು ಹೋದ್ದರಿಂದ ಮಹದಾಯಿ ನೀರಿಗೆ ಬೇಡುವಂತಾಗಿದೆ, ಟಿಪ್ಪು ಸೋಲದಿದ್ದರೆ ಹೀಗೆ ಬೇಡಬೇಕಿರಲಿಲ್ಲವೆಂದು ಹಿರಿಯ ಪತ್ರಕರ್ತ, ನಾಡೋಜ ಡಾ.ಪಾಟೀಲ್ ಪುಟ್ಟಪ್ಪ ತಿಳಿಸಿದರು.

ಗ್ರಾಮಾಂತರದ ಸಿದ್ಧಗಂಗಾ ಮಠದಲ್ಲಿ ಬುಧವಾರ ಜಿಲ್ಲಾ ಸರ್ವೋದಯ ಮಂಡಲದ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಹೋರಾಟಗಾರ ಟಿಪ್ಪು ಸುಲ್ತಾನ್ ಒಬ್ಬ ಪರೋಪಕಾರಿ. 1799ರಲ್ಲಿ ನಡೆದ 4ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಸೋಲದಿದ್ದರೆ ಮಹದಾಯಿಗಾಗಿ ಬೇಡಬೇಕಿರಲಿಲ್ಲ' ಎಂದರು.

ಕರ್ನಾಟಕ ರಾಷ್ಟ್ರನಾಡಾಗಿ ಪರಿವರ್ತನೆಯಾಗುತ್ತಿತ್ತು. ಅವನು ಹಿಂದೂ ವಿರೋಧಿಯಾಗಿದ್ದರೆ, ಆತನ ಅರಮನೆಯ ಪಕ್ಕದಲ್ಲಿಯೇ ಶ್ರೀರಂಗನಾಥ ದೇವಾಲಯ ನೆಲೆಗೊಳ್ಳುತ್ತಿರಲಿಲ್ಲ. ಈ ಬಗ್ಗೆ ತಿಳಿವಳಿಕೆ ಇಲ್ಲದವರ ಟೀಕೆ ಸರಿಯಲ್ಲ. ಇಲ್ಲಸಲ್ಲದ ವಿಷಯಗಳಿಗೆ ತಲೆಕೆಡಿಸಿಕೊಳ್ಳುವ ಬದಲು, ಸೌಹಾರ್ದ ಸಮಾಜ ಕಟ್ಟುವ ಕೆಲಸ ಸರ್ವೋದಯ ಅನುಯಾಯಿಗಳಿಂದ ನಡೆಯಬೇಕು ಎಂದರು.



ತುಮಕೂರು ಗ್ರಾಮಾಂತರದ ಸಿದ್ಧಗಂಗಾ ಮಠದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ನಾಡೋಜ ಡಾ.ಪಾಟೀಲ್ ಪುಟ್ಟಪ್ಪ ಮಾತನಾಡಿದರು.

ಎರಡು ದಿನ ನಡೆದ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಸಂಪೂರ್ಣ ಪಾನ ನಿಷೇಧಕ್ಕೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗಿದೆ. ಕರ್ನಾಟಕವನ್ನು ಆಳಿದ ಸರಕಾರಗಳ ಮೇಲೆ ಈ ನಿಟ್ಟಿನಲ್ಲಿ ಒತ್ತಡ ಹೆಚ್ಚಬೇಕಾಗಿದೆ. ರಾಜ್ಯದಲ್ಲಿ ಸಂಪೂರ್ಣ ಪಾನ ನಿಷೇಧ ಜಾರಿಗೆ ತಂದ ಗಂಡಸು ಎಂದರೆ ಟಿಪ್ಪು ಸುಲ್ತಾನ್. ಸೇಲಂ, ಕೊಯಮುತ್ತೂರಿನಿಂದ ಗೋವಾದವರೆಗೆ ಹರಡಿದ್ದ ವಿಶಾಲ ಕರ್ನಾಟಕದಲ್ಲಿ ಸಂಪೂರ್ಣ ಪಾನ ನಿಷೇಧವಿತ್ತು. ಅಲ್ಲದೆ ಕೆಲವರು ಹೇಳುವಂತೆ ಹಿಂದೂಗಳನ್ನು ಇಸ್ಲಾಂಗೆ ಮತಾಂತರ ಮಾಡುತ್ತಿದ್ದ ಎಂಬುದು ಸಹ ಸುಳ್ಳು. ಇದು ನಿಜವೇ ಆದರೆ ಅವರ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ದಿವಾನ್ ಪೂರ್ಣಯ್ಯ ಏಕೆ ಮತಾಂತರವಾಗಲಿಲ್ಲ, ಆತನ ಆಳ್ವಿಕೆಗೆ ಒಳಪಟ್ಟ ಉತ್ತರ ಕರ್ನಾಟಕದ ಜನತೆ ಏಕೆ ಮುಸ್ಲಿಮರಾಗಿ ಬದಲಾಗಲಿಲ್ಲ ಎಂದು ಪ್ರಶ್ನಿಸಿದರು.

ಸರ್ವೋದಯ ಸಮಾಜ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಹೊಳೆ. ಹಿ.ಕೃಷ್ಣ ಸರಕಾರ ನಾನಾ ಭಾಗ್ಯಗಳ ಮೂಲಕ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ. ಇದು ಗಾಂಧೀಜಿ ಅವರ ಶ್ರಮ ಸಂಸ್ಕೃತಿಯ ತತ್ವಕ್ಕೆ ವಿರುದ್ಧವಾಗಿದೆ. ಎಲ್ಲರೂ ದುಡಿದು ತಿನ್ನಬೇಕೆಂಬುದು ಗಾಂಧೀಜಿ ಅವರ ತತ್ವವಾಗಿತ್ತು. ಸಂಸದೀಯ ಕೆಲಸಗಳಿಗಿಂತ ರಚನಾತ್ಮಕ ಕೆಲಸಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದ ಗಾಂಧೀಜಿ, ಜನರ ನಡುವೆ ಇದ್ದ ಸಮುದಾಯವನ್ನು ಕಟ್ಟಬೇಕೆಂದು ಬಲವಾಗಿ ನಂಬಿದ್ದರು. ಭಾರತೀಯರು ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವನ್ನೇ ಪಡೆದಿದ್ದು, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ವಾತಂತ್ರ್ಯ ಲಭ್ಯವಾಗಬೇಕು ಎಂಬುದು ಗಾಂಧೀಜಿ ಪರಿಕಲ್ಪನೆಯಾಗಿತ್ತು. ಅವರ ಕನಸಿನ ಸ್ವಾತಂತ್ರ್ಯವನ್ನು ಪಡೆಯಲು ನಾವೆಲ್ಲರೂ ಪ್ರಯತ್ನಿಸಬೇಕು ಎಂದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಸರ್ವೋದಯ ಮನುಷ್ಯನ ಜೀವನ ಪರಿವರ್ತಿಸಬಲ್ಲ ಒಂದು ಪರಿಕಲ್ಪನೆ. ಸಮಾಜಕ್ಕೋಸ್ಕರ ಬದುಕಬೇಕು ಎಂಬ ಮನೋಭಾವವನ್ನು ಮೂಡಿಸುತ್ತದೆ. ನಮ್ಮ ಕೈಯಲ್ಲಿ ಶಕ್ತಿ ಇರುವಷ್ಟು ದಿನ ಸಮಾಜಕ್ಕಾಗಿ ದುಡಿಯೋಣ ಎಂದರು.

ಕಾರ್ಯಕ್ರಮದಲ್ಲಿ ಸರ್ವೋದಯ ಸಮಾಜದ ಜಿಲ್ಲಾಧ್ಯಕ್ಷ ಬಸವಯ್ಯ, ಪತ್ರಿಕೋದ್ಯಮಿ ಎಸ್.ನಾಗಣ್ಣ, ಸರ್ವೋದಯ ಸಮಾಜದ ರಾಜ್ಯಾಧ್ಯಕ್ಷ ನರಸಿಂಹಯ್ಯ, ರಾಜ್ಯ ಕಾರ್ಯದರ್ಶಿ ಡಾ.ಎಚ್.ಎಸ್.ಸುರೇಶ್, ಜಿಲ್ಲಾ ಕಾರ್ಯದರ್ಶಿ ಪುಟ್ಟಸ್ವಾಮಣ್ಣ ಉಪಸ್ಥಿತರಿದ್ದರು.

# ಖಗ್ರಾಸ ಚಂದ್ರಗ್ರಹಣ: ಸಂಭ್ರ...

**• ವಿಕ ಸುದ್ದಿಲೋಕ ತುಮಕೂರು**

ಖಗ್ರಾಸ ಚಂದ್ರಗ್ರಹಣದ ಅಂಗವಾಗಿ ನಗರದ ಬಟವಾಡಿಯಲ್ಲಿರುವ ಆಂಜನೇಯ ದೇವಾಲಯ, ಬಿ.ಎಚ್. ರಸ್ತೆಯ ಆರ್‌ಟಿಒ ಕಚೇರಿ ಪಕ್ಕದ ವರಪ್ರದ ವೀರಾಂಜನೇಯಸ್ವಾಮಿ ದೇವಾಲಯ, ಟಿಜಿಎಂಸಿ ಬ್ಯಾಂಕ್ ಆವರಣದಲ್ಲಿರುವ ಲಕ್ಷ್ಮೀದೇವಾಲಯ ಸೇರಿದಂತೆ ಇತರೆ ದೇವಾಲಯಗಳಲ್ಲಿ ಬಾಗಿಲು ಮುಚ್ಚಿ ಪೂಜೆ ಸ್ಥಗಿತಗೊಳಿಸಲಾಗಿತ್ತು.

ಶಂಕರಮಠ ವೃತ್ತದಲ್ಲಿರುವ ಸೋಮೇಶ್ವರ ದೇವಾಲಯದಲ್ಲಿ ಮಾತ್ರ ವಿಶೇಷ ಪೂಜೆ, ಅಭಿಷೇಕ ನಡೆಯಿತು. ಗ್ರಹಣದ ಹಿನ್ನೆಲೆಯಲ್ಲಿ ವಾಹನ ಸಂಚಾರವೂ ವಿರಳವಾಗಿತ್ತು. ಹೋಟೆಲ್‌ಗಳು ಮತ್ತು ಪಾನಿಪೂರಿ, ಚಾಟ್ಸ್ ಅಂಗಡಿಗಳು ಗ್ರಾಹಕರಿಲ್ಲದೆ ಬಿಕೋ ಎನ್ನುತ್ತಿದ್ದವು. ನಗರದ ಎಂ.ಜಿ.ರಸ್ತೆ ಬಾಲಭವನದಲ್ಲಿ ವಿಜ್ಞಾನ ಕೇಂದ್ರದಿಂದ ಟೆಲಿಸ್ಕೋಪ್‌ನಲ್ಲಿ ಗ್ರಹಣ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು. ಮಕ್ಕಳು, ಮಹಿಳೆಯರು, ಹಿರಿಯರು ಸೇರಿದಂತೆ ಹಲವರು ವೀಕ್ಷಿಸಿದರು. ಉಳಿದಂತೆ ಜಿಲ್ಲೆಯೆಲ್ಲೆಡೆ ಜನರು ಗ್ರಹಣವನ್ನು ಬರಿಗಣ್ಣಿನಿಂದ ನೋಡಿ ಸಂಭ್ರಮಿಸಿದರು.

ತುಮಕೂರು ನಗರದಲ್ಲಿ ಬುಧವಾರ ರಾತ್ರಿ ಕಂಡು ಬಂದ ಖಗ್ರಾಸ ಚಂದ್ರಗ್ರಹಣ ದೃಶ್ಯ.




ತುಮಕೂರು ಬಾಲಭವನದಲ್ಲಿ ವಿಜ್ಞಾನ ... ಖಗ್ರಾಸ ಚಂದ್ರಗ್ರಹಣ ವೀಕ್ಷಣೆಗೆ ಸಾರ್ವ... ಶಾಸಕ ರಫೀಕ್ ಅಹ್ಮದ್ ಪತ್ನಿ ಸಮೇತ...

ಎಂಥಾ ಮಾತು!



# ಸೋಲಾರ್ ಪಾರ್ಕ್‌ಗೆ ಸಿಇಒ ಭೇಟಿ



ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಭಾನುವಾರ
25 ಫೆಬ್ರವರಿ 2018
25 FEBRUARY 2018

# ಸುಪ್ರೀಂಕೋರ್ಟ್‌ನ ಕಾವೇರಿ ತೀರ್ಪು ರಾಜ್ಯಕ್ಕೆ ಮಾರಕ

## ಶೀಘ್ರದಲ್ಲೇ ಪುನರ್ ಪರಿಶೀಲನಾ ಅರ್ಜಿ ಸಲ್ಲಿಕೆ ಅಗತ್ಯ | ಪ್ರೊ.ರವಿವರ್ಮಕುಮಾರ್ ಹೇಳಿಕೆ

▫ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕಾವೇರಿ ನೀರು ಹಂಚಿಕೆ ಸಂಬಂಧ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸುವುದು ಅತ್ಯಗತ್ಯ ಎಂದು ಮಾಜಿ ಅಡ್ವೋಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ಸಲಹೆ ನೀಡಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಬೆಂಗಳೂರು ವಕೀಲರ ಸಂಘದ ಸಹಭಾಗಿತ್ವದಲ್ಲಿ ಶನಿವಾರ ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಕಾವೇರಿ ತೀರ್ಪು ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಸುಪ್ರೀಂಕೋರ್ಟ್ ನೀಡಿದ ಕಾವೇರಿ ತೀರ್ಪು ರಾಜ್ಯಕ್ಕೆ ಸಂತಸ ತಂದಿದ್ದರೂ, ಕಾವೇರಿ ನಿರ್ವಹಣಾ ಮಂಡಳಿ ರಚಿಸುವಂತೆ ಕೇಂದ್ರಕ್ಕೆ ಸುಪ್ರೀಂ ಸೂಚಿಸಿದೆ. ಮಂಡಳಿ ರಚನೆಯಾದರೆ ರಾಜ್ಯದಲ್ಲಿನ ಕಾವೇರಿ ನದಿಯ ಉಪನದಿಗಳಿಗೆ ಕಟ್ಟಲಾದ ಅಣೆಕಟ್ಟುಗಳನ್ನು ಮಂಡಳಿಯೇ ನಿರ್ವಹಿಸುತ್ತದೆ. ನಮ್ಮ ನದಿಗಳ ನೀರನ್ನು ನಾವೇ ಬಳಸಲು ಅರ್ಜಿ ಸಲ್ಲಿಸುವ ಸ್ಥಿತಿ ಬರಲಿದೆ ಎಂದವರು ಎಚ್ಚರಿಸಿದರು. ರಾಜ್ಯ ಸರ್ಕಾರ ತಜ್ಞರೊಂದಿಗೆ ಚರ್ಚಿಸಿ, ಕೂಡಲೇ ಸುಪ್ರೀಂ ಕೋರ್ಟ್‌ಗೆ ತೀರ್ಪು ಮರುಪರಿಶೀಲನಾ ಅರ್ಜಿ ಸಲ್ಲಿಸಬೇಕು ಎಂದು ಸಲಹೆ ನೀಡಿದರು.



ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಕಾವೇರಿ ತೀರ್ಪು ಕುರಿತ ವಿಚಾರ ಸಂಕಿರಣದಲ್ಲಿ ಪ್ರೊ. ರವಿವರ್ಮ ಕುಮಾರ್, ವಕೀಲ ಗಂಗಾಧರ್, ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಮತ್ತಿತರರಿದ್ದರು.

**ರಾಜ್ಯಕ್ಕೆ ವರ:** ಮಾಜಿ ಅಡ್ವೋಕೇಟ್ ಜನರಲ್ ಉದಯ್‌ಹೊಳ್ಳ, ಕಾವೇರಿ ನದಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಕನಿಷ್ಠ 40 ಟಿಎಂಸಿ ಸಿಗಬೇಕಿತ್ತು. ಆದರೆ 14.5 ಟಿಎಂಸಿ ನೀಡಲಾಗಿದೆ. ಬೆಂಗಳೂರಿನ ನೀರಿನ ಸಮಸ್ಯೆ ಪರಿಗಣಿಸಿ 4 ಟಿಎಂಸಿ ನೀರು ಹಂಚಿಕೆ ಮಾಡಿರುವುದು ಸ್ವಾಗತಾರ್ಹ. ಈ ತೀರ್ಪು ಮಹದಾಯಿ ಪ್ರಕರಣದಲ್ಲಿ ರಾಜ್ಯಕ್ಕೆ ವರವಾಗಿ ಪರಿಣಮಿಸಲಿದೆ ಎಂದರು.

> ಸರ್ಕಾರ ರಾಜ್ಯದ ಸರ್ವ ಪಕ್ಷಗಳ ಮುಖಂಡರ ಸಭೆ ಕರೆದು ಸುಪ್ರೀಂ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಬೇಕು. ಈ ಬಗ್ಗೆ ಸರ್ಕಾರ ಕೈಗೊಳ್ಳುವ ನಿರ್ಧಾರಕ್ಕೆ ವಕೀಲರ ಸಂಘ ಅಗತ್ಯ ನೆರವು ನೀಡಲಿದೆ.
>
> | ಎ.ಪಿ.ರಂಗನಾಥ್
>
> ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ

> ಹಿರಿಯ ವಕೀಲರು ಅಭಿಪ್ರಾಯಗಳು ಗಮನಕ್ಕೆ ಬಂದಿದೆ. ಕಾವೇರಿ ನಿರ್ವಹಣಾ ಮಂಡಳಿ ರಚನೆ ರಾಜ್ಯಕ್ಕೆ ದೊಡ್ಡ ಹೊಡೆತವಾಗಲಿದೆ. ಈ ಸಂಬಂಧ ಸಿಎಂ ಸಿದ್ದರಾಮಯ್ಯ ಗಮನಕ್ಕೆ ತರಲಾಗುತ್ತದೆ.
>
> | ದಿನೇಶ್ ಗುಂಡೂರಾವ್ ಕೆಪಿಸಿಸಿ ಕಾರ್ಯಾಧ್ಯಕ್ಷ

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ, ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಪರ ವಾದ ಮಂಡಿಸಿ ವಕೀಲ ಗಂಗಾಧರ್ ಇದ್ದರು.

ಪು.134 | ಸಂ.155
ಹಾಸನ ಮೊಟ್ಟೆಗೆ ರೂ 52

ವಿಶ್ವಾಸಗಳಿಗೆ ಆಗಮಿಸಿದ್ದರು. ಜಿಲ್ಲಾಧಿಕಾರಿ ಕೆ.ಪಿ.ಮೋಹನ್‌ರಾಜ್, ಶಾಸಕ ಡಾ.ಎಸ್. ರಫೀಕ್ ಅಹಮದ್ ಮುಂತಾದವರು ಆಗಮಿಸಿದ್ದರು. ... ಜಿಲ್ಲಾಧಿಕಾರಿಗಳಾದ ಕೆ.ಪಿ. ಮೋಹನ್ ರಾಜ್ ಹಾಗೂ ತುಮಕೂರು ನಗರದ ಶಾಸಕರಾದ ರಫೀಕ್ ಅಹಮದ್ ... ಸಂಜೆಯ ವೇಳೆ ... ಮತ್ತೆ ಕೆಲವರು ಮನೆಯಿಂದ ಹೊರಬರಲಿಲ್ಲ, ಕೆಲವು ದೇವಾಲಯಗಳ ಬಾಗಿಲು ಮುಚ್ಚಲಾಯಿತು.

## ಗಂಟಲಿಗೆ ಆಹಾರ ಸಿಕ್ಕಿ ಮಗು ಸಾವು

ರಾಮನಗರ

ಮಾಗಡಿ ತಾಲ್ಲೂಕಿನ ಹೊಸಪಾಳ್ಯದ 3 ತಿಂಗಳ ಮಗುವೊಂದಕ್ಕೆ ಆಹಾರ ತಿನ್ನಿಸುವ ವೇಳೆ ಗಂಟಲಲ್ಲಿ ಸಿಲುಕಿದ ಪರಿಣಾಮ ಉಸಿರಾಟದ ತೊಂದರೆಯುಂಟಾಗಿ ಮಗು ಮೃತಪಟ್ಟಿದೆ.

## ಸಂಶೋಧನೆಗಾಗಿ 1000 ಎಂಜಿನಿಯರ್‌ಗಳು

ಮುಂಬೈ

ದಕ್ಷಿಣ ಕೊರಿಯಾ ಮೂಲದ ತಂತ್ರಜ್ಞಾನ ಸಂಸ್ಥೆ ಸ್ಯಾಮ್‌ಸಂಗ್ ... ಅಭಿವೃದ್ಧಿ ಕೇಂದ್ರಗಳಿಗೆ ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳಿಂದ 1000 ಎಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳುವುದಾಗಿ ಘೋಷಿಸಿದೆ. ಐಐಟಿ, ಎನ್‌ಐಟಿ, ಬಿಐಟಿಎಸ್ ಮತ್ತಿತರ ಸಂಸ್ಥೆಗಳ ಎಂಜಿನಿಯರ್‌ಗಳನ್ನು ಸಂಸ್ಥೆ ನೇಮಕ ಮಾಡಿಕೊಳ್ಳಲಿದೆ.

## ಕಾಸ್‌ಗಂಜ್ ಹಿಂಸಾಚಾರ ಆರೋಪಿ ಬಂಧನ

ಲಖನೌ

ಉತ್ತರ ಪ್ರದೇಶದ ಕಾಸ್ ಗಂಜ್ ಹಿಂಸಾಚಾರದಲ್ಲಿ ನಡೆದ ಚಂದನ್ ಗುಪ್ತ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಸಲೀಂ ಎಂಬಾತನನ್ನು ಬಂಧಿಸಲಾಗಿದೆ. ಕಾಸ್‌ಗಂಜ್ ಹಿಂಸಾಚಾರದಲ್ಲಿ ಘರ್ಷಣೆ ಸಂಭವಿಸಿದ್ದಾಗ ಚಂದನ್ ಗುಪ್ತ ಎಂಬುವವನ್ನು ಹತ್ಯೆ ಮಾಡಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೂ 118 ಜನರನ್ನು ಬಂಧಿಸಲಾಗಿದೆ.

# ಇಂದು ಕನ್ನಡ ಭವನ ಲೋಕಾರ್ಪಣೆ



ತುಮಕೂರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಕನ್ನಡ ಭವನದ ಉದ್ಘಾಟನಾ ಸಮಾರಂಭವನ್ನು ಇಂದು ಮಧ್ಯಾಹ್ನ 3 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಸುಮಾರು 2 ಕೋಟಿ 43 ಲಕ್ಷ ರೂಗಳಲ್ಲಿ ಕನ್ನಡ ಭವನವನ್ನು ನಿರ್ಮಿಸಲಾಗಿದೆ. ಮಧುಗಿರಿ ಶಾಸಕ ಕೆ.ಎನ್.ರಾಜಣ್ಣನವರು 50 ಲಕ್ಷ ರೂಗಳ ಅನುದಾನವನ್ನು ನೀಡಿದ್ದಾರೆ. ಸಂಸದ ಮುದ್ದಹನುಮೇಗೌಡ ಅವರ ಸಂಸದರ ನಿಧಿ, ತುಮಕೂರು ನಗರ ಶಾಸಕರು, ಟೂಡಾ ಕಛೇರಿ, ಇತರೆ ಸಂಘ-ಸಂಸ್ಥೆಗಳ ಸಹಕಾರದಿಂದ ಕನ್ನಡ ಭವನವನ್ನು ನಿರ್ಮಿಸಲು ಸಾಧ್ಯವಾಗಿದೆ.



ಇಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರ ಉದ್ಘಾಟಿಸಲಿದ್ದಾರೆ.

ಮಧುಗಿರಿ ಶಾಸಕ ಕೆ.ಎನ್.ರಾಜಣ್ಣ ಸಭಾಂಗಣ ಉದ್ಘಾಟನೆ ಮಾಡಲಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮನು ಬಳಿಗಾರ್ ಅಧ್ಯಕ್ಷತೆ ವಹಿಸಲಿದ್ದು, ರಾಜ್ಯ ಖಾದಿ ಸಚಿವ ಎಚ್.ಎಂ.ರೇವಣ್ಣ ಗ್ರಂಥಾಲಯ ಉದ್ಘಾಟನೆಯನ್ನು ಮಾಡಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಗ್ರಂಥಾಲಯ ಸಚಿವ ತನ್ವೀರ್ ಸೇಟ್, ನಗರ ಶಾಸಕ ಡಾ.ರಫೀಕ್ ಅಹಮದ್, ಮಹಾನಗರ ಪಾಲಿಕೆಯ ಮಹಾಪೌರರಾದ ಹೆಚ್.ರವಿಕುಮಾರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಎನ್.ಎಸ್. ಜಯಕುಮಾರ್, ಜಿಲ್ಲಾಧಿಕಾರಿ ಕೆ.ಪಿ.ಮೋಹನ್ ರಾಜ್, ಕನ್ನಡ ಭವನ ಕಟ್ಟಡ ಸಮಿತಿ ಅಧ್ಯಕ್ಷ ಎಸ್.ನಾಗಣ್ಣ, ಸಂಸದ ಎಸ್.ಪಿ.ಮುದ್ದಹನುಮೇಗೌಡ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

2002ರಲ್ಲಿ ತುಮಕೂರಿನಲ್ಲಿ 69ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಡಾ.ಯು.ಆರ್ ಅನಂತಮೂರ್ತಿ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಬ.ನಾ.ಸುಂದರ ... ಜಿಲ್ಲಾ >>> 7ನೇ ಪುಟಕ್ಕೆ

# ರೈತರ ಬಗ್ಗೆ ಗಮನ ಹರಿಸದ ಮೋದಿ

## ಸರ್ವೋದಯ ಸಮ್ಮೇಳನ ಸಮಾರೋಪದಲ್ಲಿ ಡಾ.ಪಾಟೀಲ ಪುಟ್ಟಪ್ಪ



ಸರ್ವೋದಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಡಾ.ಪಾಟೀಲ ಪುಟ್ಟಪ್ಪ ಮಾತನಾಡಿದರು. ಎಚ್.ಎಸ್.ದೊರೆಸ್ವಾಮಿ, ಎಸ್.ನಾಗಣ್ಣ, ಡಾ.ವೂಡೇ ಪಿ.ಕೃಷ್ಣ, ಎಂ.ಬಸವಯ್ಯ, ಕುಂದೂರು ತಿಮ್ಮಯ್ಯ ವೀರಸಿಂಹಯ್ಯ ಇತರರು ಭಾಗವಹಿಸಿದ್ದರು.

ತುಮಕೂರು

ನರೇಂದ್ರ ಮೋದಿ ಸ್ವಲ್ಪ ಮನಸ್ಸು ಮಾಡಿದ್ದರೆ ರೈತರ ಉತ್ಪಾದನೆ ಇಮ್ಮಡಿ ಗೊಳಿಸಬಹುದಾಗಿತ್ತು. ಆದರೆ ಮೋದಿ ಮನಸ್ಸು ಮಾಡುತ್ತಿಲ್ಲ ಎಂದು ನಾಡೋಜ ಡಾ.ಪಾಟೀಲ ಪುಟ್ಟಪ್ಪ ಬೇಸರ ವ್ಯಕ್ತ ಪಡಿಸಿದರು.

ಸಿದ್ದಗಂಗಾಮಠದ ಉದ್ದಾನೇಶ್ವರ ಸಮುದಾಯ ಭವನದಲ್ಲಿ ಕರ್ನಾಟಕ ಸರ್ವೋದಯ ಮಂಡಲಿ, ಬೆಂಗಳೂರು ವತಿಯಿಂದ ನಡೆದ ರಾಜ್ಯ ಮಟ್ಟದ ದ್ವಿತೀಯ ಸರ್ವೋದಯ ಸಮಾಜ ಸಮ್ಮೇಳನ 2018 ಕಾರ್ಯಕ್ರಮದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಡಾ.ಪಾಟೀಲ ಪುಟ್ಟಪ್ಪ ಮಾತನಾಡಿದರು.

ಕೇಂದ್ರ ಸರ್ಕಾರ ಪಟೇಲರ ಮಗನ ಮದುವೆಗೆ 20 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಇದನ್ನು ಮೋದಿ ಏಕೆ ಗಮನಿಸಲಿಲ್ಲ ಎಂದು ಪ್ರಶ್ನಿಸಿದರು. ದೇಶದಲ್ಲಿ ಸಂಪೂರ್ಣ ಪಾನ ನಿಷೇಧವಾಗಬೇಕು ಎಂಬ ಒತ್ತಾಯ ಸರ್ವೋದಯ ಸಮಾಜದಿಂದ ಆಗಬೇಕು ಎಂದು ಹೇಳಿದರು.

ಟಿಪ್ಪು ಸುಲ್ತಾನ್‌ನನ್ನು ಗೌರವಿಸುವತೆ ಮುಸಲ್ಮಾನರಲ್ಲ ಗೌರವಿಸಬೇಕೆ ಎಂದು ಅನೇಕರು ತಪ್ಪು ತಿಳಿದಿದ್ದಾರೆ. ಇದರಲ್ಲಿ ತಪ್ಪೇನಿದೆ, ಟಿಪ್ಪು ಕಾಲದಲ್ಲಿ ಗೋವಾ, ಅವನದಾಗಿದ್ದರಿಂದ ಮಹದಾಯಿ ನೀರು ನಮಗೆ ಸುಲಭದಲ್ಲಿ ಸಿಗುತ್ತಿತ್ತು. ಆದರೆ ಇಂದು ಮಹದಾಯಿ ನೀರಿಗಾಗಿ ಹೋರಾಟ ಮಾಡಬೇಕಾಗಿದೆ. ಟಿಪ್ಪು ಬಹುತೇಕರನ್ನು ಧರ್ಮಾಂತರ ಮಾಡಿದ ಎನ್ನುತ್ತಾರೆ ಆದರೆ ದಿವಾನ್ ಪೂರ್ಣಯ್ಯನವರನ್ನು ದಿವಾನರಾಗಿ ನೇಮಕ ಮಾಡಿದ ಮತ್ತು ಶ್ರೀರಂಗ ಪಟ್ಟಣದ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ, ಆದ್ದರಿಂದ ಸತ್ಯವನ್ನು ಯೋಚಿಸಬೇಕಾಗಿದೆ ಎಂದು ಹೇಳಿದರು.

ಹತ್ತಿ ನಮ್ಮದು, ನೂಲು ನಮ್ಮದು, ಬಟ್ಟೆ ಮಾತ್ರ ವಿದೇಶಿ ಮಿಲ್‌ನದ್ದು ಗಾಂಧೀಜಿ ಖಾದಿ ಬಟ್ಟೆ ಮೂಲಕ ಬ್ರಿಟೀಷರಿಗೆ ಬಿಸಿ ಮುಟ್ಟಿಸಿದರು. ಆದರೆ ಈಗ ಪಟೇಲರು ನಾಲಿ ಖಾದಿ ಬಟ್ಟೆ ಮಾರಾಟದಲ್ಲಿ ತೊಡಗಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರ ಗಮನಹರಿಸಬೇಕು. ನಾವು ಕೆಲಸವನ್ನು ಪ್ರೀತಿಸಬೇಕು. ದೇಶಕಟ್ಟುವ ಕಾರ್ಯದಲ್ಲಿ ನಾವು ತೊಡಗಬೇಕು. ಗಾಂಧೀಜಿ ತಮ್ಮನ್ನು ತಾವೇ ಸವೆಸಿಕೊಂಡು ಮಹಾನ್ ಕಾರ್ಯ ಮಾಡಿದ್ದಾರೆ. ಇದನ್ನು ನಾವು ಸ್ಮರಿಸುತ್ತಿಲ್ಲ ಎಂದರು. ಹಣದಿಂದ ಏನನ್ನೂ ಸಾಧಿಸಲಾಗದು. ಹಣದಿಂದ ಸಿಗುವ ಸುಖಕ್ಕಿಂತ ಶ್ರಮದಿಂದ ಸಿಗುವ ಸುಖವೇ ಬೇರೆ. ಆದ್ದರಿಂದ ಆಸ್ತಿಯ ಬಗ್ಗೆ ಜನರು ವ್ಯಾಮೋಹ ಹೊಂದಬಾರದು ಎಂದು ಹೇಳಿದರು.

ಇಂದು ಸರ್ಕಾರದಿಂದ ಸಿಗುವ ಆಸ್ತಿ ಮತ್ತು ಪ್ರಶಸ್ತಿಗೆ ಲಾಬಿ ಮಾಡುವವರೂ ಇದ್ದಾರೆ. ನಾನು ಯಾವ ಆಸ್ತಿಯನ್ನೂ ಸರ್ಕಾರದಿಂದ ಪಡೆಯಲಿಲ್ಲ, ಯಾವ ಪ್ರಶಸ್ತಿಗೂ ಆಸೆ ಪಡಲಿಲ್ಲ ಎಂದರು. ಇಂದು ತಂತ್ರಜ್ಞಾನ ಕಾಲಘಟ್ಟದಲ್ಲಿ ಹಾಳಾಗಿ ಹೋಗಿದೆ. ಎಲ್ಲರೂ ನಗರದ ಕೆಲಸಗಳನ್ನು ಅವಲಂಬಿಸಿದ್ದಾರೆ. ಗುಡಿ >>> 7ನೇ ಪುಟಕ್ಕೆ

## ನೌಕರರ ವೇತನ ಶೇ.30 ರಷ್ಟು

ವಿಶ್ವವಾಣಿ

28.01.2018

# ನಾಡೋಜ ಪಾಟೀಲ್ ಪುಟ್ಟಪ್ಪಗೆ ಕರುನಾಡ ಗಾಂಧಿ ಪ್ರಶಸ್ತಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ದೇಶಕ್ಕೆ ಸಾಂಸ್ಕೃತಿಕ, ಸೌಹಾರ್ದತೆ ವಾತಾವರಣ ಅಗತ್ಯವಿದೆ ಎಂದು ಸಾಹಿತಿ ಡಾ. ಪಾಟೀಲ್ ಪುಟ್ಟಪ್ಪ ಅಭಿಪ್ರಾಯಪಟ್ಟರು.

ಕುವೆಂಪು ಕಲಾನಿಕೇತನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಮಹಾಲಕ್ಷ್ಮೀಪುರ ಕ್ಷೇತ್ರದ ನಂದಿನಿ ಲೇಔಟ್‌ನಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಮಾತನಾಡಿ, ದೇಶಾದ್ಯಂತ ಗಣರಾಜ್ಯೋತ್ಸವ ಆಚರಿಸುತ್ತಿದ್ದೇವೆ. ಆದರೆ, ಕಳವಳಕಾರಿ ಪರಿಸ್ಥಿತಿಯಿಂದ ಹೊರಬರಲು ಸಾಧ್ಯವಾಗಿಲ್ಲ. ದೇಶಕ್ಕೆ ಬೇಕಿರುವುದು ಸಾಂಸ್ಕೃತಿಕ, ಸೌಹಾರ್ದತೆ ವಾತಾವರಣ. ಇದು ಕಲೆ, ಸಾಹಿತ್ಯ, ಸಂಗೀತ, ಕ್ರೀಡೆಯಿಂದ ಸಾಧ್ಯ ಎಂದರು.

ವೂಡೆ ಪಿ.ಕೃಷ್ಣ ಮಾತನಾಡಿ, ನಾಡೋಜ ಡಾ. ಪಾಟೀಲ್ ಪುಟ್ಟಪ್ಪ ಅವರು ಮಾರ್ಗದರ್ಶಕರು, ಕರುನಾಡ ಗಾಂಧಿ ಎಂದು ಹೆಸರಾದವರು. ಗಾಂಧಿ ತತ್ತ್ವ, ಗಡಿನಾಡ ಹೋರಾಟ, ಕರ್ನಾಟಕ ಏಕೀಕರಣ ಮತ್ತು ಗೋಕಾಕ್ ಚಳುವಳಿ, ನಾಡು-ನುಡಿ ಬಗ್ಗೆ ಕಾಳಜಿ ಹೊಂದಿದ್ದರು ಎಂದರು.



ಸಾಹಿತಿ, ಪತ್ರಕರ್ತ, ನಾಡೋಜ ಡಾ. ಪಾಟೀಲ್ ಪುಟ್ಟಪ್ಪ ಅವರಿಗೆ 'ಕರುನಾಡ ಗಾಂಧಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಾಸಕ ಗೋಪಾಲಯ್ಯ, ಮಾಜಿ ಉಪಮೇಯರ್ ಹೇಮಲತಾ ಗೋಪಾಲಯ್ಯ, ಬಿಬಿಎಂಪಿ ಸದಸ್ಯ ಕೆ.ವಿ. ರಾಜೇಂದ್ರಕುಮಾರ್ ಹಾಗೂ ಸಂಘದ ಅಧ್ಯಕ್ಷ ಪ್ರಕಾಶ್ ಇದ್ದರು. ಜವರನಾಯಕ್ ತಂಡದಿಂದ ದೇಶ ಭಕ್ತಿಗೀತೆ, ಸುಗಮ ಸಂಗೀತ, ಸಿದ್ದರಾಜು ಹಾಗೂ ಜ್ಯೋತಿ ಆರ್ಟ್ಸ್ ಅಕಾಡಮಿ ತಂಡದಿಂದ ಜನಪದ ಲೋಕದ ಜೋಗುಳ, ಪೂಜಾ ಕುಣೀರ ತಂಡದವರು ಡೊಳ್ಳು ಕುಣಿತ ಕಾರ್ಯಕ್ರಮ ನಡೆಸಿಕೊಟ್ಟರು. ಸಾಹಿತಿ, ಪತ್ರಕರ್ತ ಡಾ. ಪಾಟೀಲ್ ಪುಟ್ಟಪ್ಪ ಅವರಿಗೆ 'ಕರುನಾಡ ಗಾಂಧಿ ಪ್ರಶಸ್ತಿ-2018' ನೀಡಿ ಗೌರವಿಸಲಾಯಿತು.

ಈ ಸಂಜೆ
ಶನಿವಾರ, 27-01-2018



ಕುವೆಂಪು ಕಲಾನಿಕೇತನ ವತಿಯಿಂದ ನಿನ್ನೆ ಮಹಾಲಕ್ಷ್ಮಿ ಲೇಔಟ್‌ನ ನಂದಿನಿಬಡಾವಣೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಾಡೋಜ ಹಿರಿಯ ಪತ್ರಕರ್ತ ಪಾಟೀಲ್‌ಪುಟ್ಟಪ್ಪ ಅವರಿಗೆ ಕರುನಾಡ ಗಾಂಧಿ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಶಾಸಕ ಕೆ.ಗೋಪಾಲಯ್ಯ, ಮಾಜಿ ಉಪಮಹಾಪೌರರಾದ ಹೇಮಲತಾ ಗೋಪಾಲಯ್ಯ, ಗಾಂಧಿಭವನದ ಅಧ್ಯಕ್ಷ ವೊಡೆ ಪಿ.ಕೃಷ್ಣ, ನಿವೃತ್ತ ಐಎಎಸ್ ಅಧಿಕಾರಿ ಡಾ.ಅಶ್ವತ್ಥ್, ಡಾ.ಜಯರಾಂ, ಕುವೆಂಪು ಕಲಾನಿಕೇತನದ ಅಧ್ಯಕ್ಷ ಡಿ.ಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ | ಶನಿವಾರ, 27, ಜನವರಿ, 2018,

# ಸಾಮಾಜಿಕ ಜವಾಬ್ದಾರಿ ಅರಿತುಕೊಳ್ಳಿ




ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ 25ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ದೇಶಪಾಂಡೆ ಫೌಂಡೇಷನ್ ಅಧ್ಯಕ್ಷ ಗುರುರಾಜ ದೇಶಪಾಂಡೆ ಮತ್ತು ಇನ್ವೆಂಚರ್ಸ್ ಕ್ಯಾಪಿಟಲ್ ಪಾರ್ಟ್‌ನರ್ಸ್‌ನ ಕೈಗಾರಿಕೆ ಸಲಹೆಗಾರ ಎಸ್.ಜಗದೀಶ್ ಅವರನ್ನು ಸನ್ಮಾನಿಸಲಾಯಿತು.

ಸಂ.ಕ.ಸಮಾಚಾರ ಬೆಂಗಳೂರು :

ವಿದ್ಯಾರ್ಥಿಗಳು ಓದಿನ ಜತೆಗೆ ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಂಡು, ಸ್ಪರ್ಧಾತ್ಮಕ ಯುಗದಲ್ಲಿ ಮುನ್ನಡೆಯಬೇಕೆಂದು ದೇಶಪಾಂಡೆ ಫೌಂಡೇಶನ್ ಅಧ್ಯಕ್ಷ ಗುರುರಾಜ ದೇಶಪಾಂಡೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.


ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ 25ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಕಗಳನ್ನು ಮಾತ್ರ ಗಳಿಸಿದರೆ ಸಾಲದು, ಓದಿನೊಂದಿಗೆ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಿಕೊಳ್ಳಬೇಕು. ಅಂದಾಗ ಮಾತ್ರ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದರು.

ಪ್ರಜಾವಾಣಿ
ಮಂಗಳವಾರ ● ಜನವರಿ 23, 2018

# ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಬೆಳ್ಳಿಹಬ್ಬದಲ್ಲಿ ಸಲಹೆ

# ‘ಹೊಸ ಆವಿಷ್ಕಾರದಲ್ಲಿ ತೊಡಗಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ



ಗುರುರಾಜ ದೇಶಪಾಂಡೆ ಹಾಗೂ ಎಸ್.ಜಗದೀಶ್ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ವೂಡೇ ಪಿ.ಕೃಷ್ಣ ಇದ್ದಾರೆ

ಬೆಂಗಳೂರು: ‘ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಅಧ್ಯಯನದ ಜತೆಗೆ ನೂತನ ಆವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ದೇಶವು ಪ್ರಗತಿಪಥದತ್ತ ಸಾಗಲು ಸಾಧ್ಯ’ ಎಂದು ದೇಶಪಾಂಡೆ ಫೌಂಡೇಶನ್ ಅಧ್ಯಕ್ಷ ಗುರುರಾಜ ದೇಶಪಾಂಡೆ ತಿಳಿಸಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಶಿಕ್ಷಣ ಸಂಸ್ಥೆಯ ಬೆಳ್ಳಿಹಬ್ಬದ ಸಂಭ್ರಮಾಚರಣೆ ಹಾಗೂ ಕೌಶಲ ಅಭಿವೃದ್ಧಿ ಕೇಂದ್ರದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

‘ಇಂದು ತಂತ್ರಜ್ಞಾನ ಎಲ್ಲ ರಂಗಗಳಲ್ಲಿಯೂ ವೇಗವಾಗಿ ಬೆಳವಣಿಗೆ ಹೊಂದುತ್ತಿದೆ. ಇದಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದ ಜತೆಗೆ ನೂತನ ಯೋಜನೆ, ತಂತ್ರಜ್ಞಾನ ಹಾಗೂ ಆವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಇನ್ವೆಂಚರ್ಸ್ ಕ್ಯಾಪಿಟಲ್ ಪಾರ್ಟ್‌ನರ್ಸ್ ಕೈಗಾರಿಕಾ ಸಲಹೆಗಾರ ಎಸ್.ಜಗದೀಶ್, ‘ದೇಶದ ಅಭಿವೃದ್ಧಿಯಲ್ಲಿ ತಂತ್ರಜ್ಞಾನ, ಸಂವಹನ ಕೌಶಲ ಹಾಗೂ ಜಾಗತಿಕ ಪ್ರಭಾವ ಅತಿಮುಖ್ಯ. ಈ ಹಿಂದೆ ಇವೆಲ್ಲವೂ ಇರದ ಕಾರಣ ಅಂದಿನ ಜನರಲ್ಲಿ ಎಷ್ಟೇ ಜ್ಞಾನವಿದ್ದರೂ ದೊಡ್ಡಮಟ್ಟದ ಅಭಿವೃದ್ಧಿ ಸಾಧ್ಯವಾಗುತ್ತಿರಲಿಲ್ಲ. ಆದರೆ, ಇಂದು ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು’ ಎಂದು ಅವರು ತಿಳಿಸಿದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ‘ಎಲ್ಲೆಡೆ ಕೌಶಲ ಅಭಿವೃದ್ಧಿ ಕೇಂದ್ರ ತೆರೆದು, ತರಬೇತಿ ನೀಡಲಾಗುವುದು. ಇದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ’ ಎಂದು ಅವರು ಹೇಳಿದರು.

ಸಂಯುಕ್ತ ಕರ್ನಾಟಕ
ಸೋಮವಾರ, 22, ಜನವರಿ, 2018



ಭೂಮಿರಹಿತರಿಗೆ ಮತ್ತು ವಸತಿರಹಿತರಿಗೆ ಭೂಮಿ ನೀಡುವಂತೆ ಆಗ್ರಹಿಸಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ನೇತೃತ್ವದಲ್ಲಿ ನಡೆಯುತ್ತಿರುವ ಸತ್ಯಾಗ್ರಹ 12ನೇ ದಿನ ದೃಶ್ಯಗಳು.

ಹೊಸ ದಿಗಂತ

ಸೋಮವಾರ
22 ಜನವರಿ 2018

ದಿಗಂತ ಚಿತ್ರ



ನಗರದ ಗಾಂಧಿ ಭವನ ಸಮೀಪದ ವಲ್ಲಭ ಆಶ್ರಮ ಆವರಣದಲ್ಲಿ ಭೂಮಿ ಮತ್ತು ವಸತಿ ವಂಚಿತರ ಹೋರಾಟ ಸಮಿತಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರಸ್ವಾಮಿ ನೇತೃತ್ವದಲ್ಲಿ ನಡೆಸುತ್ತಿರುವ ಪ್ರತಿಭಟನೆ 12ನೇ ದಿನಕ್ಕೆ ಕಾಲಿಟ್ಟಿದೆ. ವೂಡೆ ಪಿ.ಕೃಷ್ಣ, ರುಕ್ಮಾಂಗದನಾಯ್ಡು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕನ್ನಡಪ್ರಭ ಭಾನುವಾರ 21.1.2018




ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ 25ನೇ ವಾರ್ಷಿಕೋತ್ಸವದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು. ದೇಶಪಾಂಡೆ ಫೌಂಡೇಶನ್ ಅಧ್ಯಕ್ಷ ಗುರುರಾಜ್ ದೇಶಪಾಂಡೆ, ಎಸ್. ಜಗದೀಶ್, ಡಾ.ವೂಡೇ ಪಿ.ಕೃಷ್ಣ, ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಇದ್ದರು.

### ಕವಿವ ಸಂಘದ 128ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಘೋಷಣೆ

# ವಿದ್ಯಾವರ್ಧಕ ಸಂಘಕ್ಕೆ ಐದು ಎಕರೆ ಜಮೀನು

ಪ್ರಜಾವಾಣಿ ವಾರ್ತೆ

ಧಾರವಾಡ: 'ಕನ್ನಡದ ನಾಡು, ನುಡಿ, ಭಾಷೆ ಹಾಗೂ ಜಲಕ್ಕಾಗಿ ಹೋರಾಡುವ ಯಾವುದೇ ಕನ್ನಡ ಸಂಸ್ಥೆಗಳಿಗೆ ಸಹಕಾರ ನೀಡಲು ಸರ್ಕಾರ ಸದಾ ಸಿದ್ಧ. ಈ ನಿಟ್ಟಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಅಗತ್ಯವಿರುವ ಐದು ಎಕರೆ ಜಮೀನನ್ನು ನೀಡಲು ಜಿಲ್ಲಾಧಿಕಾರಿಗೆ ಸೂಚಿಸಿದ್ದೇನೆ. ಸಂಘಕ್ಕೆ ಅನುದಾನ ನೀಡುವ ಸಂಬಂಧ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ 128ನೇ ಸಂಸ್ಥಾಪನಾ ದಿನಾಚರಣೆ, ಸಂಘದ ನವೀಕೃತ ಪಾರಂಪರಿಕ ಕಟ್ಟಡ ಉದ್ಘಾಟನೆಯನ್ನು ಗುರುವಾರ ನೆರವೇರಿಸಿ ಅವರು ಮಾತನಾಡಿದರು.

'ಬುದ್ಧ, ಬಸವ, ಗಾಂಧಿ ಹಾಗೂ ಅಂಬೇಡ್ಕರ್ ಅಂತವರು ಸಾಮಾಜಿಕ ನ್ಯಾಯ ಹಾಗೂ ಮಾನವೀಯ ಮೌಲ್ಯಗಳ ಬೀಜ ಇಲ್ಲಿ ಬಿತ್ತಿರುವುದರಿಂದಲೇ ಈ ನೆಲದಲ್ಲಿ ಕೋಮುವಾದಿಗಳು ಸಮಾಜಕ್ಕೆ ಬೆಂಕಿ ಇಡುವ ಕೆಲಸ ಮಾಡಿದರೂ ಅದು ಸಾಧ್ಯವಾಗುವುದಿಲ್ಲ' ಎಂದು ಹೇಳಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಪಾಟೀಲ ಪುಟ್ಟಪ್ಪ, 'ಶಿವಾಜಿಯನ್ನು ಸೋಲಿಸಿದ ಬೆಳವಡಿ ಮಲ್ಲಮ್ಮ ಅವರ ಹೆಸರಿನಲ್ಲಿ ಸ್ಮಾರಕ ಆಗಬೇಕು. ಹಾಗೆಯೇ ಗಾಂಧಿ ಭವನ ಕಟ್ಟಲು ಸಂಘಕ್ಕೆ ಅವಕಾಶ ನೀಡಿದರೆ, ಸಂಘದಂತೆಯೇ ಅದನ್ನೂ ಬೆಳೆಸಲಾಗುವುದು' ಎಂದು ಭರವಸೆ ನೀಡಿದರು.

ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಬೈಲೂರಿನ ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ ಹಾಗೂ ಮನಗುಂಡಿಯ ಬಸವಾನಂದ ಸ್ವಾಮೀಜಿ, ಸಚಿವ ವಿನಯ ಕುಲಕರ್ಣಿ, ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ, ಶಾಸಕರಾದ ಎನ್.ಎಚ್.ಕೋನರಡ್ಡಿ, ಪ್ರಸಾದ ಅಬ್ಬಯ್ಯ, ಬಿ.ಆರ್.ಯಾವಗಲ್, ಅರವಿಂದ ಬೆಲ್ಲದ, ಡಾ. ವುಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಡಾ. ಪಾಟೀಲ ಪುಟ್ಟಪ್ಪ ಅವರ ಕಂಚಿನ ಪ್ರತಿಮೆಯನ್ನು ಸಿದ್ದರಾಮಯ್ಯ ಅನಾವರಣಗೊಳಿಸಿದರು. ನವೀಕೃತ ಪಾರಂಪರಿಕ ಕಟ್ಟಡ ಉದ್ಘಾಟಿಸಿ, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಜತೆಗೆ ಕಟ್ಟಡದಲ್ಲಿ ಓಡಾಡಿ ಕಾಮಗಾರಿ ವೀಕ್ಷಿಸಿದರು.

**ಆರೋಗ್ಯವಾಗಿ ಬಾಳಿ:** 'ಪುಟ್ಟಪ್ಪ ಅವರಿಗೆ 98 ವರ್ಷಗಳು ಎಂದು ತಿಳಿದು ನೂರಿಪ್ಪತ್ತು ವರ್ಷ ಬಾಳಿ ಬದುಕಿ ಎಂದೆ. ಅವರು 'ಏಕೆ ಅನುಮಾನವೇ?' ಎಂದು ಕೇಳಿದರು. ಖಂಡಿತವಾಗಿಯೂ ಇಲ್ಲ. ನೂರಿಪ್ಪತ್ತೇ ಏಕೆ. ಇನ್ನೂ ಹೆಚ್ಚು ವರ್ಷ ಬದುಕಿ ಬಾಳಿ. ಆದರೆ, ಬದುಕಿರುವಷ್ಟು ವರ್ಷ ಆರೋಗ್ಯವಾಗಿ ಬಾಳಿ ಎಂದು ನಾನು ಪ್ರಾರ್ಥಿಸುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.



ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಡಾ. ಪಾಟೀಲ ಪುಟ್ಟಪ್ಪ ಅವರ ಕಂಚಿನ ಪ್ರತಿಮೆಯನ್ನು ಸಿದ್ದರಾಮಯ್ಯ ಅನಾವರಣಗೊಳಿಸಿದರು. ಬಸವರಾಜ ಹೊರಟ್ಟಿ, ಮಹಾದೇವ ಹೊರಟ್ಟಿ, ಪಾಟೀಲ ಪುಟ್ಟಪ್ಪ, ಕೃಷ್ಣ ಜೋಶಿ, ವಿನಯ ಕುಲಕರ್ಣಿ, ವೂಡೇ ಪಿ.ಕೃಷ್ಣ ಇದ್ದಾರೆ

## 'ಉದಯವಾಗಲಿ ಹಾಡಿ ಮಕ್ಕಳೇ'

ಹೆಬ್ಬಳ್ಳಿಯ ಮೋಹನ್ ದೇಸಾಯಿ ಪಾಠಶಾಲೆ ಮಕ್ಕಳು ವಂದೇ ಮಾತರಂ ಹಾಗೂ ನಾಡ ಗೀತೆ ಹಾಡಿದ ನಂತರ ಶ್ರೀ... ಸರಿಗಮ ಸಂಗೀತ ಶಾಲೆಯ ಮಕ್ಕಳು ಮತ್ತೊಂದು ಹಾಡನ್ನು ಹಾಡಲು ಮುಂದಾದಾಗ. ಸಮಯ ಇಲ್ಲ ನೇರವಾಗಿ ಉದ್ಘಾಟನಾ ಕಾರ್ಯಕ್ರಮ ಆರಂಭಿಸಿ ಎಂದು ವಿನಯ ಕುಲಕರ್ಣಿ ಸೇರಿದಂತೆ ಗಣ್ಯರು ಆಯೋಜಕರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಕ್ಕಳಿಗೆ ಹಾಡಲು ಅವಕಾಶ ಮಾಡಿಕೊಟ್ಟು, 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಹಾಡಿ ಎಂದರು. ಮಕ್ಕಳು ಹಾಡುವಾಗ ಅದಕ್ಕೆ ತಾಳ ಹಾಕಿದರು.

**ಕರ್ನಾಟಕ ರತ್ನಕ್ಕೆ ಚಪ್ಪಾಳೆ ಒತ್ತಾಯ:** ಪಾಟೀಲ ಪುಟ್ಟಪ್ಪ ಅವರ ಕನ್ನಡ ಸೇವೆಯನ್ನು ಪರಿಗಣಿಸಿ ಅವರಿಗೆ 'ಕರ್ನಾಟಕ ರತ್ನ' ನೀಡಬೇಕು ಎಂದು ಬುಧವಾರ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಮುಖ್ಯಮಂತ್ರಿ ಎದುರು ಪ್ರಸ್ತಾಪಿಸಿದ ಸಭಿಕರು, ಚಪ್ಪಾಳೆಯ ಮೂಲಕ ವಿನೂತನವಾಗಿ ಒತ್ತಾಯ ಮಾಡಿದರು.

ಡಾ. ಪಾಪು 99ರ ಅಭಿನಂದನಾ ಕಾರ್ಯಕ್ರಮದಲ್ಲಿ ನಿಜಗುಣಾನಂದ ಶ್ರೀ ಅಭಿಮತ

# ಉದ್ಯಮದ ಕತ್ತಲೆಯಲ್ಲಿ ಪತ್ರಿಕಾರಂಗದ ಬೆಳಕು ಕಣ್ಮರೆ

ಧಾರವಾಡ: ದೇವರು ಕಣ್ಣಿಗೆ ಬಟ್ಟೆಕಟ್ಟಿ ನ್ಯಾಯ ಮರೆಮಾಚಿದಾಗ ಪತ್ರಿಕಾ ರಂಗ ನ್ಯಾಯ ಒದಗಿಸುತ್ತಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಸತ್ಯಾಸತ್ಯತೆ ತಿಳಿಸುವುದು ತಮ್ಮ ಕರ್ತವ್ಯ ಎನ್ನುವುದನ್ನು ಪತ್ರಕರ್ತರು ಮರೆಯುತ್ತಿದ್ದು, ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಮುಂಡರಗಿಯ ನಿಜಗುಣಾನಂದ ಶ್ರೀಗಳು ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ರವಿವಾರ ಡಾ. ಪಾಟೀಲ ಪುಟ್ಟಪ್ಪ ವಿಚಾರ ವೇದಿಕೆ ವತಿಯಿಂದ ನಡೆದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರ 99ನೇ ಜನ್ಮದಿನದ ನಿಮಿತ್ತ ಅಭಿನಂದನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪತ್ರಿಕಾರಂಗವು ಪತ್ರಿಕಾ ಉದ್ಯಮವಾಗಿ ಬೆಳೆದ ನಂತರದಲ್ಲಿ ಪತ್ರಿಕಾರಂಗದ ಬೆಳಕು ಉದ್ಯಮದ ಕತ್ತಲಲ್ಲಿ ಕಣ್ಮರೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ದೇಶದ ಮುಖಂಡರನ್ನು ಬದಲಾಯಿಸುವಲ್ಲಿ ಧಾರ್ಮಿಕ ಮುಖಂಡರಷ್ಟೇ ದೃಶ್ಯ ಮಾಧ್ಯಮದ ಜವಾಬ್ದಾರಿಯೂ ಇದೆ. ಮಾಧ್ಯಮಗಳೇ ಗುರುವಾಗಿರುವ ಸಮಾಜದಲ್ಲಿ ಮಾಧ್ಯಮ ತನ್ನ ಜವಾಬ್ದಾರಿಯುತ ಕೆಲಸವನ್ನು ಅರಿತು ನಡೆಯಬೇಕಾಗಿದೆ. ಕಾವಿಯೊಳಗಿನ ಖಾದಿ ಅಪಾಯಕಾರಿಯಾಗಿದೆ ಎಂದ ಅವರು, ನಾಡೋಜ ಡಾ. ಪಾಪು ಅವರ 100ನೇ ಜನ್ಮದಿನದಂದು ದೇಶದ ಪತ್ರಕರ್ತರಿಗೆ ತರಬೇತಿ ಕಾರ್ಯಾಗಾರ ನಡೆಸಬೇಕು ಎಂದು ಒತ್ತಾಯಿಸಿದರು.

ಇಂದಿನ ಸ್ವಾಮೀಜಿಗಳು ಧ್ಯಾನ, ಜಪ, ತಪಗಳನ್ನು ಮರೆತು ಬ್ಯಾಂಕ್ ಚೆಕ್ ಸಹಿ ಮಾಡುವ, ಬಹುಮಹಡಿ ಕಟ್ಟಡ, ಕಾರು ಬಯಸುವ ಸ್ವಾಮೀಜಿಗಳಾಗುತ್ತಿದ್ದಾರೆ. ಸಮಾಜಕ್ಕೆ ಅಗತ್ಯ ಮಾರ್ಗದರ್ಶನ ನೀಡುವ ಅವರು ಈ ರೀತಿ ನಡೆದುಕೊಳ್ಳುತ್ತಿರುವುದು ಸರಿಯಲ್ಲ ಎಂದು ಶ್ರೀಗಳು ಹರಿಹಾಯ್ದರು.

ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಕನ್ನಡ ನಾಡು-ನುಡಿಯ ಜಪತಪ ಮಾಡಿದ ಕಾರಣಕ್ಕಾಗಿಯೇ ಇಂದಿಗೂ ಪಾಪು ಅವರು ಆರೋಗ್ಯವಂತರಾಗಿದ್ದಾರೆ.



ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ರವಿವಾರ ನಡೆದ ನಾಡೋಜ ಡಾ. ಪಾಪು 99ರ ಕಾರ್ಯಕ್ರಮದಲ್ಲಿ ಡಾ. ಪಾಟೀಲ ಪುಟ್ಟಪ್ಪ ಅವರನ್ನು ನಿಜಗುಣಾನಂದ ಶ್ರೀಗಳು ಸನ್ಮಾನಿಸಿದರು.

ಪ್ರತಿಯೊಬ್ಬರಿಗೂ ಮಾರ್ಗದರ್ಶನ ನೀಡುವಲ್ಲಿ ಇನ್ನೂ ಗಟ್ಟಿಯಾಗಿದ್ದು, ಅವರಲ್ಲಿನ ಧೈರ್ಯ ಹಾಗೂ ಬುದ್ಧಿವಂತಿಕೆಯೇ ಅವರ ವ್ಯಕ್ತಿತ್ವವನ್ನು ಮತ್ತಷ್ಟು ಹರಿತವಾಗಿಸಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಪೂಡೇ ಬಿ. ಕೃಷ್ಣ ಮಾತನಾಡಿ, ನಾವು ಹತ್ತಾರು ಜನ್ಮಗಳಲ್ಲಿ ಸಾಧಿಸುವುದನ್ನು ಪಾಪು ಅವರು ಒಂದೇ ಜನ್ಮದಲ್ಲಿ ಸಾಧಿಸಿದ್ದಾರೆ. ಪಾಪು ಅವರೇ ಕನ್ನಡ ನಾಡಿನ ಸಾಕ್ಷಿಪ್ರಜ್ಞೆ. ಅವರ ಬೆಳಗಡಗಾಂಧಿ ಆಪ್ತರಾಗಿದ್ದಾರೆ. ಪಾಪು ಮಾರ್ಗದರ್ಶನ ಚಿರಚೇತನವಾಗಿರಲಿ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ. ಪಾಟೀಲ ಪುಟ್ಟಪ್ಪ, ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿದ ನಾನು ದೇಶದ ಇತಿಹಾಸದಲ್ಲಿ ಹೆಸರು ಮಾಡಿದ ನಾಯಕರು ಮತ್ತು ತಜ್ಞರನ್ನು ಭೇಟಿ ಮಾಡಿದ್ದೇನೆ. ಅತ್ಯಂತ ಸರಳ ಬದುಕು ನಡೆಸುವುದನ್ನು ಅವರಿಂದ ಕಲಿತಿದ್ದೇನೆ. ವಕೀಲನಾಗಬೇಕಿದ್ದ ನನ್ನನ್ನು ಸರ್ದಾರ್ ವಲ್ಲಭಭಾಯಿ ಪಟೇಲರು ಪತ್ರಕರ್ತನಾಗುವಂತೆ ಮಾಡಿದರು ಎಂದು ತಮ್ಮ ಬದುಕಿನ ದಿನಗಳನ್ನು ಮೆಲುಕು ಹಾಕಿದರು.

ಪಾಪು ವಿಚಾರ ವೇದಿಕೆಯ ಕಾರ್ಯಾಧ್ಯಕ್ಷ ಡಾ. ಜೆ.ಆರ್. ಶಮಗೌಡ, ಕೋಶಾಧ್ಯಕ್ಷ ಎನ್.ಬಿ. ರಾಮಾಪೂರ, ಡಾ. ಜಿ.ಎಂ. ಹೆಗಡೆ, ಎಂ.ಪಿ. ಸುಬ್ರಹ್ಮಣ್ಯ, ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಕಾರ್ಯಾಧ್ಯಕ್ಷ ಡಾ. ಡಿ.ಎಂ. ಹಿರೇಮಠ, ನಿರಂಜನ ವಾಲಿಶೆಟ್ಟರ್, ಶಿವಣ್ಣ ಬೆಲ್ಲದ, ಕೃಷ್ಣಾ ಜೋಶಿ ಇತರರು ಇದ್ದರು.

## ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪಗೆ 99ನೇ ಜನ್ಮ ದಿನದ ಅಭಿನಂದನಾ ಸಮಾರಂಭ

# 'ಪತ್ರಕರ್ತರು ಆತ್ಮಾವಲೋಕನ ಮಾಡಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಧಾರವಾಡ: 'ದೇವರ ಕಣ್ಣಿಗೂ ಬಟ್ಟೆ ಕಟ್ಟಿ ನ್ಯಾಯ ಮರೆ ಮಾಚಿದಾಗ ಪತ್ರಿಕಾರಂಗ ನ್ಯಾಯ ಒದಗಿಸುತ್ತಿತ್ತು. ಆದರೆ, ಇದೀಗ ಪರಿಸ್ಥಿತಿ ಬದಲಾಗಿದೆ. ಸತ್ಯಾಸತ್ಯತೆ ತಿಳಿಸುವುದು ತಮ್ಮ ಕರ್ತವ್ಯ ಎಂಬುದನ್ನು ಪತ್ರಕರ್ತರು ಮರೆಯುತ್ತಿದ್ದು, ತಮ್ಮನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಮುಂಡರಗಿಯ ನಿಜಗುಣಪ್ರಭು ಸ್ವಾಮೀಜಿ ಹೇಳಿದರು.

ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ ಅವರಿಗೆ 99ನೇ ಜನ್ಮ ದಿನದ ಅಂಗವಾಗಿ ವಿದ್ಯಾವರ್ಧಕ ಸಂಘದಲ್ಲಿ ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಪತ್ರಿಕಾರಂಗವು ಉದ್ಯಮವಾಗಿ ಬೆಳೆದ ನಂತರದಲ್ಲಿ ಪತ್ರಿಕಾರಂಗದ ಬೆಳಕು ಉದ್ಯಮದ ಕತ್ತಲಲ್ಲಿ ಕಣ್ಮರೆಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸಮಾಜದಲ್ಲಿ ಮಾಧ್ಯಮಗಳೇ ಗುರುವಾಗಿರುವಾಗ, ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಪ್ರಾಚೀನ ಸಾಹಿತಿ, ಪ್ರಾಚೀನ ಬರಹಗಾರರನ್ನೇ ಇಂದಿಗೂ ನೆನೆಯುವ ಪರಿಸ್ಥಿತಿ ಬಂದಿರುವುದು ಸಮಾಜದಲ್ಲಿನ ಯುವ ಬರಹಗಾರರ ಕೊರತೆಯನ್ನು ಬಿಂಬಿಸುತ್ತಿದೆ' ಎಂದರು.

'ಪಾಪು ಅವರ 100 ವರ್ಷದ ಜನ್ಮ ದಿನಾಚರಣೆಗೆ ದೇಶದ ಪತ್ರಕರ್ತರಿಗೆ ತರಬೇತಿ ಕಾರ್ಯಾಗಾರ ನಡೆಸಬೇಕು. ದೇಶದ ಮುಖಂಡರನ್ನು ಬದಲಾಯಿಸುವಲ್ಲಿ ಧಾರ್ಮಿಕ ಮುಂಡರಷ್ಟೇ ದೃಶ್ಯ ಮಾಧ್ಯಮದ ಜವಾಬ್ದಾರಿಯೂ ಇದೆ' ಎಂದರು.

**ಮುಖ್ಯಾಂಶಗಳು**

- ಪತ್ರಿಕಾರಂಗದ ಬೆಳಕು ಉದ್ಯಮದ ಕತ್ತಲಲ್ಲಿ ಕಣ್ಮರೆ
- ಕಾವಿಯೊಳಗಿನ ಖಾದಿ ಅಪಾಯಕಾರಿ
- ಪಾಪು ಒಳಗಡೆ ಗಾಂಧಿ ಅಡಗಿದ್ದಾರೆ

'ಕಾವಿಯೊಳಗಿನ ಖಾದಿ ಅಪಾಯಕಾರಿ ಆಗಿದೆ. ಇಂದಿನ ಸ್ವಾಮೀಜಿಗಳು ಧ್ಯಾನ, ಜಪ, ತಪಗಳನ್ನು ಮರೆತು ಬ್ಯಾಂಕ್ ಚೆಕ್ ಸಹಿ ಮಾಡುವ, ಐಷಾರಾಮಿ ಕಟ್ಟಡ, ಕಾರು ಬಯಸುವ ಸ್ವಾಮೀಜಿಗಳಾಗುತ್ತಿರುವುದು ಸರಿಯಲ್ಲ. ಸಮಾಜಕ್ಕೆ ಅಗತ್ಯ ಮಾರ್ಗದರ್ಶನ ಮಾಡುವಂತೆ ಅವರು ನಡೆದುಕೊಳ್ಳಬೇಕಿದೆ' ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಪ್ರೊ. ಹಿ.ಕೃಷ್ಣ ಮಾತನಾಡಿ, 'ಪುಟ್ಟಪ್ಪನವರು ವೈವಿಧ್ಯಮಯ ಬದುಕು ಕಂಡ, ಹೋರಾಟಗಾರ, ಬರಹಗಾರ, ಜನಪ್ರತಿನಿಧಿ, ಪತ್ರಕರ್ತ. ಕನ್ನಡ ನಾಡಿನ ಸಾಕ್ಷಿ ಪ್ರಜ್ಞೆ' ಎಂದರು.



ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಡಾ.ಪಾಟೀಲ ಪುಟ್ಟಪ್ಪ ಅವರನ್ನು ಸನ್ಮಾನಿಸಲಾಯಿತು

'ಪಾಪು ಒಳಗಡೆ ಗಾಂಧಿ ಅಡಗಿದ್ದಾರೆ. ನಾವು ಹತ್ತು ಜನ್ಮದಲ್ಲಿ ಸಾಧಿಸಲಾಗದ್ದನ್ನು ಒಂದೇ ಜನ್ಮದಲ್ಲಿ ಪಾಪು ಸಾಧಿಸಿದ್ದಾರೆ. ಸಮಾಜದಲ್ಲಿ ಪಾಪು ಮಾರ್ಗದರ್ಶನ ಚಿರ ಚೇತನವಾಗಿರಲಿ' ಎಂದು ಆಶಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ.ಪಾಟೀಲ ಪುಟ್ಟಪ್ಪ, 'ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿದ ನಾನು ದೇಶದ ಇತಿಹಾಸದಲ್ಲಿ ಹೆಸರು ಮಾಡಿದ್ದ ನಾಯಕರು ಹಾಗೂ ತಜ್ಞರನ್ನು ಭೇಟಿ ಮಾಡಿದ್ದೇನೆ. ಅತ್ಯಂತ ಸರಳ ಬದುಕು ನಡೆಸುವುದನ್ನು ಅವರಿಂದಲೂ ಕಲಿತಿದ್ದೇನೆ. ವಕೀಲರಾಗಬೇಕಿದ್ದ ನನ್ನನ್ನು ಸರ್ದಾರ್ ವಲ್ಲಭಭಾಯಿ ಪಟೇಲರು ಪತ್ರಕರ್ತರಾಗುವಂತೆ ಮಾಡಿದರು' ಎಂದು ಸ್ಮರಿಸಿದರು.

'ಕನ್ನಡ ನಾಡು ಎಂದರೆ ತುಂಬ ಪ್ರೀತಿ. ಹೀಗಾಗಿಯೇ ನಾಡಿಗಾಗಿ ಅನೇಕ ಹೋರಾಟಗಳನ್ನು ಮಾಡಿದ್ದು, ಯಶಸ್ಸನ್ನು ಕಂಡಿದ್ದೇನೆ. ಬ್ಯಾಡಗಿಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಅವರು ನನ್ನ ಬೆನ್ನು ಚಪ್ಪರಿಸಿ, ನಿನ್ನ ಹೋರಾಟ ಮುಂದುವರೆಸು ಎಂದು ಹೇಳಿದ್ದು ನನಗಿನ್ನು ನೆನಪಿದ್ದು, ಇದು ಗಾಂಧಿ ಮುಟ್ಟಿದ ದೇಹ' ಎಂದು ಹೆಮ್ಮೆಪಟ್ಟರು.

ಪಾಪು ವಿಚಾರ ವೇದಿಕೆಯ ಕಾರ್ಯಾಧ್ಯಕ್ಷ ಡಾ.ಜಿ.ಆರ್. ತಮಗೊಂಡ, ಕೋಶಾಧ್ಯಕ್ಷ ಎನ್.ಬಿ. ರಾಮಾಪುರ, ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಕಾರ್ಯಾಧ್ಯಕ್ಷ ಡಾ.ಡಿ.ಎಂ. ಹಿರೇಮಠ, ನಿರಂಜನ ವಾಲಿಶೆಟ್ಟರ, ಶಿವಣ್ಣ ಬೆಲ್ಲದ, ಕೃಷ್ಣಾ ಜೋಶಿ, ಡಾ.ಜಿ.ಎಂ. ಹೆಗಡೆ, ಎಂ.ಎ. ಸುಬ್ರಹ್ಮಣ್ಯ ಇದ್ದರು.

ಶ್ರೀ ವಿನಾಯಕ ದೇವಸ್ಥಾನಕ್ಕೆ ಶಂಕುಸ್ಥಾಪನೆ ನಡೆಯಿತು

ಸಂಸ್ಕರಣೆ ತರಬೇತಿ

ಡಾ.ಮೀರಾಸಾಬಿಹಳ್ಳಿ ಸಾಹಿತ್ಯ ಶ್ರೀ, ಪಟೇಲ್ ಬೊಮ್ಮೇಗೌಡ ನೆನಪಿನ ತತ್ವಶ್ರೀ ಪ್ರಶಸ್ತಿ ಪ್ರದಾನ

# ಹುಟ್ಟೂರ ಗೌರವ, ಸನ್ಮಾನ ಶ್ರೇಷ್ಠ

■ ವಿಕ ಸುದ್ದಿಲೋಕ ಹಿರಿಯೂರು

ಉತ್ತಮ ಕೃಷಿಕ, ಶಿಕ್ಷಕ, ಸಮಾಜ ಸೇವಕ ಹಾಗೂ ವರ್ತಕ ಸೇರಿದಂತೆ ಸತ್ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣದ ಉದ್ದೇಶವಾಗಬೇಕೆಂದು ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಹೇಳಿದರು.

ಪಟೇಲ್ ಪ್ರತಿಷ್ಠಾನ, ಬೆಂಗಳೂರಿನ ಸಿವಿಜಿ ಪಬ್ಲಿಕೇಷನ್ ವಾಣಿಸಕ್ಕರೆ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಮೂರು ಪುಸ್ತಕಗಳ ಬಿಡುಗಡೆ, ಡಾ. ಮೀರಾಸಾಬಿಹಳ್ಳಿ ಸಾಹಿತ್ಯಶ್ರೀ ಪ್ರಶಸ್ತಿ-2017 ಮತ್ತು ಪಟೇಲ್ ಬೊಮ್ಮೇಗೌಡ ನೆನಪಿನ ತತ್ವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಶಿಕ್ಷಕರು ಸಮಾಜಕ್ಕೆ ಆಸ್ತಿಯಾಗಬೇಕು. ಜೀವನದಲ್ಲಿ ಮೌಲ್ಯ ಹಾಗೂ ಸಂವೇದನಾ ಶೀಲತೆಯುಳ್ಳವರು ಶ್ರೇಷ್ಠ ವ್ಯಕ್ತಿಯಾಗಬಲ್ಲರು. ಯುವಕರು ನೆಲದ ಸಂಸ್ಕೃತಿ ಉಳಿಸಲು ಮುಂದಾಗಬೇಕು. ಯಾವುದೇ ಸಾಧಕರಿಗೆ ಹುಟ್ಟೂರಲ್ಲಿ ಲಭಿಸುವ ಗೌರವ, ಸನ್ಮಾನ ಬಹಳ ಶ್ರೇಷ್ಠವಾದದ್ದು. ಅಧಿಕಾರಕ್ಕಾಗಿ ಹಂಬಲಿಸದೆ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಬದುಕುವುದನ್ನು ಕಲಿಯಬೇಕೆಂದರು.

ಪುಸ್ತಕ ಬಿಡುಗಡೆಗೊಳಿಸಿದ ವಾಣಿಜ್ಯ ಇಲಾಖೆ ಉಪ ಆಯುಕ್ತ ಡಿ.ಎಸ್.ಲಿಂಗರಾಜು ಮಾತನಾಡಿ, ಇಂದಿನ ದಿನಗಳಲ್ಲಿ ಟಿ.ವಿ., ಮೊಬೈಲ್ ಯುವಜನರನ್ನು ಆವರಿಸಿಕೊಂಡಿವೆ. ಹಾಗಾಗಿ ಯುವಕರು ಸಂಸ್ಕೃತಿ, ಇತಿಹಾಸ, ಸಾಹಿತ್ಯದಿಂದ ದೂರ ಸರಿಯುತ್ತಿದ್ದಾರೆ. ಯುವಕರು ಸಂಸ್ಕೃತಿ ರಥ ಎಳೆಯಬೇಕಿದೆ. ವಿಚಾರವಂತರಾಗಲು ಕುವೆಂಪು, ಕಾರಂತ ಮುಂತಾದ ಲೇಖಕರ ಕೃತಿ ಅಧ್ಯಯನ ಮಾಡಿ ಎಂದರು.

ನಾವೆಲ್ಲ ಸೇರಿ ಸಂಸ್ಕೃತಿಯ ಆಶಯ ಸಾಕಾರಗೊಳಿಸುವ ಕೆಲಸ ಮಾಡಬೇಕಿದೆ. ನಡುಗಾಲದ ಜನಸಾಮಾನ್ಯರ ಅನುಭಾವಿ ಪರಂಪರೆಯೇ ತತ್ವಪದಕಾರರ ಪರಂಪರೆಯಾಗಿದೆ. ಕನ್ನಡ ಸಾಹಿತ್ಯ ಉಜ್ವಲಗೊಳಿಸಿದ್ದು ತತ್ವಪದಕಾರರ ಪರಂಪರೆ ಎಂಬುದನ್ನು ಮರೆಯದಿರೋಣ. ತತ್ವಪದಕಾರರ ಬಹುದೊಡ್ಡ ಪರಂಪರೆಯನ್ನು ರಾಯಚೂರು ಜಿಲ್ಲೆ ನಂತರದ ಸ್ಥಾನವನ್ನು ಚಿತ್ರದುರ್ಗ ಜಿಲ್ಲೆ ತುಂಬಿದೆ. ವಿದ್ವಾಂಸರ ಒಡನಾಟದಿಂದ ಸತ್ವಾರು ಪುಸ್ತಕ ಅಧ್ಯಯನ ಮಾಡಿದ ಅನುಭವವಾಗುವುದು ಎಂದರು. ಬಳ್ಳಾರಿ ಸ್ನಾತಕೋತ್ತರ ಕೇಂದ್ರ ಮುಖ್ಯಸ್ಥ ಪ್ರೊ.ಡಿ. ಅಂಜಿನಪ್ಪ ಮಾತನಾಡಿ, ಶ್ರೇಷ್ಠ ಕೃತಿಗಳು ಮನುಷ್ಯ ಸಂಬಂಧ ಬೆಸೆಯುತ್ತವೆ. ರಾಮಾಯಣದ ಕೇಂದ್ರ 'ಮಾತು' ಮತ್ತು 'ವಚನ'. ಮಾತು ತಪ್ಪಿದರೆ ಸಮಾಜ ಸಂಸ್ಕೃತಿ ಅಸ್ತವ್ಯಸ್ತವಾಗುತ್ತದೆ. ಆದಿಯಿಂದಲೂ ಜನ ಒಳ್ಳೆಯದನ್ನೇ ಸ್ವೀಕರಿಸುತ್ತಲೇ ಬಂದಿದ್ದಾರೆ ಎಂಬುದಕ್ಕೆ 'ರಾಮಾಯಣ' ಮತ್ತು 'ಮಹಾಭಾರತ' ಸಾಕ್ಷಿ. ಸಂವಿಧಾನಕ್ಕಿಂತಲೂ ಅನಾದಿ ಕಾಲದಿಂದ 'ರಾಮಾಯಣ' ಮತ್ತು 'ಮಹಾಭಾರತ' ಗ್ರಂಥಗಳು ಮಾನವೀಯತೆ ಸಾರುತ್ತ ಮನುಷ್ಯ ಸಂಬಂಧ ಗಟ್ಟಿಗೊಳಿಸುತ್ತಲೇ ಇವೆ ಎಂದರು. ವೇದಿಕೆಯಲ್ಲಿ ನಾಟಕಕಾರ ಎಂ. ಆರ್.ತಿಪ್ಪೇಸ್ವಾಮಿ, ಪ್ರಾಂಶುಪಾಲ ಡಾ.ಡಿ.ಧರಣೇಂದ್ರಯ್ಯ, ಪ್ರಕಾಶಕ ಸಿವಿಜಿ ಚಂದ್ರು, ಉಪನ್ಯಾಸಕ ಎಂ.ಜಿ.ರಂಗಸ್ವಾಮಿ, ದಾಮಿನಿ ಇತರರಿದ್ದರು.



ಹಿರಿಯೂರಿನ ವಾಣಿಸಕ್ಕರೆ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಮೂರು ಪುಸ್ತಕಗಳ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಡಾ.ವೂಡೇ ಪಿ. ಕೃಷ್ಣ ಉದ್ಘಾಟಿಸಿದರು.

## ಪ್ರಶಸ್ತಿ ಪ್ರದಾನ

'ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಸಾಹಿತ್ಯಶ್ರೀ-2017' ಪ್ರಶಸ್ತಿಯನ್ನು ಪತ್ರಕರ್ತ ಜಿ.ಎಸ್. ಉಜ್ಜಿನಪ್ಪಗೆ ಪ್ರದಾನ ಮಾಡಿ, ನೆನಪಿನ ಕಾಣಿಕೆ, 10 ಸಾವಿರ ರೂ. ನಗದು ನೀಡಿ ಗೌರವಿಸಲಾಯಿತು. ಪಟೇಲ್ ಬೊಮ್ಮೇಗೌಡ ತತ್ವಶ್ರೀ ಪ್ರಶಸ್ತಿ-2016ರ ಪ್ರಶಸ್ತಿಯನ್ನು ನಾಟಕಕಾರ ಮಾರೇನಹಳ್ಳಿ ಟಿ.ಭೀಮಯ್ಯ ಹಾಗೂ ಪಟೇಲ್ ಬೊಮ್ಮೇಗೌಡ ತತ್ವಶ್ರೀ ಪ್ರಶಸ್ತಿ-2017ನ್ನು ಕವಿ ನಾಟಕಕಾರ ಕಣಜನಹಳ್ಳಿ ನಾಗರಾಜ್‌ಗೆ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಜತೆಗೆ ತಲಾ ಐದು ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಪತ್ರ, ಸ್ಮರಣಿಕೆ ಪ್ರದಾನ ಮಾಡಲಾಯಿತು.

## ಬಿಡುಗಡೆ

ಮಲ್ಲಪ್ಪನಹಳ್ಳಿ ಎಂ.ಆರ್. ತಿಪ್ಪೇಸ್ವಾಮಿ ಅವರ 'ರಾಮಾಯಣ', ಪತ್ರಕರ್ತ ಜಿ.ಎಸ್. ಉಜ್ಜಿನಪ್ಪ ಅವರ 'ನಿಕಷ' ಹಾಗೂ ನಾಟಕಕಾರ ಮಾರೇನಹಳ್ಳಿ ಟಿ. ಭೀಮಯ್ಯ ಅವರ 'ಸತ್ಯಪರೀಕ್ಷೆ' ನಾಟಕಗಳನ್ನು ಲೋಕಾರ್ಪಣೆ ಮಾಡಲಾಯಿತು.



ಹಕಾರದಿಂದ ಮಕ್ಕಳ ಪ್ರವೇಶಾತಿ ಸುಧಾರಣೆ ಸುಧಾರಿತ ತಳಿ ಬಳಕೆ

ಮಾತನಾಡಿ, ಇಂದಿನ ಯುವಜನಾಂಗ ಸಮಾಜದ ಋಣಿಯಾಗಿ ... ವಲ್ಲಿ ತಮ್ಮಲ್ಲಿನ ಚತುರತೆ ಜ್ಞಾನ ಭಂಡಾರವನ್ನು ಬೆಳೆಸಬೇಕು ... ಪ್ರೊ. ಶಾಂತಾನಾಯ್ಕ್ ಮಾತನಾಡಿ, ವಿದ್ಯಾರ್ಥಿ ದೆಸೆ ಬಂಗಾರದ ಜೀವನ. ಈ ಸಮಯ ಶೈಕ್ಷಣಿಕ ಸಾಧ ... ಚಿದಾನಂದಪ್ಪ, ಪ್ರೊ. ಸಂಗಮೇಶ್ವರ, ಪ್ರೊ. ಲೋಕೇಶ ನಾಯ್ಕ್, ಪ್ರೊ. ಮೇಘನಾ ಕಾಲೇಜು ಸಿಬ್ಬಂದಿ ಹಾಜರಿದ್ದರು.

**ಶೈಕ್ಷಣಿಕ ಉದ್ದೇಶ** ಕೃತಿಗಳ ಲೋಕಾರ್ಪಣೆ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ. ವೂಡೇ ಪಿ. ಕೃಷ್ಣ ಅಭಿಮತ

# ಸಂವೇದನಾಶೀಲತೆಯಿಂದ ಮಾತ್ರ ಶ್ರೇಷ್ಠ ವ್ಯಕ್ತಿತ್ವ

• ಕನ್ನಡಪ್ರಭ ವಾರ್ತೆ ಹಿರಿಯೂರು

ಸಮಾಜ ಸೇವಕ ಕೃಷಿಕ, ಶಿಕ್ಷಕ, ಹಾಗೂ ವರ್ತಕರನ್ನು ಸೃಷ್ಟಿಸುವುದು ಶಿಕ್ಷಣದ ಉದ್ದೇಶವಾಗಬೇಕು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಹೇಳಿದರು.

ನಗರದ ವಾಣಿ ಸಕ್ಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಪಟೇಲ್ ಪ್ರತಿಷ್ಠಾನ, ಬೆಂಗಳೂರಿನ ಸಿವಿಜಿ ಪಬ್ಲಿಕೇಷನ್ಸ್, ಏರ್ಪಡಿಸಿದ್ದ ಮೂರು ಪುಸ್ತಕಗಳ ಬಿಡುಗಡೆ ಹಾಗೂ ಡಾ. ಮೀರಾಸಾಬಿಹಳ್ಳಿ ಸಾಹಿತ್ಯಶ್ರೀ ಪ್ರಶಸ್ತಿ–2017 ಮತ್ತು ಪಟೇಲ್ ಬೊಮ್ಮೇಗೌಡ ನೆನಪಿನ ತತ್ತ್ವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಮೌಲ್ಯ ಹಾಗೂ ಸಂವೇದನಾ ಶೀಲತೆಯುಳ್ಳವರು ಶ್ರೇಷ್ಠ ವ್ಯಕ್ತಿಯಾಗಬಲ್ಲರು. ಕೃತಜ್ಞತಾಭಾವ ಜೀವನದ ಗತಿಯಾಗಬೇಕು. ಅತಿಮುಖ್ಯವಾಗಿ ಯುವಕರು ಹುಟ್ಟಿದ ಗ್ರಾಮ, ವಾಸಿಸುವ ಪರಿಸರದಲ್ಲಿ ಇರುವ ಪರಿಸರ ಹಾಗೂ ಸ್ಥಿತಿಯಲ್ಲಿ ಸಮಾಜ ಸೇವೆಗೆ ಮುಂದಾಗಬೇಕು. ಯುವಕರು ನೆಲದ ಸಂಸ್ಕೃತಿ ಉಳಿಸಲು ಮುಂದಾಗಬೇಕು. ಯಾವುದೇ ಸಾಧಕರಿಗೆ ಹುಟ್ಟೂರಲ್ಲಿ ಲಭಿಸುವ ಗೌರವ ಸನ್ಮಾನ ಬಹಳ ಶ್ರೇಷ್ಠವಾದದ್ದು. ಅಧಿಕಾರಕ್ಕಾಗಿ ಹಂಬಲಿಸದೆ ತತ್ತ್ವ ಸಿದ್ಧಾಂತಕ್ಕೆ ಬದ್ಧರಾಗಿ ಬದುಕುವುದನ್ನು ಕಲಿಯಬೇಕು ಎಂದು ತಿಳಿಸಿದರು.

ವಾಣಿಜ್ಯ ಇಲಾಖೆ ಉಪ ಆಯುಕ್ತ ಡಿ.ಎಸ್. ಲಿಂಗರಾಜು ಮಾತನಾಡಿ, ಇಂದಿನ ಸ್ಥಿತಿಯಲ್ಲಿ ... ಸಂಗತಿಗಳಾದ ಟಿ.ವಿ, ಸಿನಿಮಾ, ಮೊಬೈಲ್ ಯುವಜನರನ್ನು ಆವರಿಸಿಕೊಂಡಿವೆ. ಸಾಹಿತ್ಯಕ್ಕೆ ಕುಟುಂಬ, ಗ್ರಾಮ, ... ಒಳಗೊಳ್ಳುವ ಶಕ್ತಿ ಹೊಂದಿದೆ. ಇವೆಲ್ಲ ಸೇರಿ ಸಂಸ್ಕೃತಿಯ ಸದಾಶಯಗಳನ್ನು ಸಾಕಾರಗೊಳಿಸುವ ಕೆಲಸ ಮಾಡಬೇಕಿದೆ. ... ಲಕ್ಷ್ಯಕ್ಕೆ ಒಳಗಾಗಿದ್ದಾಗ್ಯೂ ತತ್ತ್ವಪದಕಾರರ ಪರಂಪರೆ ವಚನಕಾರರ ಪರಂಪರೆಯಷ್ಟೇ ಉಜ್ವಲವಾಗಿದೆ ಎಂದರು.

ಚಳ್ಳಕೆರೆ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥ ಪ್ರೊ. ಡಿ. ಅಂಜನಪ್ಪ ಮಾತನಾಡಿ, ಶ್ರೇಷ್ಠ ಕೃತಿಗಳು ಮನುಷ್ಯ ಸಂಬಂಧಗಳನ್ನು ಬೆಸೆಯುತ್ತವೆ. ರಾಮಾಯಣದ ಕೇಂದ್ರ 'ಮಾತು' ಮತ್ತು 'ವಚನ'. ಮಾತು ತಪ್ಪಿದರೆ ಸಮಾಜ ಸಂಸ್ಕೃತಿ ಅಸ್ತವ್ಯಸ್ತವಾಗುತ್ತದೆ. ಆದಿಯಿಂದಲೂ ಜನ ಒಳ್ಳೆಯದನ್ನೇ ಸ್ವೀಕರಿಸುತ್ತಲೇ ಬಂದಿದ್ದಾರೆ ಎಂಬುದಕ್ಕೆ 'ರಾಮಾಯಣ' ಮತ್ತು 'ಮಹಾಭಾರತ' ಸಾಕ್ಷಿ. ಸಂವಿಧಾನಕ್ಕಿಂತಲೂ ಅನಾದಿ ಕಾಲದಿಂದ 'ರಾಮಾಯಣ' ಮತ್ತು 'ಮಹಾಭಾರತ' ಗ್ರಂಥಗಳು ಮಾನವೀಯತೆ ಸಾರುತ್ತ ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತಲೇ ಇವೆ ಎಂದು ಅಭಿಪ್ರಾಯಪಟ್ಟರು.



ಹಿರಿಯೂರಿನಲ್ಲಿ ಪುಸ್ತಕಗಳ ಬಿಡುಗಡೆ ಹಾಗೂ ಡಾ. ಮೀರಾಸಾಬಿಹಳ್ಳಿ ಸಾಹಿತ್ಯಶ್ರೀ ಪ್ರಶಸ್ತಿ–2017 ಮತ್ತು ಪಟೇಲ್ ಬೊಮ್ಮೇಗೌಡ ನೆನಪಿನ ತತ್ತ್ವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಿದರು.

ಬಿಡುಗಡೆ: ಇದೇ ವೇಳೆ ಮಲ್ಲಪ್ಪನಹಳ್ಳಿ ಎಂ.ಆರ್. ತಿಪ್ಪೇಸ್ವಾಮಿ ಅವರ 'ರಾಮಾಯಣ', ಪತ್ರಕರ್ತ ಜಿ.ಎಸ್. ಉಜ್ಜನಪ್ಪ ಅವರ 'ನಿಕಷ' ಹಾಗೂ ನಾಟಕಕಾರ ಮಾರೇನಹಳ್ಳಿ ಟಿ. ಭೀಮಯ್ಯ ಅವರ 'ಸತ್ವಪರೀಕ್ಷೆ' ನಾಟಕಗಳ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಸಾಹಿತ್ಯಶ್ರೀ–2017' ಪ್ರಶಸ್ತಿಯನ್ನು ಪತ್ರಕರ್ತ ಜಿ.ಎಸ್. ಉಜ್ಜನಪ್ಪ ಅವರಿಗೆ ಪ್ರದಾನ ಮಾಡಿ, ಪ್ರಶಸ್ತಿ ಫಲಕ, ನೆನಪಿನ ಕಾಣಿಕೆ, ₹10,000 ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಪಟೇಲ್ ಬೊಮ್ಮೇಗೌಡ ತತ್ವಶ್ರೀ ಪ್ರಶಸ್ತಿ–2016ರ ಪ್ರಶಸ್ತಿಯನ್ನು ನಾಟಕಕಾರ ಮಾರೇನಹಳ್ಳಿ ಟಿ. ಭೀಮಯ್ಯ ಹಾಗೂ ಪಟೇಲ್ ಬೊಮ್ಮೇಗೌಡ ತತ್ತ್ವ ಶ್ರೀ ಪ್ರಶಸ್ತಿ–2017 ನ್ನು ಕವಿ ನಾಟಕಕಾರ ಕಣಜನಹಳ್ಳಿ ನಾಗರಾಜ್ ಅವರಿಗೆ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಜೊತೆಗೆ ತಲಾ ₹5 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ, ಸ್ಮರಣಿಕೆ ಪ್ರದಾನ ಮಾಡಲಾಯಿತು.

ನಾಟಕಕಾರ ಎಂ.ಆರ್. ತಿಪ್ಪೇಸ್ವಾಮಿ, ಪ್ರಾಂಶುಪಾಲ ಡಾ. ಡಿ. ಧರಣೇಂದ್ರಯ್ಯ, ಪ್ರಕಾಶಕ ಸಿವಿಜಿ ಚಂದ್ರು, ಉಪನ್ಯಾಸಕ ಎಂ.ಜಿ. ರಂಗಸ್ವಾಮಿ, ದಾಮಿನಿ ಉಪಸ್ಥಿತರಿದ್ದರು.



ಶ್ರೀಹರಿ ಗುರುಸಾರ್ವಭೌಮ ಭಜನಾ ಮಂಡಳಿಗಳ ಸದಸ್ಯರು ಇದ್ದರು.



ಮಾಲೀಕರ ಸಂಘದಿಂದ ಭೀಮಸಮುದ್ರದ ಜಿ.ಎಸ್. ಮಂಜುನಾಥ್ ನೇತೃತ್ವದಲ್ಲಿ ಡಿಸಿಗೆ ಮನವಿ ಸಲ್ಲಿಸಿದರು.

**ಮೂರು ಕೃತಿಗಳ ಬಿಡುಗಡೆ**

# ಯುವಸಮುದಾಯ ನೆಲದ ಸಂಸ್ಕೃತಿ ಉಳಿಸಲಿ

## ■ ಇರುವುದನ್ನು ಒಪ್ಪಿಕೊಳ್ಳುತ್ತ ಮನಸ್ಸು ವಿಕಸಿತಗೊಳಿಸಿಕೊಳ್ಳಿ ■ ಶ್ರೇಷ್ಠ ಕೃತಿಗಳಿಂದ ಬೆಳೆಯುತ್ತೆ ಸಂಬಂಧ

ಹಿರಿಯೂರು: ಯುವಕರು ನೆಲದ ಸಂಸ್ಕೃತಿ ಉಳಿಸಲು ಮುಂದಾಗಬೇಕು. ಯಾವುದೇ ಸಾಧಕರಿಗೆ ಹುಟ್ಟೂರಲ್ಲಿ ಲಭಿಸುವ ಗೌರವ ಸನ್ಮಾನ ಬಹಳ ಶ್ರೇಷ್ಠ. ಯುವಕರು ಇರುವುದನ್ನು ಒಪ್ಪಿಕೊಳ್ಳುತ್ತ ವಿಕಸಿತ ಮನಸ್ಸು ಬೆಳೆಸಿಕೊಳ್ಳಬೇಕು. ಅಧಿಕಾರಕ್ಕಾಗಿ ಹಂಬಲಿಸದೆ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಬದುಕುವುದನ್ನು ಕಲಿಯಬೇಕು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ। ವೂಡೇ ಪಿ.ಕೃಷ್ಣ ಹೇಳಿದರು.

ಪಟೇಲ್ ಪ್ರತಿಷ್ಠಾನ, ಬೆಂಗಳೂರಿನ ಸಿವಿಜಿ ಪಬ್ಲಿಕೇಷನ್ಸ್, ವಾಣಿಸಕ್ಕರೆ ಸರಕಾರಿ ಪ್ರಥಮದರ್ಜೆ ಕಾಲೇಜಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೂರು ಪುಸ್ತಕಗಳ ಬಿಡುಗಡೆ ಹಾಗೂ ಡಾ। ಮೀರಾಸಾಬಿಹಳ್ಳಿ ಸಾಹಿತ್ಯಶ್ರೀ ಪ್ರಶಸ್ತಿ-2017 ಮತ್ತು ಪಟೇಲ್ ಬೊಮ್ಮೇಗೌಡ ನೆನಪಿನ ತತ್ವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಉತ್ತಮ ಕೃಷಿಕ, ಶಿಕ್ಷಕ, ಸಮಾಜ ಸೇವಕ ಹಾಗೂ ಕಾರ್ಮಿಕ ಸೇರಿದಂತೆ ಉತ್ತಮ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣದ ಉದ್ದೇಶವಾಗಬೇಕು. ಶಿಕ್ಷಿತರಾದವರು ಸಮಾಜಕ್ಕೆ ಆಸ್ತಿಯಾಗಬೇಕು. ಕೃತಜ್ಞತಾಭಾವ ಹಾಗೂ ಸಂವೇದನಾಶೀಲತೆಯುಳ್ಳವರು ಶ್ರೇಷ್ಠ ಜೀವನದ ಗತಿಯಾಗಬೇಕು. ಜೀವನದಲ್ಲಿ ಮೌಲ್ಯ ವ್ಯಕ್ತಿಯಾಗಬಲ್ಲರು. ಅತಿಮುಖ್ಯವಾಗಿ ಯುವಕರು ಹುಟ್ಟಿದ ಗ್ರಾಮ, ವಾಸಿಸುವ ಪರಿಸರದಲ್ಲಿ ಇರುವ ಪರಿಸರ ಹಾಗೂ ಸ್ಥಿತಿಯಲ್ಲಿ ಸಮಾಜ ಸೇವೆಗೆ ಮುಂದಾಗಬೇಕು ಎಂದರು.



ಹಿರಿಯೂರು: ಮೂರು ಪುಸ್ತಕಗಳ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ। ವೂಡೇ ಪಿ.ಕೃಷ್ಣ ಉದ್ಘಾಟಿಸಿದರು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ವಾಣಿಜ್ಯ ಇಲಾಖೆ ಉಪ ಆಯುಕ್ತ ಡಿ.ಎಸ್. ಲಿಂಗರಾಜು, ಇಂದಿನ ಸಮಾಜವು ಟಿವಿ, ಸಿನಿಮಾ, ಮೊಬೈಲ್ ಹಿಂದೆ ಬಿದ್ದಿದೆ. ಹೀಗಾಗಿಯೇ ಯುವಕರು ಸಂಸ್ಕೃತಿ, ಇತಿಹಾಸ, ಸಾಹಿತ್ಯದಿಂದ ದೂರ ಸರಿಯುತ್ತಿದ್ದಾರೆ. ಯುವಕರು ಸಂಸ್ಕೃತಿ ರಥವನ್ನು ಎಳೆಯಬೇಕಿದೆ. ವಿಚಾರವಂತರಾಗಲು ಕುವೆಂಪು, ಕಾರಂತ ಮುಂತಾದ ಲೇಖಕರ ಕೃತಿಗಳನ್ನು ಅಧ್ಯಯನ ಮಾಡಿ ಎಂದರು.

ಚಳ್ಳಕೆರೆ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥ ಪ್ರೊ। ಡಿ. ಅಂಜನಪ್ಪ ಮಾತನಾಡಿ, ಶ್ರೇಷ್ಠ ಕೃತಿಗಳು ಮನುಷ್ಯ ಸಂಬಂಧಗಳನ್ನು ಬೆಸೆಯುತ್ತವೆ. ರಾಮಾಯಣದ ಕೇಂದ್ರ 'ಮಾತು' ಮತ್ತು 'ವಚನ'. ಮಾತು ತಪ್ಪಿದರೆ ಸಮಾಜ ಸಂಸ್ಕೃತಿ ಅಸ್ತವ್ಯಸ್ತವಾಗುತ್ತದೆ. ಆದಿಯಿಂದಲೂ ಜನ ಒಳ್ಳೆಯದನ್ನೇ ಸ್ವೀಕರಿಸುತ್ತಲೇ ಬಂದಿದ್ದಾರೆ ಎಂಬುದಕ್ಕೆ 'ರಾಮಾಯಣ' ಮತ್ತು 'ಮಹಾಭಾರತ' ಗ್ರಂಥಗಳೇ ಸಾಕ್ಷಿ ಎಂದರು.

ಲೋಕಾರ್ಪಣೆ: ಮಲ್ಲಪ್ಪನಹಳ್ಳಿ ಎಂ.ಆರ್ ತಿಪ್ಪೇಸ್ವಾಮಿ ಅವರ 'ರಾಮಾಯಣ', ಪತ್ರಕರ್ತ ಜಿ.ಎಸ್. ಉಜ್ಜನಪ್ಪ ಅವರ 'ನಿಕಷ' ಹಾಗೂ ನಾಟಕಕಾರ ಮಾರೇನಹಳ್ಳಿ ಟಿ.ಭೀಮಯ್ಯ ಅವರ 'ಸತ್ವಪರೀಕ್ಷೆ' ನಾಟಕಗಳನ್ನು ಲೋಕಾರ್ಪಣೆಗೊಳಿಸಲಾಯಿತು.

'ಜಾನಪದ ವಿದ್ವಾಂಸ ಡಾ। ಮೀರಾಸಾಬಿಹಳ್ಳಿ ಶಿವಣ್ಣ ಸಾಹಿತ್ಯಶ್ರೀ-2017' ಪ್ರಶಸ್ತಿಯನ್ನು ಪತ್ರಕರ್ತ ಜಿ.ಎಸ್. ಉಜ್ಜನಪ್ಪನವರಿಗೆ ಪ್ರದಾನ ಮಾಡಲಾಯಿತು. ಪಟೇಲ್ ಬೊಮ್ಮೇಗೌಡ ತತ್ವಶ್ರೀ-2016ರ ಪ್ರಶಸ್ತಿಯನ್ನು ನಾಟಕಕಾರ ಮಾರೇನಹಳ್ಳಿ ಟಿ.ಭೀಮಯ್ಯ ಹಾಗೂ ಪಟೇಲ್ ಬೊಮ್ಮೇಗೌಡ ತತ್ವಶ್ರೀ-2017 ಪ್ರಶಸ್ತಿಯನ್ನು ಕವಿ ನಾಟಕಕಾರ ಕಣಜನಹಳ್ಳಿ ನಾಗರಾಜ್ ಅವರಿಗೆ ನೀಡಿ ಸನ್ಮಾನಿಸಲಾಯಿತು.

ನಾಟಕಕಾರ ಎಂ.ಆರ್. ತಿಪ್ಪೇಸ್ವಾಮಿ, ಪ್ರಾಂಶುಪಾಲ ಡಾ। ಡಿ. ಧರಣೇಂದ್ರಯ್ಯ, ಪ್ರಕಾಶಕ ಸಿವಿಜಿ ಚಂದ್ರು, ಉಪನ್ಯಾಸಕ ಎಂ.ಜಿ. ರಂಗಸ್ವಾಮಿ, ದಾಮಿನಿ ಇತರರು ಇದ್ದರು.

## ಗುಣಮಟ್ಟದ ಶಿಕ್ಷಣ ಅಗತ್ಯ: ತಿಪ್ಪೇಸ್ವಾಮಿ

## ವಿದ್ಯಾರ್ಥಿಗಳ ಅಭಿವೃದ್ಧಿಗೆ ಶೈಕಣಿಕ ಕಾರ್ಯಕ್ರಮ ಸಹಕಾರಿ

## ಗ್ರಾಪಂ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ

ಮುಂದಿನ ಪ್ರಯೋಜನ ... ವಿದ್ಯಾರ್ಥಿಗಳು.

ಶಾಲಾ ... ಪ್ರದರ್ಶನ ಆಯೋಜಿಸಲಾಗಿದೆ. ಇದೇ ರೀತಿ ಸಂಸ್ಥೆಯಲ್ಲಿ ಒಂದಲ್ಲೊಂದು ವಿಭಿನ್ನ ಕಾರ್ಯಕ್ರಮ ನಡೆಯುತ್ತ ವಿದ್ಯಾರ್ಥಿಗಳ ಬುದ್ಧಿಮಟ್ಟ ಹೆಚ್ಚುವಲ್ಲಿ ಪ್ರಾಚಾರ್ಯರು, ಶಿಕ್ಷಕರು ಶ್ರಮಿಸುತ್ತಿದ್ದಾರೆ' ಎಂದರು.

ಸಂಸ್ಥೆಯ ಕಾರ್ಯದರ್ಶಿ ಸಿ.ಎನ್. ಲಿಂಗರೆಡ್ಡಿ ಮಾತನಾಡಿ, 'ಮಕ್ಕಳು ಉತ್ಸಾಹದಿಂದ ಪಾಲ್ಗೊಳ್ಳುವ ಮೂಲಕ ತಮ್ಮಲ್ಲಿರುವ ಪ್ರತಿಭೆ ಹೊರಹಾಕಲು ಮುಂದಾಗಿದ್ದಾರೆ. ಈ ರೀತಿ ಮುಂದೆ ಬಂದಾಗ ಮಾತ್ರ ಜೀವನದಲ್ಲಿ ಏನಾದರೂ ಸಾಧಿಸಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು.

ಪ್ರಾಚಾರ್ಯ ಎಂ.ಎಸ್. ಪ್ರಭಾಕರ್ ಮಾತನಾಡಿ, ಇಂತಹ ಚಟುವಟಿಕೆಗಳಿಂದ ಮಕ್ಕಳು ಓದು, ಪಾಠದ ಒತ್ತಡದಿಂದ ಹೊರಬರಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

... ಪ್ರತಿಕ್ರಿಯೆ ... ತಿಳಿಸಿದರು.

'ಲಿಂಗಾಯತ ಸಮುದಾಯದ ಭೀಮಸಮುದ್ರದ ಜಿ.ಎಸ್.ಚನ್ನಬಸಪ್ಪ, ಎಸ್.ಕೆ.ಬಸವರಾಜನ್ ಅವರನ್ನು ಗುರುತಿಸಿದ್ದು ಜೆಡಿಎಸ್ ಮಾತ್ರ. ಬೇರೆ ಯಾವ ಪಕ್ಷದಲ್ಲಿಯೂ ವೀರಶೈವ ಲಿಂಗಾಯತರಿಗೆ ಮಾನ್ಯತೆ ಸಿಕ್ಕಿಲ್ಲ. ಕಾಂಗ್ರೆಸ್ ಅಭ್ಯರ್ಥಿಯಿಂದ ನಮಗೆ ಯಾವ ತೊಂದರೆಯೂ ಇಲ್ಲ. ಬಿಜೆಪಿ ಅಭ್ಯರ್ಥಿಯೇ ನಮಗೆ ನೇರ ಪ್ರತಿಸ್ಪರ್ಧಿ ಆಗುವುದರಿಂದ ತಂತ್ರಕ್ಕೆ ಪ್ರತಿತಂತ್ರ ರೂಪಿಸಿ ಚುನಾವಣೆಯಲ್ಲಿ ಗೆಲ್ಲುತ್ತೇವೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'ನಾನು ಖಂಡಿತ ಹೊರಗಿನವನಲ್ಲ. ಇದೇ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಜನಿಸಿದವನು. ಚಿತ್ರದುರ್ಗ ಜಿಲ್ಲೆಯಲ್ಲೇ ಎಲ್ಲ ವರ್ಷ ವಾಸವಿದ್ದು ಇಲ್ಲಿನ ಪ್ರತಿ ಬದಲಾವಣೆ, ಗಲ್ಲಿಯೂ ನನಗೆ ಗೊತ್ತು. ಪಕ್ಷ ಅಂದಿನ ಆರಂಭಗೊಂಡಿದ್ದೇ ಇಲ್ಲಿಂದ. ಈಗ ಪಕ್ಷ ರಾಜ್ಯದಲ್ಲಿ ಭವಿಷ್ಯವೂ ಇಲ್ಲಿಂದಲೇ ಆರಂಭವಾಗುತ್ತಿರುವ ಬಗ್ಗೆ ನನಗೆ ಖುಷಿ ಇದೆ. ಲಿಂಗಾಯತ ಸಮುದಾಯ ಸೇರಿದಂತೆ ಇತರ ಸಮುದಾಯಗಳು ಈ ಸಿಲ್ಲೆಯಲ್ಲಿ [illegible] ಪ್ರಯತ್ನಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.

ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಯಶೋಧರ ಮಾತನಾಡಿದರು. ಜಿಲ್ಲಾ ವಕ್ತಾರ ಡಿ.ಗೋಪಾಲಸ್ವಾಮಿ ನಾಯಕ, ತಾಲ್ಲೂಕು ಅಧ್ಯಕ್ಷ ತಿಮ್ಮಣ್ಣ, ಮಾಜಿ ಸದಸ್ಯ ಟಿ.ಟಿ. ರಾಜೇಶ್ ಇದ್ದರು.

# 'ಅವಶ್ಯಕತೆ ಇಲ್ಲದ ಕಡೆ ಯುವಜನರ ಗಮನ'

ಪ್ರಜಾವಾಣಿ ವಾರ್ತೆ

ಹಿರಿಯೂರು: ದೇಶದ ಇತಿಹಾಸ ಓದದ ಪರಿಣಾಮ, ಅವಶ್ಯಕತೆ ಇಲ್ಲದ ಕಡೆ ಯುವಜನರು ಗಮನ ಹರಿಸುತ್ತಿರುವುದು ವಿಷಾದದ ಸಂಗತಿ ಎಂದು ಲೇಖಕ ಬಿ.ಎಸ್. ಲಿಂಗರಾಜು ತಿಳಿಸಿದರು.

ನಗರದ ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಪಟೇಲ್ ಪ್ರತಿಷ್ಠಾನ ಮತ್ತು ಬೆಂಗಳೂರಿನ ಸಿವಿಜಿ ಪಬ್ಲಿಕೇಷನ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಮೂರು ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಓದುವ ಹವ್ಯಾಸ ಎಲ್ಲರಲ್ಲೂ ಕಡಿಮೆಯಾಗುತ್ತಿದೆ. ಯುವಜನರು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ. ತಂತ್ರಜ್ಞಾನದ ಅನ್ವೇಷಣೆ ಎಷ್ಟಿದ್ದರೂ ಅದು ಓದುವ ಸಂಸ್ಕೃತಿಯನ್ನು ಹಾಳು ಮಾಡಬಾರದು ಎಂದು ಅಭಿಪ್ರಾಯಪಟ್ಟರು.

ಚಳ್ಳಕೆರೆಯ ಕನ್ನಡ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥ ಪ್ರೊ. ಡಿ. ಲಿಂಗಪ್ಪ ಮಾತನಾಡಿ, 'ನಾಟಕ ನೋಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಹಿಂದೆಲ್ಲ ಹಳ್ಳಿಗಳಲ್ಲಿ ನಾಟಕಗಳು ಆಗಾಗ ಸಾಂಸ್ಕೃತಿಕ ಮೆರುಗನ್ನು ಹೆಚ್ಚಿಸುತ್ತಿದ್ದವು. ಮಾತು ತಪ್ಪಬಾರದು, ಮಾತು ತಪ್ಪಿದಲ್ಲಿ ಬದುಕು ಅಸ್ತವ್ಯಸ್ತವಾಗುತ್ತದೆ ಎಂಬ ಅರಿವಿತ್ತು. ಪ್ರಸ್ತುತ ಮಾತು ಸೋತಿರುವ ಕಾಲದಲ್ಲಿ ನಾವಿದ್ದೇವೆ' ಎಂದು ವಿಷಾದಿಸಿದರು.

ಬದುಕಿನ ದೃಷ್ಟಿಕೋನಕ್ಕೆ ರಾಮಾಯಣ ಆಧಾರವಾಗುತ್ತದೆ. ಮಾನವೀಯತೆಗೆ ಸ್ಪಂದಿಸುವ ಗುಣವನ್ನು ಈಗಲೂ ಹಳ್ಳಿಗಳಲ್ಲಿ ಕಾಣಬಹುದು ಎಂದು ಅವರು ಹೇಳಿದರು.

ಬಿ.ಎಸ್. ಉಜ್ಜನಪ್ಪ ಅವರ 'ವಿರಸ', ಧೀಮಣ್ಣ ಮೇಷ್ಟ್ರು ಅವರ 'ಸತ್ಯ ಪರೀಕ್ಷೆ' ಹಾಗೂ ಮಲ್ಲಪ್ಪನಹಳ್ಳಿ ಶಿವಣ್ಣಸ್ವಾಮಿ ಅವರ 'ರಾಮಾಯಣ ನಾಟಕ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಜನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಂಶುಪಾಲ ಡಾ.ಧರಣೇಂದ್ರಯ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ವೂಡೇ ಪಿ.ಕೃಷ್ಣ, ಡಾ. ರಾಜಶೇಖರಪ್ಪ, ಬಿ.ಎಸ್. ಉಜ್ಜನಪ್ಪ, ಧೀಮಣ್ಣ ಮೇಷ್ಟ್ರು, ಕಣುಮನಹಳ್ಳಿ ನಾಗರಾಜ್, ಜೇಮಣ್ಣ, ಟಿ.ಡಿ. ದಯಾನಂದ, ಪ್ರೊ. ಎಂ.ವಿ.ರಂಗಸ್ವಾಮಿ ಉಪಸ್ಥಿತರಿದ್ದರು. ಎಂ.ಪಿ.ಆರ್. ದಾಮು ಕಾರ್ಯಕ್ರಮ ನಿರೂಪಿಸಿದರು.



ಹಿರಿಯೂರಿನ ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಪಟೇಲ್ ಪ್ರತಿಷ್ಠಾನ ಮತ್ತು ಬೆಂಗಳೂರಿನ ಸಿವಿಜಿ ಪಬ್ಲಿಕೇಷನ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಡಾ. ಮೀರಾಸಾಬಿಹಳ್ಳಿ ಶಿವಣ್ಣ ಉದ್ಘಾಟಿಸಿದರು.

# ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಮನವಿ

ಹಿರಿಯೂರು: ಎಲೆ ಮರೆಯ ಕಾಯಿಯಂತಿರುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕು ಎಂದು ಗಾಂಧಿ ಸ್ಮಾರಕ ನಿಧಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ತಿಳಿಸಿದರು.


ನಗರದ ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಪಟೇಲ್ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಿ.ಎಸ್. ಉಜ್ಜನಪ್ಪ ಅವರಿಗೆ 'ಸಾಹಿತ್ಯ ಶ್ರೀ', ಧೀಮಣ್ಣ ಮೇಷ್ಟ್ರು ಮತ್ತು ಕಣುಮನಹಳ್ಳಿ ನಾಗರಾಜ್ ಅವರಿಗೆ 'ಕಲಾಶ್ರೀ' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಯಾಂತ್ರಿಕವಾಗಿ ಹಣ ಗಳಿಸಿ ಶ್ರೀಮಂತಿಕೆ ಪಡೆಯುವ ಬದಲು ಆತ್ಮ ತೃಪ್ತಿಯ ಮೂಲಕ ಜೀವನವನ್ನು ಶ್ರೀಮಂತಗೊಳಿಸಿಕೊಳ್ಳಬೇಕು. ತತ್ವಜ್ಞಾನದ ಮೂಲಕ ಬದುಕು ಕಟ್ಟಿಕೊಂಡಲ್ಲಿ ಬದುಕಿರುವವರೆಗೆ ಬದುಕು ಸ್ಥಿರವಾಗಿರುತ್ತದೆ. ಮದ್ಯ, ಸ್ವಾರ್ಥ, ಮಾಡಿಗೆ [illegible] ಬದುಕು ನಡೆಸುವುದು ಸಲ್ಲದು ಎಂದರು.


ತುಮಕೂರಿನ ಟಿ.ಡಿ. ಆನಂದಮೂರ್ತಿ ಮಾತನಾಡಿ, 'ಸಾಹಿತ್ಯ, ಸಂಸ್ಕೃತಿ, ಸಂಸ್ಕಾರಗಳು ಪರಸ್ಪರ ಅವಲಂಬಿತ. ಅಸೂಯೆಗಳನ್ನು ಇಲ್ಲವಾಗಿಸಿ ಕ್ರಿಯಾಶೀಲ ವ್ಯಕ್ತಿತ್ವ ರೂಪಿಸಬೇಕು. ಹತ್ತಾರು [illegible] ಗೌರವಿಸುವ ಪರಂಪರೆ ಇನ್ನೂ ಜೀವಂತವಾಗಿರುವುದು ಸಂತಸದ ಸಂಗತಿ. ಮಧ್ಯಕಾಲೀನ ಕಾಲದ ಜೀವಂತಿಕೆ ಇರುವುದೇ ಜನಪದಗಳಲ್ಲಿ. ವ್ಯಕ್ತಿಗಳನ್ನು ಗೌರವಿಸುವುದೆಂದರೆ ಪರಂಪರೆಯನ್ನು ಗೌರವಿಸಿದಂತೆ' ಎಂದರು.


ಪ್ರಶಸ್ತಿ ಸ್ವೀಕರಿಸಿ ಬಿ.ಎಸ್.ಉಜ್ಜನಪ್ಪ, ಕಣುಮನಹಳ್ಳಿ ನಾಗರಾಜ್, ಪ್ರೊ. ಎಂ.ವಿ. ರಂಗಸ್ವಾಮಿ ಮಾತನಾಡಿದರು.

ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಎಂ.ಪಿ.ಆರ್., ಶಿವಣ್ಣಸ್ವಾಮಿ, ಡಾ. ಧರಣೇಂದ್ರಯ್ಯ, ಬಿ.ಎಸ್. ಲಿಂಗರಾಜು, ಸಿವಿಜಿ ಚಂದ್ರು, ಟಿ.ಡಿ. ಜೇಮಣ್ಣ, ಟಿ.ಡಿ. ದಯಾನಂದ ಅವರು ಉಪಸ್ಥಿತರಿದ್ದರು.



ಹಿರಿಯೂರಿನ ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಪಟೇಲ್ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮಾತನಾಡಿದರು.





(1) ಹಿರಿಯೂರಿನ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ನೇತೃತ್ವದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವೇಮನ ಜಯಂತಿ ಸಮಾರಂಭವನ್ನು ತಹಶೀಲ್ದಾರ್ ವೆಂಕಟೇಶಯ್ಯ ಉದ್ಘಾಟಿಸಿದರು. ಎಸ್. ಚಂದ್ರಪ್ಪ, ದಾದಾಪೀರ್, ಮಹಬಲಾ, ಈರಲಿಂಗೇಗೌಡ, [illegible]

# ದೇವರಗಂಜಿಗಟ್ಟೆ: ಇಂದಿನಿಂದ ರಥ ಸಪ್ತಮಿ ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ಚಿಕ್ಕಜಾಜೂರು: ಜ.23 ಮತ್ತು 24ರಂದು ರಥ ಸಪ್ತಮಿ ವಿಶೇಷ ಪೂಜೆ ನಡೆಯಲಿದೆ. [illegible]



ಕರ್ನಾಟಕ

ಗುರುವಾರ,11 ಜನವರಿ 2018, ಬೆಂಗಳೂರು

## ಕೊಟ್ಟ ಮಾತಿಗೆ ತಪ್ಪಿದ ಮುಖ್ಯಮಂತ್ರಿ ಸಿದ್ದರಾಮಯ್ಯ: ಎಚ್.ಎಸ್.ದೊರೆಸ್ವಾಮಿ ಬೇಸರ

# ಭೂಮಿ, ವಸತಿ ಹಕ್ಕಿಗಾಗಿ ಅನಿರ್ದಿಷ್ಟ ಸತ್ಯಾಗ್ರಹ

■ **ವಿಕ ಸುದ್ದಿಲೋಕ** ಬೆಂಗಳೂರು

ಬಡವರು, ಭೂರಹಿತರು, ರೈತರ ಭೂಮಿ ಮತ್ತು ವಸತಿ ಸಮಸ್ಯೆ ನಿವಾರಣೆಗೆ ಉನ್ನತ ಮಟ್ಟದ ಸಮಿತಿ ಸಭೆ ಏರ್ಪಡಿಸಲು ಆಗ್ರಹಿಸಿ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯು ಅನಿರ್ದಿಷ್ಟಾವಧಿ ಸತ್ಯಾಗ್ರಹ ಆರಂಭಿಸಿದೆ.

ಗಾಂಧಿಭವನ ಸಮೀಪದ ವಲ್ಲಭನಿಕೇತನದಲ್ಲಿ ಅನಿರ್ದಿಷ್ಟಾವಧಿ ಸತ್ಯಾಗ್ರಹಕ್ಕೆ ಚಾಲನೆ ನೀಡಿದ ಹೋರಾಟಗಾರರು, ಸರಕಾರದ ವಿರುದ್ಧ ಘೋಷಣೆ ಮೊಳಗಿಸಿದರು. ಆದಿವಾಸಿಗಳು, ಹಳ್ಳಿಗರು, ರೈತರು, ಬಡವರು ತಾವು ವಾಸಿಸುತ್ತಿರುವ ಪ್ರದೇಶದಲ್ಲಿ ಭೂಮಿ ಹೊಂದಿಲ್ಲ. ಸಂಪತ್ತಿನ ಸಮಾನ ಹಂಚಿಕೆಯಾಗುವ ದೃಷ್ಟಿಯಿಂದ ಇವರಿಗೆ ಭೂಮಿ ಹಾಗೂ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಲಾಗಿದೆ. ಈ ಕುರಿತು ಚರ್ಚಿಸಲು ಉನ್ನತ ಮಟ್ಟದ ಸಮಿತಿ ಸಭೆ ಕರೆಯಲಾಗುವುದು ಎಂದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಹಾಗೂ ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಕೊಟ್ಟ ಮಾತಿಗೆ ತಪ್ಪಿರುವ ಅವರು ಇದುವರೆಗೂ ಸಭೆ ಕರೆಯುವ ಮನಸ್ಸು ಮಾಡಿಲ್ಲ. ಸಭೆ ಕರೆಯುವವರೆಗೂ ಸತ್ಯಾಗ್ರಹ ನಡೆಸಲಾಗುವುದು ಎಂದು ಹೋರಾಟಗಾರರು ಘೋಷಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮಾತನಾಡಿ, "ಬಡವರಿಗೆ ಭೂಮಿ ನೀಡುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಒಂದು ವರ್ಷದ ಹಿಂದೆ ಮಾತು ನೀಡಿದ್ದರು. ಕೊಟ್ಟ ಮಾತಿಗೆ ತಪ್ಪಿರುವ ಇವರನ್ನು ರಾಜಕಾರಣಿಗಳೆನ್ನಲು ಸಾಧ್ಯವಿಲ್ಲ. ಸಚಿವರು ಹಾಗೂ ಮುಖ್ಯಮಂತ್ರಿಯವರಿಗೆ ಹೋರಾಟಗಾರರ ಬಗ್ಗೆ ತಿರಸ್ಕಾರದ ಭಾವನೆಯಿದೆ. ಬಡವರ ಹೊಟ್ಟೆಮೇಲೆ ಹೊಡೆಯುವುದನ್ನು ಬಿಟ್ಟು ಭೂಮಿ ನೀಡುವ ಕೆಲಸ ಮಾಡಿ. ಸಿಎಂ ಆದವರಿಗೆ ಬೇರೆ ಕೆಲಸಗಳೂ ಇರುತ್ತವೆ. ಆದರೆ ಅವೆಲ್ಲವನ್ನೂ ಬದಿಗೆ ಸರಿಸಿ ಈ ಕೆಲಸವನ್ನು ಮೊದಲು ಮಾಡಬೇಕು," ಎಂದು ಒತ್ತಾಯಿಸಿದರು.

"ಪ್ರತಿ ಜಿಲ್ಲೆಗಳಲ್ಲಿ ಇರುವ ಸರಕಾರಿ ಜಮೀನು ಹಾಗೂ ಭೂರಹಿತರ ಸಂಖ್ಯೆಯನ್ನು ಲೆಕ್ಕಾಚಾರ ಮಾಡಬೇಕು. ಬಳಿಕ ಆಯಾ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ಗೆ ಸೂಚನೆ ನೀಡಿ ಭೂಮಿ ಹಂಚಿಕೆ ಮಾಡಬೇಕು. ಒಂದು ಜಿಲ್ಲೆಯಲ್ಲಿ ಕನಿಷ್ಠ ಎರಡು ತಾಲೂಕುಗಳಲ್ಲಿ ಭೂ ಹಂಚಿಕೆ ಪ್ರಕ್ರಿಯೆ ನಡೆಯಬೇಕು. ಇದನ್ನು ಸಿಎಂಗೆ ಹೇಳಿದರೆ ಅಧಿಕಾರಿಗಳಿಗೆ ಸೂಚನೆ, ಸುತ್ತೋಲೆ ನೀಡಲಾಗಿದೆ ಎಂದು ಹೇಳಿ ಜಾರಿಕೊಳ್ಳುತ್ತಾರೆ. ತಹಶೀಲ್ದಾರ್, ಜಿಲ್ಲಾಧಿಕಾರಿಗಳಾಗಲೀ, ಸಿಎಂ ಮಾತಿಗೆ ಬೆಲೆ ನೀಡುವುದಿಲ್ಲ. ಉನ್ನತ ಮಟ್ಟದ ಸಮಿತಿಯಲ್ಲಿ ಹೋರಾಟಗಾರರನ್ನೂ ಸೇರ್ಪಡೆಗೊಳಿಸಬೇಕು. ಆಗ ಅಧಿಕಾರಿಗಳ ಕತ್ತುಪಟ್ಟಿ ಹಿಡಿದು ಕೆಲಸ ಮಾಡಿಸಲು ಸಾಧ್ಯವಾಗುತ್ತದೆ," ಎಂದರು.

ಹೋರಾಟಗಾರ ಸಿರಿಮನೆ ನಾಗರಾಜ್ ಮಾತನಾಡಿ, "ಹಕ್ಕುಪತ್ರ ಪಡೆಯಲು 4 ಅರ್ಜಿ ಸಲ್ಲಿಕೆಯಾಗಿದ್ದು, ಇದನ್ನು ಪರಿಶೀಲಿಸಲಾಗುತ್ತಿದೆ ಎಂದು ಸರಕಾರ ಸುಳ್ಳು ಮಾಹಿತಿ ನೀಡಿತ್ತು. ವಾಸ್ತವದಲ್ಲಿ 13 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದು, ಇವುಗಳು ಇನ್ನೂ ಸರಕಾರಿ ಕಚೇರಿಗಳಲ್ಲಿ ಕೊಳೆಯುತ್ತಾ ಬಿದ್ದಿವೆ. ಕೆರೆ. ಮೀಸಲು ಅರಣ್ಯ, ಗೋಮಾಳ ಸೇರಿದಂತೆ ಭೂಮಿ ವಿಚಾರದಲ್ಲಿ ಅನೇಕ ಗೊಂದಲಗಳಿವೆ. ಈ ಸಮಸ್ಯೆ ನಿವಾರಿಸಲು ಪ್ರತ್ಯೇಕ ನೀತಿ ರೂಪಿಸಬೇಕು. ಕೃಷಿ ಮಾಡಲು ಯೋಗ್ಯ ಭೂಮಿಯನ್ನು ಬಡವರಿಗೆ ನೀಡಬೇಕು," ಎಂದು ಆಗ್ರಹಿಸಿದರು.

ಲೇಖಕಿ ಡಾ.ವಿಜಯಮ್ಮ, ನೂರ್ ಶ್ರೀಧರ್ ಮತ್ತಿತರರಿದ್ದರು.



ಬೆಂಗಳೂರಿನಲ್ಲಿ ಬುಧವಾರ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಆರಂಭಿಸಿದ ಧರಣಿಯಲ್ಲಿ ಎಚ್. ಎಸ್. ದೊರೆಸ್ವಾಮಿ ಮಾತನಾಡಿದರು. ಸಿರಿಮನೆ ನಾಗರಾಜ್, ಲೇಖಕಿ ಡಾ.ವಿಜಯಮ್ಮ, ಎಂ. ಪಿ. ನಾಡಗೌಡ ಮತ್ತಿತರರಿದ್ದರು.

## ಡಬ್ಲ್ಯೂ.ಎಚ್.ಹನುಮಂತಪ್ಪ ಸ್ಮಾರಕ ದತ್ತಿ ಕಾರ್ಯಕ್ರಮ

# ಟಾಲ್‌ಸ್ಟಾಯ್ ಮತ್ತು ಗಾಂಧೀಜಿ ಕುರಿತು ಜಯಪ್ರಕಾಶ ನಾರಾಯಣ ಅವರ ಉಪನ್ಯಾಸ



ಡಬ್ಲ್ಯೂ.ಎಚ್.ಹನುಮಂತಪ್ಪ

"ಕೌಂಟ್ ಲಿಯೋ ಟಾಲ್‌ಸ್ಟಾಯ್ ಮತ್ತು ಮಹಾತ್ಮ ಗಾಂಧಿ ಇಬ್ಬರೂ ಇಡೀ ಮನುಕುಲದ ಒಳಿತಿಗಾಗಿ ಶ್ರಮಿಸಿದರು. 1828ರಲ್ಲಿ ಜನಿಸಿದ ಟಾಲ್‌ಸ್ಟಾಯ್ ಗಾಂಧೀಜಿಗಿಂತ 41 ವರ್ಷ ದೊಡ್ಡವರು 1869ರಲ್ಲಿ ಗಾಂಧೀಜಿ ಹುಟ್ಟುವ ವೇಳೆಗಾಗಲೇ ಟಾಲ್‌ಸ್ಟಾಯ್ ಅವರ ವಾರ್ ಅಂಡ್ ಪೀಸ್ ಕೃತಿ ಪ್ರಕಟವಾಗಿ ಪ್ರಸಿದ್ಧವಾಗಿತ್ತು. ವಾರ್ ಅಂಡ್ ಪೀಸ್ ಅಲ್ಲದೇ ಟಾಲ್‌ಸ್ಟಾಯ್ ಅವರ ಅನೇಕ ಕೃತಿಗಳಿಂದ ಪ್ರಭಾವಿತರಾಗಿ ಗಾಂಧೀಜಿ ಅಹಿಂಸಾತ್ಮಕ ಹೋರಾಟಗಳನ್ನು ಪ್ರತಿಪಾದಿಸುತ್ತಾರೆ. ತಮ್ಮ ಇಂಡಿಯನ್ ಒಪಿನಿಯನ್ ಪತ್ರಿಕೆಯಲ್ಲಿ ಟಾಲ್‌ಸ್ಟಾಯ್ ಕುರಿತು ಗಾಂಧೀಜಿ ಉತ್ತಮ ಲೇಖನ ಬರೆಯುತ್ತಾರೆ. ಇಡೀ ಪಾಶ್ಚಾತ್ಯ ಜಗತ್ತಿನಲ್ಲಿ ಟಾಲ್‌ಸ್ಟಾಯ್‌ರಂತಹ ಇನ್ನೊಬ್ಬ ಮೇಧಾವಿ ಇಲ್ಲ ಎಂದು ಚಿತ್ರಿಸುತ್ತಾರೆ. ಬ್ರಹ್ಮಚರ್ಯ, ನೈತಿಕ ಪರಿಶುದ್ಧತೆ, ಅಹಿಂಸೆ ಮೊದಲಾದ ಪರಿಕಲ್ಪನೆಗಳು ಗಾಂಧೀಜಿಯವರಿಗೆ ಟಾಲ್‌ಸ್ಟಾಯ್‌ರ ಬರಹಗಳಿಂದಲೇ ದೊರೆಯುತ್ತವೆ" ಎಂದು ಪತ್ರಕರ್ತ ಹಾಗೂ ಅನುವಾದ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿರುವ ಸಾಹಿತಿ ಬಿ.ಎಸ್.ಜಯಪ್ರಕಾಶ್ ನಾರಾಯಣ ತಿಳಿಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದೊಂದಿಗೆ ಗಾಂಧೀ ಶಾಂತಿ ಪ್ರತಿಷ್ಠಾನ ಡಿ.23ರ ಸಂಜೆ ಗಾಂಧಿಭವನದಲ್ಲಿ ಏರ್ಪಡಿಸಿದ್ದ ಡಬ್ಲ್ಯೂ. ಎಚ್.ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿ "ಕೌಂಟ್–ಲಿಯೋ–ಟಾಲ್‌ಸ್ಟಾಯ್ ಮತ್ತು ಮಹಾತ್ಮ ಗಾಂಧೀಜಿ" ಕುರಿತು ಮಾತನಾಡಿದ ಜಯಪ್ರಕಾಶ ನಾರಾಯಣ "ಗಾಂಧೀಜಿ ಮತ್ತು ಟಾಲ್‌ಸ್ಟಾಯ್–ಇಬ್ಬರೂ ನುಡಿದಂತೆ ನಡೆದ, ನಡೆದಂತೆ ನುಡಿದ, ಬರೆದಂತೆ ಬದುಕಿದ ಮಹನೀಯರು. ಧೂಮಪಾನ ಮತ್ತು ಮದ್ಯಪಾನ ಮನುಷ್ಯನ ಶತ್ರುಗಳು ಎಂದು ಇಬ್ಬರೂ ಬೋಧಿಸಿದರು. 1928ರಲ್ಲಿ ಭಾರತದಲ್ಲಿ ನಡೆದ ಟಾಲ್‌ಸ್ಟಾಯ್ ಶತಮಾನೋತ್ಸಾವ ಸಮಾರಂಭದಲ್ಲಿ ಗಾಂಧೀಜಿಯವರು ಅದ್ಭುತ ಉಪನ್ಯಾಸ ನೀಡುತ್ತಾರೆ ಜಗತ್ತಿನ ಇತಿಹಾಸದಲ್ಲಿ ಟಾಲ್‌ಸ್ಟಾಯ್ ಮತ್ತು ಗಾಂಧೀಜಿ ಇಬ್ಬರೂ ದಿಗ್ಗಜರು ಇಬ್ಬರ ಅಂತ್ಯವೂ ದಾರುಣವಾಗಿತ್ತು" ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಗಾಂಧೀಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ "ಸ್ಯಾಮ್ ಪಿಟ್ರೋಡ ಬಗೆಗಿನ ಇಂಗ್ಲಿಷ್ ಕೃತಿಯನ್ನು ಕನ್ನಡಕ್ಕೆ ಅದ್ಭುತವಾಗಿ ಅನುವಾದಿಸಿದ ಪತ್ರಕರ್ತ ಜಯಪ್ರಕಾಶ ನಾರಾಯಣ ಇಂದು ವಿಚಾರಪೂರ್ಣ ಉಪನ್ಯಾಸ ನೀಡಿದ್ದಾರೆ, ನಮ್ಮ ಪೂಜ್ಯ ತಾತ ಡಬ್ಲ್ಯೂ.ಎಚ್.ಹನುಮಂತಪ್ಪನವರ ಸ್ಮರಣೆಯ ದತ್ತಿ ಕಾರ್ಯಕ್ರಮ ಮೂರು ದಶಕಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ರಷ್ಯಾದ ಜಾರ್ ಮನೆತನದ ಟಾಲ್‌ಸ್ಟಾಯ್ ಮತ್ತು ಗುಜರಾತಿನ ಶ್ರೀಮಂತ ಮನೆತನದ ಗಾಂಧೀಜಿ ಇಬ್ಬರೂ ಅತ್ಯಂತ ಸರಳ ಜೀವನ ನಡೆಸಿದರು. ಸರ್ವೋದಯದ ಪರಿಕಲ್ಪನೆ ಗಾಂಧೀಜಿಗೆ ಬಂದಿದ್ದೇ ಟಾಲ್‌ಸ್ಟಾಯ್‌ರ ಚಿಂತನೆಗಳಿಂದಾಗಿ. ಮನುಕುಲದ ಹಣೆಬರಹವನ್ನು ಬದಲಾಯಿಸಲು ಪ್ರಯತ್ನಿಸಿದ ಇವರಿಬ್ಬರ ಬದುಕೂ ನಮಗೆ ಸ್ಫೂರ್ತಿಯಾಗಬೇಕು. ಸತ್ಯ ಬೋಧನೆಯನ್ನು ಎಂದಿಗೂ ಕೈಬಿಡಬೇಡಿ, ಇತರರಿಗಾಗಿ ಬದುಕಿ ಎಂದು ಅವರು ನೀಡಿರುವ ಕರೆಯಂತೆ ಮನುಕುಲ ನಡೆಯ ಬೇಕು" ಎಂದು ಹೇಳಿದರು, ಕಳೆದ ವರ್ಷ ತಾವು ರಷ್ಯಾ ಪ್ರವಾಸ ಮಾಡಿದುದನ್ನು ಸ್ಮರಿಸಿಕೊಂಡು "ಅಲ್ಲಿನ ಅದ್ಭುತ ಟಾಲ್‌ಸ್ಟಾಯ್ ಮ್ಯೂಸಿಯಂಗೆ ಭೇಟಿ ನೀಡಿದ್ದೆ. ಅಲ್ಲಿ ಅವರ ಕೈಬರಹದ ಒಂದು ಲಕ್ಷ ಪುಟಗಳು ದಾಖಲೆಯಾಗಿ ಉಳಿದಿರುವುದನ್ನು ಕಂಡು ವಿಸ್ಮಯಗೊಂಡೆ. ಇಂದಿಗೂ ಇಡೀ ರಷ್ಯಾದಲ್ಲಿ ಅತ್ಯಂತ ಗೌರವಾನ್ವಿತ ಸ್ಥಾನ ಪಡೆದಿರುವವರು ಟಾಲ್‌ಸ್ಟಾಯ್ ಒಬ್ಬರೇ" ಎಂದರು.



ದತ್ತಿದಾನಿ, ವೂಡೇ ಪ್ರತಿಷ್ಠಾನದ ಡಬ್ಲ್ಯೂ ಎಚ್.ದೇವಕುಮಾರ್ ಅವರ ವಂದನಾರ್ಪಣೆಯಿಂದ ಮುಕ್ತಾಯವಾದ ಕಾರ್ಯಕ್ರಮವನ್ನು ಸಿಸಿರಾ ನಿರೂಪಿಸಿದರು. ಸಭಿಕರೆಲ್ಲರೂ ಸಾಮೂಹಿಕವಾಗಿ ಸರ್ವಧರ್ಮ ಪ್ರಾರ್ಥನೆ ಮಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಕೋಶಾಧ್ಯಕ್ಷ ಪ್ರತಾಪ್ ಲಿಂಗಯ್ಯ, ಸುಮಂಗಲಿ ಸೇವಾಶ್ರಮದ ಎಸ್.ಜಿ. ಸುಶೀಲಮ್ಮ, ಆಚಾರ್ಯ ಪಾಠ ಶಾಲಾ ಸಂಸ್ಥೆಯ ಅಧ್ಯಕ್ಷ ಟಿ.ವಿ.ಮಾರುತಿ, ಪತ್ರಕರ್ತೆ ಶಾಂತಮ್ಮ, ಸಾಹಿತಿಗಳಾದ ಮೀರಾಸಾಬಿಹಳ್ಳಿ ಶಿವಣ್ಣ, ಕೆ.ಎಂ.ರೇವಣ್ಣ, ರಾಣಿ ಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಶುಕ್ರವಾರ • ಜನವರಿ 5, 2018



ಹೊ.ಶ್ರೀನಿವಾಸಯ್ಯ ಅವರ ಭಾವಚಿತ್ರಕ್ಕೆ ಎಚ್.ಕೆ.ಪಾಟೀಲ ಪುಷ್ಪನಮನ ಸಲ್ಲಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ಟ್ರಸ್ಟ್‌ನ ಸದಸ್ಯ ಡಿ.ಆರ್.ಪಾಟೀಲ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೆ ಪಿ.ಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎನ್.ಆರ್.ವಿಶುಕುಮಾರ್ ಇದ್ದಾರೆ —ಪ್ರಜಾವಾಣಿ ಚಿತ್ರ

# ಶ್ರೀನಿವಾಸಯ್ಯ ದತ್ತಿ ನಿಧಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು 'ಡಾ. ಹೊ.ಶ್ರೀನಿವಾಸಯ್ಯ ದತ್ತಿ ನಿಧಿ'ಯನ್ನು ಸ್ಥಾಪಿಸಿದ್ದು, ₹2 ಲಕ್ಷವನ್ನು ಠೇವಣಿ ಇಡಲಾಗಿದೆ.

ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ಅವರು ಇದಕ್ಕೆ ಚಾಲನೆ ನೀಡಿದರು.

'ಗಾಂಧಿಮಾರ್ಗಿ ಹೊ.ಶ್ರೀ.' ಸಂಸ್ಮರಣಾ ಕೃತಿಯನ್ನು ಬಿಡುಗಡೆ ಮಾಡಿದರು. ಹೊ.ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ಸಹಯೋಗದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎಚ್.ಕೆ.ಪಾಟೀಲ್, 'ಶ್ರೀನಿವಾಸಯ್ಯ ಅವರು ಇಳಿ ವಯಸ್ಸಿನಲ್ಲೂ ತಮ್ಮ ನಡವಳಿಕೆಯಿಂದ ಸೊಕ್ಕಿನವರನ್ನು ವಿನಮ್ರರನ್ನಾಗಿಸುತ್ತಿದ್ದರು. ಬದುಕಿನಲ್ಲಿ ಯಶಸ್ವಿಯಾಗಲು ಹೇಗೆ ಜೀವಿಸಬೇಕು ಎಂಬುದಕ್ಕೆ ಅವರು ಉತ್ತಮ ನಿದರ್ಶನ. ಸಿನಿಮಾ ನಟ, ನಟಿಯರಿಗಿಂತ ಶ್ರೀನಿವಾಸಯ್ಯ ಅವರು ಇಂದಿನ ಯುವಪೀಳಿಗೆಗೆ ಮಾದರಿಯಾಗಬೇಕು' ಎಂದು ಹೇಳಿದರು.

ಸಂಯುಕ್ತ ಕರ್ನಾಟಕ ಶುಕ್ರವಾರ, 5, ಜನವರಿ, 2018,

# ಸಮಾಜ ನಾಶ: ಸಚಿವರ ಕಳವಳ



ಗಾಂಧಿ ಭವನದಲ್ಲಿ ನಡೆದ ಡಾ.ಹೊ.ಶ್ರೀನಿವಾಸಯ್ಯ ಅವರ ಸ್ಮರಣೆ ಮತ್ತು ದತ್ತಿ ಉದ್ಘಾಟನಾ ಸಮಾರಂಭದಲ್ಲಿ 'ಗಾಂಧಿ ಮಾರ್ಗಿ ಹೊ. ಶ್ರೀ' ಕೃತಿಯನ್ನು ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ ಲೋಕಾರ್ಪಣೆಗೊಳಿಸಿದರು.

ಬೆಂಗಳೂರು: ಬದುಕಿನ ಮೌಲ್ಯಗಳು ಮಹತ್ವ ಕಳೆದುಕೊಳ್ಳುತ್ತಿದ್ದು, ಸಮಾಜವೇ ನಾಶವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಗಾಂಧೀಜಿಯವರ ವಿಚಾರಗಳು ಪ್ರಸ್ತುತವಾಗಿವೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ್ ಅಭಿಪ್ರಾಯಪಟ್ಟರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಹೊ.ಶ್ರೀನಿವಾಸಯ್ಯ ಚಾರಿಟೇಬಲ್ ಟ್ರಸ್ಟ್, ಬೆಂಗಳೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ನಡೆದ ಡಾ.ಹೊ.ಶ್ರೀನಿವಾಸಯ್ಯ ಅವರ ಸ್ಮರಣೆ ಮತ್ತು ದತ್ತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಾಂಧೀಜಿಯವರ ತತ್ವ, ಸಿದ್ಧಾಂತ, ವಿಚಾರವಾದಗಳ ವಿರುದ್ಧ ನಡೆದುಕೊಳ್ಳುವ ಮನಸ್ಥಿತಿ ಕೊನೆಯಾಗಬೇಕಿದೆ. ಅದೊಂದು ಚಳವಳಿ, ಆಂದೋಲನವಾಗಿ ರೂಪಗೊಳ್ಳಬೇಕು. ದೇಶದ ಮುಂದಿನ ಭವ್ಯ ಪ್ರಜೆಗಳನ್ನು ಶಕ್ತಿವಂತರನ್ನಾಗಿ ಮಾಡುವಲ್ಲಿ ಇಂದಿನ ಸಮಾಜ, ಶಿಕ್ಷಣ ಪದ್ಧತಿಯಿಂದ ಸಾಧ್ಯವಾಗುತ್ತಿಲ್ಲ. ಮೌಲ್ಯ ಕಳೆದುಕೊಳ್ಳುತ್ತಿರುವ ಸಮಾಜದಲ್ಲಿ ಗಾಂಧೀಜಿಯವರ ತತ್ವ ಸಿದ್ಧಾಂತದ ಮಾರ್ಗದರ್ಶನವೇ ನಮ್ಮೆಲ್ಲರ ಆಶಾದೀಪ ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, ಅತ್ಯುತ್ತಮ ಸವಲತ್ತುಗಳಿದ್ದರೂ ಅವುಗಳನ್ನೆಲ್ಲಾ ತ್ಯಜಿಸುವ ಮೂಲಕ ಸರಳತೆಯನ್ನೇ ತಮ್ಮ ದೊಡ್ಡ ಧ್ಯೇಯವಾಗಿಸಿಕೊಂಡವರು ಗಾಂಧೀಜಿ. ಇದರಿಂದಲೇ ದೇಶ ಸುತ್ತುವಾಗ ಗಾಂಧೀಜಿ ಜನರಿಗೆ ಹೆಚ್ಚು ಹತ್ತಿರವಾದರು.


ಆಹಾರದಲ್ಲಿ ಸರಳತೆ ಮೂಲಕ ಬಡವರ ಆಹಾರವನ್ನು ಅವರು ಉನ್ನತೀಕರಿಸಿದರು ಎಂದ ಅವರು, ಉಳ್ಳವರಿಗೆ ಗಾಂಧಿ-ಬಸವ ಪ್ರಜ್ಞೆ, ತುಳಿತಕ್ಕೊಳಗಾದವರಿಗೆ ಅಂಬೇಡ್ಕರ್-ಕುವೆಂಪು ಪ್ರಜ್ಞೆ ಅಗತ್ಯ. ಈ ಎರಡರ ಸಂಗಮದೊಳಗೆ ಸಮಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ನಾಡೋಜ ಡಾ.ಪಾಟೀಲ ಪುಟ್ಟಪ್ಪ, ಮಾಜಿ ಶಾಸಕ ಡಿ.ಆರ್.ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎನ್.ಆರ್.ವಿಶುಕುಮಾರ್ ಮತ್ತಿತರರಿದ್ದರು.

ವೇದಮೂರ್ತಿ ಪತ್ರಿಕೆ

ಜನವರಿ 04-10, 2018

# ವಿದ್ಯಾರ್ಥಿಗಳನ್ನು ಹಣಗಳಿಕೆಯ ಯಂತ್ರಗಳನ್ನಾಗಿ ಮಾಡುವುದು ಬೇಡ: ಪ್ರೊ.ಡೇ.ಪಿ.ಕೃಷ್ಣ






ಮಾಡೋಣ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ
ವಿದ್ಯಾರ್ಥಿಗಳನ್ನು ಹಣಗಳಿಕೆಯ ಯಂತ್ರಗಳನ್ನಾಗಿ ಮಾಡುವುದು ಬೇಡ ಅವರನ್ನು ಸಮಾಜದ ಸತ್‌ಪ್ರಜೆಗಳನ್ನಾಗಿ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವ 'ಸುಗ್ಗಿ 2017' ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ
ಪ್ರೊಡೇ.ಪಿ.ಕೃಷ್ಣ ಹೇಳಿದರು,ಅವರು ಕೆಂಗೇರಿಉಪನಗರದಲ್ಲಿರುವ ಎಂದರು, ಅಭಿವ್ಯಕ್ತಿ,ಕಲೆ,ಸಂಸ್ಕೃತಿಯನ್ನು ನಮ್ಮ ಬದುಕಿನಲ್ಲಿ ಅನುಸರಿಸಿಕೊಂಡು ಹೋಗಬೇಕು ಇದನ್ನು ಅಳವಡಿಸಿಕೊಂಡರೆ
ಶಿಕ್ಷಣವು ವಿದ್ಯಾರ್ಥಿಗಳ ಸರ್ವಾಂಗಿಣ ಅಭಿವೃದ್ಧಿಗೆ ಪೂರಕವಾಗಿ ನಿಲ್ಲುವಂತಿರಬೇಕು
ಮುಂದಿನ ನಿಮ್ಮ ಬದುಕು ಹಸನಾಗುತ್ತೆ ಎಂದು ಅವರು ಹೇಳಿದರು,

ಎಚ್ಚರದಿಂದ ಇದ್ದು ನಾಲಿಗೆಯ ಮೇಲೆ ಹಿಡಿತವಿದ್ದು ನಾವು ಆಡುವ ಮಾತು ಇನ್ನೊಬ್ಬರಿಗೆ ನೋಯಿಸುವಂತೆ ಇರಬಾರದು
ಸಹಬಾಳ್ವೆ ಮತ್ತುಸಹ ಕಲಿಕೆಯನ್ನು ನಾವು ತಪ್ಪದೆ ಪಾಲಿಸಬೇಕು,ಮಾತನಾಡುವಾಗ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಎಂದಿಗೂ ನಮ್ಮ ತನವನ್ನುನಾವು ಉಳಿಸಿಕೊಳ್ಳಬೇಕು ಎಂದರು.
ಎಂದು ಕೃಷ್ಣ ಹೇಳಿದರು. ಮುಖ್ಯ ಅಥಿತಿ ಮಿಮಿಕ್ರಿ ದಯಾನಂದ್ ಮಾತನಾಡಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಹ ಕಾರ್ಯದರ್ಶಿಗಳಾದ ಎಸ್. ಶೇಷನಾರಾಯಣ್, ಧರ್ಮದರ್ಶಿಗಳಾದ ಕೆ. ಕೃಷ್ಣಸ್ವಾಮಿ,
ಸ್ವಾಗತ ನೃತ್ಯದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು, ಕಾರ್ಯಕ್ರಮದಲ್ಲಿ ಪಾಲ ಡಾ. ಆರ್. ಡಿ. ಸತೀಶ್ ಸೇರಿದಂತೆ ಪೋಷಕರು ಮತ್ತು ವಿದ್ಯಾರ್ಥಿಗಳು
ಜಿ. ಆನಂದ, ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಯರಾಮ್ ಹಾಗೂ ಪದವಿ-ಪೂರ್ವ ಕಾಲೇಜಿನ ಪ್ರಾಂಶು
ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ಹಣ ಗಳಿಕೆಯ ಯಂತ್ರಗಳಲ್ಲ

**ವಿಕ ಸುದ್ದಿಲೋಕ** ಕೆಂಗೇರಿ ಉಪನಗರ

ವಿದ್ಯಾರ್ಥಿಗಳನ್ನು ಹಣಗಳಿಕೆಯ ಯಂತ್ರಗಳನ್ನಾಗಿ ಮಾಡುವ ಬದಲು, ಸಮಾಜದಲ್ಲಿ ಸತ್ಪ್ರಜೆಗಳನ್ನಾಗಿ ರೂಪಿಸುವುದು ಮುಖ್ಯ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ.ಪಿ.ಕೃಷ್ಣ ಅಭಿಪ್ರಾಯಪಟ್ಟರು.

ಕೆಂಗೇರಿ ಉಪನಗರದಲ್ಲಿರುವ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವ ಹಾಗೂ ಸುಗ್ಗಿ - 2017 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿಕ್ಷಣವು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ನಿಲ್ಲುವಂತಿರಬೇಕು. ಅಭಿವ್ಯಕ್ತಿ, ಕಲೆ, ಸಂಸ್ಕೃತಿಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸಹಬಾಳ್ವೆ ಮತ್ತು ಸಹ ಕಲಿಕೆಯನ್ನು ನಾವು ತಪ್ಪದೆ ಪಾಲಿಸಬೇಕು. ಮಾತನಾಡುವಾಗ ನಾಲಗೆಯ ಮೇಲೆ ಹಿಡಿತವಿರಬೇಕು. ನಾವು ಆಡುವ ಮಾತು ಇನ್ನೊಬ್ಬರಿಗೆ ನೋಯಿಸುವಂತೆ ಇರಬಾರದು ಎಂದು ಕೃಷ್ಣ ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿ ಮಿಮಿಕ್ರಿ ದಯಾನಂದ್ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ತಮ್ಮ ತನವನ್ನು ಕಳೆದುಕೊಳ್ಳಬಾರದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಎಸ್. ಶೇಷನಾರಾಯಣ್, ಧರ್ಮದರ್ಶಿಗಳಾದ ಕೆ. ಕೃಷ್ಣಸ್ವಾಮಿ, ಜಿ.ಆನಂದ, ಪ್ರಾಂಶುಪಾಲರಾದ ಪ್ರೊ.ಜಯರಾಮ್, ಡಾ. ಆರ್. ಡಿ.ಸತೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕೆಂಗೇರಿಯ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವನ್ನು ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ.ವೂಡೇ.ಪಿ.ಕೃಷ್ಣ ಉದ್ಘಾಟಿಸಿದರು.



ಕೆಂಗೇರಿಯ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.